ಹುಬ್ಬಳ್ಳಿ
ಗುರುವಾರ, 21 ಮೇ 2026
ಸಂಪುಟ 16, ಸಂಚಿಕೆ 57, ಪುಟಗಳು 14
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

₹19 ಕೋಟಿ ಮೌಲ್ಯದ ಅವಲೋಕಿತೇಶ್ವರ ವಿಗ್ರಹ ಭಾರತಕ್ಕೆ ಶೀಘ್ರ


•ಪುಟ 2

ಸನಾತನ ಧರ್ಮ ಸಂಘಕ್ಕೆ ಮಾನ್ಯತೆ | 02

ಸಿಲ್ವರ್‌ಲೈನ್‌ಗೆ ಕೇರಳ ತಡೆ | 02

ವಿಶೇಷ ವ್ಯೂಹಾತ್ಮಕ ಪಾಲುದಾರಿಕೆ ಮಟ್ಟಕ್ಕೆ ಉಭಯ ರಾಷ್ಟ್ರಗಳ ಮೈತ್ರಿ

ಭಾರತ-ಇಟಲಿ ಬಲಿಷ್ಠ ಬಂಧ



- ವೆಲ್ಕಮ್ ಟು ರೋಮ್ ಮೈ ಫ್ರೆಂಡ್ ಎಂದು ಸ್ವಾಗತ ಕೋರಿದ ಮೆಲೋನಿ
- ಮೆಲೋನಿಗೆ ಮೆಲೋಡಿ ಟಾಫಿಗಳ ಪ್ಯಾಕೆಟ್ ಗಿಫ್ಟ್ ಕೊಟ್ಟ ಮೋದಿ
- ರೋಮ್‌ಗೆ ಆಗಮಿಸಿದ ಮೋದಿಗೆ ಭವ್ಯ ಮಿಲಿಟರಿ ಗೌರವದ ಸ್ವಾಗತ

ರೋಮ್: ಪ್ರಧಾನಿ ನರೇಂದ್ರ ಮೋದಿ ಮತ್ತು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ನಡುವೆ ನಡೆದ ಉನ್ನತ ಮಟ್ಟದ ಮಾತುಕತೆಯ ಬೆನ್ನಲ್ಲೇ



ಭಾರತ ಮತ್ತು ಇಟಲಿ ದೇಶಗಳು ತಮ್ಮ ರಾಜತಾಂತ್ರಿಕ ಬಾಂಧವ್ಯವನ್ನು ವಿಶೇಷ ವ್ಯೂಹಾತ್ಮಕ ಪಾಲುದಾರಿಕೆ ಮಟ್ಟಕ್ಕೆ ಕೊಂಡೊಯ್ಯಲು ನಿರ್ಧರಿಸಿವೆ.

ತಮ್ಮ ಐದು ರಾಷ್ಟ್ರಗಳ ಪ್ರವಾಸದ ಭಾಗವಾಗಿ ರೋಮ್‌ಗೆ ಆಗಮಿಸಿದ ಪ್ರಧಾನಿ ಮೋದಿಗೆ ಭವ್ಯ ಮಿಲಿಟರಿ ಗೌರವದ ಸ್ವಾಗತ ಸಿಕ್ಕಿತು. ಇದರ ಬೆನ್ನಲ್ಲೇ ನಡೆದ ದ್ವಿಪಕ್ಷೀಯ ಮಾತುಕತೆಯಲ್ಲಿ ವ್ಯಾಪಾರ, ಹೂಡಿಕೆ ಹಾಗೂ ನೂತನ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ಹೆಚ್ಚಿಸಲು ಉಭಯ ನಾಯಕರು ಒಪ್ಪಂದ ಮಾಡಿಕೊಂಡರು. ಪುಟ ೪

ಸಿಎಂ ಸಿದ್ದರಾಮಯ್ಯ ಮಾಹಿತಿ

ಕೆಪಿಎಸ್ ಜೂ.1ರಿಂದ ಶಿವಮೊಗ್ಗದಲ್ಲಿ ಶುರು



ಬೆಂಗಳೂರು: ಜೂ.1ರಂದು ಶಿವಮೊಗ್ಗದಲ್ಲಿ ಕೆಪಿಎಸ್ ಯೋಜನೆಗೆ ಅಧಿಕೃತ ಚಾಲನೆ ನೀಡುತ್ತಿದ್ದು, ಒಂದು ಕೆಪಿಎಸ್‌ನಲ್ಲಿ ಸುಮಾರು 1,200 ಮಕ್ಕಳಿಗೆ ಪ್ರವೇಶಾವಕಾಶ ಕಲ್ಪಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಜೂ.1ರಂದು ಶಿವಮೊಗ್ಗದಲ್ಲಿ ಚಾಲನೆ

ಗೃಹ ಕಚೇರಿ ಕೃಷ್ಣಾದಲ್ಲಿ ಬುಧವಾರ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಕೆಪಿಎಸ್ ಶಾಲೆಯಲ್ಲಿ ಎಲ್‌ಕೆಜಿಯಿಂದ ಪಿಯುಸಿವರೆಗೆ ಕನ್ನಡ ಹಾಗೂ ಇಂಗ್ಲಿಷ್ ಮಾಧ್ಯಮದಲ್ಲಿ ಒಂದೇ ಆವರಣದಲ್ಲಿ ಶಿಕ್ಷಣ ದೊರೆಯಲಿದೆ. ಮುಂದಿನ ಎರಡು ವರ್ಷಗಳಲ್ಲಿ ರಾಜ್ಯದ ಎಲ್ಲಾ 800 ಕೆಪಿಎಸ್‌ಗಳು ಸಂಪೂರ್ಣವಾಗಿ ಸಿದ್ಧವಾಗಬೇಕು ಎಂದು ಸಿಎಂ ಸೂಚಿಸಿದರು.

ರಾಜ್ಯದಲ್ಲಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ಕರ್ನಾಟಕ ಪಬ್ಲಿಕ್ ಸ್ಕೂಲ್ (ಕೆಪಿಎಸ್) ಯೋಜನೆಯನ್ನು ವೇಗವಾಗಿ ಜಾರಿಗೊಳಿಸಬೇಕು. ಪುಟ ೪

ಕಲ್ಯಾಣ ಕರ್ನಾಟಕದಲ್ಲಿ ಉತ್ತಮ ಸಾಧನೆ

ರಾಜ್ಯಾದ್ಯಂತ ಪೋಷಕರು, ಶಿಕ್ಷಕರ ಸಭೆ ನಡೆಸುವುದು, ಅತಿಥಿ ಶಿಕ್ಷಕರ ನೇಮಕ, ಪಠ್ಯ ಆಧಾರಿತ ಅಧ್ಯಯನ ಕ್ರಮ ಜಾರಿ, ಪೂರ್ವಭಾವಿ ಪರೀಕ್ಷೆ ಆಯೋಜನೆ, ಶಿಕ್ಷಕರಿಗೆ ನಿರಂತರ ತರಬೇತಿ ಉತ್ತಮ ಫಲಿತಾಂಶಕ್ಕೆ ಕಾರಣವಾಗಿದೆ. ವಿಶೇಷವಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡ ಪರಿಣಾಮ ಉತ್ತಮ ಸಾಧನೆ ಸಾಧ್ಯವಾಗಿದೆ ಎಂದು ಶಾಲಾ ಶಿಕ್ಷಣ, ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಹೇಳಿದರು.

ಮತ್ತೆ ಗಡುವು ಮುಂದೂಡಿಕೆ ಇಲ್ಲ: ಸುಪ್ರೀಂ

ಆ.31ರೊಳಗೆ ಜಿಬಿಎ ಪಾಲಿಕೆ ಚುನಾವಣೆ

- ಜಿಬಿಎ ಪಂಚಪಾಲಿಕೆ ಚುನಾವಣೆಗೆ ಆ.31ರವರೆಗೆ ಗಡುವು ವಿಸ್ತರಣೆ
- ಈ ಹಿಂದೆ ಜೂ.30ರವರೆಗೆ ಸಮಯ ನೀಡಿದ್ದ ಸುಪ್ರೀಂಕೋರ್ಟ್
- ಸರ್ಕಾರ, ಚುನಾವಣಾ ಆಯೋಗ ಮನವಿ ಹಿನ್ನೆಲೆ ಸಮಯಾವಕಾಶ
- ಅಂತಿಮ ಗಡುವು ಎಂದು ಎಚ್ಚರಿಸಿದ ಸರ್ವೋಚ್ಚ ನ್ಯಾಯಾಲಯ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಐದು ಪಾಲಿಕೆಗಳ ಚುನಾವಣೆಯನ್ನು ಆಗಸ್ಟ್ 31ರೊಳಗೆ ನಡೆಸುವಂತೆ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಆದೇಶ ನೀಡಿದೆ. ಇದು ಕೊನೆಯ ಅವಕಾಶ ಎಂದು ಖಡಕ್ ಸೂಚನೆ ನೀಡಿರುವ ಸುಪ್ರೀಂ ಕೋರ್ಟ್, ಚುನಾವಣೆ ಮುಂದೂಡುವ ಸಂಬಂಧ ಸಲ್ಲಿಕೆಯಾಗಿದ್ದ ಎಲ್ಲಾ ಅರ್ಜಿಗಳನ್ನು ವಜಾಗೊಳಿಸಿದೆ.



ಚುನಾವಣೆ ಮುಂದೂಡಲು ಕೋರಿ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿದ್ದ ಮಧ್ಯಂತರ ಅರ್ಜಿಯ ವಿಚಾರಣೆಯನ್ನು ಬುಧವಾರ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜೋಯಮಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಾಂಚೋಲಿ ಅವರ ತ್ರಿಸದಸ್ಯ ಪೀಠ ನಡೆಸಿತು. ಈ ಪ್ರಕರಣವನ್ನು ನೋಡಿದರೆ ರಾಜ್ಯ ಸರ್ಕಾರವು ಚುನಾವಣೆ ವಿಳಂಬಗೊಳಿಸಲು ಯತ್ನಿಸುತ್ತಿರುವಂತೆ ಕಾಣುತ್ತಿದೆ ಎಂದ ಸರ್ವೋಚ್ಚ ನ್ಯಾಯಾಲಯ, ಎಸ್‌ಐಆರ್, ಜನಗಣತಿ ಹಿನ್ನೆಲೆ ಆ.31 ವರೆಗೆ ಸಮಯ ವಿಸ್ತರಿಸಲಾಗಿದೆ ಎಂದು ಹೇಳಿದೆ. ಪುಟ ೪

ಇರಾನ್ ವಿರುದ್ಧದ ಯುದ್ಧದಲ್ಲಿ ಭಾರೀ ನಷ್ಟ

ಯುಎಸ್ 42 ಯುದ್ಧ ವಿಮಾನಗಳು ನಾಶ!

ವಾಷಿಂಗ್ಟನ್ ಡಿಸಿ: ಇರಾನ್‌ವಿರುದ್ಧದ ಸಂಘರ್ಷದಲ್ಲಿ 42 ಯುದ್ಧ ವಿಮಾನ ಸೇರಿ ಯುನೈಟೆಡ್ ಸ್ಟೇಟ್ಸ್‌ಗೆ ಭಾರೀ ನಷ್ಟ ಉಂಟಾಗಿದೆ ಎಂಬ ಮಾಹಿತಿ ಅಮೆರಿಕ ಕಾಂಗ್ರೆಸ್ ವರದಿಯಿಂದ ಬಹಿರಂಗವಾಗಿದೆ. ಆಪರೇಷನ್ ಎಪಿಕ್ ಫ್ಯೂರಿ ಹೆಸರಿನಲ್ಲಿ ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್



ಸುಮಾರು 40 ದಿನ ಜಂಟಿ ದಾಳಿ ನಡೆಸಿದ ವೇಳೆ ಒಟ್ಟು 42 ಯುದ್ಧ ವಿಮಾನಗಳು ಹಾಗೂ ಡ್ರೋನ್‌ಗಳು ನಾಶವಾಗಿವೆ ಅಥವಾ ಗಂಭೀರ ಹಾನಿಗೊಳಗಾಗಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ನಷ್ಟಕ್ಕೊಳಗಾದ ವಿಮಾನಗಳಲ್ಲಿ 4 ಎಫ್-15ಇ ಸ್ಟ್ರೈಕ್ ಈಗಲ್ ಯುದ್ಧ ವಿಮಾನಗಳು, 1 ಎಫ್-35ಎ ಲೈಟ್ನಿಂಗ್-II, ಒಂದು ಎ-10 ಥಂಡರ್‌ಬೋಲ್ಟ್-II. ಪುಟ ೪

ಮೇ 23ಕ್ಕೆ ಬೆಂಗಳೂರಿಗೆ ನಿತಿನ್

ಬೆಂಗಳೂರು: ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಬಳಿಕ



ನಿತಿನ್ ನವೀನ್ ಅವರು ಮೊದಲ ಬಾರಿಗೆ ಮೇ 23 ಮತ್ತು 24ರಂದು ಕರ್ನಾಟಕಕ್ಕೆ ಭೇಟಿ ನೀಡುತ್ತಿದ್ದಾರೆ. ಅವರು ಮೇ 23ರಂದು ರಾತ್ರಿ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ಮೇ 24ರಂದು ಬೆಳಗ್ಗೆ ಮಲ್ಲೇಶ್ವರದಲ್ಲಿರುವ ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಬಳಿಕ ರಾಜ್ಯ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನಕ್ಕೆ ಭೇಟಿ ನೀಡಲಿದ್ದಾರೆ. • ವಿವರ ಪುಟ ೫

ಕಿರುಸುದ್ದಿ

ದಾಸವಾಣಿ ಕಾರ್ಯಕ್ರಮ ಇಂದು

ಹುಬ್ಬಳ್ಳಿ: ಸಂತೋಷ ನಗರದ ಶಕ್ತಿ ಕಾಲೋನಿ ರಾಘವೇಂದ್ರ ಸ್ವಾಮಿ ಮಠದಲ್ಲಿ ಮೇ 21ರಂದು ಸಂಜೆ 6 ಗಂಟೆಗೆ ನಡೆಯುವ ದಾಸವಾಣಿ ಕಾರ್ಯಕ್ರಮವನ್ನು ಸಮನ್ವಿತಾ ಹಿರೇಮಠ ನಡೆಸಿಕೊಡಲಿದ್ದಾರೆ. ಹಾರ್ಮೋನಿಯಂ ವಿಜಯಕುಮಾರ್ ಅರ್ಕಸಾಲಿ ಮತ್ತು ತಬಲಾದಲ್ಲಿ ಮನುಕುಮಾರ್ ಹಿರೇಮಠ ಪ್ರಸ್ತುತ ಪಡಿಸಲಿದ್ದಾರೆ ಎಂದು ರಾಘವೇಂದ್ರ ಸ್ವಾಮಿ ಮಠದ ಅಧ್ಯಕ್ಷ ಗೋವಿಂದಾಚಾರ್ಯ ಪ್ರಕಟಣೆಗೆ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಕಲಘಟಗಿ: ತಾಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆ ಮೂಲಕ ನಡೆಸಲಾಗುತ್ತಿರುವ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ/ ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ 2026-27ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಖಾಲಿ ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ 5 ರಿಂದ 10ನೇ ತರಗತಿ ವಿದ್ಯಾರ್ಥಿಗಳು ವೆಬ್ ಸೈಟ್: www.sw.kar.nic.in. ದಲ್ಲಿ ಬಿಡುಗಡೆ ಮಾಡಲಾದ ತಂತ್ರಾಂಶದಲ್ಲಿ ದಾಖಲು ಮಾಡಿಕೊಂಡು ಕೋರಿರುವ ವಿವರಗಳನ್ನು ದಾಖಲು ಮಾಡಲು ತಿಳಿಸಲಾಗಿದೆ.

ವಿದ್ಯಾರ್ಥಿ ನಿಲಯಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಉಚಿತವಾಗಿ ಊಟ, ವಸತಿ, ಸಮವಸ್ತ್ರ, ಲೇಖನ ಸಾಮಗ್ರಿ, ಹಾಸಿಗೆ ಹೊದಿಕೆ ಮುಂತಾದ ಮೂಲ ಸೌಲಭ್ಯಗಳನ್ನು ಪೂರೈಸಲಾಗುವುದು. ತಾಲೂಕಿನ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, (ಕಲಘಟಗಿ), ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ (ಮಿಶ್ರಿಕೋಟಿ), ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, (ಕಲಘಟಗಿ) ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ (ಸೂರಶೆಟ್ಟಿಕೊಪ್ಪ) ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ದುಮ್ಮವಾಡಗಳಲ್ಲಿ ಪ್ರವೇಶ ಪಡೆಯಬಹುದು. ಆನ್‌ಲೈನ್ ನೋಂದಣಿಯಾದ ಬಗ್ಗೆ ಅರ್ಜಿ ನಮೂನೆಯೊಂದಿಗೆ ಹಿಂದಿನ ತರಗತಿಯಲ್ಲಿ ಪಾಸಾದ ಅಂಕಪಟ್ಟಿ ಪ್ರತಿ, ತಹಶೀಲ್ದಾರರಿಂದ ಪಡೆದ ಜಾತಿ ಪ್ರಮಾಣ ಪತ್ರದ ಪ್ರತಿ, ವಿದ್ಯಾರ್ಥಿಯ ಆಧಾರ್ ಕಾರ್ಡ್ ಪ್ರತಿ, ವಿದ್ಯಾರ್ಥಿಯ ಪಾಲಕರ ಆಧಾರ್ ಕಾರ್ಡ್ ಪ್ರತಿ, ಆದಾಯ ಪ್ರಮಾಣ ಪತ್ರದ ಪ್ರತಿ, ರಹವಾಸಿ ಪ್ರಮಾಣ ಪತ್ರದ ಪ್ರತಿ, ವೈದ್ಯಾಧಿಕಾರಿಗಳಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರ, ವಿದ್ಯಾರ್ಥಿಯ ಎರಡು ಭಾವಚಿತ್ರಗಳು ದಾಖಲೆಗಳ ಝರಾಕ್ಸ ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸಿ ಈ ಕಚೇರಿಗೆ ಸಲ್ಲಿಸಬೇಕು. ಈ ಕುರಿತು ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ, ಕಲಘಟಗಿಯ ಕಚೇರಿ ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಎಸ್ಸಿ-ಎಸ್ಟಿ ಹಾಸ್ಟೇಲ್‌ಗೆ ಅರ್ಜಿ

ಧಾರವಾಡ: ಸಾಲಿಗಾಗಿ ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸರ್ಕಾರಿ ಮೆಟ್ರಿಕ್ ಪೂರ್ವ (5-10ನೇ) ಮತ್ತು ಮೆಟ್ರಿಕ್ ನಂತರದ (10ನೇ ತರಗತಿ ನಂತರ) ಬಾಲಕ, ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ 2026-27ನೇ ಸಾಲಿಗೆ ಪ್ರವೇಶಕ್ಕಾಗಿ ಆನ್‌ಲೈನ್ ಅರ್ಜಿ ಆಹ್ವಾನಿಸಿದೆ. ಮೆಟ್ರಿಕ್ ಪೂರ್ವ ನಿಲಯಗಳಿಗೆ ಜೂ.30ಮತ್ತು ಮೆಟ್ರಿಕ್ ನಂತರದ ನಿಲಯಗಳಿಗೆ ಜು. 31ರೊಳಗಾಗಿ ಆನ್‌ಲೈನ್ ವೆಬ್‌ಸೈಟ್ www.sw.kar.nic.in ಮೂಲಕ ಅರ್ಜಿ ಸಲ್ಲಿಸಬೇಕೆಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ


ಧಾರವಾಡ: ಕಳೆದ ಮಾರ್ಚ್, ಏಪ್ರಿಲ್‌ನಲ್ಲಿ ನಡೆದ ಮೆಟ್ರಿಕ್ ನಂತರದ ವಿವಿಧ ಕೋರ್ಸ್‌ಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿಗಳು ಅಂತಿಮ ವರ್ಷದ ಪಿಯುಸಿ, ಐಟಿಐ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾಗಿರಬೇಕು. ಪದವಿ, ಸ್ನಾತಕೋತ್ತರ, ತಾಂತ್ರಿಕ ಮತ್ತು ವೈದ್ಯಕೀಯ ಕೋರ್ಸ್‌ಗಳಿಗೆ ಎಲ್ಲ ಸೆಮಿಸ್ಟರ್‌ಗಳಲ್ಲಿ ಪ್ರಥಮ ಪ್ರಯತ್ನದಲ್ಲಿಯೇ ಪಾಸಾಗಿರಬೇಕು.

ಅರ್ಹ ವಿದ್ಯಾರ್ಥಿಗಳು www.sw.kar.nic.in ಮೂಲಕ ಅರ್ಜಿ ಸಲ್ಲಿಸಬೇಕು. ಹಾಗೂ ಅರ್ಜಿ ಸಲ್ಲಿಸಿದ ನಂತರ ಅರ್ಜಿಯ ಪ್ರತಿಯನ್ನು ಅಗತ್ಯ ದಾಖಲಾತಿಗಳನ್ನು ದೃಢೀಕರಿಸಿ, ಅರ್ಜಿಯೊಂದಿಗೆ ಲಗತ್ತಿಸಿ ಜಂಟಿ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಡಿ.ಸಿ. ಕಂಪೌಂಡ್, ಧಾರವಾಡ ಇಲ್ಲಿಗೆ ಸಲ್ಲಿಸಲು ಪ್ರಕಟಣೆ ತಿಳಿಸಿದೆ.

ಶಿದ್ದಪ್ಪ ಮುತ್ತಣ್ಣವರ ನಿಧನ

ನವಲಗುಂದ: ತಾಲೂಕಿನ ಗುಡಿಸಾಗರ ಗ್ರಾಮದ ಕುರುಬ ಸಮಾಜದ ಹಿರಿಯ ಶಿದ್ದಪ್ಪ ಚಂ. ಮುತ್ತಣ್ಣವರ (75 ವರ್ಷ) ಮಂಗಳವಾರ ರಾತ್ರಿ ನಿಧನರಾದರು.



ಶಿಕ್ಷಕ ಶಿವಾನಂದ ಮುತ್ತಣ್ಣವರ ಇವರ ಪುತ್ರರಾಗಿದ್ದು, ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಇವರ ನಿಧನಕ್ಕೆ ಶಾಸಕ ಎನ್. ಎಚ್. ಕೋನರಡ್ಡಿ, ಮಾಜಿ ಸಚಿವರಾದ ಕೆ. ಎನ್. ಗಡ್ಡಿ, ಶಂಕರ ಪಾಟೀಲ ಮುನೇನಕೊಪ್ಪ, ಮುಖಂಡರಾದ ವಿನೋದ ಅಸೂಟಿ, ದೇವರಾಜ ದಾಡಿಬಾವಿ ಸೇರಿದಂತೆ ಕುರುಬ ಸಮಾಜದ ಬಾಂಧವರು, ಗ್ರಾಮಸ್ಥರು ಸಂತಾಪ ಸೂಚಿಸಿದ್ದಾರೆ.



ಧಾರವಾಡ: ಕಡಿಮೆ ದಾಖಲಾತಿ ಹೆಸರಿನಲ್ಲಿ ಸರ್ಕಾರಿ ಶಾಲೆಗಳನ್ನು ಜಿಲ್ಲಾಪಂಚಾಯಾತಿ ಮುಚ್ಚಲು ಹೊರಟಿರುವುದು ಸರಿಯಲ್ಲ ಎಂದು ಖಂಡಿಸಿರುವ ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ, ನಗರದ ಜಿಲ್ಲಾಪಂಚಾಯತಿ ಮುಂಭಾಗದಲ್ಲಿ ಬುಧವಾರ ಪ್ರತಿಭಟನೆ ನಡೆಸಿತು.

ಸದೃಢ ಸಮಾಜ ನಿರ್ಮಾಣಕ್ಕೆ ಸಹಕರಿಸಿ

ಹುಬ್ಬಳ್ಳಿ/ಧಾರವಾಡ: ದುಶ್ಚಟಗಳಿಂದ ಅಷ್ಟೇ ಅಲ್ಲ ಸಾಮಾಜಿಕ ಜಾಲತಾಣಗಳಿಂದಲೂ ಪ್ರಸ್ತುತ ವರ್ಷ ಯುವ ಸಮುದಾಯದಲ್ಲಿ ನೈತಿಕ ಮೌಲ್ಯಗಳು ಕುಸಿಯುತ್ತಿವೆ. ಇವುಗಳಿಂದ ಪಾರಾಗದ ಹೊರತು ಸದೃಢ ಸಮಾಜ ರೂಪುಗೊಳ್ಳುವುದು ಅಸಾಧ್ಯ ಎಂದು ಹಿರಿಯ ಕೆ.ಎ.ಎಸ್. ನಿವೃತ್ತ ಅಧಿಕಾರಿ ಡಾ. ಸದಾಶಿವ ಮರ್ಜಿ ತಿಳಿಸಿದರು.

ಧಾರವಾಡದ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್, ಸ್ನಾತಕೋತ್ತರ ಕೇಂದ್ರದಲ್ಲಿ ಸಾಂಸ್ಕೃತಿಕ, ಕ್ರೀಡಾ, ಎನ್.ಎಸ್.ಎಸ್. ಎನ್.ಸಿ.ಸಿ., ಯುವ ರೆಡ್ ಕ್ರಾಸ್ ರೋವರ ಹಾಗೂ ರೆಂಜರ್ ಘಟಕಗಳ ವಾರ್ಷಿಕ ಕಾರ್ಯಕ್ರಮಗಳ ಸಮಾರೋಪ ಸಮಾರಂಭ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ಯಾರು ತಮ್ಮ ಚಟಗಳಿಗೆ ದಾಸರಾಗಿರುತ್ತಾರೋ ಅವರು ಪ್ರತಿದಿನ ಸಾಯುತ್ತಾರೆ. ಇಂದು ವಿದ್ಯಾರ್ಥಿಗಳಲ್ಲಿ ಬರೆಯುವ ಕೌಶಲ್ಯ ಮಾಯವಾಗುತ್ತಿದೆ. ಓದುವ ಮತ್ತು ಬರೆಯುವ ಕಲೆ ಚನ್ನಾಗಿ ರೂಪಗೊಳ್ಳಬೇಕು. ಕನಸುಗಳು ನಿಮ್ಮಲ್ಲಿ ಸಾಯಿಸದೇ ಅವುಗಳನ್ನು ನನಸು ಮಾಡಿಕೊಳ್ಳುವ ಕಡೆಗೆ ಗಮನಹರಿಸಬೇಕು ಎಂದರು. ಅಧ್ಯಕ್ಷತೆ ವಹಿಸಿದ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಗುರುನಾಥ ಕೆ. ಬಡಿಗೇರ ಮಾತನಾಡಿ, ಯಾವುದೇ ಶಿಕ್ಷಣ ಹೋರಾಟವಲ್ಲ ಅದು ಸಂತೋಷ ಧೈರ್ಯವನ್ನು ಕೊಡುವ ಜೀವನದ ಸಂಭ್ರಮ. ಶಿಕ್ಷಣ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ದಾರಿ ಮಾಡಿಕೊಡುತ್ತದೆ ಎಂದರು. ಪಿ.ಎಚ್.ಡಿ ಪದವಿ ಪಡೆದ ಪ್ರಾಧ್ಯಾಪಕರಿಗೆ ಹಾಗೂ ಸಾಂಸ್ಕೃತಿಕ, ಕ್ರೀಡಾ ವಿಭಾಗದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಗೌರವದ ಸನ್ಮಾನ ಮತ್ತು ಬಹುಮಾನ ವಿತರಿಸಲಾಯಿತು. ಡಾ.ಬಸವರಾಜೇಶ್ವರಿ ಪಾಟೀಲ, ಪೂಜಾ ರಾಠೋಡ, ಐಕ್ಯೂಎಸಿ ಸಂಚಾಲಕರಾದ ಡಾ. ಇಬ್ರಾಹಿಂ ಸೌಧಾಗರ , ಡಾ. ಅರುಣ ಕಲ್ಲೋಳಿಕರ ಇದ್ದರು.



ಹುಬ್ಬಳ್ಳಿ/ಧಾರವಾಡ: ಧಾರವಾಡದ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್, ಸ್ನಾತಕೋತ್ತರ ಕೇಂದ್ರದಲ್ಲಿ ಸಾಂಸ್ಕೃತಿಕ, ಕ್ರೀಡಾ, ಎನ್.ಎಸ್.ಎಸ್. ಎನ್.ಸಿ.ಸಿ., ಯುವ ರೆಡ್ ಕ್ರಾಸ್ ರೋವರ್ಸ ಹಾಗೂ ರೇಂಜರ್ಸ್ ಘಟಕಗಳ ವಾರ್ಷಿಕ ಕಾರ್ಯಕ್ರಮಗಳ ಸಮಾರೋಪ ಸಮಾರಂಭ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ.

ಜೂ.30ರಿಂದ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ



ಧಾರವಾಡ: ಕೇಂದ್ರ ಚುನಾವಣಾ ಆಯೋಗದ ಆದೇಶದಂತೆ ಮತದರಾರ ಪಟ್ಟಿ ವಿಶೇಷಸಮಗ್ರ ಪರಿಷ್ಕರಣೆ ಕಾರ್ಯ ಜಿಲ್ಲೆಯಲ್ಲಿ ಜೂ.30ರಿಂದ ಅ.7ರವರೆಗೂ ಜರುಗಲಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಈ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯಕ್ಕೆ ಸಾರ್ವಜನಿಕರು ಹಾಗೂ ರಾಜಕೀಯ ಪಕ್ಷಗಳು ಸಹಕಾರ ನೀಡಬೇಕು. ಈಗಾಗಲೇ ಶೇ.89.94ರಷ್ಟು ಮ್ಯಾಪಿಂಗ್ ಕಾರ್ಯ ಮುಗಿದಿದ್ದಾಗಿ ತಿಳಿಸಿದರು. ಇನ್ನುಳಿದ ಮ್ಯಾಪಿಂಗ್ ಕಾರ್ಯ ಪ್ರಗತಿಯಲ್ಲಿದ್ದು, ಶೇ.100ರಷ್ಟು ಗುರಿ ಸಾಧನೆ ಉದ್ದೇಶ ಹೊಂದಿದ್ದು, ಮತಗಟ್ಟೆ ಏಜೆಂಟರ್ (ಬಿಎಲ್‌ಎ), ಮತಗಟ್ಟೆ ಅಧಿಕಾರಿ (ಬಿಎಲ್‌ಓ) ಮನೆಗಳಿಗೆ ಬಂದಾಗ ಅಗತ್ಯ ಸಹಕಾರ ನೀಡಬೇಕು ಎಂದರು. ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಇದ್ದರು.

ಅ.7ಕ್ಕೆ ಪಟ್ಟಿ ಪ್ರಕಟ

ಅ.7ಕ್ಕೆ ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುವುದು. ಮತದಾರರ ಪಟ್ಟಿ ಸೇರ್ಪಡೆಗೆ 18 ವರ್ಷ ಪೂರ್ಣಗೊಂಡ ಭಾರತದ ನಾಗರಿಕರು ಮತ್ತು ಆಯಾ ವಿಧಾನಸಭಾ ಕ್ಷೇತ್ರದ ನಿವಾಸಿ ಮತ್ತು ಕಾನೂನಿನಡಿ ಅನರ್ಹಗೊಳ್ಳದ ವ್ಯಕ್ತಿಗಳು ಸೇರಬಹುದು. ಸುಮಾರು 20 ವರ್ಷಗಳ ಬಳಿಕ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಜರುಗುತ್ತಿದೆ. ಮರಣ ಹೊಂದಿದ, ಶಿಕ್ಷಣ-ಜೀವನೋಪಾಯಕ್ಕೆ ಶಾಶ್ವತ ವಲಸೆ ಹೋದ, ಪುನರಾವರ್ತಿ ಮತದಾರರ ತೆಗೆದು ಹಾಕುವುದು ಪರಿಷ್ಕರಣೆ ಉದ್ದೇಶ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಹೇಳಿದರು.

- ಪ್ರಸ್ತುತ ಜಿಲ್ಲೆಯಲ್ಲಿ 8,06,478 ಪುರುಷ ಹಾಗೂ 8,17,358, 79 ತೃತೀಯ ಲಿಂಗಿಗಳು ಸೇರಿ ಒಟ್ಟು 16,23,933 ಮತದಾರರಿರುವರು
- 1,665 ಮತಗಟ್ಟೆಗಳಿವೆ
- ಪ್ರತಿ ಮತಗಟ್ಟೆಗೆ ಓರ್ವ ಮತಗಟ್ಟೆ ಅಧಿಕಾರಿ ನೇಮಕ ಮಾಡಿದ್ದಾಗಿ ಮಾಹಿತಿ ನೀಡಿದ ಡಿಸಿ ಸ್ನೇಹಲ್ ಆರ್.

“ಅಕ್ರಮ ಬಾಂಗ್ಲಾ ವಲಸಿಗರು ಜಿಲ್ಲೆಗೆ ಬರುತ್ತಿರುವ ಕುರಿತು ಮಾಹಿತಿ ಇಲ್ಲ. ಆದರೆ ಈ ಕುರಿತು ಪೊಲೀಸ್ ಇಲಾಖೆ ಕ್ರಮ ಕೈಗೊಳ್ಳಲಿದೆ. ಇದೆಲ್ಲವೂ ಪತ್ತೆ ಹಚ್ಚುವ ಉದ್ದೇಶದಿಂದಲೇ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಕೈಗೊಳ್ಳಲಾಗಿದೆ.

■ ಸ್ನೇಹಲ್ ಆರ್., ಜಿಲ್ಲಾಧಿಕಾರಿ

ಆಕ್ಷೇಪಣೆಗೆ ಅವಕಾಶ

ಕೇಂದ್ರ, ಚುನಾವಣಾ ಆಯೋಗದ ವೇಳಾಪಟ್ಟಿ ಅನ್ವಯ ಎಸ್‌ಐಆರ್ ಅರ್ಹತಾ ಅವಧಿ 2026ರ ಅ.1ರ ವರೆಗಿದ್ದು, ಜೂ.20 ರಿಂದ ಜೂ.29 ರವರೆಗೆ ಪೂರ್ವ ಸಿದ್ಧತೆ, ತರಬೇತಿ ಹಾಗೂ ಮುದ್ರಣ ಕಾರ್ಯವೂ ನಡೆಯಲಿದೆ ಎಂದು ಮಾಹಿತಿ ನೀಡಿದ ಡಿಸಿ ಸ್ನೇಹಲ್ ಆರ್., ಜು.29ಕ್ಕೆ ರಜ್ಯುಲೇಷನ್ ಕಾರ್ಯ, ಆ.5ಕ್ಕೆ ಕರಡು ಮತದಾರರ ಪಟ್ಟಿ ಪ್ರಕಟಿಸಲಿದೆ. ಆ.5ರಿಂದ ಸೆ.4ರವರೆಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಿದೆ. ಸೆ.5ರಿಂದ ಅ.3ರವರೆಗೆ ನೋಟಿಸ್ ಹಂತ ಮತ್ತು ಆಕ್ಷೇಪಣೆ ಅರ್ಜಿ ವಿಲೇವಾರಿ ಜರುಗಲಿದೆ ಎಂದರು.

ಅಮಾನತು, ಗಲ್ಲು ಶಿಕ್ಷೆ ವಿಧಿಸಲು ಆಗ್ರಹ



ನವಲಗುಂದ: ಬೀದರ್ ಜಿಲ್ಲೆಯ ಪರಿಶಿಷ್ಟ ಸಮುದಾಯದ 15 ವರ್ಷದ ಕಬಡ್ಡಿ ಕ್ರೀಡಾಪಟು ಹಾಗೂ ಅಪ್ರಾಪ್ತ ವಯಸ್ಸಿನ ಬಾಲಕಿಯನ್ನು ಅತ್ಯಾಚಾರ ಮಾಡಿ ಕೊಲೆ ಮಾಡಿರುವ ವ್ಯಕ್ತಿ ಲಾಕನ್ ಪವಾರ ಈತನನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಪಿ. ಪ್ರದೀಪ ಗುಂಟಿ ರಕ್ಷಿಸುತ್ತಿದ್ದಾರೆ ಎಂದು ಆರೋಪಿಸಿರುವ ಕರ್ನಾಟಕ ಭೀಮ್ ಸೇನೆ ಸಂಘಟನೆ ರಾಜ್ಯ ಘಟಕ ಯಮನೂರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೇಲೆ ಕೇಸ್ ದಾಖಲಿಸಿ ಅಮಾನತು ಮಾಡಿ ಹಾಗೂ ಕೊಲೆಗಾರನಿಗೆ ಗಲ್ಲು ಶಿಕ್ಷೆ ವಿಧಿಸಬೇಕೆಂದು ಆಗ್ರಹಿಸಿ ತಹಶೀಲ್ದಾರ್ ಮೂಲಕ ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ಕಭೀಸೇ ರಾಜ್ಯ ಪ್ರಚಾರ ಸಮಿತಿ ಅಧ್ಯಕ್ಷ ನಿಂಗಬಸಪ್ಪ ದೊಡಮನಿ ಮಾತನಾಡಿ, ಬೀದರ ಜಿಲ್ಲೆ ಔರಾಧ ತಾಲೂಕಿನ ಬೆಳಕುಣಿ ಗ್ರಾಮದ ನಿವಾಸಿ ಕಬಡ್ಡಿ ಕ್ರೀಡಾ ಪಟು ಹಾಗೂ ಪರಿಶಿಷ್ಟ ಜಾತಿ ಸಮುದಾಯದ ವಿದ್ಯಾರ್ಥಿನಿಗೆ ಕಬ್ಬಡ್ಡಿ ಮತ್ತು ಕುಸ್ತಿಯ ಕ್ರೀಡಾ ತರಬೇತಿ ಕೊಡಿಸುವ ನೆಪದಲ್ಲಿ ಬಾಲಕಿಗೆ ನಂಬಿಸಿ ಮೋಸ ಮಾಡಿ ನಂತರ ಆಕೆಯನ್ನು ಅಪಹರಿಸಿ ಅತ್ಯಾಚಾರವೆಸಗಿ, ಅತೀ ಕ್ರೂರತೆಯಿಂದ ಅವಳ ಮೇಲೆ ಹಲ್ಲೆ ಮಾಡಿ ಬರ್ಬರವಾಗಿ ಹತ್ಯೆ ಮಾಡಿ ದುಷ್ಕೃತ್ಯ ಎಸಗಿದ ದುಷ್ಕರ್ಮಿಯನ್ನು ಕೂಡಲೇ ಬಂಧಿಸಿ ಕಾನೂನು ಪ್ರಕಾರ ಗಲ್ಲು ಶಿಕ್ಷೆ ಅಥವಾ ಎನ್‌ಕೌಂಟರ್ ಮಾಡಬೇಕು ಎಂದು ಆಗ್ರಹಿಸಿದರು.

ನ್ಯಾಯದ ಪರ ನಿಲ್ಲಬೇಕಿದ್ದ ಔರಾಧ ತಾಲೂಕಿನ ಪೊಲೀಸರು ಈ ಪ್ರಕರಣವನ್ನು ಪೋಕ್ಸೊ ಅಡಿಯಲ್ಲಿ ದಾಖಲಿಸಿಕೊಳ್ಳದೆ ಕೊಲೆಗಾರನ ರಕ್ಷಣೆಗೆ ನಿಂತಿದ್ದಾರೆ. ಆದ್ದರಿಂದ ಆ ಬಾಲಕಿಯ ಕುಟುಂಬಕ್ಕೆ ಸರ್ಕಾರ ಸೂಕ್ತ ಪರಿಹಾರ ನೀಡಬೇಕು ಎಂದು ಕರ್ನಾಟಕ ಭೀಮ್ ಸೇನೆ ಸಂಘಟನೆ ಹಾಗೂ ವಿವಿಧ ಕನ್ನಡ ಪರ ಸಂಘಟನೆಗಳು ನವಲಗುಂದ ನಗರದಲ್ಲಿ ಬೃಹತ್ ಪ್ರತಿಭಟನೆ ಮಾಡಿ ಸರ್ಕಾರಕ್ಕೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸುತ್ತಿದ್ದೇವೆ. ಒಂದು ವೇಳೆ ರಾಜ್ಯ ಸರ್ಕಾರ ಯಾವುದಕ್ಕೂ ಸ್ಪಂದಿಸದೇ ಹೋದರೆ ಧಾರವಾಡ ಜಿಲ್ಲೆಯಿಂದ ಬೆಂಗಳೂರಿನ ಫ್ರೀಡಂ ಪಾರ್ಕ್ ವರೆಗೂ ಪ್ರತಿಭಟನೆ ಮಾಡಲಾಗುವುದೆಂದು ಎಚ್ಚರಿಸಿದರು.

ದಿಲೀಪ ರತ್ನಾಕರ, ಸಚಿನ ದೊಡಮನಿ, ನಜೀರ ಹೊಸಮನಿ, ಸತೀಶ ಆರ್.ಆರ್., ಗೀರಿಜಾ ಹುಬ್ಬಳ್ಳಿ, ಪಾತೀಮಾ ಲಕ್ಕುಂಡಿ, ಫಾರಿಜಾನ್ ಬಾಗನ್ನವರ, ನೂರಜವ್ವ ಎಲಿಗಾರ, ಸತೀಶ ಆಳಿಕೇರಿ, ಪ್ರವೀಣ ಕಾಳೆ, ಪಾಂಡು ಅಸುಂಡಿ ಅನೇಕರಿದ್ದರು.

ಕಾರ್ಯನಿರತ ಪತ್ರಕರ್ತರ ಸಂಘದ ಪದಗ್ರಹಣ ನಾಳೆ

ಕುಂದಗೋಳ: ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಪದಗ್ರಹಣ ಸಮಾರಂಭ ಮೇ 22ರಂದು ಬೆಳಗ್ಗೆ 10-30 ಕ್ಕೆ ಪಟ್ಟಣದ ತಾಲೂಕು ಪಂಚಾಯತ್ ಸಭಾಭವನದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದ ಸಾನ್ನಿಧ್ಯವನ್ನು ಪಂಚಗ್ರಹ ಹಿರೇಮಠದ ಶಿಥಿಕಂಠ ಶಿವಾಚಾರ್ಯ ಸ್ವಾಮೀಜಿ ಹಾಗೂ ತ್ರಿವಿಧ ದಾಸೋಹಿ ಕಲ್ಯಾಣಪೂರ ಬಸವಣ್ಣಜ್ಜನವರು ಹಾಗೂ ಶಿವಾನಂದ ಮಠದ ಶ್ರೀಗಳು ವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ಜಿ.ಕಾ.ನಿ.ಪ ಸಂಘದ ಅಧ್ಯಕ್ಷ ಬಂಡು ಕುಲಕರ್ಣಿ ವಹಿಸುವರು. ಮುಖ್ಯ ಅಥಿತಿಗಳಾಗಿ ಶಾಸಕ ಎಂ.ಆರ್.ಪಾಟೀಲ, ಮಾಜಿ ಶಾಸಕರಾದ ಎಸ್.ಐ.ಚಿಕ್ಕನಗೌಡ್ರ, ಎಂ.ಎಸ್.ಅಕ್ಕಿ, ಕುಸುಮಾವತಿ ಶಿವಳ್ಳಿ ಆಗಮಿಸಲಿದ್ದಾರೆ. ಕ.ಕಾ.ನಿ.ಪ.ಸಂಘದ ರಾಜ್ಯ ಕಾರ್ಯಕಾರಣಿ ಸಮಿತಿಗೆ ಆಯ್ಕೆಯಾದ ಗಣಪತಿ ಗಂಗೊಳ್ಳಿ, ಬಸವರಾಜ ಕಟ್ಟಿಮನಿ ಹಾಗೂ ಜಿಲ್ಲಾ ಪ್ರ.ಕಾರ್ಯದರ್ಶಿ ಗುರು ಬಾಂಢಗೆ ಅವರನ್ನು ಸನ್ಮಾನಿಸಲಾಗುವುದು. ತಹಶೀಲ್ದಾರ್ ರಾಜು ಮಾವರಕರ, ತಾ.ಪಂ.ಪ್ರಭಾರಿ ಅಧಿಕಾರಿ ರೇಖಾ ಗಡ್ಡದವರ, ಜಿ.ಪಂ ಸಹಾಯಕ ಅಧಿಕಾರಿ ಸಿದ್ದಪ್ಪ, ಲೋಕೋಪಯೋಗಿ ಇಲಾಖಾ ಅಧಿಕಾರಿ ಬಾಬುರಾವ್ ಕೆ. ಜ್ಯೋತಿ, ಪಶು ಇಲಾಖೆಯ ಅಧಿಕಾರಿ ಡಾ. ಹನುಮಂತಗೌಡ್ರ ಪಾಟೀಲ, ಸಿಪಿಐ ಸಮೀರ ಮುಲ್ಲಾ, ಪಿ.ಎಸ್.ಐ.ಶರಣಬಸಪ್ಪ ಸಂಗಳದ, ತಾಲೂಕು ನೌಕರ ಸಂಘದ ಅಧ್ಯಕ್ಷ ಮುತ್ತಣ್ಣ ಅಣ್ಣಿಗೇರಿ, ರೊಟ್ಟಿಗವಾಡ ಸಮಾಜ ಸೇವಕರು, ಯುವ ಮುಖಂಡರಾದ ಬಾಬಣ್ಣ ಬೆಟಗೇರಿ, ಹೊಂಬೆಳಕು ಫೌಂಡೇಶನ್ ಅಧ್ಯಕ್ಷ ವಿದ್ಯಾಧರ ಸುಂಕದ ಆಗಮಿಸಲಿದ್ದಾರೆ ಎಂದು ಕ.ಕಾ.ನಿ.ಪ ಸಂಘದ ತಾಲೂಕು ಅಧ್ಯಕ್ಷ ಅಶೋಕ ಘೋರ್ಪಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬ್ಯಾಂಕಿನಲ್ಲಿ ನನ್ನ ಸಂಬಂಧಿಕರಿಲ್ಲ: ಮುನೇನಕೊಪ್ಪ

ಅಣ್ಣಿಗೇರಿ: ಪಿಎಲ್‌ಡಿ ಬ್ಯಾಂಕ್ ವ್ಯವಹಾರಗಳ ವಿವಾದಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರ ಭಾವಚಿತ್ರ ಹಾಗೂ ತಮ್ಮ ಹೆಸರನ್ನು ಅನಗತ್ಯವಾಗಿ ಜೋಡಿಸುತ್ತಿದ್ದಾರೆ ಎಂದು ಆರೋಪಿಸಿರುವ ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಅಣ್ಣಿಗೇರಿ ಬ್ಯಾಂಕಿನ ವಿಷಯದಲ್ಲಿ ಸಾರ್ವಜನಿಕ ವಲಯದಲ್ಲಿ ತಪ್ಪು ಮಾಹಿತಿ ಹಾಗೂ ವದಂತಿಗಳನ್ನು ಹರಡಲಾಗುತ್ತಿದೆ. ರಾಜಕೀಯ ದುರುದ್ದೇಶದಿಂದ ನಮ್ಮ ಹೆಸರುಗಳನ್ನು ಬಳಸಲಾಗುತ್ತಿದ್ದು, ಇದಕ್ಕೆ ಯಾವುದೇ ಆಧಾರಗಳಿಲ್ಲ ಎಂದು ಸ್ಪಷ್ಟಪಡಿಸಿದ ಅವರು, ಪಿಎಲ್‌ಡಿ ಬ್ಯಾಂಕಿನ ಓರ್ವರು ತಮಗೆ ಅಳಿಯನೂ ಅಲ್ಲ ಎಂದರು. ಅಣ್ಣಿಗೇರಿ ಪಿಎಲ್‌ಡಿ ಬ್ಯಾಂಕ್ ಆರಂಭಗೊಂಡಿದ್ದು ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ. ವಿಶೇಷವೆಂದರೆ ಈಗ ಅದೇ ಕಾಂಗ್ರೆಸ್ ಸರ್ಕಾರ ಅಸ್ತಿತ್ವದಲ್ಲಿರುವಾಗಲೇ ರಾಜ್ಯದಲ್ಲಿ ನ್ಯಾಯಾಲಯವು ಬ್ಯಾಂಕನ್ನು ಸಮಾಪಣೆಗೊಳಿಸಿ (ಲಿಕ್ವಿಡೇಟ್) ಆದೇಶ ಹೊರಡಿಸಿದೆ. ನಂತರವೂ ಪಿಎಲ್‌ಡಿ ಬ್ಯಾಂಕಿನವರು ನ್ಯಾಯಾಲಯದ ಮೊರೆ ಹೋಗಿದ್ದರು. ಈ ಪ್ರಕ್ರಿಯೆಗಳಿಗೂ ನಮಗೂ ಯಾವುದೇ ಸಂಬಂಧವಿಲ್ಲ. ಹೀಗಿರುವಾಗ ಈ ಇಡೀ ಪ್ರಸಂಗದಲ್ಲಿ ನನ್ನ ಹೆಸರನ್ನು ಎಳೆದು ತರುತ್ತಿರುವುದು ಸಾರ್ವಜನಿಕರನ್ನು ಹಾದಿ ತಪ್ಪಿಸುವ ತಂತ್ರ ಎಂದಿದ್ದಾರೆ.

ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ



ಕುಂದಗೋಳ: ತಾಲೂಕಿನ ಕಮಡೊಳ್ಳಿ ಗ್ರಾಮದಲ್ಲಿ ಕರ್ನಾಟಕ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ ರಾಜ್ ಇಲಾಖೆಯ 2025-26ನೇ ಸಾಲಿನ ಸಲೀಂ ಅಹ್ಮದ್ ವಿಧಾನ ಪರಿಷತ್ ಸದಸ್ಯರು ಹಾಗೂ ಸರ್ಕಾರಿ ಮುಖ್ಯ ಸಚೇತಕರು ಇವರ ವಿಶೇಷ ಅನುದಾನ ಅಡಿಯಲ್ಲಿ ರಾಚೋಟೇಶ್ವರ ಸ್ವಾಮೀಜಿ ಅವರ ಸಮ್ಮುಖದಲ್ಲಿ ಗುರು ಲೋಚನೇಶ್ವರ ಮಠದಿಂದ ವೀರಪ್ಪ ಹೊಸಮನಿ ಅವರ ಮನೆ ವರೆಗೆ ಸಿ.ಸಿ.ರಸ್ತೆ ನಿರ್ಮಾಣದ ಕಾಮಗಾರಿಗೆ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಚಂದ್ರಶೇಖರ ಜುಟ್ಟಲ್ ಭೂಮಿಪೂಜೆ ನೆರವೇರಿಸಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಪಂಚ ಗ್ಯಾರಂಟಿಯೊಂದಿಗೆ ಗ್ರಾಮೀಣಾಭಿವೃದ್ಧಿ ಅನುದಾನ ನೀಡುತ್ತಿದ್ದು ಜನರ ಕಾಳಜಿ ಸಕಾರವಾಗಿದೆ. ಗ್ರಾಮದ ಪ್ರಮುಖ ರಸ್ತೆ ಇದಾಗಿದ್ದು ಸರ್ಕಾರದ ಮುಖ್ಯ ಸಚೇತಕರಾದ ಸಲೀಂ ಅಹ್ಮದ್ ಅವರ ಅನುದಾನದಲ್ಲಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅವರ ಸಹಕಾರದಿಂದ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣಕ್ಕೆ 50 ಲಕ್ಷ ರೂ. ಅನುದಾನ ಮಂಜೂರು ಮಾಡಿದ್ದಾರೆ. ಗುತ್ತಿಗೆದಾರರು ಗುಣಮಟ್ಟದಲ್ಲಿ ಕಾಮಗಾರಿ ಮಾಡುವಂತೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಸಲೀಂ ಅಹ್ಮದ್ ಅವರ ಆಪ್ತ ಸಹಾಯಕ ವರುಣ ನಾಯಕ, ಗ್ರಾಮಸ್ಥರಾದ ಹನಮಂತಗೌಡ್ರ ಪಾಟೀಲ, ಶಂಕರಗೌಡ್ರ ಪಾಟೀಲ, ನೆಹರು ಪಾಟೀಲ, ಬಸಯ್ಯ ಕಾಶಪ್ಪನಮಠ, ರುದ್ರಪ್ಪ ಕ್ಯಾತಗೌಡ್ರ, ವಿರೂಪಾಕ್ಷಪ್ಪ ತೋಟದ, ಬಾಬಣ್ಣ ಜಕಣಿ, ಕಾಂತೇಶ ದೊಡಮನಿ, ಶಂಬಯ್ಯ ನೀರಲಗಿ, ಪ್ರವೀಣ ಕಟ್ಟಿಮನಿ, ಜಗದೀಶ ಸಂಶಿ, ಜಗದೀಶ ಹಣಗಿ, ಚಮನಸಾಬ್ ದಂಡಿನ, ಶರೀಫಸಾಬ್ ಬೂಬಜಿ, ಲೊಚಪ್ಪ ತೆಂಬದಮನಿ, ವೆಂಕಣ್ಣ ಸಂಶಿ, ಮಹಾಂತೇಶ ತೋಟದ, ನಿಂಗಪ್ಪ ಮೊರೆ, ಮುರಿಗೆಪ್ಪ ಮಡಿವಾಳರ, ಈರಪ್ಪ ಕೋಡಿ, ಬಸಣ್ಣ ಕುರ್ತಕೋಟಿ, ಅಶೋಕ ರೋಡೆ, ರವಿ ರೋಡೆ, ಕೊಟೆಪ್ಪ ಕುರಟ್ಟಿ, ಕುಶಪ್ಪ ಮಡಿವಾಳರ, ಮೆಹಬೂಬಸಾಬ್ ಗುಡದೂರ, ಚನ್ನಪ್ಪ ಕುರ್ತಕೋಟಿ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

ಸರ್ಕಾರಿ ಶಾಲೆ ಮುಚ್ಚುವ ನಿರ್ಧಾರಕ್ಕೆ ಖಂಡನೆ

ಧಾರವಾಡ: ಕಡಿಮೆ ದಾಖಲಾತಿ ಹೆಸರಿನಲ್ಲಿ ಸರ್ಕಾರಿ ಶಾಲೆಗಳನ್ನು ಜಿಲ್ಲಾ ಪಂಚಾಯತಿ ಮುಚ್ಚಲು ಹೊರಟಿರುವುದು ಸರಿಯಲ್ಲ ಎಂದು ಖಂಡಿಸಿರುವ ಅಖಿಲ ಭಾರತ ಪ್ರಸಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ, ನಗರದ ಜಿಲ್ಲಾ ಪಂಚಾಯತಿ ಮುಂಭಾಗದಲ್ಲಿ ಬುಧವಾರ ಪ್ರತಿಭಟನೆ ನಡೆಸಿತು.

ಕೃಷಿಕರು ಹಾಗೂ ಕೂಲಿ ಕಾರ್ಮಿಕರೊಂದಿಗೆ ಪ್ರತಿಭಟಿಸಿದ ಪ್ರತಿಭಟನಾಕಾರರು, ಜಿಲ್ಲಾ ಪಂಚಾಯತಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಸರ್ಕಾರಿ ಶಾಲೆ ಮುಚ್ಚುವ ನಿರ್ಧಾರ ಹಿಂಪಡೆಗಾಗಿ ಆಗ್ರಹಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ.ಲಿಂಗರಾಜ ಅಂಗಡಿ ಮಾತನಾಡಿ, ಈಚೆಗೆ ನಡೆದ ಜಿಲ್ಲಾ ಪಂಚಾಯತಿ ಸಭೆಯಲ್ಲಿ ಒಂದು ತರಗತಿಗೆ 25ಕ್ಕಿಂತ ಕಡಿಮೆ ದಾಖಲಾತಿ ಇರುವ ಸರ್ಕಾರಿ ಶಾಲೆಗಳು, ವಿಲೀನದ ಹೆಸರಲ್ಲಿ ಮುಚ್ಚುವ ನಿರ್ಧಾರ ತೀವ್ರವಾಗಿ ಖಂಡಿಸಿದರು.

ಸರ್ಕಾರಿ ಶಾಲೆಗಳಿಗೆ ಮೂಲಭೂತ ಸೌಕರ್ಯಗಳು, ಶಿಕ್ಷಕರನ್ನು ನೇಮಿಸಿ ಶಾಲೆ ಅಭಿವೃದ್ಧಿಗೆ ಶ್ರಮಿಸಬೇಕಾದ ಸರ್ಕಾರ, ಕಡಿಮೆ ದಾಖಲಾತಿ ನೆಪವೊಡ್ಡಿ ಮುಚ್ಚುವ ನಿರ್ಧಾರ ಒಪ್ಪುವುದಿಲ್ಲ. ಶಿಕ್ಷಣದ ಖಾಸಗೀಕರಣ ನೀತಿ ಕೈಬಿಡುವಂತೆ ಒತ್ತಾಯಿಸಿದರು. ಎಐಡಿಎಸ್‌ಒ ಕಾರ್ಯದರ್ಶಿ ಶಶಿಕಲಾ ಮೇಟಿ ಮಾತನಾಡಿ, ದೂರದ ಹಳ್ಳಿಗಳು ಮತ್ತು ಕಾಡಂಚಿನ ಗ್ರಾಮಗಳಲ್ಲಿ ಬಹುತೇಕ 25ಕ್ಕಿಂತ ಕಡಿಮೆ ದಾಖಲಾತಿ ಇದೆ. ಇಲ್ಲಿ ಇದೇ ದೊಡ್ಡ ಸಂಖ್ಯೆ. ಹಾಗಂತ ಶಾಲೆ ಮುಚ್ಚುವುದು ಸರಿಯೇ? ಎಂದು ಪ್ರಶ್ನಿಸಿದರು. ಸರ್ಕಾರಿ ಶಾಲೆಗಳಲ್ಲಿ ಕೃಷಿಕರು, ಬಡವರು, ಮಧ್ಯಮ ವರ್ಗದ ಹಾಗೂ ಕೂಲಿ ಕಾರ್ಮಿಕರ ಮಕ್ಕಳೇ ಓದುತ್ತಾರೆ. ಹೀಗಾಗಿ ಶಾಲೆಗಳು ಮುಚ್ಚುವುದು ಬಡ, ಕೃಷಿಕರ ಹಾಗೂ ಕಾರ್ಮಿಕರ ವಿರೋಧಿ ನೀತಿಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈಗಾಗಲೇ ಕೆಪಿಎಸ್ ಮ್ಯಾಗ್ನೇಟ್ ಶಾಲೆ ವಿರುದ್ಧ ಹೋರಾಟ ನಡೆಯುತ್ತಿದೆ. ಒಂದೇ ಮಗು ಇದ್ದರೂ ಸರ್ಕಾರಿ ಶಾಲೆಗಳು ಮುಚ್ಚುವುದಿಲ್ಲ ಎನ್ನುವ ಸರ್ಕಾರ, ಇದೀಗ ಜಿಲ್ಲಾಡಳಿತದ ಮೂಲಕ ನೂರಾರು ಸರ್ಕಾರಿ ಶಾಲೆ ಮುಚ್ಚುತ್ತಿರುವುದು ಖಂಡಿಸಿದರು.

ಕಡಿಮೆ ದಾಖಲಾತಿ ನೆಪ ಮತ್ತು ವಿಲೀನದ ಹೆಸರಲ್ಲಿ ಸರ್ಕಾರಿ ಶಾಲೆ ಮುಚ್ಚುವ ಜಿಪಂ ನಿರ್ಧಾರ ಕೈಬಿಡಬೇಕು. ಇಲ್ಲವಾದಲ್ಲಿ ಮುಂಬರುವ ದಿನಗಳಲ್ಲು ತೀವ್ರ ಸ್ವರೂಪದ ಹೋರಾಟ ಮಾಡುವುದಾಗಿ ಎಚ್ಚರಿಸಿ, ಜಿಪಂ ಉಪಕಾರ್ಯದರ್ಶಿಗಳಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಸಿಂಧು ಕೌದಿ, ಶರಣಬಸವ ಗೋನವಾರ, ಭುವನ ಬಳ್ಳಾರಿ, ಗಂಗಾ ಕೊಕರೆ, ವೀರಭದ್ರಯ್ಯ ಚಿಕ್ಕಮಠ, ಯಲ್ಲಪ್ಪ ಸಂಗ್ರೇಸಿಕೊಪ್ಪ, ನಾಗಪ್ಪ ಏಣಗಿ, ಸಿದ್ದು ಚಿಪ್ಪಲಕಟ್ಟಿ ಸೇರಿದಂತೆ ಕೃಷಿಕರು, ಕೂಲಿ ಕಾರ್ಮಿಕ ಮಹಿಳೆಯರು ಪಾಲ್ಗೊಂಡಿದ್ದರು.

ಪ್ರತ್ಯೇಕ ಪಾಲಿಕೆಗೆ ಆಗ್ರಹಿಸಿ ಅರಬೆತ್ತಲೆ ಮೆರವಣಿಗೆ



ಧಾರವಾಡ: ಸ್ವಾಭಿಮಾನಿ ಹೋರಾಟ ಸಮಿತಿ ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ರಚನೆಗೆ ಆಗ್ರಹಿಸಿ ಕೈಗೊಂಡ ಸತ್ಯಾಗ್ರಹ ಆರನೇ ದಿನವೂ ಮುಂದುವರೆದಿದ್ದು, ಬುಧವಾರ ಜಿಲ್ಲೆಯ ವಿವಿಧ ದಲಿತ ಸಂಘಟನೆಗಳು ಈ ಸತ್ಯಾಗ್ರಹಕ್ಕೆ ಬೆಂಬಲ ನೀಡಿದವು.

ದಲಿತ ಮುಖಂಡ ಪರಮೇಶ ಕಾಳೆ ನೇತೃತ್ವದಲ್ಲಿ ನಗರದ ಪ್ರಮುಖ ಬೀದಿಗಳಲ್ಲಿ ಅರೆಬೆತ್ತಲೆ ಮೆರವಣಿಗೆ ನಡೆಸಿ ಮತ್ತು ಜ್ಯುಬ್ಲಿ ವೃತ್ತದಲ್ಲಿ ಮಾನವ ಸರಪಳಿ ರಚಿಸಿ ಆಕ್ರೋಶ ವ್ಯಕ್ತಪಡಿಸಿದರು.

ಮುಖಂಡ ಅರವಿಂದ ಏಗನಗೌಡರ ಮಾತನಾಡಿ, ಧಾರವಾಡ ಮಹಾನಗರ ಪ್ರತ್ಯೇಕ ಪಾಲಿಕೆ ರಚನೆಗೆ ಕಾನೂನು ಅಭಿಪ್ರಾಯ ಪಡೆಯಲು ರಾಜ್ಯಪಾಲರಿಗೆ ಸುಮಾರು 11 ತಿಂಗಳು ಸಮಯ ಬೇಕಿತ್ತೆ? ಪ್ರತ್ಯೇಕ ಪಾಲಿಕೆಯ ಸ್ವಾಭಿಮಾನಿ ಹೋರಾಟ ಸಮಿತಿ ನಿಯೋಗ ಮಂಗಳವಾರ ರಾಜ್ಯಪಾಲರ ಭೇಟಿ ಮಾಡಿ ಮನವಿ ಸಲ್ಲಿಸಿದೆ. ಆದರೆ ರಾಜ್ಯಪಾಲರ ನಿಲುವು ಮತ್ತು ಪ್ರತಿಕ್ರಿಯೆ ಅತೃಪ್ತಿ ಹಾಗೂ ನಿರಾಶಾಯದಾಯಕವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ರಾಜ್ಯಪಾಲರು ಸಂವಿಧಾನದ ಹುದ್ದೆಯಲ್ಲಿದ್ದರೂ ಸಚಿವ ಪ್ರಹ್ಲಾದ್ ಜೋಶಿ ಅವರ ಆಣತಿಯಂತೆ ವರ್ತಿಸುವುದು ಮತ್ತು ನಿಯೋಗ ಭೇಟಿ ವೇಳೆ ಬೃಹತ್ ಪಾಲಿಕೆ ಉಳಿದರೆ ಹೆಚ್ಚು ಅನುದಾನವೂ ಬರಲಿದೆ ಎಂದು ರಾಜ್ಯಪಾಲರ ಹೇಳಿಕೆ ಖೇದಕರ. ಧಾರವಾಡ ಪ್ರತ್ಯೇಕ ಪಾಲಿಕೆಯು ಕಡತಕ್ಕೆ ಅಂಕಿತ ಹಾಕುವವರೆಗೆ ಸತ್ಯಾಗ್ರಹ ನಿಲ್ಲಲ್ಲ ಎಂದು ಸ್ಪಷ್ಟಪಡಿಸಿದರು.

ಪರಮೇಶ ಕಾಳೆ ಮಾತನಾಡಿ, ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಬೇಡಿಕೆ ನ್ಯಾಯಯುತ. ಹೀಗಾಗಿ ಈ ಕಡತಕ್ಕೆ ಸಹಿ ಹಾಕಲು ರಾಜ್ಯಪಾಲರು ಮೀನಾಮೇಷ ಎಣಿಸುವುದು ಏಕೆ? ಸ್ವತಂತ್ರ ಪಾಲಿಕೆ ಹಕ್ಕು ಸಿಗುವರೆಗೂ ಹೋರಾಟ ನಿಲ್ಲುವುದಿಲ್ಲ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಹು-ಧಾ ಮಹಾನಗರ ಪಾಲಿಕೆ ಸದಸ್ಯರಾದ ಕವಿತಾ ಕಬ್ಬೇರ, ದೀಪಾ ನೀರಲಕಟ್ಟಿ, ರಾಜು ಕಮತಿ, ಮೆಹಬೂಬ್ ಪಠಾಣ, ಪ್ರಕಾಶ ಘಾಟಗೆ, ತುಳಜಪ್ಪ ಪೂಜಾರ, ಎಸ್.ಸಿ.ನೀರಾವರಿ, ಮನೋಜ ಪಾಟೀಲ, ರವಿ ಮಾಳಗೇರ ಇದ್ದರು.

ವಿದ್ಯಾರ್ಥಿಗಳ ಪಯಣ ನನಸಿನತ್ತ ಸಾಗಲಿ

ಧಾರವಾಡ: ಕನಸಿನದಾರಿಯಲ್ಲಿ ವಿದ್ಯಾರ್ಥಿಗಳ ಪಯಣ ನನಸಿನತ್ತ ಸಾಗಬೇಕು ಎಂದು ಆಕಾಶವಾಣಿ ನಿವೃತ್ತ ನಿರ್ದೇಶಕ ಶರಣಬಸವ ಚೋಳಿನ ಹೇಳಿದರು.

ಕರ್ನಾಟಕ ವಿಜ್ಞಾನ ಕಾಲೇಜಿನ ಜಿಮಖಾನಾ ವಿಭಾಗ ನಡೆಸಿದ ಪ್ರತಿಭಾ ಪುರಸ್ಕಾರ 2025-26, ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದರು. ವಿದ್ಯಾರ್ಥಿಗಳು ನಿರಂತರ ಗುರಿಯೊಂದಿಗೆ ಸಾಧನೆ ಮಾಡಲು ಪ್ರಯತ್ನಿಸಬೇಕು. ಶಿಸ್ತು ಬದ್ಧ ಅಧ್ಯಯನಕ್ಕೆ ಹೆಚ್ಚು ಗಮನ ನೀಡಬೇಕು ಎಂದರು.

ಕವಿವಿ ಪ್ರಭಾರ ಕುಲಸಚಿವ ಡಾ. ಎಂ.ಎನ್.ಜೋಡಿ ಮಾತನಾಡಿ, ಸೋಲು ಒಂದು ಅನುಭವ, ಗೆಲುವೇ ಒಂದು ಜೀವನ ಎಂಬ ಸಂದೇಶದ ಮೂಲಕ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಿದರು. ಸಂಗೀತದ ಮೂಲಕ ಅದರ ಭಾವಾರ್ಥವನ್ನು ವಿವರಿಸಿ ವಿದ್ಯಾರ್ಥಿಗಳ ಮೆಚ್ಚುಗೆ ಪಡೆದರು. ವಿಜ್ಞಾನ ಕಾಲೇಜಿನ ಪ್ರಾಚಾರ್ಯ ಡಾ. ಎಂ.ಎಸ್. ಸಾಳುಂಕೆ ಅಧ್ಯಕ್ಷತೆ ವಹಿಸಿದ್ದರು. ಡಾ.ಜಗದೀಶ ಗುದಗೂರ, ಡಾ.ಕೀರ್ತಿ ಅಕ್ಕಿಮಠ, ಡಾ.ಕಿರಣ ಕೊಲ್ಲಾರ, ಡಾ.ಲಲಿತಾ ನಾಯಕ, ಪ್ರೊ. ಅಂಬಿಕಾ, ಡಾ.ಸಮೀರ ಛಬ್ಬಿ, ಡಾ.ಕಲ್ಪನಾ ದಳವಾಯಿ, ಡಾ. ಕೊಟ್ರೇಶ, ಡಾ.ಶಂಕ್ರಾಂತರ, ಡಾ.ಕೆ.ಎಸ್. ಕಟಗಿ ಇದ್ದರು.



ಸಮಾಜಕ್ಕೆ ಬೆಳಕಾದ ಹುರಕಡ್ಲಿ ಅಜ್ಜ: ಸ್ವಾಮೀಜಿ

ಧಾರವಾಡ: ಸಂತ ಶ್ರೇಷ್ಠ, ದಾಸೋಹ ಮೂರ್ತಿ, ಮಹಿಳಾ ಶಿಕ್ಷಣದ ಹರಿಕಾರರಾದ ಹುರಕಡ್ಲಿ ಅಜ್ಜನವರ ಸರಳತೆ, ಕಾಯಕ ನಿಷ್ಠೆ ಮತ್ತು ಆಧ್ಯಾತ್ಮಿಕ ಚಿಂತನೆಗಳು ಸಮಾಜಕ್ಕೆ ಬೆಳಕಾಗಿವೆ ಎಂದು ಅಮ್ಮಿನಬಾವಿ ಅಭಿನವ ಶಾಂತಲಿಂಗ ಸ್ವಾಮೀಜಿ ಹೇಳಿದರು.



ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಂಗಣದಲ್ಲಿ ನಡೆದ ಹುರಕಡ್ಲಿ ಅಜ್ಜನ 127ನೇ ಜಯಂತಿಗೆ ಚಾಲನೆ ನೀಡಿದ ಅವರು, ಹುರಕಡ್ಲಿ ಅಜ್ಜರು ಯಾವುದೇ ಆಡಂಬರವಿಲ್ಲದೆ ಬಾಳಿಬದುಕಿದ ಚೇತನ ಎಂದರು. ಭಕ್ತರ ಕಷ್ಟ-ಕಾರ್ಪಣ್ಯಗಳಿಗೆ ಸ್ಪಂದಿಸಿದ ಹುರಕಡ್ಲಿ ಅಜ್ಜರ ಜೀವನವೇ ನಮಗೆಲ್ಲ ದೊಡ್ಡ ಸಂದೇಶ. ಅವರ ಪಾದಸ್ಪರ್ಶದಿಂದ ಈ ಭಾಗದ ಭೂಮಿ ಪಾವನವಾಗಿದೆ. ಅವರ ಭಕ್ತಿ ಹಾಗೂ ಕಾಯಕದ ಹಾದಿಯಲ್ಲಿ ನಾವೆಲ್ಲರೂ ಸಾಗೋಣ ಎಂದರು.

ಉಪನ್ಯಾಸ ನೀಡಿದ ಡಾ.ಕಲ್ಲಯ್ಯ ಹಿರೇಮಠ, ಹುರಕಡ್ಲಿ ಅಜ್ಜ ಮಹಿಳಾ ಶಿಕ್ಷಣಕ್ಕೆ ಒತ್ತು ನೀಡಿದ ಫಲವೇ ಇಂದಿನ ಶಿಕ್ಷಣ ಮಹಾವಿದ್ಯಾಲಯಕ್ಕೆ ಸಾಕ್ಷಿ. ಜಿಗಳೂರು ಮತ್ತು ಶೇಷಗಿರಿ ಕಾಲೇಜು ಸ್ಥಾಪನೆಯಲ್ಲಿ ಅಜ್ಜನ ಪಾತ್ರ ಮರೆಯುವ ಹಾಗಿಲ್ಲ ಎಂದರು. ನವಲಗುಂದ ಅಜ್ಜನ ಮಠದಲ್ಲಿ ನಡೆದ ಪವಾಡಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟ ಡಾ.ಕಲ್ಲಯ್ಯ, ಮಾಜಿ ಮುಖ್ಯಮಂತ್ರಿ ದಿವಂಗತ ಜೆ.ಎಚ್.ಪಟೇಲ್, ರಾಮಕೃಷ್ಣ ಹೆಗಡೆ, ಇಂದಿನ ರಮೇಶ ಜಿಗಜಿಣಗಿ ಅವರೊಂದಿಗಿನ ಒಡನಾಟವೂ ಮೆಲಕು ಹಾಕಿದರು. ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ದಯಾನಂದ ಬಂಡಿ, ಆಡಳಿತಾಧಿಕಾರಿ ಎಸ್. ಕೆ. ಹೊಸಂಗಡಿ, ಡಾ.ನಿರ್ಮಲಾ ಹಿರೇಗೌಡರ, ಪ್ರವೀಣ ಹಕಟ್ಟಿಹೊಳಿ, ಪ್ರಾಚಾರ್ಯ ಎಂ.ಐ.ಸಣಮನಿ, ಡಾ.ಜ್ಯೋತಿಲಕ್ಷ್ಮೀ ಡಿ.ಪಿ., ಪ್ರೊ. ಅನಿತಾ ಕಡಪಟ್ಟಿ ಇತರರಿದ್ದರು.

ಮೇ 24ರಂದು ಅಖಿಲ ಭಾರತ ಬೃಹತ್ ಸಮಾವೇಶ

ಯಲ್ಲಾಪುರ: ಬುಡಕಟ್ಟು ಜನಾಂಗದ ಸಂಸ್ಕೃತಿ ಎಂದರೆ ಇಡೀ ಸನಾತನ ಹಿಂದೂ ಸಂಸ್ಕೃತಿಯ ಮೂಲವಾಗಿದ್ದು, ನಮ್ಮ ಪರಂಪರೆ, ಸಂಸ್ಕೃತಿಯನ್ನು ಕಳೆದುಕೊಂಡರೆ ಈ ದೇಶದಲ್ಲಿ ನಮಗೆ ಬದುಕುವ ಹಕ್ಕು ಕೂಡ ಇರುವುದಿಲ್ಲ. ಇಂತಹ ಗಿರಿಜನ ಸಮುದಾಯಗಳ ಸಾಂಸ್ಕೃತಿಕ ವೈಭವ, ಪರಂಪರೆ ಹಾಗೂ ರಾಷ್ಟ್ರೀಯ ಏಕತೆಯ ಸಂದೇಶವನ್ನು ದೇಶದ ಮುಂದೆ ಅನಾವರಣಗೊಳಿಸುವ ಉದ್ದೇಶದಿಂದ ಅಖಿಲ ಭಾರತ ಬೃಹತ್ ಸಮಾವೇಶ ನವದೆಹಲಿಯಲ್ಲಿ ಮೇ 24ರಂದು ನಡೆಯಲಿದೆ ಎಂದು ವಿಧಾನ ಪರಿಷತ ಸದಸ್ಯ ಹಾಗೂ ಗಿರಿಜನ ಸುರಕ್ಷಾ ವೇದಿಕೆ ರಾಷ್ಟ್ರೀಯ ಸದಸ್ಯ ಶಾಂತಾರಾಮ ಸಿದ್ದಿ ಹೇಳಿದರು.

ಅವರು ಬುಧವಾರ ಪಟ್ಟಣದ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೇವಲ ಭೌತಿಕ ಅಭಿವೃದ್ಧಿಯಾದರೆ ಸಾಲದು, ಸಾಂಸ್ಕೃತಿಕ ಹಾಗೂ ಭಾವನಾತ್ಮಕ ಅಭಿವೃದ್ಧಿಯೂ ವಿಶೇಷವಾಗಿ ಬೇಕು. ಮಹಾನ್ ಜನನಾಯಕ ಭಗವಾನ್ ಬಿರ್ಸಾ ಮುಂಡಾ ಅವರ 150ನೇ ಜಯಂತಿ ವರ್ಷದ ಅಂಗವಾಗಿ ಆಯೋಜನೆಯಾಗುತ್ತಿರುವ ಈ ಮಹಾಸಂಗಮದಲ್ಲಿ ದೇಶದ ವಿವಿಧ ರಾಜ್ಯಗಳ 500ಕ್ಕೂ ಹೆಚ್ಚು ವಿವಿದ



ಗಿರಿಜನಜಾತಿ ಸಮುದಾಯಗಳಿಂದ 3 ಲಕ್ಷಕ್ಕೂ ಅಧಿಕ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆಯಿದೆ ಎಂದರು.

ಗಿರಿಜನ ಸಮುದಾಯಗಳ ಸಾಂಸ್ಕೃತಿಕ ಅಸ್ತಿತ್ವ, ಧಾರ್ಮಿಕ ಪರಂಪರೆ ಹಾಗೂ ಸಾಮಾಜಿಕ ಮೌಲ್ಯಗಳನ್ನು ರಾಷ್ಟ್ರೀಯ ವೇದಿಕೆಯಲ್ಲಿ ಪರಿಚಯಿಸುವ ಅಪರೂಪದ ಅವಕಾಶ ಇದಾಗಲಿದೆ. ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿ ದೆಹಲಿಯ ಐದು ವಿಭಿನ್ನ ಪ್ರದೇಶಗಳಿಂದ ಭವ್ಯ ಸಾಂಸ್ಕೃತಿಕ ಶೋಭಾಯಾತ್ರೆ ನಡೆಯಲಿದ್ದು, ಗಿರಿಜನ, ಬುಡಕಟ್ಟು ಸಮುದಾಯಗಳ ವೈವಿಧ್ಯಮಯ ವೇಷಭೂಷಣ, ಕಲಾ ಪರಂಪರೆ, ಜನಪದ ಸಂಸ್ಕೃತಿ ಹಾಗೂ ಜೀವನ ಶೈಲಿಯ ವೈಭವವನ್ನು ದೇಶದ ಮುಂದೆ ತೆರೆದಿಡಲಿವೆ. ಬಳಿಕ ಎಲ್ಲಾ ಶೋಭಾಯಾತ್ರೆಗಳು ಕೆಂಪುಕೋಟೆ ಆವರಣದಲ್ಲಿ ಒಂದಾಗಲಿದ್ದು, ಅಲ್ಲಿ ಬೃಹತ್ ಸಾರ್ವಜನಿಕ ಸಭೆ ನಡೆಯಲಿದೆ. ಕೇಂದ್ರ ಗೃಹ ಸಚಿವ ಅಮಿತ ಶಾ ಭಾಗವಹಿಸುವ ನಿರೀಕ್ಷೆಯಿದೆ.ಸಭೆಯಲ್ಲಿ ದೇಶದ ವಿವಿಧ ಭಾಗಗಳಿಂದ ಆಗಮಿಸುವ ಗಿರಿಜನ ಮುಖಂಡರು, ಚಿಂತಕರು, ಸ್ವಾಮೀಜಿಗಳು, ಕಲಾವಿದರು ಹಾಗೂ ಸಮಾಜದ ಪ್ರತಿನಿಧಿಗಳು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲಿದ್ದಾರೆ ಎಂದರು.

ಕಾರ್ಯಕ್ರಮದ ಅಂಗವಾಗಿ ಪಾರಂಪರಿಕ ಕಲಾ ಪ್ರದರ್ಶನಗಳು, ಜನಪದ ಆಚರಣೆಗಳು, ಸಾಂಸ್ಕೃತಿಕ ವೈಭವದ ಮೆರವಣಿಗೆಗಳು ಹಾಗೂ ಸಮುದಾಯ ಸಹಭಾಗಿತ್ವದ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದ್ದು, ದೆಹಲಿಯಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ವಾತಾವರಣ ನಿರ್ಮಾಣವಾಗಲಿದೆ. ಕೇಂದ್ರ ಸರಕಾರ ವಿಶೇಷ ರೇಲ್ವೇ ಸಂಚಾರಕ್ಕೆ ಅನುಮತಿ ನೀಡಿದ್ದು ರಾಜ್ಯದಿಂದ ಸುಮಾರು 1250 ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ವಿವಿಧ ಸಂಘಟನೆ, ಸಮಾಜದ ಸ್ವಾಮೀಜಿಗಳು ಸಹಕಾರ ನೀಡುತ್ತಿದ್ದು ಲಕ್ಷಾಂತರ ಗಿರಿಜನ ಬಂಧುಗಳ ಆಗಮನದ ಹಿನ್ನೆಲೆಯಲ್ಲಿ ವಸತಿ, ಆಹಾರ, ಕುಡಿಯುವ ನೀರು, ವೈದ್ಯಕೀಯ ನೆರವು, ಸಾರಿಗೆ ಹಾಗೂ ಸ್ವಚ್ಛತಾ ವ್ಯವಸ್ಥೆಗಳ ಸಮರ್ಪಕ ನಿರ್ವಹಣೆಗೆ 20ಕ್ಕೂ ಹೆಚ್ಚು ವಿಭಾಗಗಳು ಹಾಗೂ ವಿವಿಧ ಸಮಿತಿಗಳನ್ನು ರಚಿಸಲಾಗಿದೆ ಎಂದರು.

ಗಿರಿಜನ ಸುರಕ್ಷಾ ವೇದಿಕೆ ರಾಜ್ಯ ಸಂಚಾಲಕ ದೊಂಡು ಪಾಟೀಲ ಮಾತನಾಡಿ, ಸ್ವಾತಂತ್ರ್ಯ ನಂತರ ದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ಇಷ್ಟೊಂದು ಬೃಹತ ಪ್ರಮಾಣದಲ್ಲಿ ಗಿರಿಜನರು ಒಂದೇಡೆ ಸಮಾಗಮವಾಗುತ್ತಿರುವುದು ವಿಶೇಷವಾಗಿದ್ದು, 700ಕ್ಕೂ ಹೆಚ್ಚು ಬುಡಕಟ್ಟು ಸಮುದಾಯಗಳಿದ್ದು, ಇಂದಿಗೂ ಮೂಲಭೂತ ಸೌಲಭ್ಯ ಗಳಿಂದ ವಂಚಿತವಾಗಿವೆ. ಹಲವು ಸೌಲಭ್ಯಗಳಿದ್ದರೂ, ಬುಡಕಟ್ಟು ಸಮುದಾಯದ ಜನರಿಗೆ ತಲುಪುತ್ತಿಲ್ಲವಾದ್ದರಿಂದ ಈ ರೀತಿಯಲ್ಲಿ ತಮ್ಮ ಸಂಸ್ಕೃತಿ,ಪರಂಪರೆ ಹಾಗೂ ಹಕ್ಕುಗಳ ರಕ್ಷಣೆಗಾಗಿ ಸಂಘಟಿತ ಸಮಾವೇಶದ ಮೂಲಕ ಸರಕಾರದ ಗಮನಕ್ಕೆ ತರುವದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಸಂಚಾಲಕ ಸಿದ್ದು ಜೋರೆ, ಬಾಬು ಸೇಳಕೆ ಇದ್ದರು.

ಬಾಂಗ್ಲಾ ನುಸುಳುಕೋರರ ಪತ್ತೆಗೆ ಆಗ್ರಹ

ಹುಬ್ಬಳ್ಳಿ: ಬಾಂಗ್ಲಾದೇಶದಿಂದ ಅಕ್ರಮವಾಗಿ ನುಸುಳುಕೋರರು ಹುಬ್ಬಳ್ಳಿಗೆ ಆಗಮಿಸುತ್ತಿದ್ದು, ಸರ್ಕಾರ ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಹು-ಧಾ ಪೂರ್ವ ವಿಧಾನ ಸಭಾ ಕ್ಷೇತ್ರದ ಯುವ ಮೋರ್ಚಾ ಸದಸ್ಯರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಬುಧವಾರ ನಗರದ ಶಹರ ಪೊಲೀಸ್ ಠಾಣೆಯ ಎದುರು ಸಮಾವೇಶಗೊಂಡ ಪ್ರತಿಭಟನಾಕಾರರು ಈ ವಿಚಾರದಲ್ಲಿ ರಾಜ್ಯ ಸರ್ಕಾರ ಬೇಜವಾಬ್ದಾರಿ ತೋರುತ್ತಿದ್ದು, ಮುಸ್ಲಿಂ ಸಮುದಾಯದ ಓಲೈಕೆಗೆ ಮುಂದಾಗಿದೆ ಎಂದು ಆರೋಪಿಸಿದರು. ಸರ್ಕಾರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಬಾಂಗ್ಲಾದೇಶ ನುಸುಳುಕೋರರು ಕೂಲಿ ಕೆಲಸದ ನೆಪದಲ್ಲಿ ಪಶ್ಚಿಮ ಬಂಗಾಳದಿಂದ ಹುಬ್ಬಳ್ಳಿಗೆ ಅಕ್ರಮವಾಗಿ ಬರುತ್ತಿದ್ದು, ಇದು ಆತಂಕಕಾರಿ ಸಂಗತಿಯಾಗಿದೆ. ಬೇರೆ ಕಡೆಯಿಂದ ಬರುವವರ ದಾಖಲೆಗಳನ್ನು ಸರಿಯಾಗಿ ಹಾಗೂ ಕಟ್ಟುನಿಟ್ಟಿನಿಂದ ಪರಿಶೀಲಿಸಬೇಕು. ಅಕ್ರಮ ವಲಸಿಗರ ಪತ್ತೆ ಮಾಡಿ ಅವರ ವಿರುದ್ಧ ಕಠಿಣ



ಕ್ರಮಕ್ಕೆ ಒಳಪಡಿಸಬೇಕು ಎಂದು ಆಗ್ರಹಿಸಿದರು.

ಧಾರವಾಡ ಜಿಲ್ಲಾ ವಿಭಾಗೀಯ ಪ್ರಭಾರಿ ಜಯತೀರ್ಥ ಕಟ್ಟಿ ಮಾತನಾಡಿ, ಪಶ್ಚಿಮ ಬಂಗಾಳದಿಂದ ಸಾಕಷ್ಟು ಜನ ನುಸುಳುಕೋರರ ಹುಬ್ಬಳ್ಳಿ ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಗೆ ಕೆಲಸ ನೆಪದಲ್ಲಿ ಬರುತ್ತಿದ್ದಾರೆ. ರಾಜ್ಯ ಸರ್ಕಾರ ಅಂತವರನ್ನು ಪತ್ತೆ ಮಾಡಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ರಾಜ್ಯಕ್ಕೆ ಇಷ್ಟು ದೊಡ್ಡ ಪ್ರಮಾಣದಲ್ಲಿ ನುಸುಳುಕೋರರು ಬರುತ್ತಿದ್ದರೂ ಸರ್ಕಾರ ಸುಮ್ಮನಿರುವುದು ನೋಡಿದರೆ ಬಹುಶಃ ಪರೋಕ್ಷವಾಗಿ ಅವರಿಗೆಸಹಕಾರನೀಡುತ್ತಿರುವುದು ಕಂಡು ಬರುತ್ತಿದೆ. ದೇಶದ ಭದ್ರತೆ ವಿಚಾರದಲ್ಲಿ ಸರ್ಕಾರ ರಾಜಕಾರಣ ಮಾಡುವುದು ಬಿಡಬೇಕು. ಮುಸ್ಲಿಂ ಓಲೈಕೆ ಸಲ್ಲ ಎಂದು ಕಿಡಿಕಾರಿದರು.

ಈ ಸಂದರ್ಭದಲ್ಲಿ ಪೊಲೀಸ್ ಇಲಾಖೆಗೆ ಮನವಿ ಸಲ್ಲಿಸಿದರು. ಯುವ ಮೋರ್ಚಾ ಅಧ್ಯಕ್ಷ ಪ್ರವೀಣ ಕುಬಸದ, ನಾರಾಯಣ ಜರತಾರಘರ, ಶಿವು ಮೆಣಸಿನಕಾಯಿ, ಪ್ರೀತಮ ಅರಕೇರಿ, ಜಗದೀಶ ಬುಳ್ಳನವರ, ಹರೀಶ ಹಳ್ಳಿಕೇರಿ, ಹರೀಶ ಸರ್ವಾಳೆ, ನಾಗರತ್ನ ಬಳ್ಳಾರಿ, ಅಣ್ಣಪ್ಪಾ ಗೋಕಾಕ, ಮಾರುತಿ ಚಾಕಲಬ್ಬಿ ಇದ್ದರು.

ಪುತ್ರನಿಂದಲೇ ಪೆಟ್ರೋಲ್ ಬಂಕ್ ನಾಶ, ತೈಲಕ್ಕೆ ಪರದಾಟ

ನಾಲತವಾಡ: ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಮಾಲೀಕನ ಪುತ್ರನೇ ಪೆಟ್ರೋಲ್ ಬಂಕ್‌ನ್ನು ಸಂಪೂರ್ಣ ನಾಶಗೊಳಿಸಿದ ಘಟನೆ ಮಂಗಳವಾರ ತಡ ರಾತ್ರಿ ನಡೆದಿದೆ. ಅತ್ತ ಘಟನೆ ಹಿನ್ನಲೆ ಸ್ಥಳಿಯ ವಾಹನ ಸವಾರರು ಪೆಟ್ರೋಲ್ ಡಿಜೈಲ್‌ಗೆ ಪರದಾಡುವಂತಾಗಿದೆ.

ಅಪಾರ ಹಾನಿ: ಸಂಗಣ್ಣ ಸಂಗಮ ಅವರಿಗೆ ಸೇರಿದ ಪಟ್ಟಣದ ನಾರಾಯಣಪೂರ ರಸ್ತೆಯ ಪವಾಡ ಬಸವೇಶ್ವರ ಇಂಡಿಯಲ್ ಆಯಿಲ್ ಬಂಕ್‌ನಲ್ಲಿ ಪುತ್ರ ಮುತ್ತಣ್ಣ ಎಂಬುವನಿಂದಲೇ ಈ ಘಟನೆ ನಡೆದಿದೆ. ರಾತ್ರಿ ಏಕಾ ಏಕಿ ನುಗ್ಗಿ ತನ್ನ ಆವೇಶ ಪ್ರದರ್ಶಿಸಿದ ಬಂಕ್ ಮಾಲೀಕನ ಪುತ್ರ, ತೈಲ ಸರಬರಾಜು ಮಾಡುವ ಪೆಟ್ರೋಲ್ ಇಂಜಿನ್, ಗನ್, ಕಚೇರಿಯ ದಾಖಲೆಗಳು, ಲ್ಯಾಪ್‌ಟ್ಯಾಪ್ ಹಾಗೂ ಸಿಸಿ ಕ್ಯಾಮೆರಾಗಳನ್ನು ಮನಬಂದಂತೆ ಧ್ವಂಸಗೊಳಸಿದ್ದಲ್ಲದೇ ಅಲ್ಲಲ್ಲಿ ನಿಲ್ಲಿಸಲಾಗಿದ್ದ ಹಲವು ವಾಹನಗಳಿಗೂ ಕೂಡಾ



ಹಾನಿ ಮಾಡಿದ್ದಾನೆ.

ತೈಲ ಭರಿಸಲು ಪರದಾಟ: ಪಟ್ಟಣದಲ್ಲಿ ಒಂದೇ ಬಂಕ್ ಇರುವ ಪರಿಣಾಮ ವಾಹನಗಳ ಮಾಲೀಕರು ದೂರದ ಹಿರೇಮುರಾಳ ಹಾಗೂ ನಾರಾಯಣಪೂರ ಹೋಗುವ ಸ್ಥಿತಿ ನಿರ್ಮಾಣವಾಗಿದೆ. ಪ್ರಕರಣ ದಾಖಲು: ಘಟನೆಗೆ ಸಂಭಂದಿಸಿದಂತೆ ಮುದ್ದೇಬಿಹಾಳ ಸಿಪಿಐ ಮಹ್ಮದ ಫಶೀವುದ್ದಿನ್ ಹಾಗೂ ಪಿಎಸ್‌ಐ ಸಂಜಯ ತಿಪ್ಪಾರಡ್ಡಿ ಬಂಕ್‌ನ ಧ್ವಂಸ ಸ್ಥಳಕ್ಕೆ ಭೇಟಿ ನೀಡಿ ಸಿಬ್ಬಂದಿಗಳಿಂದ ವಿವರ ಪಡೆದುಕೊಂಡಿದ್ದು, ಘಟನೆ ನಡೆಸಿದ ಮುತ್ತಣ್ಣ ಎಂಬುವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಗಾಣಿಗ ಸಮುದಾಯಕ್ಕೆ 2ಎ ಮೀಸಲಾತಿ ದೊರಕಿಸಿದ ನೇತಾರ

ಜನಮನದ ಮುತ್ಸದ್ಧಿ ನಾಯಕ ಬೆಳ್ಳಿ ಪಂಪ್‌ಸೆಟ್ ಕಲ್ಲೂರ!

▸ ಪರಶುರಾಮ ಶಿವಶರಣ

ವಿಜಯಪುರ: ಹ್ಯಾಟ್ರಿಕ್ ಸಾಧನೆಯ ಸರಳ, ಸಜ್ಜನಿಕೆಯ ಮುತ್ಸದ್ಧಿ ನಾಯಕ, ಕೊಡುಗೈ ದಾನಿ, ಬೆಳ್ಳಿ ಪಂಪ್‌ಸೆಟ್ ಕಲ್ಲೂರ ಎಂದೇ ಹೆಸರಾಗಿದ್ದ ಇಂಡಿ ಕ್ಷೇತ್ರದ ಮಾಜಿ ಶಾಸಕ, ದಿವಂಗತ ಆರ್.ಆರ್. ಕಲ್ಲೂರ ಜಿಲ್ಲೆಯ ಜನಮಾನಸದ ಅಚ್ಚಳಿಯದ ನಾಯಕ.

ರೇವಣಸಿದ್ದಪ್ಪ ರಾಮಗೊಂಡಪ್ಪ ಕಲ್ಲೂರ ಅವರು ಆರ್.ಆರ್. ಕಲ್ಲೂರ ಎಂದೇ ಪ್ರಖ್ಯಾತಿ ಪಡೆದವರು. ಅವರು 1978 ರಲ್ಲಿ ಜನತಾ ಪಕ್ಷದಿಂದ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದರು. ಬಳಿಕ 1983 ಮತ್ತು 1989 ರಲ್ಲಿ ಕಾಂಗ್ರೆಸ್‌ನಿಂದ ಎರಡು ಬಾರಿ ಸೇರಿ ಮೂರು ಅವಧಿಗಳಿಗೆ ಇಂಡಿ ವಿಧಾನಸಭೆ ಕ್ಷೇತ್ರದ ಶಾಸಕರಾಗಿ ಹ್ಯಾಟ್ರಿಕ್ ಸಾಧನೆ ಮಾಡಿದವರು.

ಇಂದು ಪುಣ್ಯಸ್ಮರಣೆ, ಮೂರ್ತಿ ಪ್ರತಿಷ್ಠಾಪನೆ

ಅಂದು ರಾಜ್ಯದ ಅನೇಕ ಹಳ್ಳಿಗಳಿಗೆ ವಿದ್ಯುತ್ತಿನ ಸಂಪರ್ಕವಿಲ್ಲದ ಕಾಲಘಟ್ಟ. ಈ ಸಂದರ್ಭ ಅವರು ಶಾಸಕರಾದ ಕೂಡಲೇ ಪ್ರಥಮವಾಗಿ ಕೈಕೊಂಡ ಕಾರ್ಯವೇ ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸುವ ಕಾರ್ಯ. ಬಳಿಕ ಕ್ರಮೇಣ ಇಂಡಿ ಮತಕ್ಷೇತ್ರದಲ್ಲಿ ಪ್ರತಿಯೊಂದು ಗ್ರಾಮಕ್ಕೆ ಮೂಲ ಸೌಲಭ್ಯಗಳನ್ನು ಒದಗಿಸಿ, ಮತಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ನಾಂದಿ



ಹಾಡಿದರು.

ಅಂದು ಮುಖ್ಯಮಂತ್ರಿಯಾಗಿದ್ದ ಆರ್. ಗುಂಡುರಾವ್ ಅವರ ಕಾಲದಲ್ಲಿ ಶಾಸಕರಾಗಿದ್ದ ಆರ್.ಆರ್. ಕಲ್ಲೂರ ಅವರು ಇಂಡಿಯಲ್ಲಿ 110 ಕೆ.ವಿ. ವಿದ್ಯುತ್ ಸಾಮರ್ಥ್ಯದ ಯುನಿಟ್‌ನ್ನು ಸ್ಥಾಪಿಸಿದ್ದಲ್ಲದೇ, ರಾಜ್ಯಾದ್ಯಂತ ರೈತರ ಪಂಪ್ ಸೆಟ್‌ಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಪೂರೈಕೆಗೆ ಮುನ್ನುಡಿ ಬರೆದರು.

ಇಂಡಿ ಮತಕ್ಷೇತ್ರ ಅಂದು ವಿದ್ಯುತ್ ಸಂಪರ್ಕ ಪಡೆಯುವುದರಲ್ಲಿ ರಾಜ್ಯದಲ್ಲಿಯೇ ಮಾದರಿಯಾಗಿತ್ತು. ಮುಖ್ಯಮಂತ್ರಿ ಗುಂಡುರಾವ್ ಅವರು ಇಂಡಿಯ ವಿದ್ಯುತ್ ಘಟಕದ ಉದ್ಘಾಟನೆಗೆ ಬಂದಾಗ ಅವರಿಗೆ ರಾಜ್ಯದ ರೈತರ ಪರವಾಗಿ 9 ಕೆಜಿಯ ಬೆಳ್ಳಿ ಪಂಪ್‌ಸೆಟ್ ಅನ್ನು ಕಾಣಿಕೆಯಾಗಿ ನೀಡಿ, ರಾಜ್ಯದಲ್ಲಿ ಬೆಳ್ಳಿ ಪಂಪ್‌ಸೆಟ್ ಕಲ್ಲೂರ ಎಂದೇ ಅವರು ಚಿರಪರಿಚಿತರಾದರು.

ವೀರಪ್ಪ ಮೊಯ್ಲಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ಆರ್. ಆರ್. ಕಲ್ಲೂರ ಅವರು ರಾಜ್ಯ ಭೂಸೇನಾ ನಿಗಮದ ಅಧ್ಯಕ್ಷರಾಗಿದ್ದರು. ಆಗ ವಿಜಯಪುರ ನಗರದಲ್ಲಿ ನಿರ್ಮಾಣಗೊಂಡ ಕಂದಗಲ್ ಹನುಮಂತರಾಯ ರಂಗಮಂದಿರ, ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣ, ಲಾಲಬಹದ್ದೂರ್ ಶಾಸ್ತ್ರಿ ಮಾರುಕಟ್ಟೆಗಳು ಆರ್.ಆರ್. ಕಲ್ಲೂರ ಅವರ ದೂರದೃಷ್ಟಿಗೆ ಸಾಕ್ಷಿಯಾಗಿವೆ. ಇವು ಜಿಲ್ಲೆಗೆ ಅವರು ನೀಡಿದ ಅಮೂಲ್ಯ ಕೊಡುಗೆಗಳಾಗಿವೆ.

ಅಂದು ಸಮಾಜ ಕಲ್ಯಾಣ ಸಚಿವರಾಗಿದ್ದ ಎನ್. ಧರ್ಮಸಿಂಗ್ ಅವರ ಸಹಕಾರದಿಂದ ಗಾಣಿಗ ಸಮಾಜವನ್ನು ಮೀಸಲಾತಿಗಾಗಿ 2ಎ ವರ್ಗದಲ್ಲಿ ಸೇರ್ಪಡಿಸಿ ಹಿಂದುಳಿದ ಸಮಾಜಕ್ಕೆ ನ್ಯಾಯ ಒದಗಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.

ಕಲ್ಲೂರ ಅವರ ಜನೋಪಯೋಗಿ ಕಾರ್ಯಗಳ ಹಿಂದೆ ಅವರ ಧರ್ಮಪತ್ನಿ ಮೀನಾಕ್ಷಿ ಕಲ್ಲೂರ ಅವರ ಪಾತ್ರವು ಮಹತ್ವದಿದೆ. ಅವರು ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಬ್ಯಾಂಕ್ ಮತ್ತಿತರ ಕ್ಷೇತ್ರಗಳಲ್ಲಿ ಸೇವೆಸಲ್ಲಿಸಿದ್ದಾರೆ. ರಾಜ್ಯದ ಕಾಂಗ್ರೆಸ್ ಪಕ್ಷದ ವಿಭಾಗೀಯ ಮಹಿಳಾ ಸಮಿತಿ ಉಪಾಧ್ಯಕ್ಷೆಯಾಗಿ ತಮ್ಮ ವ್ಯಾಪ್ತಿಯಲ್ಲಿಯ ವಿಜಯಪುರ, ಬಾಗಲಕೋಟೆ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಮಹಿಳಾ ಸದಸ್ಯರ ಸಂಖ್ಯೆ ಹೆಚ್ಚಿಸಿ, ಸಂಘಟಿಸಿ ಪಕ್ಷಕ್ಕೆ ಬಲ ತುಂಬಿದ್ದರು. ಹೀಗೆ ಆರ್. ಆರ್. ಕಲ್ಲೂರ ದಂಪತಿ ಜಿಲ್ಲೆಗೆ ನೀಡಿದ ಅಪಾರ ಕೊಡುಗೆ ಅವಿಸ್ಮರಣೀಯ.

ಕೃಷಿ ಹೊಂಡದಲ್ಲಿ ಕಾಲು ಜಾರಿ ಬಿದ್ದು ಬಾಲಕಿಯರ ಸಾವು

ಕುಕನೂರು: ತಾಲೂಕಿನ ಯರೇಹಂಚಿನಾಳ ಗ್ರಾಮದಿಂದ ಗದುಗಿಗೆ ಹೋಗುವ ರಸ್ತೆ ಪಕ್ಕದ ಕೃಷಿ ಹೊಂಡದಲ್ಲಿ ಕಾಲು ಜಾರಿ ಬಿದ್ದು ಇಬ್ಬರು ಬಾಲಕಿಯರು ಸಾವನ್ನಪ್ಪಿದ ಘಟನೆ ಮಂಗಳವಾರ ಜರುಗಿದೆ. ಗದಗ ತಾಲೂಕಿನ ತಿಮ್ಮಾಪೂರ ಗ್ರಾಮದ ಲಕ್ಷ್ಮವ್ವ ಹರಣಸಿಕಾರಿ (15), ಮುತ್ತವ್ವ ಹರಣಸಿಕಾರಿ (8) ಬಾಲಕಿಯರು ಕೃಷಿ ಹೊಂಡದಲ್ಲಿ ಮಧ್ಯಾಹ್ನದ ವೇಳೆ ಬಟ್ಟೆ ತೊಳೆಯಲು ಹೋಗಿದ್ದರು. ಕೆರೆಯಲ್ಲಿ ಕಾಲು ಜಾರಿ ಬಿದ್ದು ಸಾವನ್ನಪ್ಪಿದ್ದಾರೆ. ಕುಟುಂಬಸ್ಥರು ಆಕ್ರಂಧನ ಮುಗಿಲು ಮುಟ್ಟಿತ್ತು. ಕುಕನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಂದ್‌ಗೆ ಮಿಶ್ರ ಪ್ರತಿಕ್ರಿಯೆ

ಬೆಂಗಳೂರು: ಇ-ಫಾರ್ಮಸಿ ಹಾಗೂ ಅತಿಯಾದ ರಿಯಾಯತಿ ದರದಲ್ಲಿ ಔಷಧ ಮಾರಾಟ ವಿರೋಧಿಸಿ ಬುಧವಾರ ಔಷಧ ವ್ಯಾಪಾರಿಗಳು ಮತ್ತು ಔಷಧಗಳ ವಿತರಕರು ಕರೆ ನೀಡಿದ್ದ ರಾಜ್ಯಾದ್ಯಂತ ಔಷಧಿ ಮಳಿಗೆ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಅದರಲ್ಲೂ ಬೆಂಗಳೂರಿನಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ಶೇ.90ರಷ್ಟು ಔಷಧಿ ಮಳಿಗೆಗಳು ಎಂದಿನಂತೆ ಕಾರ್ಯನಿರ್ವಹಿಸುತ್ತಿತ್ತು, ಬಹುತೇಕ ವರ್ತಕರು ಕಪ್ಪು ಪಟ್ಟಿ ಧರಿಸಿ ಮಳಿಗೆ ತೆರೆದು ವ್ಯಾಪಾರ ಮಾಡಿದರು. ಸರ್ಕಾರಿ ಆಸ್ಪತ್ರೆಗಳಲ್ಲಿನ ಔಷಧ ಮಳಿಗೆಗಳು, ಜನೌಷಧಿ ಕೇಂದ್ರ, ಆನ್‌ಲೈನ್ ಔಷಧ ಮಾರಾಟ ವ್ಯವಸ್ಥೆಗಳನ್ನು ಹೊಂದಿರುವ ಕಾರ್ಪೋರೆಟ್ ಹಾಗೂ ಫಾರ್ಮಾ ಕಂಪನಿಗಳು ಹಾಗೂ ಹಲವು ಖಾಸಗಿ ಔಷಧ ಮಳಿಗೆಗಳು ತೆರೆದಿದ್ದವು.



ಹೀಗಾಗಿ ನಗರದಲ್ಲಿ ಅಂತಹ ಸಮಸ್ಯೆ ಕಂಡುಬಂದಿಲ್ಲ. ಜತೆಗೆ ಮುನ್ನೆಚ್ಚರಿಕೆ ಕ್ರಮವಾಗಿ ಬಂದ್ ಆಗಲಿದ್ದ ಕುರಿತು ಮಳಿಗೆಗಳ ಮಾಲೀಕರು ಗ್ರಾಹಕರಿಗೆ ತಿಳಿಸಿದ್ದರಿಂದ ಹಲವರು ಮುಂಜಾಗ್ರತೆಯಿಂದ ಔಷಧ ಖರೀದಿ ಮಾಡಿದ್ದರು. ಇದರಿಂದಾಗಿ ತೊಂದರೆ ತಪ್ಪಿದೆ ಎಂದು ಔಷಧ ವ್ಯಾಪಾರಗಳ ಸಂಘ ತಿಳಿಸಿದೆ.

ಕರ್ನಾಟಕ ಫಾರ್ಮಾ ರಿಟೈಲರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್ ಆರ್ಗನೈಸೇಷನ್ ಅಧ್ಯಕ್ಷ ಸಿ.ಜಯರಾಮ್ ಮಾತನಾಡಿ, ರಾಜ್ಯದಲ್ಲಿ ಶೇ. 99ರಷ್ಟು ಮಳಿಗೆಗಳು ತೆರೆದಿದ್ದವು. ರಾಜಧಾನಿ ಬೆಂಗಳೂರಿನಲ್ಲೂ ಮಳಿಗೆಗಳು ಬಂದ್ ಮಾಡಿರಲಿಲ್ಲ, ಮಳಿಗೆಗಳನ್ನು ಬಂದ್ ಮಾಡಿದರೆ ಆನ್‌ಲೈನ್ ವ್ಯಾಪಾರ ಹೆಚ್ಚಾಗುವ ಅಪಾಯವೇ ಹೆಚ್ಚು, ಹೀಗಾಗಿ ನಾವು ಇ ಫಾರ್ಮಸಿ ವಿರುದ್ಧ ಭಿನ್ನ ಹೋರಾಟ ನಡೆಸಲಿದ್ದೇವೆ ಎಂದು ತಿಳಿಸಿದರು.

ರಾಮ ಬಾಣ



ಪ್ರತ್ಯೇಕ ಪಾಲಿಕೆ ಅನುಮೋದನೆಗೆ ರಾಜ್ಯಪಾಲರಿಗೆ ಲಾಡ್ ಮನವಿ



ಬೆಂಗಳೂರು: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಿಭಜಿಸಿ ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚನೆ ಪ್ರಸ್ತಾವಕ್ಕೆ ಅನುಮೋದನೆ ನೀಡಬೇಕು ಎಂದು ಸಚಿವ ಸಂತೋಷ್ ಲಾಡ್ ನೇತೃತ್ವದಲ್ಲಿ ಧಾರವಾಡ ಶಾಸಕರ ನಿಯೋಗವು ರಾಜ್ಯಪಾಲರನ್ನು ಭೇಟಿ ಮಾಡಿ ಸಚಿವರು ಮನವಿ ಸಲ್ಲಿಸಿದರು.

ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಸಚಿವ ಲಾಡ್ ಅವರು, ಪ್ರತ್ಯೇಕ ಧಾರವಾಡ ಪಾಲಿಕೆ ಆಗಬೇಕು ಎಂದು ಹಲವು ವರ್ಷಗಳ ಬೇಡಿಕೆ ಇತ್ತು. ಹೋರಾಟವೂ ನಡೆದಿತ್ತು. ನಮ್ಮ ಸರ್ಕಾರ ಬಂದ ನಂತರ ಪ್ರತ್ಯೇಕ ಪಾಲಿಕೆ ಬೇಡಿಕೆಯನ್ನು ಸಚಿವ ಸಂಪುಟ ಸಭೆಯಲ್ಲಿ ಅಂಗೀಕರಿಸಿ ರಾಜ್ಯಪಾಲರ ಒಪ್ಪಿಗೆಗೆ ಕಳಿಸಲಾಗಿತ್ತು. ಒಂದು ವರ್ಷದಿಂದ ರಾಜ್ಯಪಾಲರಿಂದ ಯಾವುದೇ ಪ್ರತಿಕ್ರಿಯೆ ಸಿಕ್ಕಿರಲಿಲ್ಲ. ಇದೀಗ ಪ್ರತ್ಯೇಕ ಪಾಲಿಕೆ ಹೋರಾಟ ಸಮಿತಿಯವರು ಒತ್ತಡ ಹಾಕಲು ಆರಂಭಿಸಿದರು. ಸರ್ಕಾರದ ಪ್ರಸ್ತಾವನೆಯನ್ನು ಅಂಗೀಕರಿಸಬೇಕು ಎಂದು ರಾಜ್ಯಪಾಲರಿಗೆ ಮನವಿ ಮಾಡಿದ್ದೇವೆ ಎಂದರು. ಈ ವೇಳೆ ಶಾಸಕರಾದ ಪ್ರಸಾದ್ ಅಬ್ಬಯ್ಯ, ಎನ್.ಎಚ್ ಕೋನರಡ್ಡಿ, ಹೋರಾಟ ಸಮಿತಿ ಮುಖಂಡರಾದ ಬಿ.ಡಿ. ಹಿರೇಮಠ, ಹೂಡಾ ಮಾಜಿ ಅಧ್ಯಕ್ಷ ದಾನಪ್ಪ ಕಬ್ಬೇರ, ಪಾಲಿಕೆಯ ಮಾಜಿ ಸದಸ್ಯ ನಾಗರಾಜ್ ಗೌರಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ : ಪುಷ್ಯ

ದಿನದ ಮಾತು

ವಿವೇಕಿಗಳು ಕೆಲಸವನ್ನು ಯಾವಾಗ ಮಾಡಬೇಕಾಗಿದೆಯೋ ಆಗಲೇ ಮಾಡುತ್ತಾರೆ.

▲ನೀತಿಮಂಜರಿ

ಕಿಡಿ ನುಡಿ

•ವಾಸುದೇವರಾವ್ ಕಕ್ಕನೇಜಿ

ಜಗತ್ತಿಗೇ ಜೀವನ ಪಾಠವನ್ನು ಹೇಳಿರುವ ಹಿಂದೂ ಧರ್ಮವನ್ನು ವಿಶ್ವವೇ ಒಪ್ಪಿಕೊಂಡಿದೆ.ಇಂತಹ ಧರ್ಮದಲ್ಲಿ ಹುಟ್ಟಿದ್ದಕ್ಕೆ ನಾವೆಲ್ಲರೂ ಹೆಮ್ಮೆ ಪಡಬೇಕು - ಕನ್ಯಾಡಿ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ

- ವಿಶ್ವವೇ ಒಪ್ಪಿದರೂ ಜಾತ್ಯತೀತರು, ಬುದ್ಧಿಜೀವಿಗಳು , ಪ್ರಗತಿಪರರು ಒಪ್ಪುವ ವಿಶ್ವಾಸವಿಲ್ಲ, ಒಪ್ಪಿಕೊಂಡರೆ ಅವರಿಗೆ ಬದುಕಲು ಉದ್ಯೋಗವಿಲ್ಲ ಅಂತ ಆದೀತು!

ದಿನ ಭವಿಷ್ಯ

ಮೇಷ
ವೃತ್ತಿಯಲ್ಲೂ, ವೈಯಕ್ತಿಕವಾಗಿಯೂ ಸವಾಲಿನ ದಿನ. ಹೆಚ್ಚು ಹೊಣೆ. ಆತ್ಮೀಯ ಸಂಬಂಧಕ್ಕೆ ಧಕ್ಕೆ. ಆಪ್ತ ಜತೆ ಮನಸ್ತಾಪ. ಧನವ್ಯಯ.

ವೃಷಭ
ಈಡೇರಿಸಲು ಕಷ್ಟವಾದ ಆಶ್ವಾಸನೆ ನೀಡಿ ಇಕ್ಕಟ್ಟಿಗೆ ಸಿಲುಕುವಿರಿ. ಟೀಕೆಗೆ ಎರವಾಗದಂತೆ ವರ್ತಿಸಿ. ಬಂಧುಗಳ ಜತೆ ನಯವಿನಯವಿರಲಿ.

ಮಿಥುನ
ವೃತ್ತಿಯಲ್ಲಿ ಸಫಲತೆ. ಪರಿಶ್ರಮಕ್ಕೆ ಅಧಿಕ ಫಲ ಪಡೆಯುವಿರಿ. ಹೊಟ್ಟೆ ಕೆಡಿಸುವ ಆಹಾರ ತಿನ್ನದಿರಿ. ಪ್ರೀತಿಯ ಸಂಬಂಧ ಇನ್ನಷ್ಟು ಗಟ್ಟಿಗೊಳ್ಳಲಿದೆ.

ಕಟಕ
ಹೊಸತನಕ್ಕೆ ಯತ್ನಿಸುವಿರಿ. ಬೇಸರ ಕಳೆಯಲು ಅದು ಒಳಿತು. ಮನಸ್ಸು ಉಲ್ಲಸಿತಗೊಳಿಸುವ ಪ್ರಸಂಗ. ಪ್ರೀತಿಸಾಫಲ್ಯ.

ಸಿಂಹ
ಪ್ರಗತಿಯ ದಿನ. ಉದ್ಯೋಗದಲ್ಲಿ ಹೊಸ ಅವಕಾಶ. ಏಕಾಂಗಿಗಳಿಗೆ ವೈವಾಹಿಕ ಬಂಧ ಏರ್ಪಡಬಹುದು. ತೃಪ್ತಿಕರ ಆರ್ಥಿಕ ಪ್ರಗತಿ.

ಕನ್ಯಾ
ದಂಪತಿಗಳು ತಮ್ಮ ಸಂಬಂಧ ಬಲಪಡಿಸುವ ಕ್ರಮ ತೆಗೆದುಕೊಳ್ಳಬೇಕು. ಸಣ್ಣ ಭೇದವು ಸಂಬಂಧ ಕೆಡಿಸದಿರಲಿ.

ತುಲಾ
ನಿಮ್ಮ ಕಠಿಣ ದುಡಿಮೆಗೆ ಉತ್ತಮ ಪ್ರತಿಫಲ. ಆದರೆ ಬೇಸರ ತರುವ ಕೆಲವು ಪ್ರಸಂಗ ಉಂಟಾದೀತು. ಸಂಬಂಧ ಹಳಸಬಹುದು.

ವೃಶ್ಚಿಕ
ವೃತ್ತಿಯಲ್ಲಿ ಸೃಷ್ಟಿಯಾಗಿದ್ದ ಸಮಸ್ಯೆ ಪರಿಹಾರ. ಆದರೆ ಪ್ರೀತಿಯಲ್ಲಿ ಒಡಕು. ಕ್ಷುಲ್ಲಕ ವಿಷಯವೂ ಮನಸ್ಸು ಕೆಡಿಸಬಹುದು.

ಧನು
ಯಾವುದೋ ವಿಷಯದಲ್ಲಿ ಭಾವುಕರಾಗಿ ನಿರ್ಧಾರ ತಾಳದಿರಿ. ವಿವೇಕದಿಂದ ಚಿಂತಿಸಿ. ಹಿರಿಯರ ಸಲಹೆ ಕೇಳಿರಿ. ಆರ್ಥಿಕ ಒತ್ತಡ ಹೆಚ್ಚು.

ಮಕರ
ಮಾನಸಿಕ ದುಗುಡಕ್ಕೆ ಕಾರಣವಾಗಿದ್ದ ವಿಷಯ ಇಂದು ಇತ್ಯರ್ಥ. ಆದರೆ ಸ್ವಲ್ಪ ಮಟ್ಟಿನ ಹಿನ್ನಡೆಯೂ ಉಂಟಾದೀತು. ಮನಸ್ಸು ದೃಢವಾಗಿರಲಿ.

ಕುಂಭ
ಆತ್ಮೀಯ ಸಂಬಂಧಕ್ಕೆ ಹುಳಿ ಹಿಂಡಲು ಕೆಲವರ ಯತ್ನ ನಡೆದೀತು. ನೀವು ಎಚ್ಚರದಿಂದಿರಿ. ವೃತ್ತಿಯಲ್ಲಿ ಪ್ರತಿಕೂಲ ಪರಿಣಾಮ ಎದುರಿಸುವಿರಿ.

ಮೀನ
ಒಳಿತು, ಕೆಡುಕು ಎರಡನ್ನೂ ಇಂದು ಕಾಣುವಿರಿ. ಉದ್ವಿಗ್ನ ಸ್ಥಿತಿ ಎದುರಿಸಿದರೂ ಪರಿಹಾರದ ನಿರಾಳತೆ ಕೂಡಾ ಸಿಗಲಿದೆ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ : 1,8,3,6

ಯುಎಸ್ 42 ಯುದ್ಧ ವಿಮಾನಗಳು ನಾಶ!

ಪುಟ 1➜ ಏಳು ಕೆಸಿ-135 ಸ್ಟ್ರಾಟೋಟ್ಯಾಂಕರ್ ಇಂಧನ ತುಂಬುವ ವಿಮಾನಗಳು, ಒಂದು ಇ-3 ಸೆಂಟ್ರಿ ಅವಾಕ್ಸ್, ಎರಡು ಎಂಸಿ-130ಜೆ ಕಮಾಂಡೋ-II ವಿಶೇಷ ಕಾರ್ಯಾಚರಣೆ ವಿಮಾನಗಳು ಹಾಗೂ ಎಚ್‌ಎಚ್-60ಡಬ್ಲ್ಯು ಜಾಲಿ ಗ್ರೀನ್-II ಹೆಲಿಕಾಪ್ಟರ್ ಸೇರಿವೆ. ಇದರ ಜತೆಗೆ 24 ಎಂಕ್ಯು-9 ರೀಪರ್ ಡ್ರೋನ್ ಹಾಗೂ ಒಂದು ಎಂಕ್ಯು-4ಸಿ ಟ್ರೈಟಾನ್ ಡ್ರೋನ್ ಕಳೆದುಕೊಂಡಿರುವುದಾಗಿ ತಿಳಿಸಲಾಗಿದೆ. 2026ರ ಫೆ.28ರಂದು ಆರಂಭವಾದ ಈ ಕಾರ್ಯಾಚರಣೆ ಮಧ್ಯಪ್ರಾಚ್ಯದಲ್ಲಿ ವಾಯು, ಸಮುದ್ರ ಮತ್ತು ಕ್ಷಿಪಣಿ ದಾಳಿಗಳ ಮೂಲಕ ಮುಂದುವರಿದಿತ್ತು. ಏಪ್ರಿಲ್‌ನಲ್ಲಿ ಕದನ ವಿರಾಮ ಘೋಷಣೆಯಾದ ಬಳಿಕ ದಾಳಿಗಳು ನಿಧಾನಗೊಂಡರೂ, ಕೆಲವು ವಾರಗಳ ಬಳಿಕ ಮತ್ತೆ ಉದ್ವಿಗ್ನತೆ ಹೆಚ್ಚಾಗಿದೆ ಎಂದು ವರದಿ ಹೇಳಿದೆ.

ವಿವಿಗಳಲ್ಲಿ ಗೌರವ ಡಾಕ್ಟರೇಟ್, ಪಠ್ಯಕ್ರಮ ಸಮಗ್ರ ಪರಿಶೀಲನೆ

ವಸ್ತ್ರಸಂಹಿತೆ ವರದಿಗೆ ಸಮಿತಿ

ಬೆಂಗಳೂರು: ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಪಠ್ಯಕ್ರಮ ಬದಲಾವಣೆ, ಘಟಿಕೋತ್ಸವ ಶಿಷ್ಟಾಚಾರ ಮತ್ತು ವಸ್ತ್ರಸಂಹಿತೆ, ಗೌರವ ಡಾಕ್ಟರೇಟ್ ಪ್ರದಾನ ಕುರಿತಂತೆ ಸಮಗ್ರ ಪರಿಶೀಲನೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ರಾಜ್ಯ ಸರ್ಕಾರ ಮೂರು ಪ್ರತ್ಯೇಕ ಉಪ ಸಮಿತಿಗಳನ್ನು ರಚಿಸಿ ಉನ್ನತ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಪಠ್ಯಕ್ರಮ ಬದಲಾವಣೆ ಮತ್ತು ಪರಿಷ್ಕರಣೆ ಕುರಿತಂತೆ ಪರಿಶೀಲನೆ ನಡೆಸಲು ರಚಿಸಲಾದ ಪಠ್ಯಕ್ರಮ ಸಮಿತಿಗೆ ಬೆಂಗಳೂರು ವಿಶ್ವವಿದ್ಯಾಲಯದ ಮಾಜಿ ಕುಲಪತಿ ಪ್ರೊ. ಬಿ. ತಿಮ್ಮೇಗೌಡ ಅವರನ್ನು ಅಧ್ಯಕ್ಷರಾಗಿ ನೇಮಿಸಲಾಗಿದೆ. ಸಮಿತಿಯ ಸದಸ್ಯರಾಗಿ ಮಹಾರಾಜ ಛತ್ರಸಾಲ್ ಬುಂದೇಲ್ಖಂಡ್ ವಿವಿ ಮಾಜಿ ಕುಲಪತಿ ಪ್ರೊ. ಟಿ.ಆರ್. ಥಾಪಕ್ ಹಾಗೂ ಮಂಗಳೂರು ವಿವಿ ಕುಲಪತಿ ಡಾ. ಪಿ.ಎಲ್. ಧರ್ಮ ಅವರನ್ನು ನೇಮಿಸಲಾಗಿದೆ ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಕೆ.ಜಿ. ಚಂದ್ರಶೇಖರ್ ಅವರನ್ನು ಸಮಿತಿಯ ಸಂಚಾಲಕರಾಗಿ ನೇಮಕ ಮಾಡಲಾಗಿದೆ.ಟಿ

ಘಟಿಕೋತ್ಸವ ಶಿಷ್ಟಾಚಾರ ಮತ್ತು ವಸ್ತ್ರಸಂಹಿತೆ ಸಮಿತಿ: ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳ ಘಟಿಕೋತ್ಸವಗಳಲ್ಲಿ ಪಾಲಿಸಬೇಕಾದ ಶಿಷ್ಟಾಚಾರ ಹಾಗೂ ಏಕರೂಪದ ವಸ್ತ್ರಸಂಹಿತೆ ರೂಪಿಸುವ ಕುರಿತು ಪರಿಶೀಲನೆ ನಡೆಸಲು ಜನಪದ ವಿವಿ ಮಾಜಿ ಕುಲಪತಿ ಡಾ. ಅಂಬಳಿಕೆ ಹಿರಿಯಣ್ಣ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಸಮಿತಿಯ ಸದಸ್ಯರಾಗಿ ಪ್ರೊ. ಟಿ.ಆರ್. ಥಾಪಕ್ ಹಾಗೂ ಕನ್ನಡ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಡಾ. ಎ. ಮುರುಗಪ್ಪ ಅವರನ್ನು ನೇಮಿಸಲಾಗಿದೆ. ಡಾ. ಕೆ.ಜಿ. ಚಂದ್ರಶೇಖರ್ ಈ ಸಮಿತಿಯ ಸಂಚಾಲಕರಾಗಿರುತ್ತಾರೆ.

ಗೌರವ ಡಾಕ್ಟರೇಟ್ ಸಮಿತಿ: ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಗೌರವ ಡಾಕ್ಟರೇಟ್ ಪ್ರದಾನಕ್ಕೆ ಸಂಬಂಧಿಸಿದ ನಿಯಮಾವಳಿ ಹಾಗೂ ಮಾರ್ಗಸೂಚಿಗಳ ಕುರಿತು ಪರಿಶೀಲನೆ ನಡೆಸಲು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಡಾ. ಟಿ.ಡಿ. ಕೆಂಪರಾಜು ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಸಮಿತಿಯ ಸದಸ್ಯರಾಗಿ ಪ್ರೊ. ಟಿ.ಆರ್. ಥಾಪಕ್ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ. ಜಯಕರ ಎಸ್.ಎಂ. ಅವರನ್ನು ನೇಮಕ ಮಾಡಲಾಗಿದೆ. ಡಾ. ಕೆ.ಜಿ. ಚಂದ್ರಶೇಖರ್ ಅವರನ್ನು ಈ ಸಮಿತಿಯ ಸಂಚಾಲಕರಾಗಿ ನೇಮಕ ಮಾಡಲಾಗಿದೆ.



ಸರ್ಕಾರ ವಿಧಿಸಿರುವ ಷರತ್ತುಗಳು

ಸರ್ಕಾರ ಹೊರಡಿಸಿರುವ ಆದೇಶದಲ್ಲಿ ಉಪ ಸಮಿತಿಗಳಿಗೆ ಕೆಲವು ಷರತ್ತುಗಳನ್ನು ವಿಧಿಸಲಾಗಿದೆ. ಉಪ ಸಮಿತಿಗಳು ರಾಜ್ಯದ ವಿಶ್ವವಿದ್ಯಾಲಯಗಳೊಂದಿಗೆ ಸಮಾಲೋಚನೆ ನಡೆಸಿ, ಕೂಲಂಕಷ ಅಧ್ಯಯನ ಮತ್ತು ಪರಿಶೀಲನೆ ಮಾಡಿ ತುರ್ತಾಗಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ. ಉಪ ಸಮಿತಿಗಳ ಅಧ್ಯಕ್ಷರು, ಸದಸ್ಯರು ಹಾಗೂ ಸಂಚಾಲಕರಿಗೆ ಪ್ರಯಾಣ ಭತ್ಯೆ, ಉಪಾಸೀನ ಭತ್ಯೆ, ದಿನ ಭತ್ಯೆ ಸೇರಿದಂತೆ ಇತರೆ ವೆಚ್ಚಗಳನ್ನು ಆರ್ಥಿಕ ಇಲಾಖೆಯ ಚಾಲ್ತಿಯಲ್ಲಿರುವ ಆದೇಶಗಳು ಮತ್ತು ಸುತ್ತೋಲೆಗಳ ಅನುಸಾರ ಪಾವತಿಸಲಾಗುತ್ತದೆ. ಅಲ್ಲದೇ, ಉಪ ಸಮಿತಿಗಳ ಸಭೆಗಳಿಗೆ ಅಗತ್ಯವಾದ ಸ್ಥಳಾವಕಾಶ ಮತ್ತು ಆಡಳಿತಾತ್ಮಕ ಸಹಕಾರವನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಒದಗಿಸಲಿದೆ ಎಂದು ಎಂದು ಉನ್ನತ ಶಿಕ್ಷಣ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಭಾರತ-ಇಟಲಿ ಬಲಿಷ್ಠ ಬಂಧ

ಪುಟ 1➜ ಮಾತುಕತೆಯ ವೇಳೆ ಉಭಯ ನಾಯಕರು ಜಂಟಿ ವ್ಯೂಹಾತ್ಮಕ ಕ್ರಿಯಾ ಯೋಜನೆ 2025-2029ರ ಪ್ರಗತಿ ಪರಿಶೀಲಿಸಿದರು. ಇದು ವಿವಿಧ ಕ್ಷೇತ್ರಗಳಲ್ಲಿ ಉಭಯ ದೇಶಗಳ ಸಹಭಾಗಿತ್ವಕ್ಕೆ ದಿಕ್ಸೂಚಿಯಾಗಿದೆ. ಇದರೊಂದಿಗೆ, ಬಹುನಿರೀಕ್ಷಿತ ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಕಾರಿಡಾರ್(ಐಎಂಇಸಿ) ಯೋಜನೆಗೆ ಮತ್ತಷ್ಟು ವೇಗ ನೀಡುವ ಕುರಿತು ಚರ್ಚಿಸಲಾಯಿತು.

ಅಧಿಕೃತ ಮಾತುಕತೆಗೂ ಮುನ್ನ, ಇಟಲಿ ಅಧ್ಯಕ್ಷ ಸೆರ್ಗಿಯೋ ಮಟ್ಟರೆಲ್ಲಾ ಅವರನ್ನು ಭೇಟಿಯಾದ ಮೋದಿ, ಕೃತಕ ಬುದ್ಧಿಮತ್ತೆ(ಎಐ), ಅತ್ಯಗತ್ಯ ಖನಿಜಗಳು, ಬಾಹ್ಯಾಕಾಶ, ಪರಮಾಣು ಶಕ್ತಿಯಂತಹ ಆಧುನಿಕ ಕ್ಷೇತ್ರಗಳಲ್ಲಿ ಕೈಜೋಡಿಸುವ ಬಗ್ಗೆ ಚರ್ಚಿಸಿದರು. ಪ್ರಧಾನಿ ಮೆಲೋನಿ, ಮೋದಿ ಅವರಿಗಾಗಿ ಔತಣಕೂಟ ಏರ್ಪಡಿಸಿದ್ದಲ್ಲದೆ, ಜಗತ್ಪ್ರಸಿದ್ಧ ರೋಮನ್ ಕಾಲೋಸಿಯಂಗೆ ಒಟ್ಟಾಗಿ ಭೇಟಿ ನೀಡಿದ್ದು ಉಭಯ ನಾಯಕರ ನಡುವಿನ ಆಪ್ತತೆಗೆ ಸಾಕ್ಷಿಯಾಯಿತು.

ಗಟ್ಟಿಯಾಗುತ್ತಿದೆ ಆರ್ಥಿಕ ಸಂಬಂಧ: 2025ರ ಅಂಕಿ-ಅಂಶಗಳ ಪ್ರಕಾರ, ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ವ್ಯಾಪಾರ ಬರೋಬ್ಬರಿ 14.25 ಬಿಲಿಯನ್ ಯೂರೋ ತಲುಪಿದೆ. ಇದರಲ್ಲಿ ಭಾರತದಿಂದ ಇಟಲಿಗೆ ಆದ ರಫ್ತು 8.55 ಬಿಲಿಯನ್ ಯೂರೋ ಆಗಿದ್ದರೆ, ಇಟಲಿಯಿಂದ ಭಾರತಕ್ಕೆ ಆದ ಆಮದು 5.70 ಬಿಲಿಯನ್ ಯೂರೋ. ಇದು 2024ಕ್ಕೆ ಹೋಲಿಸಿದರೆ ಶೇ.9.42ರಷ್ಟು ಪ್ರಗತಿ ಕಂಡಿದೆ. ಇದೀಗ 2029ರ ವೇಳೆಗೆ ವಾರ್ಷಿಕ ವ್ಯಾಪಾರವನ್ನು 20 ಬಿಲಿಯನ್ ಯೂರೋಗೆ ಕೊಂಡೊಯ್ಯುವ ಗುರಿ ಇಟ್ಟುಕೊಳ್ಳಲಾಗಿದೆ. ಯುರೋಪಿಯನ್ ಒಕ್ಕೂಟದಲ್ಲಿ ಇಟಲಿ ಭಾರತದ 4ನೇ ಅತಿ ದೊಡ್ಡ ವ್ಯಾಪಾರ ಪಾಲುದಾರ ದೇಶವಾಗಿದ್ದು, ಭಾರತಕ್ಕೆ ವಿಶೇಷ ಆದ್ಯತೆ ನೀಡಿದೆ.

ಇಟಲಿಯಲ್ಲಿ ಭಾರತೀಯರ ಸದ್ದು: ಸಾಂಸ್ಕೃತಿಕವಾಗಿಯೂ ಭಾರತೀಯರು ಇಟಲಿಯಲ್ಲಿ ಮನ್ನಣೆ ಗಳಿಸುತ್ತಿದ್ದಾರೆ. ಜನವರಿ 2025ರ ವರದಿ ಪ್ರಕಾರ, ಇಟಲಿಯಲ್ಲಿ ಸದ್ಯ 1,86,833 ಭಾರತೀಯರು ನೆಲೆಸಿದ್ದಾರೆ.

> **ದೇಶದ ಟಾಫಿ, ಅಂತಹುದೇ ಮಿಠಾಯಿ ವಸ್ತುಗಳ ರಫ್ತು ಕಳೆದ 12 ವರ್ಷಗಳಲ್ಲಿ ಶೇ.166ರಷ್ಟು ಏರಿಕೆಯಾಗಿ 2025-26ರಲ್ಲಿ 132 ಕೋಟಿ ರೂ. ತಲುಪಿದೆ. ಈ ವಸ್ತುಗಳ ರಫ್ತು 2013-14ರಲ್ಲಿ 49.68 ಕೋಟಿ ರೂ.ಗಳಷ್ಟಿತ್ತು.**
> ■ ಪಿಯೂಷ್ ಗೋಯಲ್, ವಾಣಿಜ್ಯ ಮತ್ತು ಕೈಗಾರಿಕಾ ಸಚಿವ

ಕೆಪಿಎಸ್ ಜೂ.1ರಿಂದ ಶಿವಮೊಗ್ಗದಲ್ಲಿ ಶುರು

ಪುಟ 1➜ ಈ ವರ್ಷವೇ 800 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸಲು ಅಗತ್ಯ ಟೆಂಡರ್ ಪ್ರಕ್ರಿಯೆಯನ್ನು ತ್ವರಿತವಾಗಿ ಆರಂಭಿಸಲು ಅಧಿಕಾರಿಗಳಿಗೆ ಮುಖ್ಯಮಂತ್ರಿಗಳು ಸೂಚಿಸಿದರು. ಜತೆಗೆ, ಕೆಪಿಎಸ್ ಶಾಲೆಗಳಿಗೆ ಶಾಲಾ ಬಸ್ ಸೌಲಭ್ಯ ಒದಗಿಸುವ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು, ಅಲ್ಲದೇ, ಶಿಕ್ಷಕರ ಕೊರತೆ ನೀಗಿಸುವ ನಿಟ್ಟಿನಲ್ಲಿ 15 ಸಾವಿರ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದ ಪ್ರಸ್ತಾವನೆಯನ್ನು ತಕ್ಷಣ ಆರ್ಥಿಕ ಇಲಾಖೆಗೆ ಸಲ್ಲಿಸುವಂತೆ ಮುಖ್ಯಮಂತ್ರಿ ಆದೇಶಿಸಿದರು.

ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ ಫಲಿತಾಂಶ ಹೆಚ್ಚಳ: ಸಭೆಯಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶಗಳ ಸುಧಾರಣೆ ಕುರಿತೂ ಚರ್ಚೆ ನಡೆದಿದ್ದು, ಈ ಬಾರಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.94.10ರಷ್ಟು ಉತ್ತೀರ್ಣ ಪ್ರಮಾಣ ದಾಖಲಾಗಿದ್ದು, ಕಳೆದ ವರ್ಷಕ್ಕಿಂತ ಶೇ.14.06ರಷ್ಟು ಹೆಚ್ಚಳವಾಗಿದೆ. ದ್ವಿತೀಯ ಪಿಯುಸಿಯಲ್ಲಿ ಶೇ.86.48ರಷ್ಟು ಫಲಿತಾಂಶ ದಾಖಲಾಗಿದ್ದು, ಕಳೆದ ಸಾಲಿನ ಶೇ.73.45ಗಿಂತ ಶೇ.13.03ರಷ್ಟು ಹೆಚ್ಚಳವಾಗಿದೆ ಎಂದರು. ಎಸ್‌ಎಸ್‌ಎಲ್‌ಸಿಯಲ್ಲಿ ಶೇ.100 ಫಲಿತಾಂಶ ಪಡೆದ ಶಾಲೆಗಳ ಸಂಖ್ಯೆ ಕಳೆದ ವರ್ಷದ 766 ರಿಂದ ಈ ಬಾರಿ 2,393ಕ್ಕೆ ಏರಿಕೆಯಾಗಿದೆ. ಎಸ್‌ಸಿ ಹಾಗೂ ಎಸ್‌ಟಿ ವಿದ್ಯಾರ್ಥಿಗಳ ಫಲಿತಾಂಶದಲ್ಲಿ ಶೇ.18ರಷ್ಟು ಏರಿಕೆ ಕಂಡುಬಂದಿದ್ದು, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಸಾಧನೆಯಲ್ಲಿಯೂ ಗಮನಾರ್ಹ ಸುಧಾರಣೆ ದಾಖಲಾಗಿದೆ ಎಂದು ಹೇಳಿದರು. ಎಸ್‌ಎಸ್‌ಎಲ್‌ಸಿ ಉತ್ತೀರ್ಣ ಪ್ರಮಾಣ ಗ್ರಾಮೀಣ ಭಾಗದಲ್ಲಿ ಶೇ.94.80 ದಾಖಲಾಗಿದ್ದರೆ, ನಗರ ಪ್ರದೇಶದಲ್ಲಿ ಶೇ.93.20 ದಾಖಲಾಗಿದೆ. ದ್ವಿತೀಯ ಪಿಯುಸಿಯಲ್ಲೂ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಉತ್ತೀರ್ಣ ಪ್ರಮಾಣ ಶೇ.87.62 ಆಗಿದ್ದು, ನಗರ ಪ್ರದೇಶದಲ್ಲಿ ಶೇ.85.95 ದಾಖಲಾಗಿದೆ ಎಂದು ವಿವರಿಸಿದರು.



> **ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಯಾವುದೇ ವಿದ್ಯಾರ್ಥಿಗಳಿಗೆ ಗ್ರೇಸ್ ಅಂಕ ನೀಡಿಲ್ಲ ಹಾಗೂ ಮೂರನೇ ಪರೀಕ್ಷೆ ಇರುವುದಿಲ್ಲ, ಶಾಲಾ ಮಕ್ಕಳಿಗೆ ಉಚಿತ ಪಠ್ಯಪುಸ್ತಕಗಳ ಜತೆಗೆ ಉಚಿತ ನೋಟ್‌ಬುಕ್ ವಿತರಣೆ ಮಾಡುವ ಬೇಡಿಕೆಯನ್ನು ಸರ್ಕಾರ ಪರಿಶೀಲಿಸುತ್ತಿದೆ.**
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

ಶಿವಾನಂದ್ ನೀಲಣ್ಣವರ ಬೆಂಗಳೂರಿಗೆ ಶಿಫ್ಟ್

ಬೆಳಗಾವಿ: ಬಹುಕೋಟಿ ವಂಚನೆಯ ಆರೋಪಿ ಶಿವಾನಂದ ನಿಲಣ್ಣವರ ಅವರನ್ನು ನ್ಯಾಯಾಲಯ ಮಂಗಳವಾರ ಹತ್ತು ದಿನಗಳ ಕಾಲ ಸಿಐಡಿ ಕಸ್ಟಡಿಗೆ ನೀಡಿ ಮಹತ್ವದ ಆದೇಶ ಹೊರಡಿಸಿತ್ತು. ಅದರ ಬೆನ್ನಲೆ ಬೆಳಗಾವಿಯಿಂದ ನೇರವಾಗಿ ಬೆಂಗಳೂರಿಗೆ ಶಿಫ್ಟ್ ಮಾಡಲಾಗಿದೆ. ಬೆಳಗಾವಿಯನ್ನಷ್ಟೇ ಅಲ್ಲದೆ ಇಡೀ ರಾಜ್ಯವನ್ನೇ ನಡುಗಿಸಿದ್ದ 4,500 ಕೋಟಿ ರೂಪಾಯಿ ವಂಚನೆ ಪ್ರಕರಣದ ತನಿಖೆ ಈಗ ಮತ್ತಷ್ಟು ತೀವ್ರಗೊಂಡಿದೆ ಎನ್ನಲಾಗಿದೆ.

ಮಾಳಮಾರುತಿ ಪೊಲೀಸ್ ಠಾಣೆಯಲ್ಲಿದ್ದ ಆರೋಪಿ ಶಿವಾನಂದ ನೀಲಣ್ಣವರ್‌ನನ್ನು ಸಿಐಡಿ ಅಧಿಕಾರಿಗಳ ತಂಡ ಬಿಗಿ ಭದ್ರತೆಯಲ್ಲಿ ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದಾರೆ.

ಮೊದಲನೇ ವಾಹನದಲ್ಲಿ ಕೇವಲ ಆರೋಪಿ ಶಿವಾನಂದ ನೀಲಣ್ಣವನವರನ್ನು ಕೂರಿಸಿಕೊಂಡು ಬರಲಾಗುತ್ತಿದ್ದರೆ, ಎರಡನೇ ವಾಹನದಲ್ಲಿ ಈ ಹಗರಣದಲ್ಲಿ ಜಪ್ತಿ ಮಾಡಲಾದ ನೂರಾರು ಮಹತ್ವದ ದಾಖಲೆಗಳು, ಕಂಪ್ಯೂಟರ್‌ಗಳು, ಲ್ಯಾಪ್‌ಟಾಪ್‌ಗಳು, ಪೆನ್ ಡ್ರೈವ್ ಹಾಗೂ ಮೊಬೈಲ್ ಫೋನ್‌ಗಳನ್ನು ಈ ವಾಹನದಲ್ಲಿ ಬೆಂಗಳೂರಿಗೆ ತರಲಾಗುತ್ತಿದೆ.

ನ್ಯಾಯಾಲಯವು ನಿನ್ನೆಯಷ್ಟೇ ಆರೋಪಿ ಶಿವಾನಂದನನ್ನು ಹತ್ತು ದಿನಗಳ ಕಾಲ ಸಿಐಡಿ ಕಸ್ಟಡಿಗೆ ನೀಡಿ ಮಹತ್ವದ ಆದೇಶ ಹೊರಡಿಸಿತ್ತು. ಕೋರ್ಟ್‌ನಿಂದ ಗ್ರೀನ್ ಸಿಗ್ನಲ್ ಸಿಗುತ್ತಿದ್ದಂತೆ ಅಲರ್ಟ್ ಆದ ಅಧಿಕಾರಿಗಳು, ಕಾಲಹರಣ ಮಾಡದೆ ಬೆಂಗಳೂರಿನ ಮುಖ್ಯ ಕಚೇರಿಯಲ್ಲಿ ವಿಚಾರಣೆ ನಡೆಸಲು ತಯಾರಿ ಮಾಡಿಕೊಂಡಿದ್ದಾರೆ.

35 ಕೋಟಿ ರೂ. ಮೌಲ್ಯದ ಡ್ರಗ್ಸ್ ವಶ

ಬೆಂಗಳೂರು: ಅಂತಾರಾಜ್ಯ ಮಟ್ಟದ ಬೃಹತ್ ಮಾದಕ ವಸ್ತುಗಳ ಜಾಲವನ್ನು ಭೇದಿಸುವಲ್ಲಿ ಹೆಬ್ಬಾಳ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಹೊಸದಿಲ್ಲಿಯಿಂದ ನಗರಕ್ಕೆ ಡ್ರಗ್ಸ್ ತಂದು ಮಾರಾಟ ಮಾಡುತ್ತಿದ್ದ ಮೂವರು ವಿದೇಶಿಗರು ಸೇರಿದಂತೆ ಒಟ್ಟು ಎಂಟು ಮಂದಿ ಅಂತಾರಾಜ್ಯ ಡ್ರಗ್ ಪೆಡ್ಲರ್‌ಗಳನ್ನು ಪೊಲೀಸರು ಹೆಡೆಮುರಿಕಟ್ಟಿದ್ದಾರೆ. ಬಂಧಿತರಿಂದ ಬರೋಬ್ಬರಿ 35 ಕೋಟಿ ರೂ. ಮೌಲ್ಯದ 17.500 ಕೆ.ಜಿ. ಎಂಡಿಎಂಎ, 2 ಕಾರನ್ನು ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದರು.

ಬುಧವಾರ ಆಯುಕ್ತರ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಪ್ರಕರಣದ ಬಗ್ಗೆ ವಿವರಿಸಿದ ಅವರು, ಸೆನೆಗಲ್ ಮೂಲದ ಡನ್ವಾ ಗೆರಾಲ್ಡ್, ತಾಂಜೇನಿಯಾದ ಮೆಗ್ರಾತ್, ನೈಜೀರಿಯಾದ ಒಬಿಯಾನಿಜ್ ರೀಟಾ ಎಂಬ ವಿದೇಶಿ ಪ್ರಜೆಗಳೊಂದಿಗೆ, ಹೊಸದಿಲ್ಲಿ ಮೂಲದ ರೀನಾ ಯಾದವ್, ದೇಬಾಶಿಶ್ ಬ್ಯಾನರ್ಜಿ ಮತ್ತು ಬೆಂಗಳೂರಿನ ಸ್ಥಳೀಯ ಪೆಡ್ಲರ್‌ಗಳಾದ ಧೀರಜ್, ಮೊಹಮ್ಮದ್ ಮನ್ಸೂರ್ ಹಾಗೂ ಅಬ್ದುಲ್ ಸಮದ್ ಎನ್ನುವ ಆರೋಪಿಗಳನ್ನು ಬಂಧಿಸಲಗಿದೆ ಎಂದು ತಿಳಿಸಿದರು.

ಸರಣಿ ದಾಳಿ ನಡೆಸಿ ಖೆಡ್ಡಾಕ್ಕೆ ಕೆಡವಿದ ಖಾಕಿ ಪಡೆ: ಮೊದಲಿಗೆ ಹೆಬ್ಬಾಳದ ಆನಂದನಗರದ ಸಮೀಪ ಅನುಮಾನಾಸ್ಪದವಾಗಿ ದಂಧೆಯಲ್ಲಿ ತೊಡಗಿದ್ದ ಮೂವರನ್ನು ವಶಕ್ಕೆ ಪಡೆದ ಪೊಲೀಸರು, ಅವರ ಬಳಿಯಿದ್ದ 4.300ಕೆ.ಜಿ. ಎಂಡಿಎಂಎ ವಶಪಡಿಸಿಕೊಂಡಿದ್ದರು. ಅವರ ನೀಡಿದ ಸುಳಿವಿನ ಮೇರೆಗೆ ಕಾರ್ಯಾಚರಣೆ ವಿಸ್ತರಿಸಿದ ಪೊಲೀಸರು, ಸರ್ಜಾಪುರದ ಚೂಡಸಂದ್ರದಲ್ಲಿರುವ ಸ್ಥಳೀಯ ಪೆಡ್ಲರ್ ಮೊಹಮ್ಮದ್ ಮನ್ಸೂರ್ ನಿವಾಸದ ಮೇಲೆ ದಾಳಿ ನಡೆಸಿ 10 ಕೆ.ಜಿ. ಎಂಡಿಎಂಎ ಪತ್ತೆ ಮಾಡಿದ್ದರು. ಇದರ ಬೆನ್ನಲ್ಲೇ ಅಬ್ದುಲ್ ಸಮದ್ ಎಂಬಾತನ ಹೆಣ್ಣೂರಿನ ನಿವಾಸದ ಮೇಲೆಯೂ ದಾಳಿ ನಡೆಸಿ 3.5 ಕೆ.ಜಿ. ಮಾದಕ ವಸ್ತುವನ್ನು ಜಪ್ತಿ ಮಾಡಲಾಗಿತ್ತು.

ಆರೋಪಿಗಳ ತೀವ್ರ ವಿಚಾರಣೆ ನಡೆಸಿದಾಗ ಈ ಜಾಲವು ದೆಹಲಿ ಮತ್ತು ಹರಿಯಾಣದವರೆಗೂ ವಿಸ್ತರಿಸಿರುವುದು ಬಯಲಾಗಿತ್ತು. ತಕ್ಷಣವೇ ಕಾರ್ಯಪ್ರವೃತ್ತರಾದ ಸುಮಾರು 40 ಜನ ಪೊಲೀಸ್ ಸಿಬ್ಬಂದಿಗಳ ವಿಶೇಷ ತಂಡವು ದೆಹಲಿಗೆ ತೆರಳಿ, ಅಲ್ಲಿ ಒಂದು 15 ದಿನಕ್ಕೂ ಹೆಚ್ಚು ಕಾಲ ಬೀಡುಬಿಟ್ಟು ಕಾರ್ಯಾಚರಣೆ ನಡೆಸಿ ಡ್ರಗ್ಸ್ ಜಪ್ತಿ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಉತ್ತರ ವಿಭಾಗದ ಡಿಸಿಪಿ ಬಿ.ಎಸ್. ನೇಮಗೌಡ ಹಾಗೂ ಜೆ.ಸಿ.ನಗರ ಎಸಿಪಿ ಕೆ.ಎಸ್. ತನ್ವಿರ್ ಅವರ ಮಾರ್ಗದರ್ಶನದಲ್ಲಿ ಹೆಬ್ಬಾಳ ಪೊಲೀಸರು ನಡೆಸಿರುವ ಈ ಬೃಹತ್ ಮತ್ತು ಸಾಹಸಮಯ ಕಾರ್ಯಾಚರಣೆಗೆ ಆಯುಕ್ತರಾದ ಸೀಮಂತ್ ಕುಮಾರ್ ಸಿಂಗ್ 2 ಲಕ್ಷ ರೂ.ಬಹುಮಾನ ಘೋಷಣೆ ಮಾಡಿದರು.



ಸೀರೆ, ಇಸ್ತ್ರಿ ಪೆಟ್ಟಿಗೆ ಟೇಬಲ್‌ಗಳಲ್ಲಿ ಡ್ರಗ್ಸ್ ಸಾಗಾಟ!

ಬಂಧಿತ ಆರೋಪಿಗಳು ಯಾರಿಗೂ ಸಂಶಯ ಬಾರದಂತೆ ಮಾದಕ ವಸ್ತುಗಳನ್ನು ಸಾಗಿಸುತ್ತಿದ್ದರು. ತಾವು ಉಡುಗೊರೆ ನೀಡುವ ನೆಪದಲ್ಲಿ ಸೀರೆಗಳು, ಬಟ್ಟೆ ಇಸ್ತ್ರಿ ಮಾಡಲು ಬಳಸುವ ಟೇಬಲ್‌ಗಳು ಮತ್ತು ಕುರ್ಚಿಗಳ ಒಳಭಾಗದಲ್ಲಿ ಎಂಡಿಎಂಎ ಅಡಗಿಸಿ, ಸುಂದರವಾಗಿ ಪ್ಯಾಕ್ ಮಾಡುತ್ತಿದ್ದರು. ನಂತರ ಇವುಗಳನ್ನು ಹೊಸದಿಲ್ಲಿಯಿಂದ ರೈಲಿನ ಮೂಲಕ ಬೆಂಗಳೂರಿಗೆ ತರುತ್ತಿದ್ದರು. ಹೀಗೆ ನಗರಕ್ಕೆ ತಲುಪುತ್ತಿದ್ದ ಡ್ರಗ್ಸ್ ಅನ್ನು ನಿರ್ಜನ ಪ್ರದೇಶಗಳಲ್ಲಿ ನಿಲ್ಲಿಸುತ್ತಿದ್ದ ಕಾರುಗಳಲ್ಲಿಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದರು ಎಂಬ ಆಘಾತಕಾರಿ ವಿಷಯ ತನಿಖೆಯಿಂದ ಬೆಳಕಿಗೆ ಬಂದಿದೆ.

ಆ.31ರೊಳಗೆ ಜಿಬಿಎ ಪಾಲಿಕೆ ಚುನಾವಣೆ

ಪುಟ 1➜ ಹಿಂದೆ ಜೂನ್ 30ರೊಳಗೆ ಚುನಾವಣೆ ನಡೆಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು. ಆದರೆ ಸರ್ಕಾರ ಎಸ್‌ಐಆರ್ ಮತ್ತು ಜನಗಣತಿ ಪ್ರಕ್ರಿಯೆ ನಡೆಯುತ್ತಿರುವುದರಿಂದ ಸಿಬ್ಬಂದಿ ಕೊರತೆ ಎದುರಾಗಲಿದೆ. ಆದ್ದರಿಂದ ಚುನಾವಣೆ ನಡೆಸಲು ಸೆಪ್ಟೆಂಬರ್ 30ರವರೆಗೆ ಸಮಯಾವಕಾಶ ಕೋರಿ ಮನವಿ ಸಲ್ಲಿಸಿತ್ತು. ಆದರೆ ಕೋರ್ಟ್ ಎರಡು ತಿಂಗಳು ಹೆಚ್ಚುವರಿ ಸಮಯ ನೀಡಿ, ಅಂದರೆ ಆ.31 ರೊಳಗೆ ಚುನಾವಣೆ ನಡೆಸುವಂತೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ.

ಕೋರ್ಟ್‌ನಲ್ಲಿ ಏನಾಯ್ತು?: ರಾಜ್ಯ ಸರ್ಕಾರವನ್ನು ಪ್ರತಿನಿಧಿಸಿದ್ದ ವಕೀಲ ಡಾ. ಅಭಿಷೇಕ್ ಮನು ಸಿಂಘ್ವಿ ಐದು ಪಾಲಿಕೆಗಳಿಗೆ ಜೂನ್ 30 ರೊಳಗೆ ಚುನಾವಣೆ ನಡೆಸುವಂತೆ ಈ ಹಿಂದೆ ನಿರ್ದೇಶಿಸಲಾಗಿತ್ತು. ಆದರೆ ಸಿಬ್ಬಂದಿ ಕೊರತೆ ಇರುವುದರಿಂದ ಎರಡರಿಂದ ಮೂರು ತಿಂಗಳು ಕಾಲಾವಕಾಶ ಕೇಳುತ್ತಿದ್ದೇವೆ ಅಷ್ಟೆ. ಚುನಾವಣೆ ನಡೆಸಲು ಈಗಾಗಲೇ ಬಜೆಟ್‌ನಲ್ಲಿ ಹಣ ಮೀಸಲಿರಿಸಲಾಗಿದೆ ಎಂದು ವಿವರಿಸಿದರು.

ಚುನಾವಣೆ ಮುಂದೂಡಿಕೆ ವಿರೋಧಿಸಿ ವಕೀಲ ರಂಗನಾಥ್ ಪರವಾಗಿ ಹಾಜರಾಗಿದ್ದ ವಕೀಲ ಪರಮೇಶ್ವರ್, ನ್ಯಾಯಾಲಯವು ಹಲವು ಬಾರಿ ಕಾಲಾವಕಾಶ ನೀಡಿದ್ದು, 15 ದಿನ ಹೆಚ್ಚುವರಿ ಕಾಲಾವಕಾಶ ನೀಡಬಹುದು. ಅದರ ಮೇಲೆ ಸಮಯ ನೀಡಕೂಡದು ಎಂದು ವಾದಿಸಿದರು.

ಚುನಾವಣಾ ಆಯೋಗದ ಪರ ವಕೀಲ ಕೆ.ಎನ್ .ಫಣೀಂದ್ರ, ಜಿಬಿಎ ಮುಖ್ಯಸ್ಥರು ಚುನಾವಣೆ ನಡೆಸಲು ಡಿಸೆಂಬರ್‌ವರೆಗೆ ಕಾಲಾವಕಾಶ ಕೋರಿದ್ದಾರೆ. ಆದರೆ ಮತ್ತೊಮ್ಮೆ ನ್ಯಾಯಾಲಯದ ಮುಂದೆ ಬರಲು ಅವಕಾಶ ನೀಡಬಾರದು ಎಂದು ಮನವಿ ಮಾಡಿದರು.

ಅಂತಿಮವಾಗಿ ಕೋರ್ಟ್ ಚುನಾವಣೆ ನಡೆಸಲು ಆ.31ಕ್ಕೆ ಗಡುವು ನೀಡಿ, ಚುನಾವಣೆ ಮುಂದೂಡಿಕೆಗೆ ಸಂಬಂಧಿಸಿದ ಎಲ್ಲಾ ಅರ್ಜಿಗಳನ್ನು ವಜಾಗೊಳಿಸಲಾಗಿದೆ ಎಂದು ಆದೇಶಿಸಿತು.



> **ಸೋಲುವ ಭಯದಿಂದ ಜಿಬಿಎ ಚುನಾವಣೆಯನ್ನು ರಾಜ್ಯ ಸರ್ಕಾರ ಪದೇ ಪದೆ ಮುಂದೂಡುತ್ತಿದ್ದು, ಇದು ಬೆಂಗಳೂರು ಜನತೆಗೆ ಮಾಡುತ್ತಿರುವ ದ್ರೋಹ**
> ■ ಆರ್.ಅಶೋಕ್, ಪ್ರತಿಪಕ್ಷ ನಾಯಕ

ಇನ್ನಾದರೂ ನಡೆಯಲಿ ಚುನಾವಣೆ

ಸುಪ್ರೀಂ ಕೋರ್ಟ್ ಆ.31ಕ್ಕೆ ನೀಡಿರುವ ಗಡುವು ಅಂತಿಮ ಗಡುವಾಗಲಿ. ಇನ್ನಾದರೂ ಜಿಬಿಎಗೆ ಚುನಾವಣೆ ನಡೆಯಲಿ. 11 ವರ್ಷಗಳಿಂದ ಚುನಾವಣೆ ನಡೆಯದೆ, 6 ವರ್ಷದಿಂದ ಸ್ಥಳೀಯ ಜನಪ್ರತಿನಿಧಿಗಳಿಲ್ಲದೆ ಬೆಂಗಳೂರು ಹಲವು ಸಮಸ್ಯೆ ಎದುರಿಸುತ್ತಿದೆ. ಆದ್ದರಿಂದ ಆದಷ್ಟು ಶೀಘ್ರ ಚುನಾವಣೆ ನಡೆಯಲಿ ಎಂದು ಸಾರ್ವಜನಿಕರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

> **ಈಗ ಸುಪ್ರೀಂಕೋರ್ಟ್ ನೀಡಿರುವ ಅವಧಿ ವಿಸ್ತರಣೆ ಕೊನೆಯ ಅವಕಾಶವಾಗಬೇಕು. ಸರ್ಕಾರ ಮತ್ತು ಚುನಾವಣಾ ಆಯೋಗ ಇದನ್ನು ಕಟ್ಟುನಿಟ್ಟಿನ ಗಡುವಾಗಿ ಪರಿಗಣಿಸಿ, ವಿಳಂಬವಿಲ್ಲದೆ ಚುನಾಯಿತ ಸ್ಥಳೀಯ ಆಡಳಿತವನ್ನು ಪುನಃ ಸ್ಥಾಪಿಸಬೇಕು.**
> ■ ರಿಷ್ವಂಜಿತ್ ಆರ್.ಪಿ. ರಾಘವನ್, ಬಿಎನ್‌ಪಿ ಯುವ ಘಟಕದ ನಾಯಕ

ಅಧಿಕಾರಿ ನಿರ್ಲಕ್ಷ್ಯ: ವರದಿ ಬಹಿರಂಗ

ಬೆಂಗಳೂರು: ಬೌರಿಂಗ್ ಆ್ಯಂಡ್ ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ ನಡೆದಿದ್ದ ಭೀಕರ ಕಾಂಪೌಂಡ್ ಗೋಡೆ ಕುಸಿತ ದುರಂತಕ್ಕೆ ಅಧಿಕಾರಿಗಳ ನಿರ್ಲಕ್ಷ್ಯ, ಅವೈಜ್ಞಾನಿಕ ತ್ಯಾಜ್ಯ ವಿಲೇವಾರಿ ಹಾಗೂ ಸುರಕ್ಷತಾ ಕ್ರಮಗಳ ಕೊರತೆಯೇ ಪ್ರಮುಖ ಕಾರಣ ಎಂಬುದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ತನಿಖಾ ವರದಿಯಲ್ಲಿ ಬಹಿರಂಗವಾಗಿದೆ.

ಏ.29ರಂದು ಸಂಭವಿಸಿದ್ದ ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಗೋಡೆ ಕುಸಿತ ಪ್ರಕರಣದ ತನಿಖೆ ಪೂರ್ಣಗೊಂಡಿದ್ದು, ಈ ದುರಂತದಲ್ಲಿ ಹಲವು ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಗುತ್ತಿಗೆದಾರರ ಬೇಜವಾಬ್ದಾರಿತನ ಸ್ಪಷ್ಟವಾಗಿ ಬೆಳಕಿಗೆ ಬಂದಿದೆ. ಘಟನೆಯಲ್ಲಿ 7 ಮಂದಿ ಸಾವನ್ನಪ್ಪಿ, ಇನ್ನೂ 7 ಮಂದಿ ಗಾಯಗೊಂಡಿದ್ದರು. ಪ್ರಕರಣದ ಗಂಭೀರತೆಯನ್ನು ಗಮನಿಸಿ ರಾಜ್ಯ ಸರ್ಕಾರ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ತನಿಖೆ ನಡೆಸಿತ್ತು.

ಮೇ 14ರಂದು ಸ್ಥಳ ಪರಿಶೀಲನೆ ನಡೆಸಿದ ಬಳಿಕ ಸಿದ್ಧಪಡಿಸಲಾದ ವರದಿಯಲ್ಲಿ ಆಸ್ಪತ್ರೆ ಆವರಣದಲ್ಲಿ ನಡೆದಿದ್ದ ಅವೈಜ್ಞಾನಿಕ ಕಾಮಗಾರಿಗಳು ಮತ್ತು ತ್ಯಾಜ್ಯ ವಿಲೇವಾರಿಯ ಬಗ್ಗೆ ಗಂಭೀರ ಆಕ್ಷೇಪ ವ್ಯಕ್ತಪಡಿಸಲಾಗಿದೆ. ವರದಿ ಪ್ರಕಾರ, ಆಸ್ಪತ್ರೆ ಆವರಣದ ಸುಮಾರು 22 ಸಾವಿರ ಚದರ ಅಡಿ ಪ್ರದೇಶದಲ್ಲಿ ಎಎಸ್‌ಆರ್ ಟ್ರೇಡರ್ಸ್ ಸಂಸ್ಥೆಯು ಕಟ್ಟಡ ಕಾಮಗಾರಿಯಿಂದ ಉಂಟಾದ ಜಿಬಿಎ ತ್ಯಾಜ್ಯ, ಮಣ್ಣು ಹಾಗೂ ಇತರ ಅವಶೇಷಗಳನ್ನು ನಿಯಮ ಉಲ್ಲಂಘಿಸಿ ರಾಶಿ ಹಾಕಿತ್ತು.

ಈ ತ್ಯಾಜ್ಯವನ್ನು ಗೋಡೆಯ ಸಮೀಪವೇ ದೊಡ್ಡ ಪ್ರಮಾಣದಲ್ಲಿ ಸಂಗ್ರಹಿಸಿದ್ದರಿಂದ ಗೋಡೆಯ ಮೇಲೆ ಅತಿಯಾದ ಒತ್ತಡ ನಿರ್ಮಾಣವಾಗಿತ್ತು. ಜತೆಗೆ ಮಳೆ ನೀರು ಸರಿಯಾಗಿ ಹರಿದು ಹೋಗಲು ಯಾವುದೇ ಸಮರ್ಪಕ ವ್ಯವಸ್ಥೆ ಮಾಡದಿರುವುದರಿಂದ ಗೋಡೆಯ ಅಡಿಪಾಯ ದುರ್ಬಲಗೊಂಡು ಕುಸಿತ ಸಂಭವಿಸಿದೆ ಎಂದು ವರದಿ ತಿಳಿಸಿದೆ. ಈ ಹಿನ್ನೆಲೆಯಲ್ಲಿ ಗುತ್ತಿಗೆದಾರ ಸಂಸ್ಥೆಯಾದ ಎಎಸ್‌ಆರ್ ಟ್ರೇಡರ್ಸ್ ವಿರುದ್ಧ ಅಪರಾಧ ಪ್ರಕರಣ ದಾಖಲಿಸಲು ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ.

ರಾಜ್ಯದಲ್ಲಿ ₹6 ಸಾವಿರ ಕೋಟಿ ಹೂಡಿಕೆ: ಎಂ.ಬಿ. ಪಾಟೀಲ

ಬೆಂಗಳೂರು: ವೈಮಾಂತರಿಕ್ಷ ಹಾಗೂ ರಕ್ಷಣಾ ವಲಯದ ಬೆಂಗಳೂರು ಮೂಲದ ಆ್ಯಕ್ಸಿಸ್ಕೇಡ್ಸ್ ಏರೋಸ್ಪೇಸ್ ಇನ್ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್, ರಾಜ್ಯದಲ್ಲಿ 6 ಸಾವಿರ ಕೋಟಿ ರೂ. ಮೊತ್ತದ ಬಂಡವಾಳ ಹೂಡಿಕೆಗೆ ಮುಂದೆ ಬಂದಿದೆ. 200 ಎಕರೆ ಪ್ರದೇಶದಲ್ಲಿ ವೈಮಾಂತರಿಕ್ಷ, ರಕ್ಷಣೆ,




ಸೆಮಿಕಂಡಕ್ಟರ್ ಹಾಗೂ ಕೃತಕ ಬುದ್ಧಿಮತ್ತೆ (ಎಐ) ನಾವೀನ್ಯತೆ ಕ್ಷೇತ್ರಗಳಲ್ಲಿ ಉತ್ಪಾದನೆ, ಪರೀಕ್ಷೆ, ನಿರ್ವಹಣೆಯ ಸಮಗ್ರ ಕೇಂದ್ರ ಸ್ಥಾಪಿಸುವುದು ಆ್ಯಕ್ಸಿಸ್ಕೇಡ್ಸ್ ಏರೋಸ್ಪೇಸ್ ಮುಖ್ಯ ಉದ್ದೇಶವಾಗಿದೆ.

ಬುಧವಾರ ಖನಿಜ ಭವನದಲ್ಲಿ ಕಂಪನಿಯ ಉನ್ನತಾಧಿಕಾರಿಗಳ ಜೊತೆಗೆ ನಡೆದ ವಿಸ್ತೃತ ಸಮಾಲೋಚನೆಯ ನಂತರ ಸಚಿವ ಎಂ.ಬಿ. ಪಾಟೀಲ ಮಾಹಿತಿ ನೀಡಿದ್ದು, ಕಂಪನಿಯು ಹಂತ ಹಂತವಾಗಿ ಒಟ್ಟು 6 ಸಾವಿರ ಕೋಟಿ ರೂ. ಬಂಡವಾಳ ಹೂಡಿಕೆ ಮಾಡಲಿದೆ. ಇದರಿಂದ ರಾಜ್ಯದಲ್ಲಿ ಪ್ರತ್ಯಕ್ಷವಾಗಿ 20 ಸಾವಿರ ಹಾಗೂ ಪರೋಕ್ಷವಾಗಿ 54 ಸಾವಿರ ಉದ್ಯೋಗಗಳು ಸೃಷ್ಟಿಯಾಗಲಿವೆ. ಜಾಗತಿಕ ಪಾಲುದಾರಿಕೆಯಡಿ ದೇಶೀಯವಾಗಿ ಸಂಶೋಧನೆ ಹಾಗೂ ಅಭಿವೃದ್ಧಿ ಕೇಂದ್ರವನ್ನೂ ಸ್ಥಾಪಿಸಲಿದೆ ಎಂದು ತಿಳಿಸಿದರು.

ಕ್ಷಿಪಣಿ ತಯಾರಿಕೆಯ ಪೂರಕ ಸೌಲಭ್ಯ, ರೇಡಾರ್–ಸಂವೇದಕ, ಯುದ್ಧ ವಿಮಾನಗಳ ದುರಸ್ತಿ–ನಿರ್ವಹಣೆ ಸೌಲಭ್ಯ (ಎಂಆರ್‌ಒ) ಸೇರಿದಂತೆ ವೈಮಾಂತರಿಕ್ಷ ಹಾಗೂ ರಕ್ಷಣಾ ವಲಯದ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಕಂಪನಿ ಉದ್ದೇಶಿಸಿದೆ. ಮೊದಲ ಹಂತದಲ್ಲಿ 1,290 ಕೋಟಿ ರೂ., 2ನೆ ಹಂತದಲ್ಲಿ 2,898 ಕೋಟಿ ರೂ. ಮತ್ತು 3ನೇ ಹಂತದಲ್ಲಿ 1,512 ಕೋಟಿ ಬಂಡವಾಳ ಹೂಡಿಕೆ ಮಾಡಲಿದೆ ಎಂದು ಸಚಿವರು ವಿವರಿಸಿದರು. ಈ ಯೋಜನೆ ಕಾರ್ಯಗತಗೊಳಿಸಲು ಕಂಪನಿಯು ದೇವನಹಳ್ಳಿ ಬಳಿ ಭೂಮಿ ಒದಗಿಸಲು ಮನವಿ ಮಾಡಿಕೊಂಡಿದೆ. 1.8 ಕಿ.ಮೀ ಉದ್ದದ ರನ್ ವೇ ನಿರ್ಮಾಣದ ಉದ್ದೇಶ ಕೂಡ ಇದೆ ಎಂದು ಕಂಪನಿ ಹೇಳಿದೆ ಎಂದು ತಿಳಿಸಿದರು.

ಚೆಕ್ ವಿತರಣೆ



ಕರ್ನಾಟಕ ವಾಯುಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನೀಡಲಾದ 6 ಕೋಟಿ ರೂ.ಗಳ ಚೆಕ್ಕನ್ನು ಮಂಡಳಿಯ ಅಧ್ಯಕ್ಷ ಶಾಸಕ ನರೇಂದ್ರ ಸ್ವಾಮಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬುಧವಾರ ಕಾವೇರಿ ನಿವಾಸದಲ್ಲಿ ಹಸ್ತಾಂತರಿಸಿದರು. ಪರಿಸರ ಮತ್ತು ಅರಣ್ಯ ಸಚಿವ ಈಶ್ವರ ಖಂಡ್ರೆ, ಸದಸ್ಯ ಕಾರ್ಯದರ್ಶಿ ಆರ್.ಗೋಕುಲ, ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸಫಾರಿಗೆ ಸುರಕ್ಷಿತ ಬಸ್ ಬಳಕೆ

ಬೆಂಗಳೂರು: ಸಫಾರಿಗಳಲ್ಲಿ ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ರಾಜ್ಯದ ಐದು ಹುಲಿ ಸಂರಕ್ಷಿತ ಪ್ರದೇಶ ಹಾಗೂ ವನ್ಯಜೀವಿಧಾಮಗಳ ಸಫಾರಿಯಲ್ಲಿ ತೆರೆದ ಕ್ಯಾಂಪರ್ ಬದಲಿಗೆ ಸುರಕ್ಷಿತ ಬಸ್ ಬಳಕೆ ಮಾಡುವಂತೆ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಸೂಚನೆ ನೀಡಿದ್ದಾರೆ.

ದುಬಾರೆ ಆನೆ ಶಿಬಿರದಲ್ಲಿ ಎರಡು ಸಾಕಾನೆಗಳ ಕಾಳಗದ ವೇಳೆ ಪ್ರವಾಸಿ ಮಹಿಳೆ ಮೃತಪಟ್ಟ ಆಘಾತಕಾರಿ ಘಟನೆ ಹಿನ್ನೆಲೆಯಲ್ಲಿ ಸಫಾರಿಗಳಲ್ಲಿ ಪ್ರವಾಸಿಗರ ಸುರಕ್ಷತೆಗೂ ಹೆಚ್ಚಿನ ಗಮನ ಹರಿಸುವಂತೆ ಅರಣ್ಯ ಸಚಿವರು ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಸ್ಪಷ್ಟ ನಿರ್ದೇಶನ ಕೊಟ್ಟಿದ್ದಾರೆ. ಬಂಡೀಪುರ, ನಾಗರಹೊಳೆ, ಕಾಳಿ, ಬಿಳಿಗಿರಿರಂಗನಬೆಟ್ಟ ಮತ್ತು ಭದ್ರಾ ಹುಲಿ ಸಂರಕ್ಷಿತ ಪ್ರದೇಶ ಹಾಗೂ ಮಲೆ ಮಹದೇಶ್ವರ ಬೆಟ್ಟ, ದಾಂಡೇಲಿ, ಕೆ.ಗುಡಿ (ಕ್ಯಾತದೇವರ ಗುಡಿ) ಸೇರಿದಂತೆ ರಾಜ್ಯದ ವಿವಿಧ ವನ್ಯಜೀವಿಧಾಮ ಮತ್ತು ಕಾನನಗಳಲ್ಲಿ ಸಫಾರಿ ನಡೆಯುತ್ತಿದೆ. ರಾಜ್ಯದ ಮೂಲೆಮೂಲೆಗಳಿಂದ ಅಷ್ಟೇ ಅಲ್ಲದೆ, ದೇಶ–ವಿದೇಶಗಳಿಂದಲೂ ಪ್ರವಾಸಿಗರು, ವನ್ಯಜೀವಿ ಪ್ರಿಯರು ಇಲ್ಲಿಗೆ ಆಗಮಿಸುತ್ತಾರೆ. ಅದೃಷ್ಟವಶಾತ್ ಈವರೆಗೆ ಸಫಾರಿ ಪ್ರದೇಶಗಳಲ್ಲಿ ಆನೆಗಳು, ಹುಲಿಗಳು ಸೇರಿದಂತೆ ಯಾವುದೇ ವನ್ಯಮೃಗಗಳು ಸಫಾರಿ ವಾಹನಗಳ ಮೇಲೆ ದಾಳಿ ಮಾಡಿ ಜೀವಹಾನಿ ಮಾಡಿದ ಘಟನೆಗಳು ಸಂಭವಿಸಿಲ್ಲ. ಆದಾಗ್ಯೂ ಅನಾಹುತ ಸಂಭವಿಸುವ ಮೊದಲೇ ಎಚ್ಚೆತ್ತುಕೊಳ್ಳುವ ಅಗತ್ಯವಿದೆ ಎಂದು ಸೂಚನೆಯಲ್ಲಿ ತಿಳಿಸಿದ್ದಾರೆ.

ಸಫಾರಿಗೆ ಬರುವ ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ಇನ್ನು ಮುಂದೆ ತೆರೆದ ಕ್ಯಾಂಪರ್ ವಾಹನಗಳ ಬದಲಿಗೆ ಸಂಪೂರ್ಣ ಸುರಕ್ಷಿತವಾದ ಬಸ್ ಸಫಾರಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಹಾಲಿ ಬಳಕೆಯಲ್ಲಿರುವ ಕ್ಯಾಂಪರ್‌ಗಳಿಗೆ ಕಬ್ಬಿಣದ ಸರಳುಗಳಿಂದ ಕೂಡಿದ ಜಾಲರಿಗಳನ್ನು ಅಥವಾ ಒಡೆಯಲಾಗದ ಗಾಜು ಅಳವಡಿಸಿ ಬಳಸುವ ಬಗ್ಗೆ ಕ್ರಮವಹಿಸಬೇಕು. ಯಾವುದೇ ಪ್ರವಾಸಿಗರು ಅರಣ್ಯದೊಳಗೆ ಇಳಿಯಲು ಅವಕಾಶ ನೀಡದಂತೆ ಮತ್ತು ಪ್ರತಿ ಸಫಾರಿ ವಾಹನದಲ್ಲಿ ಪ್ರಥಮ ಚಿಕಿತ್ಸೆಯ ಕಿಟ್ ಹಾಗೂ ಸಫಾರಿ ಕೇಂದ್ರಗಳಿಗೆ ಸಮೀಪದಲ್ಲಿ ಆ್ಯಂಬುಲೆನ್ಸ್ ವಾಹನ ಇರುವುದನ್ನು ಖಾತ್ರಿಪಡಿಸಿಕೊಳ್ಳುವಂತೆಯೂ ಸಚಿವ ಖಂಡ್ರೆ ಸೂಚಿಸಿದ್ದಾರೆ.

ಕಿರುಸುದ್ದಿ

ಮಗು ದತ್ತು ಪಡೆದ ಕೆನಡಾ ದೇಶದ ದಂಪತಿ

ಮೈಸೂರು: ಮೈಸೂರಿನ ಸರ್ಕಾರಿ ಹಾಗೂ ಖಾಸಗಿ ವಿಶೇಷ ಕೇಂದ್ರಗಳಲ್ಲಿ ಪೋಷಿಸುತ್ತಿರುವ ಐದು ಮಕ್ಕಳನ್ನು ದತ್ತು ಪಡೆದ ಪೋಷಕರಿಗೆ ಹಸ್ತಾಂತರಿಸಲಾಯಿತು. ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ದತ್ತು ಪೂರ್ವ ಸಭೆ ನಡೆಸಲಾಯಿತು. ಈ ವೇಳೆ ಭಾವಿ ದತ್ತು ಪೋಷಕರು ಮತ್ತು ದತ್ತು ಕೊಡಲಾಗುವ ಮಕ್ಕಳ ಪೋಷಕರು ಹಾಜರಿದ್ದರು. ಐದು ಮಕ್ಕಳಿಗೆ ದತ್ತು ನೀಡಲು ಆದೇಶ ನೀಡಿದ್ದರಿಂದಾಗಿ ದತ್ತು ಸ್ವೀಕಾರಕ್ಕೆ ಅರ್ಜಿ ಸಲ್ಲಿಸಿದ್ದ ಪೋಷಕರಿಗೆ ಹಸ್ತಾಂತರ ಮಾಡಲಾಯಿತು. ಒಂದು ವಿಶೇಷಚೇತನ ಮಗುವನ್ನು ಕೆನಡಾ ದೇಶದ ದಂಪತಿಗೆ ಜಿಲ್ಲಾಧಿಕಾರಿಗಳು ಹಸ್ತಾಂತರ ಮಾಡಿ ಶುಭಕೋರಿದರು. ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರು, ಸದಸ್ಯರು, ಸರ್ಕಾರಿ ಹಾಗೂ ಸರ್ಕಾರೇತರ ವಿಶೇಷ ದತ್ತು ಕೇಂದ್ರದ ಅಧಿಕಾರಿ, ಸಿಬ್ಬಂದಿ ಹಾಜರಿದ್ದರು.

ಹಂಪಿಯಲ್ಲಿ ಆಳ್ವಾರ್ ವಿಗ್ರಹಗಳು ಪತ್ತೆ

ವಿಜಯನಗರ: ವಿಶ್ವ ವಿಖ್ಯಾತ ಹಂಪಿಯ ಹಜಾರ ರಾಮ ದೇವಸ್ಥಾನದ ಬಳಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ನಡೆಸುತ್ತಿರುವ ಉತ್ಖನನದಲ್ಲಿ ಐತಿಹಾಸಿಕ ಆಳ್ವಾರ್ ವಿಗ್ರಹಗಳು ಪತ್ತೆಯಾಗಿವೆ. ಕ್ರಿಶ 1565ರ ತಾಳಿಕೋಟೆ ಯುದ್ಧದ ಬಳಿಕ ನಡೆದ ಬಹುಮನಿ ಸುಲ್ತಾನರ ದಾಳಿಯ ಸಂದರ್ಭದಲ್ಲಿ,



ವೈಷ್ಣವ ಮತ ಪ್ರಚಾರಕರಾದ ಆಳ್ವಾರ್ ಸಂತರ ಈ ಮೂರ್ತಿಗಳನ್ನು ಶಿರಚ್ಛೇದನ ಮಾಡಿ ಮಣ್ಣಿನಲ್ಲಿ ಹೂತುಹಾಕಲಾಗಿತ್ತು. ಪ್ರಸ್ತುತ ವೈಜ್ಞಾನಿಕ ವಿಧಾನದ ಮೂಲಕ ಜಾಗರೂಕತೆಯಿಂದ ನಡೆಸಲಾದ ಉತ್ಖನನದಲ್ಲಿ ಈ ಭಗ್ನ ಮೂರ್ತಿಗಳು ಹೊರಬಂದಿವೆ. ಅದೇ ಪರಿಸರದಲ್ಲಿ ಇನ್ನುಳಿದ ಆಳ್ವಾರ್ ವಿಗ್ರಹಗಳೂ ಪತ್ತೆಯಾಗುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರೇಷ್ಮೆ ಖರೀದಿ ಕೇಂದ್ರ ನಿರ್ಮಾಣ

ಮಂಗಳೂರು: ಕರ್ನಾಟಕದಲ್ಲಿ ರೇಷ್ಮೆಯು ಪ್ರಮುಖ ಬೆಳೆಯಾಗಿದ್ದು, ಉತ್ತರ ಕರ್ನಾಟಕದಲ್ಲಿ ಇದನ್ನು ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಸಲಾಗುತ್ತಿದೆ. ಅಗತ್ಯ ಇರುವ ಕಡೆಗೆ ರೇಷ್ಮೆ ಖರೀದಿ ಕೇಂದ್ರ ಮತ್ತು ಮಾರುಕಟ್ಟೆಗಳನ್ನು ನಿರ್ಮಿಸಲಾಗುವುದು ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್ ಅವರು ತಿಳಿಸಿದ್ದಾರೆ.



ಅವರು ಬುಧವಾರ ರೇಷ್ಮೆ ಇಲಾಖೆ ಹಾಗೂ ಭಾರತ ಕೃಷಿ ಅಭಿವೃದ್ಧಿ ಸಂಸ್ಥೆ ವತಿಯಿಂದ ವಿಟ್ಲದಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ರೇಷ್ಮೆ ಕೃಷಿ ಮೇಳ ಉದ್ಘಾಟಿಸಿ ಮಾತನಾಡಿದರು. ರಾಮನಗರ, ಶಿಡ್ಲಘಟ್ಟ, ಕೊಳ್ಳೇಗಾಲ ಖರೀದಿ ಕೇಂದ್ರಗಳನ್ನು ಅಭಿವೃದ್ಧಿಪಡಿಸಲಾಗಿದೆ. ರೈತರಿಗೆ ರೇಷ್ಮೆಯನ್ನು ಮಾರುಕಟ್ಟೆಗೆ ಸಾಗಿಸಲು ಸಾಗಾಣಿಕೆ ವೆಚ್ಚ 1 ಕೆಜಿಗೆ ರೂ. 30 ರಂತೆ ನೀಡಲಾಗುತ್ತಿದೆ ಎಂದು ಸಚಿವರು ತಿಳಿಸಿದರು. ರೇಷ್ಮೆ ಗೂಡಿಗೆ ಮಾರುಕಟ್ಟೆಯಲ್ಲಿ ಪ್ರತೀ ಕೆ.ಜಿ ರೂ.600 ರಿಂದ 700 ರವರೆಗೆ ದರವಿದ್ದು, ಬೆಳೆಗಾರರು ಕೆ.ಜಿಗೆ ರೂ.300 ರಂತೆ ಲಾಭ ಪಡೆಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಬೆಳೆಗಾರರು ರೇಷ್ಮೆ ಕೃಷಿಯತ್ತ ಗಮನಹರಿಸಬೇಕು ಎಂದು ಸಚಿವರು ತಿಳಿಸಿದರು.

ಮಧ್ಯಪ್ರದೇಶ, ಹರ್ಯಾಣ, ಬಿಹಾರ ಚುನಾವಣೆಯಲ್ಲಿ ಕೈ ಯೋಜನೆ: ಡಿಕೆಶಿ

ಎಲ್ಲೆಡೆ ನಮ್ಮ ಗ್ಯಾರಂಟಿ ಕಾಪಿ

ಬೆಂಗಳೂರು: ಬಿಜೆಪಿಗರು ಚುನಾವಣೆ ಗೆಲ್ಲಲು ನಮ್ಮ ಮಾದರಿಯನ್ನು ಅನುಸರಿಸುತ್ತಿದ್ದಾರೆ. ತಮ್ಮದೇ ಆದ ಯೋಜನೆಗಳನ್ನು ಜಾರಿ ಮಾಡದೇ, ಕಾಂಗ್ರೆಸ್ ಯೋಜನೆಗಳನ್ನು ಅನುಸರಿಸುತ್ತಿರುವುದಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ವ್ಯಂಗ್ಯವಾಡಿದರು.

ಬುಧವಾರ ಗೃಹ ಕಚೇರಿ ಕುಮಾರಪಾರ್ಕ್‌ನಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿ, ನಮ್ಮ ಈ ಕಾರ್ಯಕ್ರಮ ದೇಶಕ್ಕೆ ಮಾದರಿ. ನಮ್ಮ ಯೋಜನೆಗಳನ್ನು ಟೀಕೆ ಮಾಡುತಿದ್ದ ಬಿಜೆಪಿ ಮಹಾರಾಷ್ಟ್ರ, ಮಧ್ಯಪ್ರದೇಶ ಹರಿಯಾಣ, ಬಿಹಾರ ಸೇರಿದಂತೆ ಇತರೆ ರಾಜ್ಯಗಳಲ್ಲಿ ನಮ್ಮ ಯೋಜನೆಗಳನ್ನು ನಕಲು ಮಾಡಿ ಜಾರಿಗೆ ತಂದಿದ್ದಾರೆ.

ನಮ್ಮ ಸರ್ಕಾರ 3 ವರ್ಷಗಳಲ್ಲಿ ಪಂಚ ಗ್ಯಾರಂಟಿ ಯೋಜನೆಗಳಿಗೆ 1.34 ಲಕ್ಷ ಕೋಟಿ ಹಣ ವನ್ನು ವೆಚ್ಚ ಮಾಡಿದ್ದು, 6ನೇ ಗ್ಯಾರಂಟಿಯಾಗಿ ಭೂ ಗ್ಯಾರಂಟಿ ನೀಡಿದೆ. ಆ ಮೂಲಕ ಇಡೀ ದೇಶದಲ್ಲೇ ಇತಿಹಾಸ ಸೃಷ್ಟಿಸಿದೆ. ನಮ್ಮ ಸರ್ಕಾರಕ್ಕೆ 3 ವರ್ಷ ತುಂಬಿದೆ. ಆಕ್ಸ್‌ಫರ್ಡ್ ವಿವಿಯವರು ನಮ್ಮ ಗ್ಯಾರಂಟಿ ಯೋಜನೆಗಳ ಬಗ್ಗೆ ಅಧ್ಯಯನ ಮಾಡಿದ್ದು, ಈ ಅಧ್ಯಯನದಲ್ಲಿ ನಮ್ಮ ಗ್ಯಾರಂಟಿ ಯೋಜನೆಗಳನ್ನು ಕತ್ತಲೆಯಲ್ಲಿ ಮೂಡಿದ ಬೆಳಕು ಎಂದು ಬಣ್ಣಿಸಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ಕೊಟ್ಟ ಮಾತಿನಂತೆ ನಡೆದಿದ್ದೇವೆ: ನಮ್ಮ ಸಾಧನೆ ನಮಗೆ ತೃಪ್ತಿ ತಂದಿದೆ. ಗೃಹಲಕ್ಷ್ಮಿ ಮೂಲಕ 1.24 ಕೋಟಿ ಮಹಿಳೆಯರಿಗೆ ತಿಂಗಳಿಗೆ 2 ಸಾವಿರದಂತೆ 69,793 ಕೋಟಿ ರೂ. ವಿನಿಯೋಗಿಸಲಾಗಿದೆ. ಗೃಹಜ್ಯೋತಿಯಿಂದ 1.64 ಕೋಟಿ ಕುಟುಂಬಗಳು ಉಪಯೋಗ ಪಡೆದಿದ್ದು ಇದಕ್ಕೆ 26,115 ಕೋಟಿ ರೂ. ವೆಚ್ಚವಾಗಿದೆ. ಶಕ್ತಿ ಯೋಜನೆ ಮೂಲಕ ಮಹಿಳೆಯರು 726 ಕೋಟಿ ಬಾರಿ ಉಚಿತ ಪ್ರಯಾಣ ಮಾಡಿದ್ದು 18,943 ಕೋಟಿ ವೆಚ್ಚ ಮಾಡಲಾಗಿದೆ. ಅನ್ನಭಾಗ್ಯದಿಂದ 4.4 ಕೋಟಿ ಜನರಿಗೆ ಉಪಯೋಗವಾಗಿದ್ದು 11,821 ಕೋಟಿ ವೆಚ್ಚ, ಯುವನಿಧಿಗೆ 950 ಕೋಟಿ ವೆಚ್ಚವಾಗಿದೆ. ನಾವು ಕೊಟ್ಟ ಮಾತಿನಂತೆ ನಡೆದಿದ್ದೇವೆ ಎಂದು ಹೇಳಿದರು.

ಎಚ್‌ಡಿಕೆ ಅವಧಿಯಲ್ಲೇ ಯೋಜನೆ

ಬಿಡದಿ ಟೌನ್‌ಶಿಪ್‌ಗೆ ಜಮೀನು ಯೋಜನೆ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲೇ ಹುಟ್ಟಿಕೊಂಡಿದೆ. ಇದು ನಾನು ಪ್ರಾರಂಭಿಸಿದ ಯೋಜನೆ ಅಲ್ಲ. ಕುಮಾರಸ್ವಾಮಿ ಅವರ



ಅವಧಿಯಲ್ಲಿ ಇದನ್ನು ಈಗಾಗಲೇ ತಿಳಿಸಲಾಗಿತ್ತು. ಈ ಯೋಜನೆಯನ್ನು ಡಿಎಲ್‌ಎಫ್‌ಗೆ ನೀಡಲಾಗಿದೆ. ನಂತರ ಡಿಎಲ್‌ಎಫ್ ಇದು ಕಾರ್ಯಸಾಧ್ಯವಲ್ಲ ಎಂದು ಹೇಳಿ ಅದರಿಂದ ಹಿಂದೆ ಸರಿದಿದೆ ಎಂದು ಡಿಸಿಎಂ ಹೇಳಿದರು. ಸಭೆಯಲ್ಲಿ ರೈತರು ತಮ್ಮ ಕೆಲವು ಬೇಡಿಕೆಗಳನ್ನು ಕೂಡ ಮುಂದಿಟ್ಟರು. ವಿಶೇಷವಾಗಿ, ಅಭಿವೃದ್ಧಿ ಆಗುವ ಜಾಗದಲ್ಲಿ ರೈತರಿಗೆ 30★40 ಸೈಟ್‌ಗಳನ್ನು ಮಂಜೂರು ಮಾಡುವಂತೆ ಮನವಿ ಮಾಡಿದರು. ತಮ್ಮ ಭೂಮಿಯನ್ನು ಸರ್ಕಾರಕ್ಕೆ ನೀಡುತ್ತಿರುವ ಹಿನ್ನೆಲೆಯಲ್ಲಿ, ಹಣದೊಂದಿಗೆ ಕನಿಷ್ಠ ಕೆಲವು ಸೈಟ್‌ಗಳ ರೂಪದಲ್ಲಿ ಹಿಂತಿರುಗಿ ಸೌಲಭ್ಯ ನೀಡಬೇಕು ಎಂದು ವಿನಂತಿಸಿದರು.

ಯಾರಿಗೂ ಕೂಲಿ ಕೇಳಿಲ್ಲ

ರಾಜ್ಯ ರಾಜಕಾರಣ, ಪಕ್ಷವನ್ನು ಯಾವ ರೀತಿ ಅಧಿಕಾರಕ್ಕೆ ತರಬೇಕು ಎಂಬುವುದರ ಕುರಿತು ಸಚಿವ ಜಾರ್ಜ್ ಅವರ ನಿವಾಸದಲ್ಲಿ ಚರ್ಚೆ ಮಾಡಿದ್ದೇವೆ. ನಾನು ಯಾರಿಗೂ ಕೂಲಿ ಕೇಳಿಲ್ಲ. ರಾಹುಲ್ ಗಾಂಧಿ ಅವರು ಕರೆಯುತ್ತೇವೆ ಎಂದಿದ್ದಾರೆ. ಕರೆದಾಗ ಹೋಗುತ್ತೇನೆ ಎಂದ ಅವರು, ಪ್ರತಿ ದಿನವೂ ಶುಭದಿನ ನನಗೆ. ಶುಭದಿನ, ಶುಭಗಳಿಗೆ, ಶುಭ ಮುಹೂರ್ತ ಎಂದರು. ರಾಜಣ್ಣ ಅವರು ಸಿಎಂ ಮುಂದುವರಿಯಲಿ ಎಂದು ಹೇಳುವುದರಲ್ಲಿ ತಪ್ಪೇನಿಲ್ಲ. ಅವರ ಬೇಡಿಕೆ ಬಗ್ಗೆ ಗೊತ್ತಿಲ್ಲ. ಸಂಪುಟ ವಿಸ್ತರಣೆ ಮಾಡುತ್ತೇನೆ ಎಂದು ಸಿಎಂ ಹೇಳಿದ್ದಾರೆ, ಅವರನ್ನೇ ಕೇಳಬೇಕೆಂದರು.

ದಿನದ ಫೋಟೋ ಶೂಟ್

ಬಿಜೆಪಿ ನಾಯಕರು ಒಂದೆರಡು ದಿನ ಸಾರ್ವಜನಿಕ ಸಾರಿಗೆ ಬಳಸುತ್ತಿದ್ದಾರೆ. ಒಂದು ದಿನದ ಫೋಟೋ ಶೂಟ್ ಬಿಟ್ಟು ಪ್ರತಿನಿತ್ಯ ಮೆಟ್ರೋ, ಸಾರ್ವಜನಿಕ ಸಾರಿಗೆಯಲ್ಲಿ ಓಡಾಡುತ್ತಾರಾ, ಅವರು ಓಡಾಡುವುದಾದರೆ ನಮ್ಮ ಅಭ್ಯಂತರವಿಲ್ಲ. ಅವರು ಪೆಟ್ರೋಲ್, ಡೀಸೆಲ್ ಉಳಿಸಲಿ, ಅವರು ಅಡುಗೆ ಎಣ್ಣೆ ಬಳಸಿದ ಆಹಾರ ತಿನ್ನುವುದೇ ಬೇಡ. ವಿದೇಶ ಪ್ರವಾಸ ಮಾಡಬೇಡ ಎಂದಿದ್ದಾರೆ. ಅವರು ವಿದೇಶ ಪ್ರವಾಸ ಹೋಗಿರುವುದನ್ನು ನಾನು ಪ್ರಶ್ನೆ ಮಾಡುವುದಿಲ್ಲ ಎಂದರು.

ಪರಿಶಿಷ್ಟರ ಮೀಸಲಾತಿ ಹೆಚ್ಚಿಸಿ: ಶ್ರೀರಾಮುಲು

ಮೈಸೂರು: ಪ.ಜಾತಿ, ಪಂಗಡದವರಿಗೆ ಹೆಚ್ಚಿಸಲಾಗಿರುವ ಮೀಸಲಾತಿಯನ್ನು ರಾಜ್ಯ ಸರ್ಕಾರ ಕೂಡಲೇ ಶಿಕ್ಷಣ ಹಾಗೂ ಉದ್ಯೋಗ ಕ್ಷೇತ್ರದಲ್ಲಿ ಜಾರಿಗೊಳಿಸಬೇಕು. ಇಲ್ಲದಿದ್ದರೆ ಬೀದಿಗಿಳಿದು ಹೋರಾಟ ಆರಂಭಿಸಬೇಕಾಗುತ್ತದೆ ಎಂದು ಮಾಜಿ ಸಚಿವ ಶ್ರೀರಾಮುಲು ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.



ಬುಧವಾರ ಮೈಸೂರಿನ ಚಾಮರಾಜಪುರಂನಲ್ಲಿರುವ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜನಸಂಖ್ಯೆ ಆಧಾರದ ಮೇಲೆ ಮೀಸಲಾತಿಯನ್ನು ಹೆಚ್ಚಳ ಮಾಡಬೇಕೆಂದು ಆಗ್ರಹಿಸಿ ಕಳೆದ 30 ವರ್ಷಗಳಿಂದಲೂ ಪ.ಜಾತಿ, ಪಂಗಡದವರು ಹೋರಾಟ ಮಾಡಿಕೊಂಡು ಬಂದಿದ್ದಾರೆ. ಇದನ್ನು ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ.ಕುಮಾರಸ್ವಾಮಿಯವರು ಗಮನಿಸಿ, ಈ ಬಗ್ಗೆ ವರದಿ ನೀಡಲು ನಾಗಮೋಹನ ದಾಸ್ ಆಯೋಗವನ್ನು ರಚಿಸಿದ್ದರು. ಆಯೋಗ ಕೂಡ ವರದಿಯನ್ನು ನೀಡಿತ್ತು. ನಮ್ಮ ಬಿಜೆಪಿ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರು, ವರದಿಯನ್ನು ಅಂಗೀಕರಿಸಿ, ಪ.ಜಾತಿಯವರಿಗೆ ಇದ್ದ ಮೀಸಲಾತಿಯನ್ನು ಶೇ15 ರಿಂದ 17ಕ್ಕೆ, ಪರಿಶಿಷ್ಟ ಪಂಗಡಕ್ಕೆ ಇದ್ದ ಮೀಸಲಾತಿಯನ್ನು 3 ರಿಂದ 7 ಕ್ಕೆ ಜನಸಂಖ್ಯೆ ಆಧಾರದ ಮೇಲೆ ಹೆಚ್ಚಿಸಿ ಆದೇಶ ಹೊರಡಿಸಿದರು. ಇದಕ್ಕೆ ಉಭಯ ಸದನಗಳಲ್ಲೂ ಅಂಗೀಕಾರ ದೊರೆಯಿತು. ಸರ್ವ ಪಕ್ಷಗಳ ಸಭೆಯಲ್ಲೂ ಕೂಡ ಒಪ್ಪಿಗೆ ನೀಡಲಾಯಿತು.

ಅಂದು ವಿಪಕ್ಷ ನಾಯಕರಾಗಿದ್ದ ಸಿದ್ದರಾಮಯ್ಯನವರೇ ಮೀಸಲಾತಿ ಹೆಚ್ಚಳಕ್ಕೆ ನಮ್ಮ ಸಂಪೂರ್ಣ ಒಪ್ಪಿಗೆ ಇರುವುದಾಗಿ ತಿಳಿಸಿದ್ದರು. ಆದರೆ ನಮ್ಮ ಸರ್ಕಾರ ಚುನಾವಣೆಯಲ್ಲಿ ಬಿದ್ದು ಹೋಯಿತು. ಸಿದ್ದರಾಮಯ್ಯನವರು ಸಿಎಂ ಆಗಿ 3 ವರ್ಷ ಅಧಿಕಾರವನ್ನು ಪೂರೈಸಿದ್ದಾರೆ. ಆದರೆ ಇನ್ನೂ ಕೂಡ ಮೀಸಲಾತಿ ಹೆಚ್ಚಳವನ್ನು ಶಿಕ್ಷಣ, ಉದ್ಯೋಗದಲ್ಲಿ ಜಾರಿಗೆ ತರದೆ, ಈ ಸಮುದಾಯವರಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ತಡೆಯಾಜ್ಞೆಗೆ ತೆರವಿಗೆ ಕ್ರಮ ಅಗತ್ಯ

ಸಿಎಂ ಸಿದ್ದರಾಮಯ್ಯನವರು ಪ.ಜಾತಿ, ಪಂಗಡದವರಿಗೆ ಮೀಸಲಾತಿ ಹೆಚ್ಚಳವನ್ನು ಮಾಡುವುದಾಗಿ ಹೇಳಿ ರಾಜ್ಯಪಾಲರಿಂದಲೂ ಸಹಿ ಪಡೆದು, ಒಪ್ಪಿಗೆ ಪಡೆದುಕೊಂಡಿದ್ದಾರೆ. ಆದರೆ ಆ ನಂತರ ಮೀಸಲಾತಿ ಪ್ರಮಾಣವನ್ನು ಶೇ 56 ರಿಂದ 50ಕ್ಕೆ ಇಳಿಸಿ, ಪ.ಜಾತಿ, ಪಂಗಡದವರಿಗೆ ಮೀಸಲಾತಿ ಹೆಚ್ಚಳವನ್ನು ಮಾಡದೆ ಅನ್ಯಾಯ ಮಾಡುತ್ತಿದ್ದಾರೆ. ಮೀಸಲಾತಿ ಹೆಚ್ಚಳದ ಕುರಿತು ರಾಜ್ಯ ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದ್ದಾಗಲೂ ರಾಜ್ಯ ಸರ್ಕಾರ ಮೀಸಲಾತಿ ಹೆಚ್ಚಳವನ್ನು ಸಮರ್ಥಿಸಿಕೊಳ್ಳುವ ಯಾವುದೇ ಪ್ರಯತ್ನವನ್ನೂ ಮಾಡಲಿಲ್ಲ. ಇದರಿಂದಾಗಿ ಹೈಕೋರ್ಟ್ ತಡೆಯಾಜ್ಞೆಯನ್ನು ನೀಡಿದೆ ಎಂದರು.

ಮೇ 23ಕ್ಕೆ ಬೆಂಗಳೂರಿಗೆ ನಿತಿನ್



ಬೆಂಗಳೂರು: ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಬಳಿಕ ನಿತಿನ್ ನವೀನ್ ಅವರು ಮೊದಲ ಬಾರಿಗೆ ಮೇ 23 ಮತ್ತು 24ರಂದು ಕರ್ನಾಟಕಕ್ಕೆ ಭೇಟಿ ನೀಡುತ್ತಿದ್ದಾರೆ.

ನಿತಿನ್ ನವೀನ್ ಅವರು ಮೇ 23ರಂದು ರಾತ್ರಿ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ಮೇ 24ರಂದು ಬೆಳಗ್ಗೆ ಮಲ್ಲೇಶ್ವರದಲ್ಲಿರುವ ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಬಳಿಕ ರಾಜ್ಯ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನಕ್ಕೆ ಭೇಟಿ ನೀಡಲಿದ್ದಾರೆ. ಈ ವೇಳೆ ರಾಜ್ಯ ಪದಾಧಿಕಾರಿಗಳು ಮತ್ತು ರಾಜ್ಯದ 39 ಸಂಘಟನಾತ್ಮಕ ಜಿಲ್ಲೆಗಳ ಜಿಲ್ಲಾಧ್ಯಕ್ಷರ ಸಭೆ ನಡೆಸಲಿದ್ದಾರೆ.

ಬಳಿಕ ರಾಜ್ಯ ಕಾರ್ಯಾಲಯದಲ್ಲಿ ರಾಜ್ಯದ ಕೋರ್ ಕಮಿಟಿ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಸಂಜೆ ಯಲಹಂಕದಲ್ಲಿ ನಡೆಯುತ್ತಿರುವ ಬೆಂಗಳೂರು ಉತ್ತರ ಜಿಲ್ಲೆಯ ಪದಾಧಿಕಾರಿಗಳು ಹಾಗೂ ಅಪೇಕ್ಷಿತರ ಪ್ರಶಿಕ್ಷಣ ವರ್ಗಕ್ಕೆ ಭೇಟಿ ನೀಡಿ ನಂತರ ಬೆಂಗಳೂರಿನಿಂದ ತೆರಳಲಿದ್ದಾರೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರ ಮೊದಲ ಭೇಟಿ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಧಾನಮಂತ್ರಿಗಳಾಗಿ 12 ವರ್ಷ ಪೂರೈಸುತ್ತಿರುವುದರಿಂದ ಪಕ್ಷ ಹಮ್ಮಿಕೊಂಡಿರುವ ವಿಶೇಷ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಪೂರ್ವಭಾವಿಯಾಗಿ ಸಿದ್ಧತೆಗಳನ್ನು ಪರಿಶೀಲಿಸಲು ಪಕ್ಷದ ರಾಷ್ಟ್ರೀಯ ಸಹ ಸಂಘಟನಾ ಕಾರ್ಯದರ್ಶಿ ಶಿವಪ್ರಕಾಶ್ ಬುಧವಾರ ಬೆಂಗಳೂರಿಗೆ ಆಗಮಿಸಿದರು. ಬೆಂಗಳೂರು ವಿಮಾನ ನಿಲ್ದಾಣಕ್ಕೆ ಆಗಮಿಸಿದ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಸ್ವಾಗತಿಸಿದರು.

ಗೊಂದಲಗಳ ನಿವಾರಣೆಗೆ ರಾಜಕೀಯೇತರ ಮುಖಂಡರ ಕಮಿಟಿ ರಚನೆ: ನಿರಾಣಿ

ಪಂಚಮಸಾಲಿ ಸಮಾಜ ಒಗ್ಗಟ್ಟಿನ ಮಂತ್ರ

ಹುಬ್ಬಳ್ಳಿ: ಇತ್ತೀಚೆಗೆ ನಡೆದ ಪಂಚಮಸಾಲಿ ಪೀಠಗಳ ವಿವಾದಗಳ ಪರಿಹರಿಸುವುದು ಹಾಗೂ ಸಮಾಜ ಒಗ್ಗೂಡಿಸುವ ಉದ್ದೇಶದಿಂದ ಪಂಚಮಸಾಲಿ ಲಿಂಗಾಯತ ಸಮಾಜದ ಮುಖಂಡರು ನಗರದಲ್ಲಿ ಸುದೀರ್ಘ ಸಭೆ ನಡೆಸಿದರು.



ಗೋಕುಲ ರಸ್ತೆ ಖಾಸಗಿ ಹೋಟೆಲ್‌ನಲ್ಲಿ ಸಭೆ ನಡೆಯಿತು. ಇತ್ತೀಚೆಗೆ ಹರಿಹರ ಪೀಠದ ಕುರಿತು ನಡೆದ ವಿವಾದಗಳು, ಲೆಕ್ಕ ಪತ್ರ ನೀಡುವುದು, ಮುಂದೆ ಸಮಾಜವನ್ನು ಯಾವ ರೀತಿ ಒಗ್ಗಟಿನಿಂದ ಕೊಂಡಯ್ಯುವುದು ಎಂಬುವುದರ ಕುರಿತು ಚರ್ಚೆ ನಡೆದಿದೆ. ಈ ಕುರಿತು ಚರ್ಚಿಸುವಾಗ ಮುಖಂಡರ ಮಧ್ಯೆ ಪರಸ್ಪರ ಮಾತಿನ ಚಕಮುಖಿ ಹಾಗೂ ವಾಗ್ವಾದ ನಡೆಯಿತು ಎನ್ನಲಾಗಿದೆ. ಗೌಪ್ಯ ಸಭೆಯ ಕುರಿತು ಮಾತನಾಡಿದ ಶಾಸಕರು, ಮಾಜಿ ಶಾಸಕರು ಹಾಗೂ ಸಮಾಜದ ಮುಖಂಡರು ಒಗ್ಗಟ್ಟಿನ ಮಂತ್ರ ಜಪಿಸಿದರು.

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾಜಿ ಸಚಿವ ಮುರಗೇಶ ನಿರಾಣಿ ಮಾತನಾಡಿ, ಪಂಚಮಸಾಲಿ ಲಿಂಗಾಯತ ಸಮಾಜದ ಪೀಠಗಳಲ್ಲಿ ಉಂಟಾದ ಗೊಂದಲಗಳ ನಿವಾರಣೆಗೆ 10 ಜನ ರಾಜಕೀಯೇತರ ಮುಖಂಡರ ಕಮಿಟಿ ರಚನೆ ಮಾಡುತ್ತಿದ್ದು, ಈ ಮೂಲಕ ಸತ್ಯಾಸತ್ಯೆಗಳನ್ನು ಅರಿತು ಸಮಸ್ಯೆ ಪರಿಹರಿಸಲಾಗುವುದು ಎಂದರು.

ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾತನಾಡಿ, ಸಮಾಜಕ್ಕೆ ಧಕ್ಕೆ ಬರುವಂತಹ ಕೆಲವೊಂದು ಅಹಿತಕರ ಘಟನೆಗಳು ಇತ್ತೀಚೆಗೆ ನಡೆದಿವೆ. ಈ ಹಿನ್ನೆಲೆ ಸಮಾಜದ ಹಿರಿಯರೆಲ್ಲರೂ ಸೇರಿ ಈ ವಿವಾದಗಳನ್ನು ಪರಿಹರಿಸಲು ಸಭೆ ನಡೆಸಿದ್ದೇವೆ. ಈಗಾಗಲೇ ಪಂಚಮಸಾಲಿ ಪೀಠದ 2 ಕಡೆಯ ಮುಖಂಡರು ಮುಂದೆ ಯಾವ ರೀತಿ ಸಾಗಬೇಕು ಎಂಬ ಸಲಹೆಗಳನ್ನು ನೀಡಿದ್ದಾರೆ ಎಂದರು. ಶಾಸಕ ಅರವಿಂದ ಬೆಲ್ಲದ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಮಾಜಿ ಶಾಸಕ ಸೋಮಣ್ಣ ಬೇವಿನಮರದ, ಮಾಜಿ ಸಚಿವ ಸಿ.ಸಿ. ಪಾಟೀಲ ಇದ್ದರು.

ಮುಖಂಡರ ಮಾರ್ಗದರ್ಶನ ಅಗತ್ಯ

ಸಭೆಯಲ್ಲಿ ಕೂಡಲಸಂಗಮ ಹಾಗೂ ಹರಿಹರ ಪಂಚಮಸಾಲಿ ಪೀಠದಲ್ಲಿ ಸ್ವಲ್ಪ ಲೆಕ್ಕಪತ್ರದ ಬಗ್ಗೆ ಕೆಲವೊಂದು ಆರೋಪಗಳು, ಪ್ರತ್ಯಾರೋಪಗಳು ನಿರಂತರವಾಗಿ ಕೇಳಿಬಂದಿದ್ದವು. ಇದೀಗ ನಾವು ಪಾರದರ್ಶಕವಾಗಿ ಲೆಕ್ಕಪತ್ರದ ಬಗ್ಗೆ, ಯಾರು ಯಾರು ಹಣ ನೀಡಬೇಕು ಎಂಬ ಬಗ್ಗೆ ಮುಂದಿನ ದಿನಗಳಲ್ಲಿ ದಿನಾಂಕ ನಿಗದಿ ಮಾಡಿ, ಎಲ್ಲ ಲೆಕ್ಕಪತ್ರದ ಬಗ್ಗೆ ಏನು ಗೊಂದಲಗಳಿವೆ ಅವುಗಳನ್ನು ನಿವಾರಿಸಿಕೊಳ್ಳುತ್ತೇವೆ. ಸಮಾಜ ಒಗ್ಗೂಡಿ ಹೋಗುವ ನಿಟ್ಟಿನಲ್ಲಿ ಮುಂದೆ ಏನೇನು ಮಾಡಬೇಕು ಎಂಬ ಬಗ್ಗೆ ಸಮಾಜದ ಮುಂಖಡರ ಮಾರ್ಗದರ್ಶನದಲ್ಲಿ ಮುನ್ನಡೆಯುವ ಬಗ್ಗೆ ನಿರ್ಣಯವನ್ನು ಸಭೆಯಲ್ಲಿ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಕಳಪೆ ಗುಣಮಟ್ಟದ ಔಷಧ, ಆಹಾರ ವಿರುದ್ಧ ದಾಳಿ | 2025–26ರಲ್ಲಿ ವ್ಯಾಪಕ ತಪಾಸಣೆ | ದುರುಪಯೋಗ ತಡೆ

ಸಾರ್ವಜನಿಕ ಆರೋಗ್ಯ ಭದ್ರತೆಗೆ ಎಫ್‌ಎಸ್‌ಡಿಎ ಕಟ್ಟುನಿಟ್ಟಿನ ಕ್ರಮ

ನಂದಿನಿ ಎನ್.

ಬೆಂಗಳೂರು: ಸಾರ್ವಜನಿಕರ ಆರೋಗ್ಯ ರಕ್ಷಣೆಗಾಗಿ ರಾಜ್ಯದ ಆಹಾರ ಸುರಕ್ಷತೆ ಮತ್ತು ಔಷಧಿ ಆಡಳಿತ ಇಲಾಖೆ (ಎಫ್‌ಎಸ್‌ಡಿಎ) 2025–26ನೇ ಸಾಲಿನಲ್ಲಿ ವ್ಯಾಪಕ ತಪಾಸಣೆ, ಕಠಿಣ ಜಾರಿ ಕ್ರಮ ಹಾಗೂ ಡಿಜಿಟಲ್ ಆಡಳಿತ ವ್ಯವಸ್ಥೆ ಮೂಲಕ ಗಮನಾರ್ಹ ಸಾಧನೆ ಮಾಡಿದೆ. ಔಷಧಿ ಮತ್ತು ಆಹಾರ ಕ್ಷೇತ್ರಗಳಲ್ಲಿ ಗುಣಮಟ್ಟ ಕಾಪಾಡಲು ಇಲಾಖೆ ಕೈಗೊಂಡ ಕ್ರಮಗಳು ಸಾರ್ವಜನಿಕ ಆರೋಗ್ಯ ಭದ್ರತೆಯನ್ನು ಬಲಪಡಿಸುವ ದಿಸೆಯಲ್ಲಿ ಮಹತ್ವ ಪಡೆದಿವೆ.

ಆಹಾರ ಸುರಕ್ಷತೆ ಮತ್ತು ಔಷಧಿ ಆಡಳಿತ ಇಲಾಖೆಯು ರಾಜ್ಯದ ಎಲ್ಲಾ 227 ಔಷಧ ತಯಾರಿಕಾ ಘಟಕಗಳನ್ನು ಇಲಾಖೆ ಪರಿಶೀಲಿಸಿದ್ದು, ಉತ್ತಮ ಉತ್ಪಾದನಾ ಪದ್ಧತಿ ನಿಯಮ ಉಲ್ಲಂಘನೆ ಪತ್ತೆಯಾದ ಹಿನ್ನೆಲೆಯಲ್ಲಿ 10 ಘಟಕಗಳಿಗೆ ಉತ್ಪಾದನೆ ಸ್ಥಗಿತ ಆದೇಶ ನೀಡಿದೆ. ರಾಜ್ಯದ ಮೂರು ಔಷಧಿ ಪರೀಕ್ಷಾ ಪ್ರಯೋಗಾಲಯಗಳಲ್ಲಿ ಒಟ್ಟು 16,337 ಮಾದರಿಗಳನ್ನು ಪರೀಕ್ಷಿಸಲಾಗಿದ್ದು, 473 ಮಾದರಿಗಳು ಕಳಪೆ ಗುಣಮಟ್ಟದ್ದಾಗಿವೆ. ಇವುಗಳಲ್ಲಿ 143 ಪ್ರಕರಣಗಳು ಗಂಭೀರ ಎ ವರ್ಗಕ್ಕೆ ಸೇರಿದ್ದು, ಸಂಬಂಧಿತ ಸಂಸ್ಥೆಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ವಶಪಡಿಸಿಕೊಂಡ ಕಳಪೆ ಔಷಧಿಗಳ ಮೌಲ್ಯ 1.54 ಕೋಟಿ ರೂ.ಗಿಂತ ಹೆಚ್ಚಾಗಿದೆ. ಮಾದಕ ವಸ್ತುಗಳ ಅಕ್ರಮ ಬಳಕೆ ಮತ್ತು ಮಾರಾಟ ತಡೆಗಟ್ಟಲು ಇಲಾಖೆ 1,309 ಪರಿಶೀಲನೆ ಗಳನ್ನು ನಡೆಸಿದೆ. ನಿಯಮ ಉಲ್ಲಂಘನೆ ಹಿನ್ನೆಲೆಯಲ್ಲಿ 457 ಔಷಧಿ ಅಂಗಡಿಗಳ ಪರವಾನಗಿಗಳನ್ನು ಅಮಾನತು ಮಾಡಲಾಗಿದ್ದು, 17 ಪ್ರಕರಣಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಎನ್‌ಡಿಪಿಎಸ್ ನಿಯಮ ಉಲ್ಲಂಘನೆ ಸಂಬಂಧ 231 ಶೋಕಾಸ್ ನೋಟಿಸ್ ಜಾರಿಗೊಳಿಸಲಾಗಿದ್ದು, 10 ಪರವಾನಗಿಗಳನ್ನು ಅಮಾನತು ಮಾಡಲಾಗಿದೆ.

ಡಿಜಿಟಲ್ ಆಡಳಿತಕ್ಕೆ ಒತ್ತು: ಬ್ಲಡ್ ಬ್ಯಾಂಕ್ ಪರವಾನಗಿ, ಆರ್‌ಎಂಐ ಪ್ರಮಾಣಪತ್ರ ಹಾಗೂ ಔಷಧಿ ಅಂಗಡಿಗಳ ತಪಾಸಣೆ ಸೇರಿದಂತೆ ಹಲವು ಸೇವೆಗಳನ್ನು ಸಂಪೂರ್ಣ ಆನ್‌ಲೈನ್ ಮೂಲಕ ನೀಡುವ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಮೈಸೂರಿನಲ್ಲಿ ಹೊಸ ಔಷಧಿ ಪರೀಕ್ಷಾ ಪ್ರಯೋಗಾಲಯ ಸ್ಥಾಪನೆಗೂ ಅನುಮೋದನೆ ದೊರೆತಿದೆ.

ಆಹಾರ ಸುರಕ್ಷತೆಯಲ್ಲಿ ವ್ಯಾಪಕ ತಪಾಸಣೆ: 2025–26ನೇ ಸಾಲಿನಲ್ಲಿ ರಾಜ್ಯದಲ್ಲಿ 3.83 ಲಕ್ಷಕ್ಕೂ ಅಧಿಕ ಆಹಾರ ವ್ಯವಹಾರಗಳಿಗೆ ನೋಂದಣಿ ಮತ್ತು ಪರವಾನಗಿ ನೀಡಲಾಗಿದ್ದು, ಇದರಿಂದ ಸರ್ಕಾರಕ್ಕೆ 25.21 ಕೋಟಿ ರೂ. ಆದಾಯ ಬಂದಿದೆ.



ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯು ಆನ್‌ಲೈನ್ ಆಧಾರಿತ ನಿಗಾ ವ್ಯವಸ್ಥೆಯನ್ನು ಜಾರಿ ಮಾಡಿದ್ದು, ಈ ನೂತನ ಪೋರ್ಟಲ್‌ನಿಂದ ಈ ವ್ಯವಸ್ಥೆಯನ್ನು ಪರಿಣಾಮಕಾರಿ ಹಾಗೂ ಪಾರದರ್ಶಕವಾಗಿ ನಿರ್ವಹಿಸಲು ಸಾಧ್ಯವಾಗಲಿದೆ.

■ **ದಿನೇಶ್ ಗುಂಡೂರಾವ್**, ಆರೋಗ್ಯ ಇಲಾಖೆ ಸಚಿವ

ಹಾಲು, ಬೆಣ್ಣೆ, ನಮ್ಕೀನ್ ಮಾದರಿಗಳಲ್ಲಿ ಅಸುರಕ್ಷಿತ ಅಂಶ

ಹಾಸನ ಜಿಲ್ಲೆಯ ಚನ್ನರಾಯಪಟ್ಟಣದಲ್ಲಿ ಬೆಣ್ಣೆ ಮಾರಾಟ ಮಳಿಗೆಗಳ ಮೇಲೆ ನಡೆಸಿದ ದಾಳಿಯಲ್ಲಿ 13 ಮಾದರಿಗಳ ಪೈಕಿ 9 ಮಾದರಿಗಳು ಕಳಪೆ ಗುಣಮಟ್ಟದ್ದಾಗಿವೆ. ಕೋಲಾರ ಜಿಲ್ಲೆಯ ಖಾಸಗಿ ಡೇರಿಗಳಿಂದ ಸಂಗ್ರಹಿಸಿದ 48 ಹಾಲು ಮಾದರಿಗಳಲ್ಲಿ 18 ಮಾದರಿಗಳು ಗುಣಮಟ್ಟದ ಕೊರತೆಯದ್ದಾಗಿವೆ. ನಮ್ಕೀನ್ ಮಾದರಿಗಳಲ್ಲಿ 77 ಅಸುರಕ್ಷಿತ ಎಂದು ಪತ್ತೆಯಾಗಿದ್ದು, ಮಿಶ್ರಣ ತಿಂಡಿಗಳಲ್ಲಿ 69, ಮಸಾಲೆ ಪದಾರ್ಥಗಳಲ್ಲಿ 42, ವಸತಿ ನಿಲಯಗಳ ಆಹಾರದಲ್ಲಿ 21 ಹಾಗೂ ಮಧ್ಯಾಹ್ನ ಊಟ ಯೋಜನೆಯ ಆಹಾರದಲ್ಲಿ 7 ಮಾದರಿಗಳು ಅಸುರಕ್ಷಿತವಾಗಿರುವುದು ಆತಂಕಕ್ಕೆ ಕಾರಣವಾಗಿದೆ.

ದಿಗಂತ ವಿಶೇಷ

ಕೇಂದ್ರದಿಂದ ದಕ್ಷಿಣ ಭಾರತ ವಿರೋಧಿ ನಡೆ: ಮಹದೇವಪ್ಪ

ಬೆಂಗಳೂರು: ಜನಸಂಖ್ಯೆ ಆಧರಿಸಿ ಉತ್ತರದ ರಾಜ್ಯಗಳಿಗೆ ಹೆಚ್ಚಿನ ಚುನಾವಣಾ ಕ್ಷೇತ್ರಗಳನ್ನು ನೀಡಿ, ದಕ್ಷಿಣದ ರಾಜ್ಯಗಳಿಗೆ ಕಡಿಮೆ ಚುನಾವಣಾ ಕ್ಷೇತ್ರಗಳನ್ನು ನೀಡುವ ಹುನ್ನಾರವು ದಕ್ಷಿಣ ಭಾರತ ವಿರೋಧಿ ನಡೆಯಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಕಿಡಿಕಾರಿದ್ದಾರೆ.



ಕ್ಷೇತ್ರ ಪುನರ್‌ವಿಂಗಡನೆ ಕುರಿತು ಮಾಧ್ಯಮ ಹೇಳಿಕೆ ನೀಡಿರುವ ಸಚಿವರು, ದಕ್ಷಿಣದ ರಾಜ್ಯಗಳ ಮೇಲೆ ಸದಾ ತಾರತಮ್ಯ ತೋರುವ ಕೇಂದ್ರದ ಬಿಜೆಪಿ ಸರ್ಕಾರ, ದಕ್ಷಿಣದ ರಾಜ್ಯಗಳ ರಾಜಕೀಯ ಅಸ್ಮಿತೆಗೆ ಕೊಡಲಿ ಪೆಟ್ಟು ನೀಡುವ ದುರುದ್ದೇಶದಿಂದ ಉತ್ತರ ಭಾರತಕ್ಕೆ ಹೆಚ್ಚು ಮತ್ತು ದಕ್ಷಿಣ ಭಾರತಕ್ಕೆ ಕಡಿಮೆ ಮತ ಕ್ಷೇತ್ರಗಳನ್ನು ಹಂಚಿಕೆ ಮಾಡಲು ಹೊರಟಿದೆ ಎಂದರು. ಜನಸಂಖ್ಯೆಯನ್ನು ಮಾನವ ಸಂಪನ್ಮೂಲವಾಗಿ ಪರಿವರ್ತನೆ ಮಾಡ ಬೇಕಾದ ಜವಾಬ್ದಾರಿಯನ್ನು ಹೊಂದಿರುವ ಕೇಂದ್ರದ ಬಿಜೆಪಿ ಸರ್ಕಾರವು ಜನಸಂಖ್ಯಾ ನಿಯಂತ್ರಣದ ಬಗ್ಗೆ ಅರಿವು ಮೂಡಿಸಿ, ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವದನ್ನು ಬಿಟ್ಟು, ಕೇವಲ ಚುನಾವಣಾ ರಾಜಕೀಯದ ದೃಷ್ಟಿಯಿಂದ ತೀರಾ ಅತಾರ್ಕಿಕವಾಗಿ ಮತ ಕ್ಷೇತ್ರಗಳ ಹೆಚ್ಚಳಕ್ಕೆ ಮುಂದಾಗಿರುವುದು ಅತ್ಯಂತ ಕೆಟ್ಟ ಸಂಗತಿಯಾಗಿದೆ ಎಂದು ತಿಳಿಸಿದ್ದಾರೆ.

ಕೇಂದ್ರದ ಕುತಂತ್ರ: ಎಲ್ಲಕ್ಕಿಂತ ಮುಖ್ಯವಾಗಿ ಮತ ಕ್ಷೇತ್ರಗಳ ಹೆಚ್ಚಳದ ಮಸೂದೆಯನ್ನು ಈಗಾಗಲೇ ಅನುಮೋದಿತವಾಗಿದ್ದ ಮಹಿಳಾ ಮೀಸಲಾತಿ ಮಸೂದೆಯ ಒಳಗಿಟ್ಟು, ದಕ್ಷಿಣದ ರಾಜ್ಯಗಳನ್ನು ಹಣಿಯಲು ಕೇಂದ್ರದ ಬಿಜೆಪಿಗರು ಸಂಚು ರೂಪಿಸಿದ್ದರು ಎಂದು ತಿಳಿಸಿದರು.

ಸಂಪಾದಕೀಯ

ನಿಲ್ಲದ ವರದಕ್ಷಿಣೆ ಸಾವುಗಳು

ಉತ್ತರ ಪ್ರದೇಶದಲ್ಲಿ ಇಬ್ಬರು ಮಹಿಳೆಯರು ಇತ್ತೀಚೆಗೆ ವರದಕ್ಷಿಣೆ ಕಿರುಕುಳ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳು ಮತ್ತೊಮ್ಮೆ ಇಡೀ ದೇಶದ ಗಮನವನ್ನು ವರದಕ್ಷಿಣೆ ಪಿಡುಗಿನ ಕುರಿತಂತೆ ಸೆಳೆದಿದೆ. ಟ್ವಿಶಾ ಶರ್ಮಾ ಎಂಬ 33ರ ಮಹಿಳೆ ತನ್ನ ಪತಿಯ ಮನೆಯಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾಳೆ. ಸಾವಿಗೂ ಮುನ್ನ ಆಕೆ ತನ್ನ ತಾಯಿ ಮತ್ತು ಸ್ನೇಹಿತೆಯರೊಂದಿಗೆ ಹಂಚಿಕೊಂಡ ಮಾತುಕತೆಗಳಲ್ಲಿ ಪತಿಯ ಮನೆಯಲ್ಲಿ ತಾನು ಅನುಭವಿಸುತ್ತಿರುವ



ಕಿರುಕುಳ, ಚಿತ್ರಹಿಂಸೆಯ ಕುರಿತಂತೆ ವಿವರಿಸಿದ್ದಾಳೆ. ವರದಕ್ಷಿಣೆಗಾಗಿ ತನ್ನನ್ನು ಪೀಡಿಸುತ್ತಿರುವುದನ್ನು ತಿಳಿಸಿದ್ದಾಳೆ. ಇದರ ಬೆನ್ನಿಗೇ ಮತ್ತೊಂದು ಪ್ರಕರಣದಲ್ಲಿ ದೀಪಿಕಾ ಎಂಬಾಕೆ ಮನೆಯ ಮಹಡಿಯಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡುದು ವರದಿಯಾಗಿದೆ. ಆಕೆಗೆ ಕೂಡಾ ಪತಿಯ ಮನೆಯವರು ವರದಕ್ಷಿಣೆಗಾಗಿ ಪೀಡಿಸುತ್ತಿದ್ದರು ಎಂಬುದಾಗಿ ಆಕೆಯ ಕುಟುಂಬಸ್ಥರು ಹೇಳುತ್ತಿದ್ದಾರೆ.

ಈ ಆಧುನಿಕ ಯುಗದಲ್ಲೂ ವರದಕ್ಷಿಣೆಗಾಗಿ ಪೀಡಿಸಲಾಗುತ್ತಿದೆ ಹಾಗೂ ಮಹಿಳೆಯರು ಆತ್ಮಹತ್ಯೆಯ ದಾರಿ ತುಳಿಯಲು ಪ್ರೇರೇಪಿಸುತ್ತದೆ ಎಂಬುದು ಅಚ್ಚರಿಯಾಗಿ ಕಂಡುಬರುತ್ತದೆ. ಇನ್ನು ಕೆಲವು ಸಂದರ್ಭಗಳಲ್ಲಿ ವರದಕ್ಷಿಣೆಗಾಗಿ ಆಗ್ರಹಿಸಿ ಮಹಿಳೆಯನ್ನು ಆಕೆಯ ಪತಿಯ ಮನೆಯವರು ಹತ್ಯೆಗೈಯುವ ಪ್ರಸಂಗಗಳೂ ಸಂಭವಿಸುತ್ತಿವೆ. ದಿಲ್ಲಿಯಲ್ಲಿ ಪೊಲೀಸ್ ಕಮಾಂಡೋ ಆಗಿದ್ದ ಗರ್ಭಿಣಿ ಪತ್ನಿಯನ್ನು ಪತಿಯು ಡಂಬೆಲ್‌ನಿಂದ ಹೊಡೆದು ಕೊಂದ ದಾರುಣ ಘಟನೆಯು ಜನವರಿಯಲ್ಲಿ ವರದಿಯಾದುದನ್ನು ಯಾರೂ ಮರೆಯಲಾರರು.

ವರದಕ್ಷಿಣೆ ಕಿರುಕುಳದ ಪ್ರಕರಣಗಳು ಹಾಗೂ ಅದರಿಂದ ಉಂಟಾಗುವ ಸಾವುಗಳು ಉತ್ತರ ಭಾರತಕ್ಕಷ್ಟೇ ಸೀಮಿತವಾಗಿಲ್ಲ. ವಿಪರ್ಯಾಸವೆಂದರೆ ನಮ್ಮ ಕರ್ನಾಟಕವೂ ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿಯೇ ಇದೆ. ರಾಷ್ಟ್ರೀಯ ಅಪರಾಧ ಬ್ಯೂರೋದ 2024 ವರದಿಯೊಂದರ ಪ್ರಕಾರ ಮೆಟ್ರೋಪಾಲಿಟನ್ ನಗರಗಳಲ್ಲಿ ಬೆಂಗಳೂರಿನಲ್ಲೇ ಅತ್ಯಧಿಕ ವರದಕ್ಷಿಣೆ ಕಿರುಕುಳಗಳು ವರದಿಯಾಗಿರುವುದು. ಈ ಅವಧಿಯಲ್ಲಿ ಬೆಂಗಳೂರಿನಲ್ಲಿ ವರದಕ್ಷಿಣೆಗೆ ಸಂಬಂಧಿಸಿ 25 ಸಾವುಗಳೂ ಸಂಭವಿಸಿವೆ. 2024ರಲ್ಲಿ ದೇಶಾದ್ಯಂತ ಒಟ್ಟು 1.2 ಲಕ್ಷ ವರದಕ್ಷಿಣೆ ಕಿರುಕುಳದ ಪ್ರಕರಣಗಳು ದಾಖಲಾಗಿವೆ ಎಂಬುದು ಹಾಗೂ ವಾರ್ಷಿಕವಾಗಿ 7000 ವರದಕ್ಷಿಣೆಗೆ ಸಂಬಂಧಿಸಿ ಸಾವುಗಳು ಸಂಭವಿಸುತ್ತಿವೆ ಎನ್ನುವುದು ಅತ್ಯಂತ ಆಘಾತಕಾರಿಯಾದ ವಿಷಯ. ಇನ್ನು ಪೊಲೀಸರಿಗೆ ದೂರು ದಾಖಲಿಸದೆ ವರದಕ್ಷಿಣೆ ಕಿರುಕುಳ ಅನುಭವಿಸುತ್ತಿರುವ ಅದೆಷ್ಟು ಕೋಟ್ಯಂತರ ಬಡಪಾಯಿಗಳಿದ್ದಾರೋ ಅರಿತವರಾರು?

ನಿಜವಾಗಿ ವರದಕ್ಷಿಣೆ ಪಡೆಯುವುದನ್ನು ನಿಷೇಧಿಸಿ 1961ರಲ್ಲೇ ಕಾನೂನು ತರಲಾಗಿದೆ. ಆದರೆ ವರದಕ್ಷಿಣೆಯ ಬದಲಿಗೆ 'ಕೊಡುಗೆಗಳನ್ನು' ಕೊಡುವ ಅಥವಾ ಅದಕ್ಕಾಗಿ ಬೇಡಿಕೆಯಿಡುವ ಪದ್ಧತಿಗಳು ವರದಕ್ಷಿಣೆ ಪಿಡುಗನ್ನು ಜೀವಂತವಾಗಿರಿಸಿವೆ. ವರದಕ್ಷಿಣೆ ಪಿಡುಗು ಕೇವಲ ಶಾಸನಾತ್ಮಕವಾಗಿ ನಿವಾರಿಸಲ್ಪಡುವಂತಹುದಲ್ಲ. ಮುಖ್ಯವಾಗಿ ಜನರಲ್ಲಿ ಮಾನಸಿಕ ಬದಲಾವಣೆಯಿಂದ ಉಂಟಾಗಬೇಕಾಗಿರುವುದು ಎಂಬುದು ಸತ್ಯ.

ಅವಮಾನವಲ್ಲ, ಆತ್ಮಗೌರವದ ಭಾರತವನ್ನು ಅರಿಯಿರಿ

ಒಂದು ದೇಶದ ಪ್ರಧಾನಿಯನ್ನು ಟೀಕಿಸುವುದು ಪತ್ರಿಕೋದ್ಯಮದ ವ್ಯಾಪ್ತಿಗೆ ಬರುತ್ತದೆ. ಸರ್ಕಾರದ ನೀತಿಗಳನ್ನು ಪ್ರಶ್ನಿಸುವುದು ಪ್ರಜಾಪ್ರಭುತ್ವದ ಆರೋಗ್ಯಕರ ಲಕ್ಷಣವೂ ಹೌದು. ಆದರೆ, ಒಬ್ಬ ನಾಯಕನನ್ನು ಅಥವಾ ಒಂದು ದೇಶದ ಸಾಂಸ್ಕೃತಿಕ ಗುರುತನ್ನೇ ಹಾಸ್ಯಾಸ್ಪದಗೊಳಿಸುವ ಮಟ್ಟಕ್ಕೆ ಇಳಿದರೆ, ಅದು ಪತ್ರಿಕೋದ್ಯಮವಾಗುವುದಿಲ್ಲ. ಅದು ಪೂರ್ವಾಗ್ರಹ. ಅದು ವಸಾಹತುಶಾಹಿ ಮನೋಭಾವದ ಉಳಿದ ಅವಶೇಷ. ಇತ್ತೀಚೆಗೆ ನಾರ್ವೆಯಲ್ಲಿ ನಡೆದ ಘಟನೆ ಈ ಚರ್ಚೆಯನ್ನು ಮತ್ತೆ ಮುನ್ನೆಲೆಗೆ ತಂದಿದೆ.

ಗುರುತರ
• ಸೋಮಶೇಖರ ಸಿ.ಜೆ.
sompreethi@gmail.com



ಪ್ರಧಾನಿ ನರೇಂದ್ರ ಮೋದಿ ಅವರು ನಾರ್ವೆ ಭೇಟಿಯ ವೇಳೆ ಒಬ್ಬ ಪತ್ರಕರ್ತೆ ಕೇಳಿದ ಪ್ರಶ್ನೆಗೆ ಉತ್ತರಿಸದೇ ಮುಂದೆ ಸಾಗಿದ ವಿಚಾರವನ್ನು ಕೆಲವರು 'ಪತ್ರಿಕಾ ಸ್ವಾತಂತ್ರ್ಯದ ಹರಣ' ಎಂಬಂತೆ ಚಿತ್ರಿಸಲು ಮುಂದಾಗಿದ್ದಾರೆ. ಭಾರತದಲ್ಲಿ ಪ್ರಶ್ನೆ ಕೇಳಲು ಅವಕಾಶವಿಲ್ಲ, ಸರ್ಕಾರ ಟೀಕೆಗಳನ್ನು ಸಹಿಸುವುದಿಲ್ಲ ಎಂಬ ಮಾತುಗಳನ್ನು ಕೆಲ ವಲಯಗಳು ಜೋರಾಗಿ ಹರಡುತ್ತಿವೆ. ಆದರೆ, ಇದು ಹೇಗಿದೆ ಅಂದರೆ ದಾರಿಯಲ್ಲಿ ಯಾರೋ ಹೋಗುವಾಗ ಓಯ್, ಊಟ ಆಯ್ತಾ ಅಂತ ಜೋರಾಗಿ ಕೂಗಿ ಕೇಳಿ, ಆಕಡೆಯಿಂದ ಉತ್ತರ ಬರದಿದ್ದರೆ ಎಂಥ ಅಹಂಕಾರ ಅಂದ ಹಾಗೆ ಆಯಿತು. ಪಾಪ, ಈ ಪತ್ರಿಕೋದ್ಯಮದ ದೊಡ್ಡ ನಾಯಕಿಯಂತೆ ಬಿಂಬಿಸುತ್ತಿರುವ ಆ ಪತ್ರಕರ್ತೆಯೇ, ಈ ಜಂಟಿ ಹೇಳಿಕೆ ವೇಳೆ ಪತ್ರಕರ್ತರ ಪ್ರಶ್ನೆಗಳಿಗೆ ಅವಕಾಶಗಳಿರಲಿಲ್ಲ, ಆದರೂ ನಾನು ಕೂಗಿದೆ ಎಂದು ಹೇಳಿಕೊಂಡಿದ್ದಾಳೆ. ಕಳೆದ ಮೂರು ವರ್ಷಗಳಿಂದ ನಿಷ್ಕ್ರಿಯ ಪತ್ರಕರ್ತೆಯಾಗಿದ್ದ ಈಕೆ, ಈಗ ದಿಢೀರನೇ ಸಕ್ರಿಯ ಪತ್ರಕರ್ತೆಯಾಗಿದ್ದಾಳೆ. ಅದೇ ಕಾರ್ಯಕ್ರಮದ ನಂತರ ಭಾರತೀಯ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸದ ನಾರ್ವೆ ಪ್ರಧಾನಿಯ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಇಲ್ಲಿ ಅಬ್ಬರಿಸುತ್ತಿರುವವರು ಮಾತ್ರ ಸುಮ್ಮನಿದ್ದಾರೆ.



ನಾರ್ವೆ ಪತ್ರಿಕೆಯಲ್ಲಿ ಪ್ರಕಟವಾದ ವಿವಾದಿತ ವ್ಯಂಗ್ಯಚಿತ್ರ

ಇರಲಿ, ಇದೇ ನಾರ್ವೆಯ ಪ್ರಮುಖ ಪತ್ರಿಕೆಯೊಂದರಲ್ಲಿ ಪ್ರಕಟವಾದ ಕಾರ್ಟೂನ್ ಮಾತ್ರ ಪಾಶ್ಚಿಮಾತ್ಯ ಮನೋಭಾವದ ನಿಜಸ್ವರೂಪವನ್ನು ಬಯಲಿಗೆಳೆದಿದೆ. ಆ ಕಾರ್ಟೂನ್‌ನಲ್ಲಿ ಭಾರತದ ಪ್ರಧಾನಿಯನ್ನು ಹಾವಿನ ಮುಂದೆ ಪುಂಗಿ ಊದುತ್ತಿರುವ ಹಾವಾಡಿಗನಂತೆ ಚಿತ್ರಿಸಲಾಗಿದೆ. ಇದು ಕೇವಲ ಒಂದು ರಾಜಕೀಯ ವ್ಯಂಗ್ಯಚಿತ್ರವಲ್ಲ. ಇದು ಭಾರತದ ಬಗ್ಗೆ ಇನ್ನೂ ಕೆಲವು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಜೀವಂತವಾಗಿರುವ ಅಹಂಕಾರದ ಮನಸ್ಥಿತಿ. 'ಭಾರತ ಎಂದರೆ ಹಾವಾಡಿಗರ ದೇಶ', 'ಅಭಿವೃದ್ಧಿಯ ಅರಿವು ಇಲ್ಲದ ಸಮಾಜ', 'ಪಾಶ್ಚಿಮಾತ್ಯರ ಮಾರ್ಗದರ್ಶನ ಬೇಕಾದ ರಾಷ್ಟ್ರ' ಎಂಬ ಹಳೆಯ ಕಲ್ಪನೆಗಳನ್ನು ಇಂದಿಗೂ ಹಿಡಿದುಕೊಂಡಿರುವ ಮನೋವೈಕಲ್ಯ.

ಒಮ್ಮೆ ಭಾರತವನ್ನು ಜಗತ್ತು ದಾರಿದ್ರ್ಯದ ಸಂಕೇತವಾಗಿ ನೋಡಿರಬಹುದು. ಹಸಿವಿನ ಚಿತ್ರಗಳು, ಅಭಿವೃದ್ಧಿಹೀನ ಹಳ್ಳಿಗಳು, ಹಾವು-ಮಂಗಗಳ ಆಟ ಇವೆಲ್ಲವನ್ನೇ ಭಾರತವೆಂದು ಬಿಂಬಿಸಲಾಗುತ್ತಿತ್ತು. ಆದರೆ, ಆ ಭಾರತ ಈಗ ಬದಲಾಗಿದೆ. ಮಾಹಿತಿ ತಂತ್ರಜ್ಞಾನದಿಂದ ಹಿಡಿದು ಬಾಹ್ಯಾಕಾಶ ಸಂಶೋಧನೆವರೆಗೆ, ಡಿಜಿಟಲ್ ಆರ್ಥಿಕತೆಯಿಂದ ಹಿಡಿದು ರಕ್ಷಣಾ ಉತ್ಪಾದನೆವರೆಗೆ ಭಾರತ ತನ್ನ ಸಾಮರ್ಥ್ಯವನ್ನು ಜಗತ್ತಿಗೆ ಸಾಬೀತುಪಡಿಸಿದೆ.

ಇಂದು ಜಗತ್ತಿನ ದೊಡ್ಡ ತಂತ್ರಜ್ಞಾನ ಕಂಪನಿಗಳಲ್ಲಿ ಭಾರತೀಯರು ಮುನ್ನಡೆಸುತ್ತಿದ್ದಾರೆ. ಜಾಗತಿಕ ಔಷಧೋದ್ಯಮದಲ್ಲಿ ಭಾರತದ ಪಾಲು ನಿರ್ಣಾಯಕವಾಗಿದೆ. ಕೊರೋನಾ ಕಾಲದಲ್ಲಿ ಶ್ರೀಮಂತ ರಾಷ್ಟ್ರಗಳೇ ತತ್ತರಿಸಿದ್ದಾಗ, ಭಾರತವೇ ಅನೇಕ ದೇಶಗಳಿಗೆ ಲಸಿಕೆ ಕಳುಹಿಸಿತ್ತು. ಒಮ್ಮೆ ಆಹಾರ ಸಹಾಯಕ್ಕಾಗಿ ವಿದೇಶಗಳ ಬಾಗಿಲು ತಟ್ಟುತ್ತಿದ್ದ ದೇಶ, ಇಂದು ಮಾನವೀಯ ನೆರವಿಗಾಗಿ ಜಗತ್ತಿನ ಅನೇಕ ಭಾಗಗಳಿಗೆ ಧಾವಿಸುತ್ತಿದೆ.

ಚಂದ್ರಯಾನದಿಂದ ಹಿಡಿದು ಆದಿತ್ಯ ಮಿಷನ್‌ವರೆಗೆ ಭಾರತದ ವೈಜ್ಞಾನಿಕ ಸಾಧನೆಗಳು ವಿಶ್ವವನ್ನು ಬೆರಗುಗೊಳಿಸಿವೆ. ಯುಪಿಐ ಮೂಲಕ ಭಾರತ ಕಟ್ಟಿದ ಡಿಜಿಟಲ್ ಪಾವತಿ ವ್ಯವಸ್ಥೆಯನ್ನು ಈಗ ಅನೇಕ ರಾಷ್ಟ್ರಗಳು ಅಧ್ಯಯನ ಮಾಡುತ್ತಿವೆ. ಜಿ-20 ಶೃಂಗಸಭೆಯ ಮೂಲಕ ಭಾರತ ತನ್ನ ಜಾಗತಿಕ ನಾಯಕತ್ವವನ್ನು ಸಾಬೀತುಪಡಿಸಿದೆ. ಇಂತಹ ದೇಶವನ್ನು ಇನ್ನೂ 'ಹಾವಾಡಿಗರ ಭಾರತ' ಎಂಬ ಹಳೆಯ ದೃಷ್ಟಿಕೋನದಿಂದ ನೋಡುವುದು ಅವರ ಬೌದ್ಧಿಕ ದಾರಿದ್ರ್ಯವನ್ನೇ ತೋರಿಸುತ್ತದೆ.

ವಾಸ್ತವವಾಗಿ, ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಭಾರತದ ಏಳಿಗೆ ಅಸಹನೀಯವಾಗುತ್ತಿದೆ. ಒಂದು ಕಾಲದಲ್ಲಿ ತಮ್ಮ ಮಾರುಕಟ್ಟೆ, ತಮ್ಮ ಆರ್ಥಿಕ ವ್ಯವಸ್ಥೆ, ತಮ್ಮ ರಾಜಕೀಯ ಪ್ರಭಾವದ ಮೇಲೆ ಅವಲಂಬಿತವಾಗಿದ್ದ ದೇಶ ಈಗ ಸ್ವತಂತ್ರ ಧ್ವನಿಯೊಂದಿಗೆ ಜಾಗತಿಕ ವೇದಿಕೆಯಲ್ಲಿ ನಿಂತಿದೆ. ರಷ್ಯಾ-ಉಕ್ರೇನ್ ಯುದ್ಧದ ವಿಚಾರದಲ್ಲಿಯೂ ಭಾರತ ತನ್ನ ರಾಷ್ಟ್ರೀಯ ಹಿತಾಸಕ್ತಿಯನ್ನು ಮೊದಲು ಇಟ್ಟುಕೊಂಡಿತು. ಪಾಶ್ಚಿಮಾತ್ಯ ಒತ್ತಡಕ್ಕೆ ಮಣಿಯಲಿಲ್ಲ. ಇದೇ ಅವರಿಗೆ ಅಸಹಜವಾಗಿ ಕಾಣುತ್ತಿದೆ.

ಇನ್ನು 'ಭಾರತವನ್ನು ಯಾಕೆ ನಂಬಬೇಕು?' ಎಂಬ ಪ್ರಶ್ನೆ ಕೇಳಿದ ಪತ್ರಕರ್ತೆಯ ಧೋರಣೆ ನೋಡಿದರೆ, ಅದು ಪತ್ರಿಕೋದ್ಯಮಕ್ಕಿಂತ ಹೆಚ್ಚು ಅಹಂಕಾರದ ಪ್ರತಿಬಿಂಬವಾಗಿ ಕಾಣುತ್ತದೆ. 140 ಕೋಟಿಗೂ ಹೆಚ್ಚು ಜನಸಂಖ್ಯೆಯ, ವಿಶ್ವದ ಐದನೇ ಅತಿ ದೊಡ್ಡ ಆರ್ಥಿಕತೆಯ ರಾಷ್ಟ್ರವನ್ನು ಪ್ರಶ್ನಿಸುವ ಮುನ್ನ, ಅವರೇ ತಮ್ಮ ಇತಿಹಾಸವನ್ನು ಒಮ್ಮೆ ನೋಡಿಕೊಳ್ಳಬೇಕು. ವಸಾಹತುಶಾಹಿಯ ಹೆಸರಿನಲ್ಲಿ ಎಷ್ಟು ದೇಶಗಳನ್ನು ಶೋಷಿಸಲಾಗಿದೆ? ಎಷ್ಟು ಸಮಾಜಗಳನ್ನು ಧ್ವಂಸ ಮಾಡಲಾಗಿದೆ? ಜಗತ್ತಿನ ಅನೇಕ ಯುದ್ಧಗಳಿಗೆ ಕಾರಣವಾದದ್ದು ಯಾರು? ಈ ಪ್ರಶ್ನೆಗಳ ಉತ್ತರವೇ ಪಾಶ್ಚಿಮಾತ್ಯರ ನೈತಿಕತೆಗೆ ಕನ್ನಡಿಯಂತಿದೆ.

ಅಷ್ಟೇ ಅಲ್ಲ, ಈಗ ಇರಾನ್ ಮೇಲೆ ಯುದ್ಧ ಸಾರಿದ ಅಮೆರಿಕದ ಮನಸ್ಥಿತಿ ಎಂಥದ್ದು? ಈ ಯುದ್ಧದಿಂದಾಗಿ ಇಡೀ ಜಗತ್ತಿನ ಸರಪಳಿ ಅಲುಗಾಡಿದೆ. ಕೊರೋನಾ ಕಾಲಕ್ಕಿಂತ ಅಧಿಕ ಸಮಸ್ಯೆಯಾಗುವ ಸಾಧ್ಯತೆಗಳಿವೆ, ಬಡತನ ಇನ್ನಷ್ಟು ಹೆಚ್ಚಾಗಬಹುದು ಎಂಬ ಮಾತುಗಳೂ ಇವೆ. ಇದನ್ನು ಸೃಷ್ಟಿಸಿದ್ದು ಯಾರು? ಅದೇ ಅಮೆರಿಕ ಮತ್ತು ಮಿತ್ರ ದೇಶಗಳಲ್ಲವೇ? ಜಗತ್ತಿನ ಬೇರೆ ಬೇರೆ ಕಡೆಗಳಲ್ಲಿನ ಯುದ್ಧ ನಿಲ್ಲಿಸಿದೆ ಎಂದು ಹೇಳುತ್ತಲೇ ಯುದ್ಧ ಆರಂಭಿಸಿದ ಟ್ರಂಪ್ ಅಥವಾ ಅಮೆರಿಕದ ಗುಣಗಾನ ಮಾಡುತ್ತಲೇ ಈ ದೇಶಗಳು ಬದುಕಿಲ್ಲವೇ?

ಭಾರತ ಯಾರಿಂದಲೂ ನಂಬಿಕೆ ಪತ್ರ ಕೇಳಿಕೊಂಡಿಲ್ಲ, ನಮ್ಮ ಪ್ರಜಾಪ್ರಭುತ್ವವೇ ನಮ್ಮ ಶಕ್ತಿ. ನೂರಾರು ಭಾಷೆಗಳು, ಅನೇಕ ಧರ್ಮಗಳು, ವಿಭಿನ್ನ ಸಂಸ್ಕೃತಿಗಳ ನಡುವೆ ಇಷ್ಟೊಂದು ದಶಕಗಳಿಂದ ಪ್ರಜಾಪ್ರಭುತ್ವವನ್ನು ಜೀವಂತವಾಗಿಟ್ಟಿರುವುದು ಸಣ್ಣ ಸಾಧನೆಯಲ್ಲ. ಅನೇಕ ದೇಶಗಳಲ್ಲಿ ಸೈನಿಕ ಆಡಳಿತಗಳು ಬಂದಿವೆ, ಗೃಹಯುದ್ಧಗಳು ನಡೆದಿವೆ, ಸಂವಿಧಾನಗಳು ಕುಸಿದಿವೆ. ಆದರೆ ಭಾರತದಲ್ಲಿ ಜನರೇ ಅಂತಿಮ ತೀರ್ಪುಗಾರರು ಎಂಬ ವ್ಯವಸ್ಥೆ ಇನ್ನೂ ಗಟ್ಟಿಯಾಗಿ ಉಳಿದಿದೆ.

ಇದೇ ಕಾರಣಕ್ಕೆ ಭಾರತದ ಬಗ್ಗೆ ಪಾಶ್ಚಿಮಾತ್ಯ ರಾಷ್ಟ್ರಗಳ ಕೆಲವು ವಲಯಗಳಲ್ಲಿ ಅಸಹಜ ಅಸಹನೆ ಕಂಡುಬರುತ್ತಿದೆ. ಭಾರತ ಬಲಿಷ್ಠವಾಗುತ್ತಿರುವುದು ಅವರಿಗೆ ಅಸ್ವಸ್ಥತೆಯನ್ನು ಉಂಟುಮಾಡುತ್ತಿದೆ. ಏಕೆಂದರೆ, ಈಗ ಭಾರತ ಕೇವಲ ಮಾರುಕಟ್ಟೆಯಲ್ಲ, ಅದು ಜಾಗತಿಕ ನಿರ್ಣಯಗಳಲ್ಲಿ ಪ್ರಭಾವ ಬೀರುವ ಶಕ್ತಿಯಾಗಿದೆ.

ಇಂತಹ ಸಂದರ್ಭಗಳಲ್ಲಿ ಭಾರತದ ಒಳರಾಜಕೀಯವೂ ಜವಾಬ್ದಾರಿಯುತವಾಗಿರಬೇಕು. ಆಡಳಿತ ಪಕ್ಷವನ್ನು ಟೀಕಿಸುವುದು ಪ್ರತಿಪಕ್ಷಗಳ ಕರ್ತವ್ಯ. ಆದರೆ, ವಿದೇಶಿ ನೆಲದಲ್ಲಿ ದೇಶದ ಗೌರವಕ್ಕೆ ಧಕ್ಕೆ ಉಂಟಾದಾಗ, ಅದನ್ನು ರಾಜಕೀಯ ಆಯುಧವನ್ನಾಗಿ ಬಳಸುವುದು ಅಪಾಯಕಾರಿ ಪ್ರವೃತ್ತಿ. ಸರ್ಕಾರದ ವಿರುದ್ಧದ ದ್ವೇಷ ದೇಶದ ವಿರುದ್ಧದ ಅಸಹನೆಯಾಗಿ ಮಾರ್ಪಡಬಾರದು.

ದುರದೃಷ್ಟವಶಾತ್, ಕೆಲವು ರಾಜಕೀಯ ನಾಯಕರು ಮತ್ತು ವಿಚಾರವಂತರಿಗೆ ಭಾರತವನ್ನು ಟೀಕಿಸುವ ಯಾವುದೇ ವಿದೇಶಿ ಧ್ವನಿಯೂ ಸತ್ಯದ ಪ್ರತಿನಿಧಿಯಂತೆ ಕಾಣುತ್ತಿದೆ. ವಿದೇಶಿ ಪತ್ರಿಕೆಯೊಂದು ಭಾರತದ ಪ್ರಧಾನಿಯನ್ನು ಅವಮಾನಿಸಿದರೂ, ಅದರಲ್ಲಿ ಸಮಸ್ಯೆ ಕಾಣದೇ, ಅದನ್ನು ಸಮರ್ಥಿಸಲು ಪ್ರಯತ್ನಿಸುವ ಮನೋಭಾವ ಇನ್ನೂ ಆತಂಕಕಾರಿ. ಇದು ವೈಚಾರಿಕ ದಾಸ್ಯತೆಯ ಲಕ್ಷಣ ಎನ್ನಲಡ್ಡಿಯಿಲ್ಲ.

ಸ್ವಾತಂತ್ರ್ಯ ಎಂದರೆ ಜವಾಬ್ದಾರಿಯಿಲ್ಲದ ವರ್ತನೆಗೆ ಪರವಾನಗಿ ಅಲ್ಲ. ಪತ್ರಿಕಾ ಸ್ವಾತಂತ್ರ್ಯ ಎಂದರೆ ಯಾರನ್ನಾದರೂ ಅವಮಾನಿಸುವ ಹಕ್ಕು ಎಂದಾದರೆ, ಅದೇ ತರ್ಕವನ್ನು ಜಗತ್ತಿನ ಎಲ್ಲ ದೇಶಗಳೂ ಒಪ್ಪಬೇಕಾಗುತ್ತದೆ. ಆಗ ಧರ್ಮ, ಸಂಸ್ಕೃತಿ, ಜನಾಂಗ, ರಾಷ್ಟ್ರೀಯ ಗುರುತು ಯಾವುದಕ್ಕೂ ಗೌರವ ಉಳಿಯುವುದಿಲ್ಲ. ಪಾಶ್ಚಿಮಾತ್ಯ ಮಾಧ್ಯಮಗಳ ಒಂದು ಸಮಸ್ಯೆ ಏನೆಂದರೆ, ಅವರು ಜಗತ್ತನ್ನು ಇನ್ನೂ ತಮ್ಮ ಕಣ್ಣಿನಿಂದಲೇ ಅಳೆಯಲು ಪ್ರಯತ್ನಿಸುತ್ತಾರೆ. ಅವರ ರಾಜಕೀಯ ಮಾದರಿಯೇ ಶ್ರೇಷ್ಠ, ಅವರ ಸಂಸ್ಕೃತಿಯೇ ಪ್ರಗತಿಶೀಲ, ಅವರ ಮೌಲ್ಯಗಳೇ ಅಂತಿಮ ಸತ್ಯ ಎಂಬ ಮನೋಭಾವದಿಂದ ಹೊರಬರಲು ಸಾಧ್ಯವಾಗಿಲ್ಲ. ಇದೇ ಕಾರಣಕ್ಕೆ ಭಾರತ ತನ್ನದೇ ದಾರಿಯಲ್ಲಿ ಸಾಗಿದಾಗ ಅವರಿಗೆ ಅದು ಅಸಹಜವಾಗಿ ಕಾಣುತ್ತದೆ.

ಭಾರತ ಇಂದು ಆತ್ಮವಿಶ್ವಾಸದ ರಾಷ್ಟ್ರ. ಜಾಗತಿಕ ವೇದಿಕೆಯಲ್ಲಿ ತಲೆತಗ್ಗಿಸದೇ ಮಾತನಾಡುವ ರಾಷ್ಟ್ರ. ತನ್ನ ಹಿತಾಸಕ್ತಿಗಳನ್ನು ಮುಂಚೂಣಿಯಲ್ಲಿ ಇಡುವ ರಾಷ್ಟ್ರ. ಇಂತಹ ದೇಶವನ್ನು ಹಳೆಯ ಕಾಲದ ಸ್ಟೀರಿಯೋಟೈಪ್‌ಗಳಿಂದ ಅಳೆಯುವ ಪ್ರಯತ್ನಗಳು ಈಗ ಅಪ್ರಸ್ತುತ. ಭಾರತದ ಬಗ್ಗೆ ಜಗತ್ತು ಅಭಿಪ್ರಾಯ ಹೇಳಬಹುದು. ಟೀಕಿಸಬಹುದು. ಪ್ರಶ್ನಿಸಬಹುದು. ಆದರೆ, ಭಾರತವನ್ನು ಹೀನಾಯವಾಗಿ ಚಿತ್ರಿಸುವ ಪ್ರಯತ್ನಗಳಿಗೆ ಪ್ರತಿಕ್ರಿಯೆ ಸಿಗುತ್ತದೆ ಎಂಬುದನ್ನೂ ಅರ್ಥಮಾಡಿಕೊಳ್ಳಬೇಕು. ಏಕೆಂದರೆ, ಇದು 1950ರ ಭಾರತವಲ್ಲ. ಇದು ಆತ್ಮಗೌರವದ ಭಾರತ. ತನ್ನ ಬಗ್ಗೆ ತಾನೇ ಹೆಮ್ಮೆಪಡುವ ಭಾರತ. ಜಗತ್ತಿಗೆ ತನ್ನ ಶಕ್ತಿಯನ್ನು ತೋರಿಸಿರುವ ಭಾರತ.

ಪತ್ರಿಕೋದ್ಯಮಕ್ಕೆ ಗೌರವ ಇದೆ. ಪ್ರಶ್ನೆ ಕೇಳುವ ಹಕ್ಕಿಗೂ ಗೌರವ ಇದೆ. ಆದರೆ, ಅವಮಾನಕ್ಕೆ ಗೌರವವಿಲ್ಲ. ಭಾರತದ ಏಳಿಗೆಯನ್ನು ಒಪ್ಪಿಕೊಳ್ಳಲು ಅಸಮರ್ಥರಾಗಿರುವವರು ಇನ್ನೂ ಹಳೆಯ ಕಾಲದ ಮನೋವೈಕಲ್ಯದಲ್ಲೇ ಸಿಲುಕಿಕೊಂಡಿದ್ದಾರೆ. ಕಾಲ ಬದಲಾಗಿದೆ. ಭಾರತವೂ ಬದಲಾಗಿದೆ. ಈಗ ಜಗತ್ತೂ ತನ್ನ ದೃಷ್ಟಿಕೋನವನ್ನು ಬದಲಿಸಬೇಕಾದ ಸಮಯ ಬಂದಿದೆ.

ಮಾತಿನ ಶೈಲಿ ವಿಭಿನ್ನ

ಏಕೈಕಸ್ಯಾಪಿ ವೃಕ್ಷಸ್ಯ ಫಲೇ ದೃಷ್ಟಂ ರಸಾಂತರಮ್।
ಏಕೈಕಸ್ಯಾಪಿ ಮರ್ತ್ಯಸ್ಯ ವಕ್ತ್ರೇ ಭಿನ್ನಾ ಸರಸ್ವತೀ ॥ – ಸುವಚನ ಶತಕಮ್

ಒಂದೊಂದು ಮರದ ಹಣ್ಣಿನಲ್ಲೂ ರುಚಿಯು ಬೇರೆ ಬೇರೆಯಾಗಿರುತ್ತದೆ. ಹಾಗೆ ಒಬ್ಬೊಬ್ಬರ ಬಾಯಿಯಲ್ಲೂ ಸರಸ್ವತಿಯು (ಅಂದರೆ ಮಾತಿನ ಶೈಲಿಯು) ಭಿನ್ನಭಿನ್ನವಾಗಿರುತ್ತದೆ – ಎಂಬುದು ಶ್ಲೋಕಾರ್ಥ.

ಪ್ರಪಂಚದ ಉದ್ದಗಲಕ್ಕೂ ಇರುವ ಭಗವಂತನ ಸೃಷ್ಟಿ ಚಿತ್ರ-ವಿಚಿತ್ರವಾದದ್ದು, ವಿಶಿಷ್ಟವಾದದ್ದು. ಮನುಷ್ಯ ಲೋಕವನ್ನೊಮ್ಮೆ ನೋಡಿ! ಎಷ್ಟೊಂದು ಕೋಟಿ ಜನರಿದ್ದಾರೆ. ಆದರೆ ಅವರೆಲ್ಲರೂ ಒಂದೆ ಬಗೆಯಾಗಿ ಇಲ್ಲ. ಒಬ್ಬರಿಗಿಂತ ಇನ್ನೊಬ್ಬರಲ್ಲಿ ಸಣ್ಣದಾದರೂ ವ್ಯತ್ಯಾಸವಿದ್ದೇ ಇರುತ್ತದೆ. ಅವಳಿ ಜವಳಿ ಮಕ್ಕಳಲ್ಲೂ ಸೂಕ್ಷ್ಮವಾದ ವ್ಯತ್ಯಾಸವಿದ್ದೇ ಇದೆ. ಇದಕ್ಕಾಗಿಯೇ ಭಗವಂತನ ಸೃಷ್ಟಿ ಆಶ್ಚರ್ಯವೆನಿಸುವುದು.



ಶ್ಲೋಕ ಸಾಗರ
• ಡಾ.ಸೋಂದಾ ಭಾಸ್ಕರ ಭಟ್

ಒಂದೇ ಜಾತಿಯ ಮರಗಳಿರಲಿ, ಒಂದೊಂದು ಮರದ ಹಣ್ಣಿನ ರುಚಿಯಲ್ಲೂ ಬೇರೆ ರೀತಿಯಿರುತ್ತದೆ. ಅಂದರೆ ಒಂದರಂತೆ ಇನ್ನೊಂದಿಲ್ಲ, ಕೆಲವೊಮ್ಮೆ ಮೇಲ್ನೋಟಕ್ಕೆ ಏಕಪ್ರಕಾರವಾಗಿ ಕಂಡರೂ ರುಚಿಯಲ್ಲಿ ವ್ಯತ್ಯಾಸವಿದೆ. ಸೂಕ್ಷ್ಮ ವ್ಯತ್ಯಾಸವಿದ್ದೇ ಇರುತ್ತದೆ.

ಬಹುಶಃ ಇದಕ್ಕಾಗಿಯೇ ಇರಬೇಕು ಬಲ್ಲವರು ಜಗತ್ತಿನಲ್ಲಿ ಒಂದು ವಸ್ತುವಿನಂತೆ ಇನ್ನೊಂದು ವಸ್ತುವಿಲ್ಲ ಎನ್ನುವುದು. ಸೂಕ್ಷ್ಮವಾಗಿ ಚಿಂತನೆ ನಡೆಸಿದರೆ ಈ ಮಾತಿನಲ್ಲಿ ಸತ್ಯವಿದೆ ಎನ್ನಿಸುತ್ತದೆ.

ಒಂದೇ ಪದ್ಯವನ್ನು ಒಂದೇ ರಾಗ, ತಾಳ, ಲಯಗಳಲ್ಲಿ ಬೇರೆ ಬೇರೆ ಗಾಯಕರು ಹಾಡಿದರೆ ಅವರ ಹಾಡುವಿಕೆಯಲ್ಲಿ ಸಾಕಷ್ಟು ಮಾರ್ಪಾಡಿರುತ್ತವೆ. ಒಂದೇ ವಿಷಯದ ಕುರಿತು ಬೇರೆ ಬೇರೆ ವಿದ್ವಾಂಸರು ಉಪನ್ಯಾಸವಿತ್ತರೂ ಅದರಲ್ಲಿ ಸಾಕಷ್ಟು ವ್ಯತ್ಯಾಸವನ್ನು ಕಾಣಬಹುದು. ಇದರಿಂದ ಗೊತ್ತಾಗುವುದಿಷ್ಟೆ! 'ಒಂದರಂತೆ ಇನ್ನೊಂದಿಲ್ಲ' ಎಂಬುದಾಗಿ.

ಮರ, ಗಿಡ, ಬಳ್ಳಿ ಹಾಗೂ ಅವುಗಳಲ್ಲಿ ಅರಳುವ ಹೂವು, ಬಿಡುವ ಹಣ್ಣು ಇವುಗಳನ್ನು ಕವಿಯು ಸೂಕ್ಷ್ಮವಾಗಿ ಗಮನಿಸಿದ್ದಾನೆ, ಅನುಭವಿಸಿದ್ದಾನೆ. ಅಂತೆಯೇ ಜನರಾಡುವ ಮಾತು, ಮಾತಿನ ಶೈಲಿ ಇವುಗಳನ್ನೂ ಗಮನಿಸಿದ್ದಾರೆ. ಇಂತಹ ದಟ್ಟ ಅನುಭವದ ಹಿನ್ನೆಲೆಯಲ್ಲಿ ಈ ಶ್ಲೋಕದ ಮೂಲಕ ಮಾತಿನ ಶೈಲಿಯ, ವೈಖರಿಯ ವಿಭಿನ್ನತೆಯನ್ನು ಗುರುತಿಸಿ ನಿರೂಪಿಸಿದ್ದಾನೆ.

ಎಲ್ಲರೂ ಮಾತು ಬಲ್ಲವರೇ. ಎಲ್ಲರೂ ವಿಷಯ ಜ್ಞಾನ ಹೊಂದಿದವರೇ. ಆದರೆ ಅವರಾಡುವ ಮಾತು ಒಂದೇ ವಿಷಯವನ್ನೊಳಗೊಂಡಿದ್ದರೂ ನಿರೂಪಣ ವಿಧಾನದಲ್ಲಿ ವ್ಯತ್ಯಾಸವನ್ನು ಕಾಣಬಹುದು. ಒಂದು ವಿಷಯ ಗೊತ್ತಿದ್ದರೂ ಹೇಳುವವನ ಆಕರ್ಷಕ ಶೈಲಿ ನಮ್ಮನ್ನು ಮತ್ತೊಮ್ಮೆ ಕೇಳುವಂತೆ ಮಾಡುತ್ತದೆ. ಅದೇ ವಿಷಯವನ್ನು ಇನ್ನೊಬ್ಬನು ನೀರಸ ಶೈಲಿಯಲ್ಲಿ ಆರಂಭಿಸಿದರೆ ಕೂಡಲೇ ತೆರಳೋಣ, ಜಾಗ ಖಾಲಿ ಮಾಡೋಣ ಎಂದೆನಿಸುತ್ತದೆ.

ಇದು ಪ್ರಕೃತಿಯ ನಿಯಮ. ಭಗವಂತ ಮಾಡಿದ ಸಂವಿಧಾನ. ಇದನ್ನು ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ. ಬದಲಾಯಿಸುವ ಮೂರ್ಖ ಪ್ರಯತ್ನ ಮಾಡಿದರೂ ವ್ಯರ್ಥವೇ ಸರಿ.

ಮೋದಿಯವರ ಇಟಲಿ ಭೇಟಿಯ ಮಹತ್ವ

▶ ಅರವಿಂದ ಶೆಣೈ

ಪ್ರಧಾನಿ ನರೇಂದ್ರ ಮೋದಿ ಇದೀಗ ಇಟಲಿ ಭೇಟಿಯಲ್ಲಿದ್ದಾರೆ. ಅವರ ಐದು ರಾಷ್ಟ್ರಗಳ ಯುರೋಪ್ ಪ್ರವಾಸದ ಕೊನೆಯ ಹಂತದಲ್ಲಿ ಅವರು ಇಟಲಿಗೆ ಕಾಲಿಟ್ಟಿದ್ದಾರೆ. ಇರಾನ್ ಸಂಘರ್ಷದ ಕಾರಣದಿಂದಾಗಿ ಫೆ. 28ರಿಂದ ಹೊರ್ಮುಜ್ ಜಲಸಂಧಿ ಮುಚ್ಚಿರುವುದರಿಂದ ಮೋದಿಯವರ ಇಟಲಿ ಭೇಟಿಯು ಈ ಸಂದರ್ಭದಲ್ಲಿ ಅತ್ಯಂತ ಮಹತ್ವದ್ದಾಗಿದೆ. ಹೊರ್ಮುಜ್ ಜಲಸಂಧಿ ಮುಚ್ಚಿರುವುದರಿಂದ ಹಲವಾರು ರಾಷ್ಟ್ರಗಳು ಕೆಲವು ದಶಕಗಳಿಂದ ನಿರ್ಮಿಸಿದ್ದ ಸರಕು ಪೂರೈಕೆಯ ಜಾಲಗಳೆಲ್ಲವೂ ಅಸ್ತವ್ಯಸ್ತಗೊಂಡಿವೆ. ಜಗತ್ತು ಈಗ ಅವಶ್ಯ ವಸ್ತುಗಳ ಪೂರೈಕೆಗೆ ಕಷ್ಟಪಡುತ್ತಿದೆ. ಇಂತಹ ಸಂದರ್ಭದಲ್ಲಿ ಭಾರತವು 2023ರಲ್ಲಿ ಪ್ರತಿಪಾದಿಸಿದ 'ಭಾರತ-ಮಧ್ಯಪ್ರಾಚ್ಯ-ಯುರೋಪ್ ಎಕನಾಮಿಕ್ ಕಾರಿಡಾರ್' (ಐಎಂಇಇಸಿ) ಈಗ ಹೆಚ್ಚು ಪ್ರಸ್ತುತವಾಗುತ್ತಿದೆ. ಹೊಸದಿಲ್ಲಿಯಲ್ಲಿ ನಡೆದ ಜಿ-20 ಸಮ್ಮೇಳನದಲ್ಲಿ ಐಎಂಇಇಸಿ ಪ್ರಸ್ತಾಪ ಇಡಲಾಗಿತ್ತು.

ಇದೀಗ ಈ ಕಾರಿಡಾರ್ ಯೋಜನೆಯು ಕೇವಲ ಹೆಸರಿನಲ್ಲಷ್ಟೇ ಇರುವುದೇ ಅಥವಾ ಅದನ್ನು ತುರ್ತಾಗಿ ಕಾರ್ಯರೂಪಕ್ಕೆ ಇಳಿಸಬೇಕೆ ಎಂಬ ಕುರಿತಂತೆ ಪ್ರಧಾನಿ ಮೋದಿ ಮತ್ತು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ ನಿರ್ಧರಿಸಬೇಕಾಗಿದೆ. ಐಎಂಇಇಸಿ ಕಲ್ಪನೆಯು ಅತ್ಯಂತ ಮಹತ್ವಾಕಾಂಕ್ಷಿಯಾದುದು. ಇದು ವಿಸ್ತೃತ ರೈಲು ಮತ್ತು ಜಲಮಾರ್ಗಗಳ ಮೂಲಕ ಏಷ್ಯಾವನ್ನು ಗಲ್ಫ್ ರಾಷ್ಟ್ರಗಳ ಮುಖಾಂತರವಾಗಿ ಯುರೋಪ್‌ನೊಂದಿಗೆ ಸಂಪರ್ಕಿಸಲು ಬಯಸುತ್ತದೆ. ಪೂರ್ವ ಮತ್ತು ಪಶ್ಚಿಮದ ಎರಡು ಬೃಹತ್ ಆರ್ಥಿಕ ವಲಯಗಳನ್ನು ಹಲವಾರು ದಾರಿಗಳ ಮೂಲಕ ಪರಸ್ಪರ ಸಂಪರ್ಕಿಸುವುದು ಇದರ ಉದ್ದೇಶ. ಯಾವುದೇ ಒಂದು ದಾರಿಯು ನಿರ್ಬಂಧಿಸಲ್ಪಟ್ಟರೆ ಇನ್ನುಳಿದ ದಾರಿಗಳನ್ನು ತೆರೆಯುವ ಅವಕಾಶ ಇಲ್ಲಿದೆ.

ಭಾರತ, ಅಮೆರಿಕ, ಫ್ರಾನ್ಸ್, ಜರ್ಮನಿ, ಇಟಲಿ, ಸೌದಿ ಅರೇಬಿಯಾ, ಯುಎಇ ಮತ್ತು ಐರೋಪ್ಯ ಒಕ್ಕೂಟಗಳು 2023ರಲ್ಲಿ ಈ ಕುರಿತಾದ ಒಪ್ಪಂದಕ್ಕೆ ಸಹಿ ಹಾಕಿದ್ದವು. ಸಾಗಣೆಯ ಸಮಯವನ್ನು ಉಳಿಸುವುದು, ಸೂಯೆಜ್ ಕಾಲುವೆ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದು, ಪೂರೈಕೆ ಜಾಲವನ್ನು ವಿಸ್ತರಿಸುವುದು, ಯಾವುದೇ ಪ್ರಾದೇಶಿಕ ಸಂಘರ್ಷ ವ್ಯಾಪಾರ ವಹಿವಾಟಿನ ಮೇಲೆ ಪರಿಣಾಮ ಬೀರದಂತೆ ನೋಡಿಕೊಳ್ಳುವುದು ಈ ಎಕನಾಮಿಕ್ ಕಾರಿಡಾರ್ ನಿರ್ಮಾಣದ ಮಹತ್ವದ ಗುರಿಯಾಗಿದೆ.

ಆದರೆ ಅದು ಕಾರ್ಯರೂಪಕ್ಕೆ ಬರುವುದಕ್ಕೆ ಮೊದಲೇ ಅಡ್ಡಿಗಳು ಬಂದವು. ಹಮಾಸ್ ಇಸ್ರೇಲ್ ಮೇಲೆ ದಾಳಿ ಮಾಡಿತು. ಬಳಿಕ ನಡೆದ ಗಾಝಾ ಸಮರವು ಜಗತ್ತಿನ ರಾಜಕೀಯ ಗಮನವನ್ನು ಅತ್ತ ಸೆಳೆಯಿತು. ಹೌತಿಗಳು ಕೆಂಪು ಸಮುದ್ರ ಪ್ರದೇಶದಲ್ಲಿ ಹಡಗುಗಳ ಮೇಲೆ ದಾಳಿ ನಡೆಸಿದ್ದು ಐಎಂಇಇಸಿ ಜಲಮಾರ್ಗದ ಮೇಲೆ ಉಂಟಾಗುವ ಕಂಟಕವನ್ನು ತೋರ್ಪಡಿಸಿತು. ಹಾಗಾಗಿ ಈ ಕಾರಿಡಾರ್ ಯೋಜನೆ ಸ್ಥಗಿತಗೊಂಡಿತು.

ಆದರೂ 2025ರ ಮಧ್ಯಂತರ ವೇಳೆಗೆ ಪೂರ್ವಭಾಗದಲ್ಲಿ ಈ ಕಾರಿಡಾರಿನ ಚಟುವಟಿಕೆಗಳು ನಡೆದೇ ಇದ್ದವು. ಭಾರತ , ಯುಎಇ ಮತ್ತು ಸೌದಿಅರೇಬಿಯಾಗಳು ಭಾರತ ಮತ್ತು ಗಲ್ಫ್ ಪ್ರದೇಶದ ಕಾರ್ಯಗಳ ಅನುಷ್ಠಾನದಲ್ಲಿ ಸದ್ದಿಲ್ಲದೆ ತೊಡಗಿದ್ದವು. ಆದರೆ ಗಲ್ಫ್‌ನಿಂದ ಯುರೋಪಿಗೆ ಸಂಪರ್ಕಿಸುವ ಯೋಜನಾ ಜಾಲವು ಮುಂದುವರಿಯಲೇ ಇಲ್ಲ.

ಅಷ್ಟರಲ್ಲಿ ಫೆ. 28ರಂದು ಇರಾನ್ ಸಮರ ಪ್ರಾರಂಭಗೊಂಡಿತು. ಹೊರ್ಮುಜ್ ಜಲಸಂಧಿ ಮುಚ್ಚಲ್ಪಟ್ಟಿತು. ತೈಲ ಮತ್ತು ಇನ್ನಿತರ ಕೆಲವು ವಸ್ತುಗಳ ಸಾಗಣೆಗೆ ಅಡ್ಡಿಯಾಯಿತು. ಎಲ್ಲಾ ದೇಶಗಳೂ ಅದರ ಪರಿಣಾಮ ಅನುಭವಿಸತೊಡಗಿದವು. ಒಮ್ಮೆಗೇ ಎಲ್ಲರೂ ಮತ್ತೆ ಐಎಂಇಇಸಿ ಕುರಿತಂತೆ ಮಾತನಾಡತೊಡಗಿದರು. ಇಂತಹ ಎಕನಾಮಿಕ್ ಕಾರಿಡಾರ್ ನಿಜಕ್ಕೂ ಅಗತ್ಯ ಎಂಬುದು ಈಗ ಎಲ್ಲರಿಗೂ ಮನವರಿಕೆಯಾಗತೊಡಗಿದೆ. ತಮ್ಮ ಉಳಿವಿಗೆ ಇಂತಹ ಸಂಪರ್ಕ ಜಾಲ ಅಗತ್ಯವಾಗಿದೆ ಎಂದು ವಿವಿಧ ದೇಶಗಳು ಭಾವಿಸತೊಡಗಿವೆ. ಈ ಎಕನಾಮಿಕ್ ಕಾರಿಡಾರ್ ಕೇವಲ ಕಲ್ಪನೆಯಲ್ಲ, ಬದಲಾಗಿ ಇದೊಂದು ಕಾರ್ಯಸಾಧು ಯೋಜನೆ ಎಂಬುದಾಗಿ 'ಫಾರ್ಚೂನ್' ನಿಯತಕಾಲಿಕ ಇತ್ತೀಚೆಗೆ ಬಣ್ಣಿಸಿದೆ. ಜಗತ್ತು ತಮ್ಮ ಸರಕು ಸಾಗಣೆಗೆ ಕೇವಲ ಒಂದೇ ಮಾರ್ಗದ ಮೇಲೆ ಅವಲಂಬಿತವಾಗಿದ್ದರೆ ಸಣ್ಣದೊಂದು ಸಂಘರ್ಷ ಕೂಡಾ ಅದೆಷ್ಟು ದೊಡ್ಡ ಪರಿಣಾಮ ಬೀರಬಲ್ಲದು ಎಂಬುದನ್ನು ಹೊರ್ಮುಜ್ ಜಲಸಂಧಿಯ ಬಿಕ್ಕಟ್ಟು ತೋರಿಸಿಕೊಟ್ಟಿದೆ. ಐಎಂಇಇಸಿನ ಪ್ರಮುಖ ತರ್ಕವೇ 'ಭವಿಷ್ಯದಲ್ಲಿ ಏಷ್ಯಾ ಮತ್ತು ಯುರೋಪ್ ನಡುವಿನ ವ್ಯಾಪಾರ ವಹಿವಾಟು ಯಾವುದೋ ಒಂದು ಜಲಮಾರ್ಗದ ಮೇಲೆ, ಯಾರೋ ಒಬ್ಬರು ಯಾವುದೋ ಒಂದು ದಿನ ನಿಯಂತ್ರಣ ಹೊಂದಿರುತ್ತಾರೆ ಎಂಬುದರ ಮೇಲೆ ಅವಲಂಬಿಸಬಾರದು' ಎನ್ನುವುದೇ ಆಗಿದೆ. ಇರಾನ್ ಬಿಕ್ಕಟ್ಟು ಈ ವಾದವನ್ನು ಇನ್ನಷ್ಟು ಬಲಗೊಳಿಸಿದೆ.

ಈ ಎಕನಾಮಿಕ್ ಕಾರಿಡಾರ್ ಯೋಜನೆಯಲ್ಲಿ ಇಟಲಿಯ ಪಾತ್ರ ಮಹತ್ವದ್ದಾಗಿದೆ. ಇಡೀ ಯೋಜನೆಯ ಪಾಶ್ಚಿಮಾತ್ಯ 'ಲಂಗರು ತಾಣ'ವಾಗಿ ಇಟಲಿ ಪಾತ್ರ ವಹಿಸಲಿದೆ. ಈ ಇಕನಾಮಿಕ್ ಕಾರಿಡಾರ್ ಅನುಷ್ಠಾನಿಸಲ್ಪಟ್ಟರೆ ಮುಂಬೈನಿಂದ ಗಲ್ಫ್ ರಾಷ್ಟ್ರವಾಗಿ ಸಾಗುವ ದಾರಿಯು ಯುರೋಪಿನಲ್ಲಿ ಇಟಲಿಯನ್ನು ಪ್ರಮುಖ ಕೇಂದ್ರವಾಗಿ ಪರಿಗಣಿಸಲಿದೆ. ಅಲ್ಲಿಂದ ಬಳಿಕ ಯುರೋಪ್‌ಗೆ ವಿಸ್ತರಿಸಲ್ಪಡಲಿದೆ. ಇಟಲಿ ಈ ಯೋಜನೆಯಲ್ಲಿ ಪಾಲ್ಗೊಳ್ಳದಿದ್ದರೆ ಯೋಜನೆಯು ಅಪೂರ್ಣಗೊಳ್ಳಬಹುದು.

ಅದೃಷ್ಟವಶಾತ್ ಈ ಯೋಜನೆಯ ಕಾರ್ಯಾನುಷ್ಠಾನದಲ್ಲಿ ಇಟಲಿ ಪ್ರಧಾನಿ ಮೆಲೊನಿ ಸಕ್ರಿಯ ಆಸಕ್ತಿ ವಹಿಸಿದ್ದಾರೆ. ಐಎಂಇಇಸಿ ಕಾರ್ಯಗತಗೊಳ್ಳಲು ಅವರೂ ಶ್ರಮಿಸುತ್ತಿದ್ದಾರೆ. ಏಪ್ರಿಲ್ ತಿಂಗಳಲ್ಲಿ ಅವರು ಸೌದಿ ಅರೇಬಿಯಾ, ಕತಾರ್ ಮತ್ತು ಯುಎಇಗೆ ಹಠಾತ್ ಭೇಟಿ ನೀಡಿ ಈ ವಿಷಯದ ಕುರಿತಂತೆ ಚರ್ಚಿಸಿದ್ದರು. ಕೊಲ್ಲಿ ಸಮರ ಆರಂಭವಾದ ಬಳಿಕ ಬೇರೆ ಯಾವ ಯುರೋಪಿಯನ್ ಅಥವಾ ನ್ಯಾಟೋ ಮುಖಂಡರೂ ಕೊಲ್ಲಿ ರಾಷ್ಟ್ರಗಳಿಗೆ ಭೇಟಿ ನೀಡಿದ್ದಿಲ್ಲ. ಆದರೆ ಮೆಲೊನಿ ಮೂರು ಅರಬ್ ದೇಶಗಳ ಮುಖಂಡರನ್ನು ಭೇಟಿಯಾಗಿ ವಿಸ್ತೃತ ಚರ್ಚೆ ನಡೆಸಿದರು. ಇಂಧನ ಬಿಕ್ಕಟ್ಟನ್ನು ಪರಿಹರಿಸುವುದು ಆಕೆಯ ಪ್ರಮುಖ ಆದ್ಯತೆಯಾಗಿತ್ತು. ಏಕೆಂದರೆ ಇಟಲಿಗೆ ಕೊಲ್ಲಿಯಿಂದ ಎಲ್‌ಎನ್‌ಜಿ ಪೂರೈಕೆ ಅಸ್ತವ್ಯಸ್ತಗೊಂಡು ಇಟಲಿಯ ಇಂಧನ ಪರಿಸ್ಥಿತಿ ಬಿಕ್ಕಟ್ಟಿಗೆ ಸಿಲುಕಿತ್ತು. ಅದರ ಜತೆಗೇ ಐಎಂಇಇಸಿ ಯೋಜನೆಯ ಬಗೆಗೂ ಚರ್ಚಿಸಿದರು.

ಆದರೆ ಇತ್ತೀಚಿನ ದಿನಗಳಲ್ಲಿ ಸೌದಿ ಅರೇಬಿಯಾ ಮತ್ತು ಯುಎಇ ಮಧ್ಯೆ ಉಂಟಾಗಿರುವ ಸಂಘರ್ಷವು ಐಎಂಇಇಸಿ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇಲ್ಲದಿಲ್ಲ. ಸೌದಿ ಅರೇಬಿಯಾ ಭಾರತದ ಪ್ರಗತಿಯನ್ನು ಸಹಿಸದ ಪಾಕಿಸ್ತಾನದೊಂದಿಗೂ ರಕ್ಷಣಾ ಒಪ್ಪಂದ ಮಾಡಿಕೊಂಡಿರುವುದು ಕೂಡಾ ತೊಡಕಾಗಿ ಪರಿಣಮಿಸಬಹುದು. ಪಾಕಿಸ್ತಾನವು ಸೌದಿ ಮೇಲೆ ಪ್ರಭಾವ ಬೀರಿ ಐಎಂಇಇಸಿ ಯೋಜನೆಗೆ ತೊಡರುಗಾಲು ಒಡ್ಡಲು ಯತ್ನಿಸಬಹುದು.

ಐಎಂಇಇಸಿ ಯೋಜನೆಗೆ ಸೌದಿ ಅರೇಬಿಯಾದ ಬಂದರುಗಳು ಯುಎಇ ಬಂದರುಗಳೊಂದಿಗೆ ನಿಕಟ ಸಂಪರ್ಕ ಹೊಂದಿರುವುದು ಅಗತ್ಯವಾಗಿದೆ. ಹಾಗಾಗಿ ಮೇಲಿನ ಮಟ್ಟದಿಂದ ಹೇರಬಹುದಾದ ಒತ್ತಡವು ಸೌದಿಯು ಈ ಯೋಜನೆಯೊಂದಿಗೆ ಮುಂದುವರಿಯುವಂತೆ ಮಾಡಬಲ್ಲುದು. ಈ ನಿಟ್ಟಿನಲ್ಲಿ ಇಟಲಿ ಪ್ರಧಾನಿ ಮೆಲೊನಿ ಪ್ರಮುಖ ಪಾತ್ರ ವಹಿಸಬಲ್ಲರು. ಭಾರತ, ಯುಎಇ ಮತ್ತು ಸೌದಿ ಅರೇಬಿಯಾಗಳು ಯೋಜನೆಯಲ್ಲಿ ತಮ್ಮ ತಮ್ಮ ಪಾತ್ರವನ್ನು ನೆರವೇರಿಸುತ್ತಿರುವುದಾಗಿ ಕೆಲ ಸಮಯದ ಹಿಂದೆ ವಿದೇಶಾಂಗ ಸಚಿವ ಜೈಶಂಕರ್ ಕೂಡಾ ಹೇಳಿದ್ದರು.

ಈ ಕಾರ್ಯಾನುಷ್ಠಾನ ಅನೂಚಾನವಾಗಿ ಮುಂದುವರಿಯುವಂತೆ ಮಾಡುವ ಒತ್ತಡವನ್ನು ಇಟಲಿ ಸೌದಿಯ ಮೇಲೆ ಹೇರಬಲ್ಲುದು. ಬೇರೆಲ್ಲಾ ಐರೋಪ್ಯ ಮುಖಂಡರಿಗಿಂತ ಇಟಲಿ ಪ್ರಧಾನಿಯೇ ಈ ವಿಷಯದಲ್ಲಿ ಹೆಚ್ಚು ಸಂವಹನ ಸಾಮರ್ಥ್ಯ ಹೊಂದಿದ್ದಾರೆ. ಅವರ ರಾಜಕೀಯವು ಆರ್ಥಿಕ ಸಾರ್ವಭೌಮತ್ವ ಮತ್ತು ವ್ಯೂಹಾತ್ಮಕ ಸ್ವಾಯತ್ತತೆಯ ಆಧಾರದಲ್ಲಿ ನಿಂತಿದೆ. ಅಗತ್ಯ ಬಿದ್ದರೆ ತಾನು ದಿಟ್ಟ ಹೆಜ್ಜೆ ತೆಗೆದುಕೊಳ್ಳಲು ಸಿದ್ಧ ಎಂಬುದನ್ನು ಮೆಲೊನಿಯವರು ಸಮರ ಕಾಲದಲ್ಲೂ ಗಲ್ಫ್ ರಾಷ್ಟ್ರಗಳಿಗೆ ಭೇಟಿ ನೀಡುವ ಮೂಲಕ ತೋರ್ಪಡಿಸಿದ್ದಾರೆ. ಇರಾನ್ ಸಮರವು ಇಟಲಿಯ ಇಂಧನ ಶಕ್ತಿಯ ಮೇಲೂ ಪ್ರತಿಕೂಲ ಪರಿಣಾಮ ಬೀರಿರುವುದರಿಂದ ಇಟಲಿ ಕೂಡಾ ದೀರ್ಘಾವಧಿಯಲ್ಲಿ ಇಂತಹ ಸಮಸ್ಯೆ ಉದ್ಭವಿಸದಂತೆ ಮಾಡಲು ಉಪಕ್ರಮಿಸುವುದು ಸಹಜವಾಗಿದೆ. ಈ ಹಿನ್ನೆಲೆಯಲ್ಲಿ ಐಎಂಇಇಸಿ ಯೋಜನೆ ಮಹತ್ವದ್ದಾಗಿದೆ. ಹಾಗಾಗಿ ಇಟಲಿಯು ಈ ವಿಷಯದಲ್ಲಿ ಹೆಚ್ಚು ಗಂಭೀರ ಹೆಜ್ಜೆಯಿಡುವುದೆಂದು ಆಶಿಸಲಾಗಿದೆ. ಹೊರ್ಮುಜ್ ಜಲಸಂಧಿ ಮುಚ್ಚಿರುವುದು, ಕೆಂಪು ಸಮುದ್ರ ಪ್ರದೇಶ ಕೂಡಾ ಸಮರಪೀಡಿತವಾಗಿರುವುದು ವಿಶ್ವದ ಎರಡು ಪ್ರಮುಖ ವಹಿವಾಟು ಕೇಂದ್ರಗಳನ್ನು (ಏಷ್ಯಾ- ಗಲ್ಫ್ ಮತ್ತು ಯುರೋಪ್) ಅತಂತ್ರಗೊಳಿಸಿರುವುದು ಐಎಂಇಇಸಿ ಯೋಜನೆಯು ಕಾರ್ಯಗತಗೊಳ್ಳಬೇಕಾದ ಅನಿವಾರ್ಯವನ್ನು ಎತ್ತಿ ತೋರಿದೆ.

ಕೇರಳದ ಸೆಕ್ಯುಲರ್ ಹಿಪಾಕ್ರಸಿ

▶ ಮಜುಂದಾರ್

ಕೇರಳದ ರಾಜಕೀಯದಲ್ಲಿ 'ಜಾತ್ಯತೀತತೆ' ಎಂಬ ಪದಕ್ಕೆ ಹಲವಾರು ಪಿತರಿದ್ದಾರೆ. ಆದರೆ ನೈಜ ಅರ್ಥದಲ್ಲಿ 'ಜಾತ್ಯತೀತತೆ'ಯ ಅನುಷ್ಠಾನದ ವಿಷಯ ಬಂದಾಗ ಅದು ಅನಾಥವಾಗಿದೆ.

ಕೇರಳದ ತಥಾಕಥಿತ ಜಾತ್ಯತೀತ ಪಕ್ಷಗಳು ಬಿಜೆಪಿಯನ್ನು ಕೋಮುವಾದಿ ಪಕ್ಷ ಹಾಗೂ ಅಲ್ಪಸಂಖ್ಯಾತ ವಿರೋಧಿ ಪಕ್ಷ ಎಂದು ನಿರಂತರವಾಗಿ ಟೀಕಿಸುತ್ತಿರುತ್ತವೆ. ಆದರೆ ವಾಸ್ತವಾಂಶವು ಬೇರೆಯೇ ಕಥೆ ಹೇಳುತ್ತದೆ.

ಜಾತ್ಯತೀತ ಪಕ್ಷಗಳು ನಿರ್ಲಜ್ಜವಾಗಿ ಅಲ್ಪಸಂಖ್ಯಾತ ಓಲೈಕೆಯ ಓಟ್ ಬ್ಯಾಂಕ್ ರಾಜಕಾರಣ ನಡೆಸುತ್ತಿದ್ದರೆ, ಬಿಜೆಪಿಯು ಆಶ್ಚರ್ಯಕರವಾಗಿ ಇತರ ಸಮುದಾಯದವರನ್ನು ಕೂಡಾ ತಲುಪುವ ಕಾರ್ಯ ಮಾಡಿದೆ. ಇತ್ತೀಚಿನ ಕೇರಳ ವಿಧಾನಸಭಾ ಚುನಾವಣೆಯನ್ನು ಉದಾಹರಣೆಗೆ ತೆಗೆದುಕೊಂಡರೆ, ಬಿಜೆಪಿ 7 ಮಂದಿ ಕ್ರೈಸ್ತರನ್ನು ಚುನಾವಣೆಗೆ ನಿಲ್ಲಿಸಿತ್ತು. ಕ್ರೈಸ್ತ ಪ್ರಾಬಲ್ಯದ ಕೊಟ್ಟಾಯಂ, ಪಾಲ, ತಿರುವಳ್ಳ, ಪೂಂಜಾರ್ ಮುಂತಾದ ಕಡೆಗಳಲ್ಲಿ ಬಿಜೆಪಿ ಪರವಾಗಿ ಕ್ರೈಸ್ತ ಮುಖಂಡರು ಸಾಕಷ್ಟು ಪ್ರಚಾರ ನಡೆಸಿದ್ದಾರೆ. ಬಿಜೆಪಿ ಪರವಾಗಿ ಪ್ರಚಾರ ನಡೆಸಿದ ಕ್ರೈಸ್ತ ಮುಖಂಡರಲ್ಲಿ ಕೇಂದ್ರ ಸಚಿವ ಜಾರ್ಜ್ ಕುರಿಯನ್, ಪಿ.ಸಿ.ಜಾರ್ಜ್, ಅನೂಪ್ ಆ್ಯಂಟನಿ ಜೋಸೆಫ್ ಮುಂತಾದವರು ಸೇರಿದ್ದಾರೆ.

ಕ್ರೈಸ್ತ ಸಮುದಾಯದ ಮೇಲೆ ಯುಡಿಎಫ್ ಹೊಂದಿರುವ ಹಿಡಿತವನ್ನು ಸಡಿಲಿಸಲು ಬಿಜೆಪಿ ಇಂತಹ ದಿಟ್ಟ ಕ್ರಮ ತೆಗೆದುಕೊಂಡಿದೆ. ಬಿಜೆಪಿ ಇದರಲ್ಲಿ ಗೆದ್ದಿತೋ ಸೋತಿತೋ ಎಂಬುದು ಬೇರೆ ವಿಷಯ. ಆದರೆ ಅವರೆಡೆಗೆ ಸ್ನೇಹಹಸ್ತ ಚಾಚುವ ತನ್ನ ಇಂಗಿತವನ್ನಂತೂ ಸ್ಪಷ್ಟಪಡಿಸಿದೆ. ತನ್ನ ಪಕ್ಷದಲ್ಲಿ ಅಲ್ಪಸಂಖ್ಯಾತರಿಗೆ ಸ್ಪರ್ಧಿಸಲು ಅವಕಾಶ ನೀಡಿ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ಕಲ್ಪಿಸಿದೆ.

ಈಗ ಇದನ್ನು ಮುಸ್ಲಿಂಲೀಗ್ (ಐಯುಎಂಎಲ್)ನೊಂದಿಗೆ ಹೋಲಿಸಿ ನೋಡಿ. ಮೊಹಮ್ಮದ್ ಆಲಿ ಜಿನ್ನಾನಿಂದ ಸ್ಥಾಪಿತವಾದ ಮುಸ್ಲಿಂಲೀಗನ್ನೇ ಸಮೀಕರಿಸುವ ಐಯುಎಂಎಲ್ ಕಾಂಗ್ರೆಸ್ ನೇತೃತ್ವದ ಯುಡಿಎಫ್‌ನ ಅಂಗಪಕ್ಷವಾಗಿದೆ. ಕಾಂಗ್ರೆಸ್ ಪಕ್ಷವು ಮುಸ್ಲಿಂಲೀಗನ್ನು ಸದಾ ಜಾತ್ಯತೀತ ಪಕ್ಷವೆಂದೇ ಬಣ್ಣಿಸುತ್ತಿರುತ್ತದೆ.

ಮುಸ್ಲಿಂಲೀಗ್ ಕೂಡಾ ಇತರ ಪಕ್ಷಗಳಿಗೆ ಜಾತ್ಯತೀತತೆ ಕುರಿತಂತೆ ಬೋಧಿಸಲು ಹಿಂದೆ ಬೀಳುವುದಿಲ್ಲ, ಆದರೆ ತಾನು ಮಾತ್ರ ಆಚರಣೆಯಲ್ಲಿ ಜಾತ್ಯತೀತತೆಯನ್ನು ಪಾಲಿಸುವುದಿಲ್ಲ. ಕೇರಳ ಸರಕಾರದಲ್ಲಿ ಬಹಳಷ್ಟು ಬಾರಿ ಪಾಲು ಪಡೆದ ಮುಸ್ಲಿಂಲೀಗ್ ಒಂದೇ ಒಂದು ಬಾರಿಯೂ ಮುಸ್ಲಿಮೇತರರಿಗೆ ಸಚಿವ ಸ್ಥಾನ ನೀಡಿದ್ದಿಲ್ಲ. ಮೊನ್ನೆಯ ಚುನಾವಣೆಯ ಬಳಿಕ ರಚಿಸಲಾದ ಯುಡಿಎಫ್ ಸರಕಾರದಲ್ಲಿ



ಮುಸ್ಲಿಂಲೀಗ್ 5 ಸಚಿವ ಸ್ಥಾನ ಪಡೆದಿದೆ. ಅವೆಲ್ಲವನ್ನೂ ಮುಸ್ಲಿಮರಿಗೇ ನೀಡಲಾಗಿದೆ. ಒಬ್ಬನೇ ಒಬ್ಬ ಕ್ರೈಸ್ತ ಅಥವಾ ಹಿಂದುವಿಗೆ ನೀಡಲಾಗಿಲ್ಲ. ಹಿಂದುಗಳಲ್ಲಿ ಈಳವ ಅಥವಾ ನಾಯರ್ ಸಮುದಾಯದವರಿಗೆ ಸಚಿವ ಸ್ಥಾನ ಕೊಡಮಾಡಿಲ್ಲ. ಹಾಗಿದ್ದೂ ಮುಸ್ಲಿಂಲೀಗನ್ನು ಜಾತ್ಯತೀತ ಎಂದು ಕಾಂಗ್ರೆಸ್ ಹೇಳುತ್ತದೆ.

ಕಾಂಗ್ರೆಸ್ ಕೂಡಾ ಕೇರಳದಲ್ಲಿ ಜಾತ್ಯತೀತತೆಯನ್ನು ಪಾಲಿಸುವುದು ಅಷ್ಟರಲ್ಲೇ ಇದೆ. ಸತೀಶನ್ ಸಚಿವ ಸಂಪುಟದಲ್ಲಿ ಕಾಂಗ್ರೆಸ್ ಕೂಡಾ ಅಲ್ಪಸಂಖ್ಯಾತರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಿಲ್ಲ. ಮುಸ್ಲಿಂ ಮತಗಳಿಗಾಗಿ ಅದು ಮುಸ್ಲಿಂಲೀಗನ್ನು ಬಹಳವಾಗಿ ಅವಲಂಬಿಸಿದ್ದರೂ ಹಾಗೂ ಕ್ರೈಸ್ತರ ಬೆಂಬಲಕ್ಕಾಗಿ ಕೇರಳ ಕಾಂಗ್ರೆಸ್ ಪಕ್ಷವನ್ನು ಅವಲಂಬಿಸಿದ್ದರೂ ಸಚಿವ ಸಂಪುಟದಲ್ಲಿ ಮಾತ್ರ ಅವರಿಗೆ ಸೂಕ್ತ ಪ್ರಾತಿನಿಧ್ಯ ನೀಡುವ

> ಜಾತ್ಯತೀತ ಪಕ್ಷಗಳು ನಿರ್ಲಜ್ಜವಾಗಿ ಓಟ್ ಬ್ಯಾಂಕ್ ರಾಜಕಾರಣ ನಡೆಸುತ್ತಿದ್ದರೆ, ಬಿಜೆಪಿಯು ಇತರ ಸಮುದಾಯದವರನ್ನು ತಲುಪುವ ಕಾರ್ಯ ಮಾಡಿದೆ.

ಗೋಜಿಗೆ ಹೋಗಿಲ್ಲ. ಮುಸ್ಲಿಂ ಅಥವಾ ಕ್ರೈಸ್ತ ಸಮುದಾಯದ ಪ್ರಮುಖ ವ್ಯಕ್ತಿಗಳಿಗೆ ಕೂಡಾ ಸಚಿವ ಸ್ಥಾನ ನಿರಾಕರಿಸಲಾಗಿದೆ.

ಸರಿಯಾಗಿ ವಿಶ್ಲೇಷಿಸಿದರೆ ಕೋಮುವಾದಿಯೆಂದು ಕರೆಯಲ್ಪಡುವ ಬಿಜೆಪಿಯೇ ಹೆಚ್ಚು ಜಾತ್ಯತೀತವಾಗಿ ಕಂಡುಬರುತ್ತದೆ. ಬಿಜೆಪಿಯು ಆರಿಫ್ ಮೊಹಮ್ಮದ್‌ಖಾನ್‌ರನ್ನು 2019ರಿಂದ 2025ರ ವರೆಗೆ ಕೇರಳದ ರಾಜ್ಯಪಾಲರನ್ನಾಗಿ ನೇಮಿಸಿತ್ತು. ಬಿಜೆಪಿ ಕೆಲವಾರು ರಾಜ್ಯಗಳಲ್ಲಿ ಕ್ರೈಸ್ತರಿಗೆ ಮತ್ತು ಪಾಸ್ಮಾಂಡ ಮುಸ್ಲಿಮರಿಗೆ ಸಂಪುಟದಲ್ಲಿ ಸ್ಥಾನಮಾನ ನೀಡಿದೆ. ಉತ್ತರಪ್ರದೇಶ, ಬಿಹಾರ, ಅಸ್ಸಾಂ ಮೊದಲಾದ ರಾಜ್ಯಗಳಲ್ಲಿ ಅವರಿಗೆ ಸಚಿವ ಸ್ಥಾನ ದೊರಕಿದೆ. ಪಶ್ಚಿಮ ಬಂಗಾಳದಲ್ಲೂ ಆದಿವಾಸಿಗಳು, ಪರಿಶಿಷ್ಟ ಪಂಗಡದವರಿಗೆ ಕೂಡಾ ಸೂಕ್ತ ಪ್ರಾತಿನಿಧ್ಯ ನೀಡಲಾಗಿದೆ.

ಕೇರಳದ ರಾಜಕೀಯ ನೋಡುವಾಗ ತಥಾಕಥಿತ ಜಾತ್ಯತೀತ ಪಕ್ಷಗಳು ಅದು ಹೇಗೆ ಅಲ್ಪಸಂಖ್ಯಾತರನ್ನು ತಮ್ಮ ವೋಟ್ ಬ್ಯಾಂಕನ್ನಾಗಿ ಉಳಿಸಿಕೊಳ್ಳಲು ಪ್ರಯತ್ನ ನಡೆಸುತ್ತವೆ, ಅವರು ತಮ್ಮ ಹಿಡಿತದಿಂದ ಜಾರಿಹೋಗದಿರಲು ಏನೆಲ್ಲಾ ತಂತ್ರ ಹೂಡುತ್ತವೆ, ಅವರ ಮನದಲ್ಲಿ ಬಹುಸಂಖ್ಯಾತರ ಬಗ್ಗೆ ಹೇಗೆ ಭೀತಿ ಸೃಷ್ಟಿಸಿ ಅವರು ತಮ್ಮದೇ ನೆರಳಲ್ಲಿ ಇರುವಂತೆ ನೋಡಿಕೊಳ್ಳುತ್ತವೆ ಎಂಬುದು ಸುಸ್ಪಷ್ಟವಾಗುತ್ತದೆ. ಆದರೆ ಇದಕ್ಕೆ ವಿರುದ್ಧವಾಗಿ ಬಿಜೆಪಿಯು ಹಿಂದುತ್ವಕ್ಕೆ ಬದ್ಧವಾಗಿದ್ದರೂ, ಇತರ ಸಮುದಾಯಗಳವರಿಗೂ ಟಿಕೆಟ್ ನೀಡುವಲ್ಲಿ ಅವರಿಗೆ ಸೂಕ್ತ ವೇದಿಕೆ ಒದಗಿಸುವಲ್ಲಿ ಹಿಂದೆ ಬಿದ್ದಿಲ್ಲ. ಬಿಜೆಪಿಯಲ್ಲಿ ಅಲ್ಪಸಂಖ್ಯಾತರು ಉನ್ನತ ಸ್ಥಾನಗಳನ್ನು ಪಡೆಯಲೂ ಸಫಲರಾಗಿದ್ದಾರೆ. ಕೇರಳದಲ್ಲಿ ಬಿಜೆಪಿ ಕ್ರೈಸ್ತರನ್ನು ಚುನಾವಣಾ ಅಭ್ಯರ್ಥಿಗಳನ್ನಾಗಿಸಿದೆ, ಮುಸ್ಲಿಮ್ ರಾಜ್ಯಪಾಲರನ್ನು ನೇಮಿಸಿದೆ, ರಾಷ್ಟ್ರೀಯವಾದಿ ಮುಸ್ಲಿಮರತ್ತಲೂ ಹಸ್ತ ಚಾಚಿದೆ.

ಈ ಎಲ್ಲ ಬೆಳವಣಿಗೆಗಳನ್ನು ಕೇರಳವು ವೀಕ್ಷಿಸುತ್ತಿದೆ. ಬಿಜೆಪಿ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗೆಲ್ಲದಿರಬಹುದು, ಆದರೆ ಹಿಂದಿಗಿಂತ ಅದರ ಸೀಟು ಸಂಖ್ಯೆ ಹೆಚ್ಚಿದೆ. ಅದರ ಮತ ಪ್ರಮಾಣ ಹೆಚ್ಚಿದೆ. ಮೂರು ಸ್ಥಾನಗಳನ್ನು ಗೆದ್ದಿರುವ ಬಿಜೆಪಿಯ ಮತ ಪ್ರಮಾಣವು ಶೇ. 11.42ಕ್ಕೇರಿದೆ.

ಕೇರಳದ ತಥಾಕಥಿತ ಜಾತ್ಯತೀತ ಪಕ್ಷಗಳ 'ಸೆಕ್ಯುಲರ್ ಹಿಪಾಕ್ರಸಿ' ಬಹುಕಾಲ ಬಿಜೆಪಿಯ ಬೆಳವಣಿಗೆಯನ್ನು ತಡೆದಿಡಲು ಸಫಲವಾಗದು.



ರೋಮ್‌ಗೆ ಆಗಮಿಸಿದ್ದ ಪ್ರಧಾನಿ ನರೇಂದ್ರ ಮೋದಿ ಜತೆ ಇಟಲಿ ಪ್ರಧಾನಿ ಮೆಲೋನಿ.

ಇಟಲಿ ಸಂಸತ್ತಿನಲ್ಲಿ ಐತಿಹಾಸಿಕ ವಿದ್ಯಮಾನ

ಸನಾತನ ಧರ್ಮ ಸಂಘಕ್ಕೆ ಮಾನ್ಯತೆ

ರೋಮ್: ಪ್ರಧಾನಿ ನರೇಂದ್ರ ಮೋದಿ ತಮ್ಮ ಪಂಚ ರಾಷ್ಟ್ರ ಪ್ರವಾಸದ ಮುಕ್ತಾಯ ಹಂತದಲ್ಲಿ ರೋಮ್‌ಗೆ ಬಂದಿಳಿಯುತ್ತಿದ್ದಂತೆ, ಇಟಲಿ ಸಂಸತ್ತು ಸನಾತನ ಧರ್ಮ ಸಂಘಕ್ಕೆ (ಇಟಲಿಯ ಹಿಂದು ಸಂಘಟನೆ) ವಿಧ್ಯುಕ್ತವಾಗಿ ಅಧಿಕೃತ ಮಾನ್ಯತೆ ನೀಡಿದ ಐತಿಹಾಸಿಕ ವಿದ್ಯಮಾನ ಘಟಿಸಿದೆ.

ಸನಾತನ ಧರ್ಮ ಸಂಘವು ಇಟಲಿಯಲ್ಲಿ ವಾಸವಿರುವ ಎಲ್ಲಾ ಹಿಂದುಗಳನ್ನು ಪ್ರತಿನಿಧಿಸುತ್ತದೆ. ಇಟಲಿಯಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಹಿಂದು ಸಹಿತ ಭಾರತ ಸಂಜಾತ ಸಮುದಾಯಗಳ ಪಾಲಿಗೆ ಇದೊಂದು ಮಹತ್ತ್ವದ ಶಾಸಕಾಂಗ ವಿಜಯವಾಗಿದೆ. ಸನಾತನ ಧರ್ಮ ಸಂಘ ಪರ ಇಟಲಿ ಸಂಸತ್ತಿನಲ್ಲಾದ ಘೋಷಣೆಯು, ಚಾರಿತ್ರಿಕವಾಗಿ ಕ್ಯಾಥೋಲಿಕ್ ಚರ್ಚ್ ಅಧಿಪತ್ಯದಲ್ಲಿರುವ ರಾಷ್ಟ್ರದಲ್ಲಿ ಪ್ರಾಚೀನ ಪೌರ್ವಾತ್ಯ ಆಧ್ಯಾತ್ಮಿಕ ಪರಂಪರೆಗೆ ರಚನಾತ್ಮಕವಾದ ಕಾನೂನು ಸುರಕ್ಷೆಗಳ ಒದಗಿಸುವುದು, ಸಂಘವನ್ನು ಆಡಳಿತಾತ್ಮಕವಾಗಿ ಸಾಂಸ್ಥೀಕರಿಸುವುದು ಮತ್ತು ಸಂಘಕ್ಕೆ ಇಟಲಿ ಸರ್ಕಾರದ ಮಾನ್ಯತೆ ನೀಡಲಿದೆ.

ಮೋದಿ ಭೇಟಿ ವೇಳೆ ಚಾರಿತ್ರಿಕ ವಿದ್ಯಮಾನ: ಇಟಲಿಯ ಭಾರತೀಯ ಸಮುದಾಯವು ಅತ್ಯಂತ ಸಂಭ್ರಮೋಲ್ಲಾಸದೊಂದಿಗೆ ಮತ್ತು ಅತಿ ವೈಭವೋಪೇತವಾಗಿ, ಭಾರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು ರೋಮ್‌ಗೆ ಸ್ವಾಗತಿಸುತ್ತಿದ್ದ ಘಳಿಗೆಯಲ್ಲೇ ಮಂಗಳವಾರ ಸೂರ್ಯಾಸ್ತಕ್ಕೆ ಪ್ರಸ್ತುತ ಐತಿಹಾಸಿಕ ವಿದ್ಯಮಾನ ಘಟಿಸಿದೆ. ಇಟಲಿಯಲ್ಲಿ ಸನಾತನ ಧರ್ಮ ಸಂಘವನ್ನು ಪ್ರತಿನಿಧಿಸುತ್ತಿರುವ ಖ್ಯಾತ ಆಧ್ಯಾತ್ಮಿಕ ಗುರುಗಳಾದ ಸ್ವಾಮಿನಿ ಶುದ್ಧಾನಂದ ಘಿರಿ ಅವರು, ಪ್ರಧಾನಿ ಮೋದಿ ತಂಗಿದ ಹೊಟೇಲ್‌ಗೆ ತೆರಳಿ, ಇಟಲಿ ಸಂಸತ್ತಿನ ಮಹತ್ತ್ವದ ಘೋಷಣೆಯನ್ನು ಪ್ರಧಾನಿಗೆ ಅರುಹಿ, ಸನಾತನ ಸಮುದಾಯದ ತುಂಬು ಕೃತಜ್ಞತೆಯನ್ನು ಅವರಿಗೆ ಸಲ್ಲಿಸಿದರು.

ಮೋದಿ ಪ್ರೋತ್ಸಾಹಕ್ಕೆ ಆಭಾರಿ: ದ್ವಿತೀಯ ಬಾರಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ಸಂವಾದ ನಡೆಸಿದ್ದೇನೆ, ತುಂಬು ಖುಷಿಯಾಯಿತು. ಈ ಹಿಂದೆ 2021ರಲ್ಲಿ ಪ್ರಧಾನಿ ಮೋದಿ ಅವರನ್ನು ಭೇಟಿಯಾಗುವ ಅವಕಾಶ ಸಿಕ್ಕಿತ್ತು ಎಂದು ಸ್ವಾಮಿನಿ ಶುದ್ಧಾನಂದ ಘಿರಿ ಸುದ್ದಿಗಾರರಲ್ಲಿ ಸಂತಸ ಹಂಚಿಕೊಂಡಿದ್ದಾರೆ.

ಪ್ರಧಾನಿ ಮೋದಿಯವರು ನಮ್ಮ ಆಧ್ಯಾತ್ಮಿಕ ಮಿಷನ್‌ಗೆ ನಿರಂತರವಾಗಿ ಪ್ರೋತ್ಸಾಹವಿತ್ತು ಪೋಷಿಸುತ್ತಿದ್ದಾರೆ. ಇದೀಗ ಇಟಲಿ ಸಂಸತ್ತು ಸನಾತನ ಧರ್ಮ ಸಂಘಕ್ಕೆ ಅಧಿಕೃತ ಧರ್ಮದ ಮಾನ್ಯತೆ ನೀಡಿದೆ ಎಂದವರು ಆನಂದ ವ್ಯಕ್ತಪಡಿಸಿದರು.

ರೋಮ್‌ನಲ್ಲಿ ಕಾಶಿಯ ಝಲಕ್: ಸುಮಾರು ನಾಲ್ಕು ದಶಕಗಳಿಂದ ವೇದಿಕ್ ಸಂಸ್ಕೃತಿ ಅಥವಾ ವೇದಾಭ್ಯಾಸದಲ್ಲಿ ನಿರತ ಚಿತ್ರಕಲಾವಿದ ಜಿಯಾಂಪೌಲೊ ತೊಮಸೆಟ್ಟಿ ಅವರು ಸ್ವಯಂ ಪೈಂಟ್ ಮಾಡಿದ, ವಾರಾಣಸಿಯ ಪ್ರಸಿದ್ಧ ಆಧ್ಯಾತ್ಮಿಕ ಘಾಟ್‌ಗಳ ಪೈಂಟಿಂಗ್‌ನ್ನು ಮೋದಿ ಅವರಿಗೆ ಸಮರ್ಪಿಸಿದರು.

ವೇದಮಂತ್ರ ಘೋಷ, ರಾಗತಾಳ ಮಧ್ಯೆ ಸ್ವಾಗತ

ಪ್ರಧಾನಿ ಮೋದಿ ಅವರನ್ನು ಮಾಮೂಲಾಗಿ ಅಧಿಕೃತವಾಗಿ ಸ್ವಾಗತಿಸುವ ಬದಲು ವೇದಮಂತ್ರ ಪಠಣ, ರಾಗ-ತಾಳಗಳ ಮುಖೇನ ಭಾರತೀಯ ಸಂಪ್ರದಾಯದಲ್ಲೇ ಸ್ವಾಗತಿಸಿದ್ದು, ಭಾರತ-ಇಟಲಿ ನಡುವಣ ಬಾಂಧವ್ಯದ ಗಹನತೆಯನ್ನು ಪ್ರತಿಫಲಿಸಿತು. ಭಾರತದ ಸಾಂಸ್ಕೃತಿಕ ಪರಂಪರೆಗಳು ಇಟಲಿ ಮೇಲೆ ಪರಿಣಾಮ ಬೀರಿರುವುದು, ತನ್ಮೂಲಕ ಉಭಯ ರಾಷ್ಟ್ರಗಳ ನಡುವಣ ಕಲಾತ್ಮಕ ವಿನಿಮಯಗಳನ್ನು ಸಾಂಕೇತಿಸಿದವು. ಇಟಲಿಯ ಶಾಸ್ತ್ರೀಯ ಸಂಗೀತ ಕಲಾವಿದರ ತಂಡವೊಂದು ಭಾರತದ ಹಂಸಧ್ವನಿ ರಾಗಕ್ಕೆ ಅನುಗುಣವಾಗಿ ಪಾಶ್ಚಿಮಾತ್ಯ ಸಂಗೀತವಾದ್ಯ ನುಡಿಸಿದ್ದು ವಿಶೇಷವಾಗಿ ಗಮನ ಸೆಳೆಯಿತು ಮತ್ತು ಸಮಸ್ತರ ಮನಸೂರೆಗೊಂಡಿತು.



ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಮ್ಮ ದಕ್ಷಿಣ ಕೊರಿಯಾದ ಸಹವರ್ತಿ ಅಹ್ ಗ್ಯು-ಬ್ಯಾಕ್ ಅವರೊಂದಿಗೆ ಉನ್ನತ ಮಟ್ಟದ ಮಾತುಕತೆ ನಡೆಸಲು ಸಿಯೋಲ್‌ಗೆ ಭೇಟಿ ನೀಡಿದ್ದು, ಇತ್ತೀಚಿನ ಪ್ರಮುಖ ಬೆಳವಣಿಗೆಗಳೊಂದಿಗೆ ಉಭಯ ದೇಶಗಳ ನಡುವಿನ ಕಾರ್ಯತಂತ್ರದ ರಕ್ಷಣಾ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು ಮುಂದಾಗಿದ್ದಾರೆ.

ಭಾರತ-ದ.ಕೊರಿಯಾ ರಕ್ಷಣಾ ಸಹಕಾರ ವೃದ್ಧಿ

ತನ್ನ ಸಹವರ್ತಿ ಅಹ್ ಗ್ಯು-ಬ್ಯಾಕ್ ಜತೆ ರಾಜನಾಥ್ ದ್ವಿಪಕ್ಷೀಯ ಮಾತುಕತೆ

ರಕ್ಷಣಾ ಕಾರ್ಯಕ್ರಮಗಳು

ಉಭಯ ದೇಶಗಳ ಪ್ರಸ್ತುತ ರಕ್ಷಣಾ ಸಹಕಾರದಲ್ಲಿ ಮೇಕ್ ಇನ್ ಇಂಡಿಯಾ ಯೋಜನೆಯಲ್ಲಿ ಬರುವ ಕೆ9 ವಜ್ರ-ಟಿ ಫಿರಂಗಿ ಕಾರ್ಯಕ್ರಮ ಅತ್ಯಂತ ಪ್ರಮುಖ ಕೇಂದ್ರಬಿಂದುವಾಗಿದೆ. ಲಾರ್ಸೆನ್ ಆ್ಯಂಡ್ ಟೂಬ್ರೊ (ಎಲ್ ಆ್ಯಂಡ್ ಟಿ) ಸಂಸ್ಥೆಯಿಂದ ಭಾರತದಲ್ಲಿ ಉತ್ಪಾದನೆಗೊಳ್ಳುವ ಈ ಕೆ9 ವಜ್ರವನ್ನು, ದಕ್ಷಿಣ ಕೊರಿಯಾದ ಹನ್ವಾ ಏರೋಸ್ಪೇಸ್ ಸಂಸ್ಥೆ ತನ್ನ ಕೆ9 ಥಂಡರ್ ಪ್ಲಾಟ್‌ಫಾರ್ಮ್ ಆಧಾರದ ಮೇಲೆ ಅಭಿವೃದ್ಧಿಪಡಿಸಿದೆ. ಆರಂಭದಲ್ಲಿ ಈ ಫಿರಂಗಿಯ ಶೇ.50 ರಷ್ಟು ಬಿಡಿಭಾಗಗಳನ್ನು ಭಾರತದಲ್ಲೇ ತಯಾರಿಸಲಾಗುತ್ತಿತ್ತು, ಪ್ರಸ್ತುತ ಇದು ಶೇ.60ಕ್ಕೆ ಏರಿಕೆಯಾಗಿದೆ. ಭಾರತ ಮೊದಲು 2017ರಲ್ಲಿ 4,500 ಕೋಟಿ ರೂ. ವೆಚ್ಚದಲ್ಲಿ 100 ಕೆ9 ವಜ್ರ ಫಿರಂಗಿಗಳಿಗೆ ಆದೇಶ ನೀಡಿತ್ತು. ಇವುಗಳನ್ನು ಮರುಭೂಮಿ ಪ್ರದೇಶಕ್ಕಾಗಿ ವಿನ್ಯಾಸಗೊಳಿಸಲಾಗಿದ್ದರೂ, ಭಾರತ-ಚೀನಾ ಗಡಿ ಬಿಕ್ಕಟ್ಟಿನ ಸಂದರ್ಭದಲ್ಲಿ ಲಡಾಖ್‌ನಂತಹ ಎತ್ತರದ ಪ್ರದೇಶಗಳಲ್ಲಿ ಯಶಸ್ವಿಯಾಗಿ ನಿಯೋಜಿಸಲಾಯಿತು. ಈ ಯಶಸ್ಸಿನ ನಂತರ, ಭಾರತ, 7,628.7 ಕೋಟಿ ರೂ. ವೆಚ್ಚದಲ್ಲಿ ಮತ್ತೆ 100 ಕೆ9 ವಜ್ರ ಫಿರಂಗಿಗಳಿಗೆ ಆದೇಶ ನೀಡಿದ್ದು, ಪ್ರಸ್ತುತ ಉಭಯ ದೇಶಗಳು ರಕ್ಷಣಾ ಕ್ಷೇತ್ರದಲ್ಲಿ ಹೆಚ್ಚಿನ ತಂತ್ರಜ್ಞಾನ ವರ್ಗಾವಣೆಗೆ ಮುಂದಾಗುತ್ತಿವೆ.

ಪ್ರಸ್ತುತ ರಾಜತಾಂತ್ರಿಕ ಬೆಳವಣಿಗೆಗಳು

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಸಿಯೋಲ್ ಭೇಟಿ, ದಕ್ಷಿಣ ಕೊರಿಯಾದ ಅಧ್ಯಕ್ಷ ಲೀ ಜೇ ಮ್ಯುಂಗ್ ಕಳೆದ ಏಪ್ರಿಲ್‌ನಲ್ಲಿ ಹೊಸದಿಲ್ಲಿಗೆ ನೀಡಿದ ಭೇಟಿಯ ಬೆನ್ನಲ್ಲೇ ನಡೆದಿದೆ.



ಅದು ಕಳೆದ ಸುಮಾರು ಒಂದು ದಶಕದಲ್ಲಿ ದಕ್ಷಿಣ ಕೊರಿಯಾದ ಅಧ್ಯಕ್ಷರು ಭಾರತಕ್ಕೆ ನೀಡಿದ ಮೊದಲ ಅಧಿಕೃತ ಭೇಟಿಯಾಗಿತ್ತು. ಪ್ರಸ್ತುತ ಪ್ರವಾಸದಲ್ಲಿ ರಾಜನಾಥ್ ಸಿಂಗ್, ರಕ್ಷಣಾ ಸ್ವಾಧೀನ ಕಾರ್ಯಕ್ರಮ ಆಡಳಿತದ (ಡಿಎಪಿಎ) ಸಚಿವ ಲೀ ಯೋಂಗ್-ಚಿಯೋಲ್ ಅವರನ್ನು ಭೇಟಿಯಾಗಲಿದ್ದು, ಭಾರತ-ಕೊರಿಯಾ ದುಂಡುಮೇಜಿನ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಬುಧವಾರ ಅವರು ದಕ್ಷಿಣ ಕೊರಿಯಾದ ದೇಶಭಕ್ತರು ಮತ್ತು ಮಾಜಿ ಸೇನಾನಿಗಳ ವ್ಯವಹಾರಗಳ ಸಚಿವ ಕ್ವಾನ್ ಓಹ್-ಯುಲ್ ಅವರೊಂದಿಗೆ ಜಂಟಿಯಾಗಿ ಭಾರತೀಯ ಯುದ್ಧ ಸ್ಮಾರಕವನ್ನು ಉದ್ಘಾಟಿಸಲಿದ್ದಾರೆ.

ಐತಿಹಾಸಿಕ ರಕ್ಷಣಾ ಸಂಬಂಧಗಳ ಹಿನ್ನೆಲೆ

ಭಾರತ ಮತ್ತು ದಕ್ಷಿಣ ಕೊರಿಯಾ ನಡುವೆ 1962ರಲ್ಲಿ ಕೌನ್ಸಿಲರ್ ಸಂಬಂಧಗಳು ಮತ್ತು 1973ರಲ್ಲಿ ರಾಜತಾಂತ್ರಿಕ ಸಂಬಂಧಗಳು ಚಾಲನೆ ಪಡೆದಿದ್ದವು. ಬಳಿಕ 2010ರಲ್ಲಿ ಕಾರ್ಯತಂತ್ರದ ಪಾಲುದಾರಿಕೆ ಏರ್ಪಟ್ಟಿತು. ನಂತರ 2015ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಸಿಯೋಲ್ ಭೇಟಿಯ ಸಂದರ್ಭದಲ್ಲಿ ಇದನ್ನು ವಿಶೇಷ ಕಾರ್ಯತಂತ್ರದ ಪಾಲುದಾರಿಕೆ'ಗೆ ವಿಸ್ತರಿಸಲಾಯಿತು. ಅಂದಿನಿಂದ ರಕ್ಷಣಾ ಸಚಿವರುಗಳು ನಿಯಮಿತವಾಗಿ ಭೇಟಿಯಾಗುತ್ತಿದ್ದು, ವಾರ್ಷಿಕವಾಗಿ ಮೂರೂ ಸಶಸ್ತ್ರ ಪಡೆಗಳ ಮಟ್ಟದ ಮಾತುಕತೆಗಳು ನಡೆಯುತ್ತಿವೆ.

ಭವಿಷ್ಯದ ಹೈ-ಟೆಕ್ ಯೋಜನೆಗಳು

ಕೆ9 ವಜ್ರ ಕಾರ್ಯಕ್ರಮದ ಯಶಸ್ಸಿನ ಹಿನ್ನೆಲೆಯಲ್ಲಿ, ಪ್ರಸ್ತಾವಿತ ಕೈಂಡ್-ಎಕ್ಸ್ ರಕ್ಷಣಾ ಯೋಜನೆಯತ್ತ ಉಭಯ ದೇಶಗಳು ಗಮನಹರಿಸಿವೆ. ಈ ಯೋಜನೆ, ಸ್ವಾಯತ್ತ ಶಸ್ತ್ರಾಸ್ತ್ರಗಳು, ಕೃತಕ ಬುದ್ಧಿಮತ್ತೆ ಆಧಾರಿತ ಮಿಲಿಟರಿ ತಂತ್ರಜ್ಞಾನ, ಮುಂದಿನ ಪೀಳಿಗೆಯ ಕ್ಷಿಪಣಿ ರಕ್ಷಣೆ ಮತ್ತು ಸೈಬರ್ ಭದ್ರತೆ ಸೇರಿದಂತೆ ಹೈ-ಟೆಕ್ ವ್ಯವಸ್ಥೆಗಳನ್ನು ಜಂಟಿಯಾಗಿ ವಿನ್ಯಾಸಗೊಳಿಸುವ ಮತ್ತು ಅಭಿವೃದ್ಧಿಪಡಿಸುವ ಗುರಿ ಹೊಂದಿದೆ. ಇದರೊಂದಿಗೆ, ಹನ್ವಾ ಡಿಫೆನ್ಸ್ ಸಂಸ್ಥೆಯ ಕೆ30 ಬಿಹೋ ಸ್ವಯಂ-ಚಾಲಿತ ವಿಮಾನ ವಿರೋಧಿ ವ್ಯವಸ್ಥೆಯ ಮೇಲೆಯೂ ಭಾರತ ಕಣ್ಣಿಟ್ಟಿದೆ. ಗುಡ್ಡಗಾಡು ಮತ್ತು ಎತ್ತರದ ಪ್ರದೇಶಗಳ ಕಾರ್ಯಾಚರಣೆಗಾಗಿ ಈ ಲಘು ಟ್ಯಾಂಕ್ ಪ್ಲಾಟ್‌ಫಾರ್ಮ್ ಅನ್ನು ಅಭಿವೃದ್ಧಿಪಡಿಸಲು ಹನ್ವಾ ಸಂಸ್ಥೆ, ಲಾರ್ಸೆನ್ ಆ್ಯಂಡ್ ಟೂಬ್ರೊ ಜತೆ ಸೇರಿ ಕಾರ್ಯನಿರ್ವಹಿಸುವ ಪ್ರಸ್ತಾಪವಿದೆ. ಸಿಯೋಲ್ ಹೊಂದಿರುವ ಸಾಂಪ್ರದಾಯಿಕ ಜಲಾಂತರ್ಗಾಮಿ ತಂತ್ರಜ್ಞಾನ, ಲಿಥಿಯಂ-ಐಯಾನ್ ಬ್ಯಾಟರಿ ವ್ಯವಸ್ಥೆಗಳು ಮತ್ತು ವಾಯು-ಸ್ವತಂತ್ರ ಪ್ರೊಪಲ್ಷನ್ ತಂತ್ರಜ್ಞಾನಗಳ ಪರಿಣತಿ ಜಲಾಂತರ್ಗಾಮಿ ಕ್ಷೇತ್ರದಲ್ಲಿ ಸಹಕಾರಕ್ಕೆ ದಾರಿ ಮಾಡಿಕೊಟ್ಟಿದೆ. ದಕ್ಷಿಣ ಕೊರಿಯಾದ ಮುನ್ನಡೆ ಸಾಧಿಸಿರುವ ಕೆಎಫ್-21 ಫೈಟರ್ ಪ್ರೋಗ್ರಾಂ ಮತ್ತು ಎಫ್‌ಎ-50 ಲಘು ಯುದ್ಧ ವಿಮಾನಗಳು, ವಾಯು ರಕ್ಷಣಾ ವಲಯದಲ್ಲಿ ಭಾರತಕ್ಕೆ ಜಂಟಿ ಪಾಲುದಾರಿಕೆಯ ಹೊಸ ಅವಕಾಶ ಒದಗಿಸಿವೆ.

ದ್ವಿಪಕ್ಷೀಯ ವ್ಯಾಪಾರ ಮತ್ತು ಆರ್ಥಿಕ ಗುರಿಗಳು

ಕಳೆದ ಏಪ್ರಿಲ್‌ನಲ್ಲಿ ದಕ್ಷಿಣ ಕೊರಿಯಾದ ಅಧ್ಯಕ್ಷ ಲೀ ಅವರ ಭಾರತ ಭೇಟಿಯ ಸಂದರ್ಭದಲ್ಲಿ, ಜಂಟಿ ಬೆಳವಣಿಗೆಗೆ ಹೊಸ ಆರ್ಥಿಕ ಸಹಕಾರದ ಚೌಕಟ್ಟನ್ನು ನವೀಕರಿಸಲು ನಿರ್ಧರಿಸಲಾಯಿತು. ಈ ವೇಳೆ ಅವರೊಂದಿಗೆ ಸುಮಾರು ದಕ್ಷಿಣ ಕೊರಿಯಾದ 200 ಉದ್ಯಮಿಗಳ ನಿಯೋಗ ಆಗಮಿಸಿತ್ತು. ಭಾರತ ಮತ್ತು ದಕ್ಷಿಣ ಕೊರಿಯಾ ಪ್ರಸ್ತುತ ಇರುವ 27 ಬಿಲಿಯನ್ ಡಾಲರ್ (2.61 ಲಕ್ಷ ಕೋಟಿ ರೂ.) ದ್ವಿಪಕ್ಷೀಯ ವ್ಯಾಪಾರವನ್ನು 2030ರ ವೇಳೆಗೆ 54 ಬಿಲಿಯನ್ ಡಾಲರ್‌ಗೆ (5.23 ಲಕ್ಷ ಕೋಟಿ ರೂ.) ದ್ವಿಗುಣಗೊಳಿಸುವ ಗುರಿಯನ್ನು ಘೋಷಿಸಿವೆ. ಭಾರತ, ಖನಿಜ ಇಂಧನಗಳು, ತೈಲ ಭಟ್ಟಿ ಇಳಿಸುವಿಕೆಗಳು (ಮುಖ್ಯವಾಗಿ ನಾಫ್ತಾ), ಧಾನ್ಯಗಳು, ಕಬ್ಬಿಣ ಮತ್ತು ಉಕ್ಕನ್ನು ಸಿಯೋಲ್‌ಗೆ ರಫ್ತು ಮಾಡುತ್ತದೆ. ಪ್ರತಿಯಾಗಿ ದಕ್ಷಿಣ ಕೊರಿಯಾ, ಆಟೋಮೊಬೈಲ್ ಬಿಡಿಭಾಗಗಳು, ದೂರಸಂಪರ್ಕ ಉಪಕರಣಗಳು, ಹಾಟ್-ರೋಲ್ಡ್ ಕಬ್ಬಿಣದ ಉತ್ಪನ್ನಗಳು, ಸಂಸ್ಕರಿಸಿದ ಪೆಟ್ರೋಲಿಯಂ ಉತ್ಪನ್ನಗಳು, ಮೂಲ ಲೂಬ್ರಿಕೇಟಿಂಗ್ ಆಯಿಲ್ಸ್, ಯಾಂತ್ರಿಕ ಉಪಕರಣಗಳು ಮತ್ತು ಎಲೆಕ್ಟ್ರಿಕಲ್ ಯಂತ್ರೋಪಕರಣಗಳನ್ನು ಭಾರತಕ್ಕೆ ಕಳುಹಿಸುತ್ತದೆ.

ಕಿರುಸುದ್ದಿ

ವಿವಾದಿತ ಸಿಲ್ವರ್ ಲೈನ್ ಯೋಜನೆಗೆ ತಡೆ: ಸಿಎಂ

ತಿರುವನಂತಪುರಂ: ಕೇರಳದಲ್ಲಿ ಹಿಂದಿನ ಎಲ್‌ಡಿಎಫ್ ಸರ್ಕಾರದ ವಿವಾದಿತ ಪ್ರಮುಖ ಮೂಲಸೌಕರ್ಯ ಯೋಜನೆಯನ್ನು ನೂತನ ಸರ್ಕಾರ ಕೊನೆಗೊಳಿಸಿದ್ದು, ವಿವಾದಾತ್ಮಕ ಸಿಲ್ವರ್ ಲೈನ್ ಸೆಮಿ ಹೈಸ್ಪೀಡ್ ರೈಲು ಯೋಜನೆಯನ್ನು ತಮ್ಮ ಸರ್ಕಾರ ರದ್ದುಗೊಳಿಸಿದೆ ಎಂದು ಕೇರಳ ಮುಖ್ಯಮಂತ್ರಿ ವಿ. ಡಿ. ಸತೀಶನ್ ಬುಧವಾರ ಘೋಷಿಸಿದ್ದಾರೆ. ಭೂಸ್ವಾಧೀನ, ಪರಿಸರ ಕಾಳಜಿ ಮತ್ತು ಸ್ಥಳಾಂತರದ ಮೇಲಿನ ಪ್ರತಿಭಟನೆಗಳು ರಾಜ್ಯದಾದ್ಯಂತ ಸಾರ್ವಜನಿಕ ಆಕ್ರೋಶವನ್ನು ಹೆಚ್ಚಿಸಿದವು.

59 ವರ್ಷಗಳ ನಂತರ ಸಂಪುಟಕ್ಕೆ ಕೈ ಸೇರ್ಪಡೆ

ಹೊಸದಿಲ್ಲಿ: 59 ವರ್ಷಗಳ ನಂತರ ಕಾಂಗ್ರೆಸ್ ತಮಿಳುನಾಡು ಸಚಿವ ಸಂಪುಟದ ಭಾಗವಾಗಲಿದೆ. ಕಾಂಗ್ರೆಸ್‌ನ ಇಬ್ಬರು ಶಾಸಕರಾದ ರಾಜೇಶ್ ಕುಮಾರ್ ಮತ್ತು ಪಿ ವಿಶ್ವನಾಥನ್ ಅವರು ಗುರುವಾರ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಹೆಣ್ಣುಮಕ್ಕಳನ್ನ ದಂಧೆಗೆ ತಳ್ಳುವ ಕಳ್ಳಸಾಗಣೆ ಜಾಲ

ಕೊಚ್ಚಿ: ಕೇರಳದಿಂದ ಹೆಣ್ಣುಮಕ್ಕಳನ್ನು ಮಾಡೆಲಿಂಗ್, ಬ್ಯೂಟಿಷಿಯನ್, ಫ್ಯಾಷನ್ ಇಂಡಸ್ಟ್ರಿ ಅವಕಾಶಗಳನ್ನು ಒದಗಿಸುವ ಭರವಸೆ ನೀಡಿ ದುಬೈಗೆ ಕಳುಹಿಸಿ ಬಳಿಕ ಅವರನ್ನು ಬ್ಲ್ಯಾಕ್‌ಮೇಲ್‌ಗೊಳಪಡಿಸಿ ಅನೈತಿಕ ಚಾಲಕ್ಕೆ ತಳ್ಳಿ ಶೋಷಿಸುವ ಬೃಹತ್ ಅಂತಾರಾಷ್ಟ್ರೀಯ ಮಾನವ ಕಳ್ಳಸಾಗಣೆ ಜಾಲವೊಂದನ್ನು ಕೊಚ್ಚಿ ನಗರ ಪೊಲೀಸರು ಬಯಲಿಗೆಳೆದಿದ್ದಾರೆ.

ಈ ಜಾಲಕ್ಕೆ ಸಿಲುಕಿದ ಇಬ್ಬರು ಸಂತ್ರಸ್ತ ಹೆಣ್ಣುಮಕ್ಕಳು ಹೇಗೋ ಪಾರಾಗಿ ಕೇರಳಕ್ಕೆ ಮರಳಿ, ಈ ಕರಾಳದ ಜಾಲದ ಕುಕೃತ್ಯಗಳ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ ಬಳಿಕ ಜಾಲದ ಮೂವರು ಪ್ರಮುಖ ಆರೋಪಿಗಳನ್ನು ಬಂಧಿಸಲಾಗಿದೆ.

ಇವರೆಲ್ಲರೂ ಮಹಿಳೆಯರೇ ಆಗಿದ್ದು, ಹೆಣ್ಣುಮಕ್ಕಳಿಗೆ ವಿದೇಶಗಳಲ್ಲಿ ಕೆಲಸದ ಆಮಿಷ ತೋರಿಸಿ ಬಳಿಕ ತಮ್ಮ ವಂಚನಾಜಾಲಕ್ಕೆ ಸಿಲುಕಿಸಿ ಮಾದಕದ್ರವ್ಯ ಸೇವನೆ, ದೈಹಿಕ ಹಿಂಸೆ, ಅಕ್ರಮ ಬಂಧನ, ವ್ಯವಸ್ಥಿತ ಲೈಂಗಿಕ ದೌರ್ಜನ್ಯಗಳನ್ನು ನಡೆಸಲಾಗುತ್ತಿದ್ದ ಬಗ್ಗೆ ಈ ಹೆಣ್ಣುಮಕ್ಕಳು ಬಹಿರಂಗಪಡಿಸಿದ್ದರು.

ಈ ಜಾಲದ ವ್ಯಾಪಕತೆ ಮತ್ತು ಪ್ರಕರಣದ ಗಂಭೀರತೆಯ ಹಿನ್ನೆಲೆಯಲ್ಲಿ ಕೊಚ್ಚಿ ಪೊಲೀಸರು, ಈ ದುಷ್ಟ ಜಾಲದ ಹಿನ್ನೆಲೆ, ವಿದೇಶಿ ಸಂಪರ್ಕಗಳ ಬಗ್ಗೆ ತನಿಖೆ ನಡೆಸಲು ಉಪಪೊಲೀಸ್ ಆಯುಕ್ತ (ಡಿಸಿಪಿ) ಅಶ್ವತಿ ಜಿಜಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವೊಂದನ್ನು (ಎಸ್‌ಐಟಿ) ರಚಿಸಿದ್ದಾರೆ. ಮಾರಾಡುನಲ್ಲಿನ ಫ್ಲ್ಯಾಟ್ ಒಂದರ ಮೂಲಕ ಈ ಮಾನವ ಕಳ್ಳಸಾಗಣೆ ಜಾಲ ಕಾರ್ಯಾಚರಿಸುತ್ತಿತ್ತು. ಆರೋಪಿಗಳನ್ನು ಟಾಯ್ಸಿ, ತಿರುವನಂತಪುರಂನ ಪೊಂಗುಮಿಲಾದ ಮಾಡೆಲ್ ಅಲೀನಾ ಅಬ್ರಹಾಂ, ಪೊನ್ನಾಣಿಯ ಮಂಜಿಮಾ ಎಂದು ಗುರುತಿಸಲಾಗಿದೆ.

ಮೋದಿ ವಿರುದ್ಧ ರಾಗಾ ಹೇಳಿಕೆಗೆ ಬಿಜೆಪಿ ಕಿಡಿ

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಅವರನ್ನು ದೇಶದ್ರೋಹಿ ಎಂದು ಕರೆಯುವ ಮೂಲಕ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅರಾಜಕ ಮನೋಭಾವವನ್ನು ಪ್ರದರ್ಶಿಸಿದ್ದಾರೆ ಎಂದು ಬಿಜೆಪಿ ತೀವ್ರ ವಾಗ್ದಾಳಿ ನಡೆಸಿದೆ.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಅವರು, ರಾಹುಲ್ ಗಾಂಧಿಯವರ ಹೇಳಿಕೆ 140 ಕೋಟಿ ಭಾರತೀಯರಿಗೆ ಮಾಡಿದ ಅವಮಾನವಾಗಿದೆ. ಈ ಕುರಿತು ಅವರು ದೇಶದ ಜನರ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.

ರಾಯಬರೇಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಹುಲ್ ಗಾಂಧಿ, ಪ್ರಧಾನಿ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ತೀವ್ರ ವಾಗ್ದಾಳಿ ನಡೆಸಿ ದೇಶದ್ರೋಹಿಗಳು ಎಂದು ಹೇಳಿಕೆ ನೀಡಿದ್ದರು. ಇದಕ್ಕೆ ತಿರುಗೇಟು ನೀಡಿದ ಬಿಜೆಪಿ, ಕಾಂಗ್ರೆಸ್ ನಾಯಕನ ಮಾತುಗಳು ನಿರಾಶೆ ಹಾಗೂ ಚುನಾವಣಾ ಸೋಲಿನ ಹತಾಶೆಯಿಂದ ಬಂದಿವೆ ಎಂದು ಟೀಕಿಸಿತು.

ಭಯೋತ್ಪಾದನೆಯನ್ನು ನಿಯಂತ್ರಿಸಿದ, ನಕ್ಸಲ್‌ವಾದವನ್ನು ಕೊನೆಗಾಣಿಸಲು ಕ್ರಮ ಕೈಗೊಂಡ, ತ್ರಿವರ್ಣ ಧ್ವಜದ ಗೌರವವನ್ನು ಹೆಚ್ಚಿಸಿದ ವ್ಯಕ್ತಿಯ ಬಗ್ಗೆ ಇಂತಹ ಪದಗಳನ್ನು ಬಳಸುವುದು ದುಃಖಕರ ಎಂದು ನವೀನ್ ಹೇಳಿದರು. ಇದೇ ವೇಳೆ ರಾಹುಲ್ ಗಾಂಧಿಯನ್ನು ಭಾರತೀಯ ರಾಜಕೀಯದ ರಾಹು ಎಂದು ವ್ಯಂಗ್ಯವಾಡಿದರು.

ಇನ್ನೊಂದೆಡೆ ಬಿಜೆಪಿ ವಕ್ತಾರ ಪ್ರದೀಪ್ ಭಂಡಾರಿ, ರಾಹುಲ್ ಗಾಂಧಿಯವರ ಹೇಳಿಕೆ ಅರ್ಬನ್ ನಕ್ಸಲ್ ಮನೋಭಾವವನ್ನು ಪ್ರತಿಬಿಂಬಿಸುತ್ತದೆ ಎಂದು ಆರೋಪಿಸಿದರು.

ನಾರ್ವೆ ಪ್ರತಿಕೆಯಲ್ಲಿ ಪ್ರಧಾನಿಗೆ ಅವಮಾನ

ಹೊಸದಿಲ್ಲಿ: ನಾರ್ವೆಯ ಪ್ರಮುಖ ಪತ್ರಿಕೆ ಆಫ್ಟನ್ ಪೋಸ್ಟನ್ ಪ್ರಧಾನಿ ನರೇಂದ್ರ ಮೋದಿ ಅವರನ್ನು ಹಾವಾಡಿಗನಂತೆ ಚಿತ್ರಿಸಿದ ವ್ಯಂಗ್ಯಚಿತ್ರ ಪ್ರಕಟಿಸಿರುವುದು ಭಾರೀ ವಿವಾದಕ್ಕೆ ಕಾರಣವಾಗಿದೆ. ಮೋದಿ ಅವರು ಓಸ್ಲೋ ಭೇಟಿ ನೀಡುವ ಮುನ್ನ ಪ್ರಕಟವಾದ ಈ ಕಾರ್ಟೂನ್‌ನಲ್ಲಿ, ಹಾವಿನ ಬದಲು ಪೆಟ್ರೋಲ್ ಪೈಪ್ ನಿಯಂತ್ರಿಸುತ್ತಿರುವಂತೆ ಚಿತ್ರಿಸಲಾಗಿತ್ತು. ಜೊತೆಗೆ "A clever and slightly annoying man" ಎಂಬ ಶೀರ್ಷಿಕೆಯೂ ನೀಡಲಾಗಿತ್ತು. ಈ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದ್ದಂತೆ ಅನೇಕ ಭಾರತೀಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪಾಶ್ಚಿಮಾತ್ಯ ಮಾಧ್ಯಮಗಳು ಇನ್ನೂ ಭಾರತವನ್ನು ಹಳೆಯ ವಸಾಹತುಶಾಹಿ ದೃಷ್ಟಿಕೋಣದಿಂದಲೇ ನೋಡುತ್ತಿವೆ ಎಂದು ನೆಟ್ಟಿಗರು ಟೀಕಿಸಿದ್ದಾರೆ. ಇದೇ ವೇಳೆ, ನಾರ್ವೆ ಭೇಟಿಯ ಸಂದರ್ಭ ಪತ್ರಿಕಾ ಸ್ವಾತಂತ್ರ್ಯ ಮತ್ತು ಮಾನವ ಹಕ್ಕುಗಳ ಕುರಿತು ಕೇಳಲಾದ ಪ್ರಶ್ನೆಗಳೂ ಚರ್ಚೆಗೆ ಕಾರಣವಾದವು.

ಈ ಕುರಿತು ಪ್ರತಿಕ್ರಿಯಿಸಿದ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ಸಿ.ಬಿ.ಜಾರ್ಜ್, ಭಾರತವು ಬಲಿಷ್ಠ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಇಲ್ಲಿ ಮಾಧ್ಯಮ ಸ್ವಾತಂತ್ರ್ಯಕ್ಕೆ ಸಂಪೂರ್ಣ ಅವಕಾಶವಿದೆ ಎಂದು ಸ್ಪಷ್ಟಪಡಿಸಿದರು.

ಭಾರತದ ಪ್ರಮಾಣ, ವೈವಿಧ್ಯತೆ ಹಾಗೂ ಪ್ರಜಾಪ್ರಭುತ್ವದ ಬಲದ ಬಗ್ಗೆ ಹಲವರಿಗೆ ಸಮರ್ಪಕ ಅರಿವಿಲ್ಲ. ದಿಲ್ಲಿಯಲ್ಲಿ ನೂರಾರು ಟಿವಿ ಚಾನೆಲ್‌ಗಳು ಕಾರ್ಯನಿರ್ವಹಿಸುತ್ತಿವೆ. ಕೆಲ ಎನ್‌ಜಿಒ ವರದಿಗಳನ್ನು ಓದಿ ಭಾರತ ಕುರಿತು ತೀರ್ಮಾನಿಸುವುದು ಸರಿಯಲ್ಲ ಎಂದು ಹೇಳಿದ್ದಾರೆ.

ಉ. ಭಾರತದಲ್ಲಿ ಬಿಸಿಗಾಳಿ ಅಬ್ಬರ


ಹೊಸದಿಲ್ಲಿ: ಉತ್ತರ ಭಾರತದ ಬಾಂದಾ ಜಿಲ್ಲೆಯಲ್ಲಿ ಬುಧವಾರ 48 ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶ ದಾಖಲಾಗಿದ್ದು, ಇದು ಸಾಮಾನ್ಯಕ್ಕಿಂತ 4.5 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದ್ದು, ಭಾರೀ ಆತಂಕಕ್ಕೀಡು ಮಾಡಿದೆ. ದಿಲ್ಲಿಯ ರಿಡ್ಜ್ ಬೇಸ್ ಸ್ಟೇಷನ್ 45.8 ಡಿಗ್ರಿ ಗರಿಷ್ಠ ತಾಪಮಾನವನ್ನು ದಾಖಲಿಸಿದ್ದು, ಇದು ರಾಷ್ಟ್ರ ರಾಜಧಾನಿಯ ಅತ್ಯಂತ ಬಿಸಿಯಾದ ಸ್ಥಳವಾಗಿ ಹೊರಹೊಮ್ಮಿದೆ. ಆಯಾನಗರ್, ಪಾಲಮ್ ಮತ್ತು ಲೋಧಿ ರಸ್ತೆಯಲ್ಲಿ ಕ್ರಮವಾಗಿ 45 ಡಿಗ್ರಿ, 44.9 ಡಿಗ್ರಿ ಮತ್ತು 44.6 ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶ ದಾಖಲಾಗಿದೆ. ಪ್ರಾದೇಶಿಕ ಹವಾಮಾನ ಇಲಾಖೆಯು ಮುಂದಿನ ವಾರ ಹಲವಾರು ಸ್ಥಳಗಳಲ್ಲಿ ತೀವ್ರ ಶಾಖದ ಅಲೆಯ ಎಚ್ಚರಿಕೆ ನೀಡಿದೆ. ಶಾಖದ ಅಲೆಯಿಂದ ಹಿಡಿದು ತೀವ್ರ ಶಾಖದ ಅಲೆಯ ಪರಿಸ್ಥಿತಿಗಳು ಮತ್ತು ಬೆಚ್ಚಗಿನ ರಾತ್ರಿಗಳ ದೃಷ್ಟಿಯಿಂದ ಹವಾಮಾನ ಕಚೇರಿಯು ಮುಂದಿನ ಮೂರು ದಿನಗಳವರೆಗೆ ಯೆಲ್ಲೋ ಅಲರ್ಟ್ ಮತ್ತು ನಂತರ ಕಿತ್ತಳೆ ಎಚ್ಚರಿಕೆಯನ್ನು ನೀಡಿದೆ.

43 ವರ್ಷಗಳ ಹಿಂದೆ ಕಳುವಾಗಿದ್ದ ಕಂಚಿನ ಪ್ರತಿಮೆ ವಾಪಸ್ ನೀಡಲು ಅಮೆರಿಕ ಒಪ್ಪಿಗೆ

ಅವಲೋಕಿತೇಶ್ವರ ವಿಗ್ರಹ ಭಾರತಕ್ಕೆ ಶೀಘ್ರ

ರಾಯ್ಪುರ: ಛತ್ತೀಸ್‌ಗಢದ ಸಾಂಸ್ಕೃತಿಕ ಪರಂಪರೆ ಪಾಲಿಗೆ ಮಹತ್ತ್ವದ ಅಧ್ಯಾಯವೊಂದು ತೆರೆದುಕೊಳ್ಳುತ್ತಿದೆ. ಇಲ್ಲಿನ ರಾಯ್ಪುರದ ಮಹಂತ ಘಾಸಿದಾಸ್ ಸ್ಮಾರಕ ಮ್ಯೂಸಿಯಂನಿಂದ ಕಳವಾಗಿ ಅಮೆರಿಕ ತಲುಪಿದ್ದ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ 19 ಕೋಟಿ ರೂ. ಬೆಲೆಬಾಳುವ, ಭಗವಾನ್ ಅವಲೋಕಿತೇಶ್ವರನ ಕಂಚಿನ ಪ್ರತಿಮೆಯನ್ನು ಅಮೆರಿಕ ಕೊನೆಗೂ ಭಾರತಕ್ಕೆ ಮರಳಿಸುತ್ತಿದೆ.

ಭಾರತಕ್ಕೆ ವಿಗ್ರಹ ಸಾಗಣೆ ಪ್ರಕ್ರಿಯೆಗಳು ಅಂತಿಮ ಹಂತದಲ್ಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಗ್ರಹ ಭಾರತ ತಲುಪಿದ ಕೂಡಲೇ, ಇದನ್ನು ರಾಯ್ಪುರಕ್ಕೆ ತಂದು ಅದರ ಮೂಲಸ್ಥಾನ ಘಾಸಿದಾಸ್ ಮ್ಯೂಸಿಯಂನಲ್ಲಿ ಮರುಅಳವಡಿಸುವ ನಿಟ್ಟಿನಲ್ಲಿ ಆಡಳಿತಾತ್ಮಕ ಪ್ರಕ್ರಿಯೆಗಳಿಗೆ ಛತ್ತೀಸ್‌ಗಢ ಸರಕಾರ ಚಾಲನೆ ನೀಡಲಿದೆ ಎಂದು ಛತ್ತೀಸ್‌ಗಢ ಸಾಂಸ್ಕೃತಿಕ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ. ಭಾರತಕ್ಕೆ ಸೇರಿದ ಸುಮಾರು 14 ಮಿಲಿಯನ್ ಡಾಲರ್ ಮೌಲ್ಯದ 657 ಪ್ರಾಚೀನ ಮತ್ತು ಐತಿಹಾಸಿಕ ವಿಗ್ರಹಗಳನ್ನು ಅಮೆರಿಕ ಈಗಾಗಲೇ ಭಾರತಕ್ಕೆ ಮರಳಿಸಿದೆ. ಭಾರತದಿಂದ ಕಳವಾದ ವಿಗ್ರಹಗಳ ವಾಪಸಾತಿ ಪ್ರಯತ್ನಗಳ ಭಾಗವಾಗಿ ಅಮೆರಿಕ ಪ್ರಸ್ತುತ 19 ಕೋಟಿ ರೂ. ಮೌಲ್ಯದ ಅವಲೋಕಿತೇಶ್ವರ ವಿಗ್ರಹವನ್ನು ಕೂಡ ದೇಶಕ್ಕೆ ಮರಳಿಸುತ್ತಿದೆ. ಅವಲೋಕಿತೇಶ್ವರ ವಿಗ್ರಹದ ವಾಪಸಾತಿಯು ಅಂತಾರಾಷ್ಟ್ರೀಯ ಸಾಂಸ್ಕೃತಿಕ ಪರಂಪರೆ ಸಂರಕ್ಷಣೆ ಪಾಲಿನ ವಿಜಯವಾಗಿದೆ.



1939ರ ಉತ್ಖನನ ವೇಳೆ ಸಿಕ್ಕಿತ್ತು ವಿಗ್ರಹ

ಛತ್ತೀಸ್‌ಗಢದ ಮಹಾಸಮುಂದ್ ಜಿಲ್ಲೆಯಲ್ಲಿ, ಪ್ರಾಚ್ಯವಸ್ತುಗಳಿಗೆ ಹೆಸರಾಂತ ಈಗಿನ ಸಿರ್‌ಪುರ ಅಥವಾ ಹಿಂದೆ ಶ್ರೀಪುರವೆಂದು ಅಭಿದಾನಿತ ಗ್ರಾಮದಲ್ಲಿನ, ಖ್ಯಾತ ಲಕ್ಷ್ಮಣ ದೇವಾಲಯ ಸಂಕೀರ್ಣ ಬಳಿ 1939ರಲ್ಲಿ ಈ ಕಂಚಿನ ವಿಗ್ರಹ ಪತ್ತೆಯಾಗಿತ್ತು. ವಲಯದಲ್ಲಿ ಉತ್ಖನನ ವೇಳೆ ಪತ್ತೆಯಾಗಿದ್ದ ಅಪಾರ ವಿಗ್ರಹಗಳಲ್ಲಿ ಅವಲೋಕಿತೇಶ್ವರ ವಿಗ್ರಹವೂ ಒಂದು. ವಿಗ್ರಹದ ಸಂರಕ್ಷಣೆ ದೃಷ್ಟಿಯಿಂದ ಆಗ ಇದನ್ನು ರಾಯ್ಪುರದ ಮಹಂತ್ ಘಾಸಿದಾಸ್ ಸ್ಮಾರಕ ಮ್ಯೂಸಿಯಂನಲ್ಲಿರಿಸಲಾಗಿತ್ತು. ಅಲ್ಲಿಂದ ಕಳವಾಗಿದ್ದ ಈ ವಿಗ್ರಹ ಅಂತಾರಾಷ್ಟ್ರೀಯ ಕಾಳಸಂತೆಗೆ ತಲುಪಿತ್ತು. ನಂತರದ ದಿನಗಳಲ್ಲಿ ಅಮೆರಿಕಗೆ ರವಾನೆಯಾಗಿತ್ತು. ಛತ್ತೀಸ್‌ಗಢದ ಸಂಪನ್ನ ಬೌದ್ಧ ಪರಂಪರೆಗಳು, ಪ್ರಾಚೀನ ಕರಕುಶಲತೆ ಮತ್ತು ಸಾಂಸ್ಕೃತಿಕ ಅಸ್ಮಿತೆಯ ಜೀವಂತ ದ್ಯೋತಕವಾಗಿದೆ ಅವಲೋಕಿತೇಶ್ವರ ವಿಗ್ರಹ. ಪ್ರಾಚೀನ ಭಾರತದಲ್ಲಿ ಬೌದ್ಧ ಸಂಸ್ಕೃತಿ, ವಾಸ್ತುಶಿಲ್ಪ ಮತ್ತು ಕಲೆಗಳಿಗೆ ಅತ್ಯಂತ ಹೆಸರಾದ ಊರಾಗಿತ್ತು ಈಗಿನ ಸಿರ್‌ಪುರ ಅಥವಾ ಆಗಿನ ಶ್ರೀಪುರ.

ಆರ್‌ಬಿಐನಿಂದ ಕರಡು ಪ್ರಸ್ತಾವನೆ | ಅಕ್ಟೋಬರ್ 1ರಿಂದ ಜಾರಿಗೆ

ಸಾಲ ಕಟ್ಟದಿದ್ದರೆ ಮೊಬೈಲ್ ಬಂದ್

ಮುಂಬೈ: ಬಾಕಿ ಇರುವ ಸಾಲ ವಸೂಲಾತಿ ವೇಳೆಯಲ್ಲಿ ಬ್ಯಾಂಕುಗಳು ಮತ್ತು ಸಾಲ ವಸೂಲಾತಿ ಏಜೆಂಟ್‌ಗಳ ದಬ್ಬಾಳಿಕೆಗೆ ಕಡಿವಾಣ ಹಾಕಲು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಕೆಲವು ಪ್ರಸ್ತಾವನೆಗಳನ್ನು ಸಿದ್ಧಪಡಿಸಿದೆ. ವೈಯಕ್ತಿಕ, ವಾಹನ ಹಾಗೂ ಗೃಹ ಸಾಲ ಮರುಪಾವತಿಯಲ್ಲಿ ಡೀಫಾಲ್ಟ್ ಆಗಿರುವ ಗ್ರಾಹಕರ ಮೊಬೈಲ್ ಫೋನ್‌ಗಳನ್ನು ಬಂದ್ ಮಾಡುವಂತಿಲ್ಲ ಎಂದು ಆರ್‌ಬಿಐ ಸ್ಪಷ್ಟಪಡಿಸಿದೆ.

ಒಂದು ವೇಳೆ, ಮೊಬೈಲ್ ಮೇಲೆಯೇ ಸಾಲ ತೆಗೆದುಕೊಂಡು, ಅದನ್ನು ಕಟ್ಟದಿದ್ದರೆ ಮಾತ್ರ ಅವುಗಳನ್ನು ಬಂದ್ ಮಾಡಲು ಅವಕಾಶ ನೀಡಿದೆ. ಆದರೆ, ಇಲ್ಲಿ ಕೆಲವು ಸುರಕ್ಷಾ ಕ್ರಮಗಳ ಜತೆಗೆ ಇಂಥ ಕ್ರಮ ತೆಗೆದುಕೊಳ್ಳಬಹುದು ಎಂದಿದೆ. ಈ ಕ್ರಮಗಳು ಅ.1ರಿಂದ ಜಾರಿಗೆ ಬರಲಿವೆ. ಬುಧವಾರ ಬಿಡುಗಡೆಗೊಂಡ ಪರಿಷ್ಕೃತ ಕರಡು ಮಾರ್ಗಸೂಚಿಯಲ್ಲಿ, ಸಾಲ ವಸೂಲಿಗೆ ಬ್ಯಾಂಕ್‌ಗಳು ತಂತ್ರಜ್ಞಾನ ಆಧಾರಿತ ಒತ್ತಡದ ಕ್ರಮಗಳನ್ನು ಬಳಸಬಾರದು ಎಂದು ಹೇಳಲಾಗಿದೆ. ಆದರೆ, ಬ್ಯಾಂಕ್ ಸಾಲದ ಮೂಲಕವೇ ಖರೀದಿಸಿದ ಮೊಬೈಲ್ ಅಥವಾ ಸಾಧನಗಳ ವಿಷಯದಲ್ಲಿ ಮಾತ್ರ ಕೆಲವು ನಿರ್ಬಂಧ ಹೇರಲು ಅವಕಾಶ ನೀಡಲಾಗಿದೆ. ಅಂಥ ಸಂದರ್ಭದಲ್ಲಿಯೂ ಸಾಲ ಬಾಕಿ 90 ದಿನಗಳಿಗಿಂತ ಹೆಚ್ಚಿರಬೇಕು. ನೋಟಿಸ್ ನೀಡಿದ ಬಳಿಕವೂ ಸಾಲಗಾರ ಪಾವತಿ ಮಾಡದಿದ್ದರೆ ಮಾತ್ರ ಕ್ರಮ ಕೈಗೊಳ್ಳಬಹುದು ಎಂದು ಕರಡು ನಿಯಮ ಹೇಳಿದೆ.

ಇನ್ನೊಂದೆಡೆ, ತುರ್ತು ಸೇವೆಗಳಿಗೆ ಸಂಬಂಧಿಸಿದ ಸೌಲಭ್ಯಗಳನ್ನು ಯಾವುದೇ ಕಾರಣಕ್ಕೂ ಬಂದ್ ಮಾಡುವಂತಿಲ್ಲ ಎಂದು ಆರ್‌ಬಿಐ ತಿಳಿಸಿದೆ. ಇಂಟರ್‌ನೆಟ್ ಪ್ರವೇಶ, ಇನ್‌ಕಮಿಂಗ್ ಕರೆಗಳು, ಎಸ್‌ಒಎಸ್ ಸೌಲಭ್ಯ ಹಾಗೂ ಸರ್ಕಾರದ ತುರ್ತು ಸುರಕ್ಷತಾ ಸಂದೇಶಗಳನ್ನು ನಿರ್ಬಂಧಿಸಲು ಅವಕಾಶ ಇರುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಸಾಲಗಾರರು ಬಾಕಿ ಹಣ ಪಾವತಿಸಿದ ತಕ್ಷಣ ಗರಿಷ್ಠ ಒಂದು ಗಂಟೆಯೊಳಗೆ ಎಲ್ಲಾ ನಿರ್ಬಂಧಗಳನ್ನು ತೆರವುಗೊಳಿಸಬೇಕು. ತಪ್ಪಾಗಿ ನಿರ್ಬಂಧ ಹೇರಿದರೆ ಅಥವಾ ತೆರವುಗೊಳಿಸುವಲ್ಲಿ ವಿಳಂಬವಾದರೆ ಬ್ಯಾಂಕ್‌ಗಳು ಪ್ರತಿ ಗಂಟೆಗೆ 250 ಪರಿಹಾರ ನೀಡಬೇಕಾಗುತ್ತದೆ ಎಂದು ಕರಡು ಸೂಚನೆ ತಿಳಿಸಿದೆ.

ಸಾಲ ವಸೂಲಾತಿ ವೇಳೆ ಬ್ಯಾಂಕ್ ಸಿಬ್ಬಂದಿ ಅಥವಾ ಏಜೆಂಟ್‌ಗಳು ಬೆದರಿಕೆ, ನಿಂದನಾತ್ಮಕ ಭಾಷೆ ಅಥವಾ ಸಾಮಾಜಿಕ ಜಾಲತಾಣಗಳ ಮೂಲಕ ಅವಮಾನಕಾರಿ ಕ್ರಮಗಳನ್ನು ಕೈಗೊಳ್ಳಬಾರದು ಎಂದು ಆರ್‌ಬಿಐ ಕಠಿಣ ಎಚ್ಚರಿಕೆ ನೀಡಿದೆ.

ಕಿರುಸುದ್ದಿ

ಸದಸ್ಯತ್ವ ರದ್ದು, 6 ವರ್ಷ ಸ್ಪರ್ಧೆಗೆ ನಿರ್ಬಂಧ



ಯಲಬುರ್ಗಾ : ಕರ್ತವ್ಯ ನಿರತ ಮಹಿಳಾ ಪಿಡಿಒ ಮೇಲೆ ನಡೆಸಿಸದ ಆರೋಪದ ಸಾಬೀತಾದ ಹಿನ್ನೆಲೆಯಲ್ಲಿ ತಾಲೂಕಿನ ಹಿರೇವ್ಮ್ಯಾಗೇರಿ ಗ್ರಾಮ ಪಂಚಾಯಿತಿ ಸದಸ್ಯೆ ಶಾಂತಮ್ಮ ಬಂಡಿವಡ್ಡರ್ ಅವರನ್ನು ಸದಸ್ಯತ್ವದಿಂದ ಅನರ್ಹಗೊಳಿಸಿ ಮುಂದಿನ 6 ವರ್ಷದವರೆಗೆ ಯಾವುದೇ ಚುನಾವಣೆಗೆ ಸ್ಪರ್ಧಿಸದಂತೆ ಸರ್ಕಾರ ಆದೇಶ ಹೊರಡಿಸಿದೆ.

ಪಿಡಿಒ ಮೇಲೆ ಗ್ರಾಪಂ ಸದಸ್ಯೆ ಹಲ್ಲೆ

ಘಟನೆ ಹಿನ್ನೆಲೆ: 2025 ಫೆ,27ರಂದು ಹಿರೇವ್ಮ್ಯಾಗೇರಿ ಗ್ರಾಪಂ ಕಚೇರಿಯಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆ ಮನೆಗಳ ಆಯ್ಕೆ ಸಂಬಂಧ ಸಭೆ ನಡೆಯುತ್ತಿತ್ತು? ಆ ಸಭೆಯಲ್ಲಿ ಗ್ರಾಪಂ ಅಧ್ಯಕ್ಷರು, ಸರ್ವ ಸದಸ್ಯರು ಮತ್ತು ಪಿಡಿಒ ರತ್ನಮ್ಮ ಗುಂಡಣ್ಣನವರ್ ಉಪಸ್ಥಿತರಿದ್ದರು.ಈ ವೇಳೆ ಸದಸ್ಯೆ ಶಾಂತಮ್ಮ ಬಂಡಿವಡ್ಡರ ತಮ್ಮ ಮಗನೊಂದಿಗೆ ಕಚೇರಿಗೆ ನುಗ್ಗಿ ಪಿಡಿಒ ಜತೆ ವಾಗ್ವಾದ ನಡೆಸಿದ್ದಲ್ಲದೆ ಅವಾಚ್ಯ ಶಬ್ದಗಳಿಂದ ನಿಂಧಿಸಿ, ಜೀವ ಬೆದರಿಕೆ ಹಾಕಿ,ಪಾದರಕ್ಷೆಯಿಂದ ಹಲ್ಲೆ ನಡೆಸಿದ್ದಾರೆ ಎಂಬ ಆರೋಪ ಕೇಳಿ ಬಂದಿತ್ತು. ಘಟನೆ ಬಳಿಕ ಯಲಬುರ್ಗಾ ಪೋಲಿಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿತ್ತು. ಬಳಿಕ ಸರ್ಕಾರಿ ನೌಕರರ ಸಂಘ ಮತ್ತು ಪಿಡಿಒಗಳ ಕ್ಷೇಮಾಭಿವೃದ್ಧಿ ಸಂಘ ತಾಲೂಕು ಜಿಲ್ಲಾ ಮಟ್ಟದಲ್ಲಿ ಪ್ರತಿಭಟನೆ ನಡೆಸಲಾಗಿತ್ತು. ಇಲಾಖೆ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಸರ್ಕಾರದ ಮಟ್ಟದಲ್ಲಿ ಪರಿಶೀಲನೆ ನಂತರ ಇದೀಗ ಸದಸ್ಯತ್ವ ರದ್ದು ಮಾಡುವ ತೀರ್ಮಾನ ಹೊರಬಿದ್ದಿದೆ.

ವೆಂಕಟೇಶ ಹೆಗಡೆ ನೇಮಕ

ಬಳ್ಳಾರಿ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿಯು ಕೊಪ್ಪಳ ಜಿಲ್ಲಾ ಉಸ್ತುವಾರಿಯಾಗಿ ಇಲ್ಲಿನ ಕಾಂಗ್ರೆಸ್ ಯುವ ನಾಯಕ ವೆಂಕಟೇಶ ಹೆಗಡೆ ಅವರು ನೇಮಕಗೊಂಡಿದ್ದಾರೆ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿಯ ರಾಜ್ಯಾಧ್ಯಕ್ಷ ವಿನಯ್ ಕುಮಾರ್ ಸೊರಕೆ ಅವರು ನೂತನ ಉಸ್ತುವಾರಿಯನ್ನಾಗಿ ನಿಯೋಜಿಸಿ ಆದೇಶ ಹೊರಡಿಸಿದ್ದಾರೆ.



ರಾಜ್ಯದ ವಿವಿಧ 25 ಜನರ ಉಸ್ತುವಾರಿಯನ್ನು ನಿಯೋಜಿಸಿ ಸಮಿತಿಯು ರಾಜ್ಯಾಧ್ಯಕ್ಷರು ಆದೇಶ ಹೊರಡಿಸಿದ್ದಾರೆ. ಈ ಮೊದಲು ರಾಯಚೂರು ಜಿಲ್ಲಾ ಉಸ್ತುವಾರಿಯಾಗಿದ್ದ ವೆಂಕಟೇಶ ಹೆಗಡೆ ಅವರಿಗೆ ಕೊಪ್ಪಳ ಜಿಲ್ಲೆಯ ಉಸ್ತುವಾರಿ ಜವಾಬ್ದಾರಿ ನೀಡಲಾಗಿದೆ. ಈ ಕುರಿತು ವೆಂಕಟೇಶ ಹೆಗಡೆ ಅವರು ಮಾತನಾಡಿ, ಪಕ್ಷವು ನನ್ನನ್ನು ಗುರುತಿಸಿ ಈ ಮಹತ್ವದ ಜವಾಬ್ದಾರಿ ಸ್ಥಾನವನ್ನು ನೀಡಿದ್ದು, ಇದು ಮತ್ತಷ್ಟು ನನ್ನ ಜವಾಬ್ದಾರಿಯನ್ನು ಹೆಚ್ಚಿಸಿದೆ. ನನ್ನನ್ನು ಆಯ್ಕೆ ಮಾಡಲು ಸಹಕರಿಸಿದ ಪಕ್ಷದ ಎಲ್ಲ ವರಿಷ್ಠರಿಗೂ, ರಾಜ್ಯಾಧ್ಯಕ್ಷ ವಿನಯ್ ಕುಮಾರ್ ಸೊರಕೆ ಅವರಿಗೂ ಅತ್ಯಂತ ಗೌರವದ, ಪ್ರೀತಿಯ ಅಭಿನಂದನೆಗಳನ್ನು ಸಲ್ಲಿಸುವೆ ಎಂದು ತಿಳಿಸಿದ್ದಾರೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಕಾಳು	2111	6211
ಒಣ ಮೆಣಸಿನಕಾಯಿ	4200	52499
ಹೆಸರುಕಾಳು	1129	7723
ನೆಲಗಡಲೆ (ಶೇಂಗಾ)	4648	8430
ಜೋಳ	1425	7491
ಮೆಕ್ಕೆಜೋಳ	1911	2001
ಮಡಿಕೆ (ಮಟಕಿ)	2259	14655
ಈರುಳ್ಳಿ	500	1900
ಆಲೂಗಡ್ಡೆ	1200	1800
ಸೋಯಾಬಿನ್	4410	7569
ಗೋಧಿ	1507	2735

ರಾಜ್ಯ ಆಹಾರ ಆಯೋಗದ ಅಧ್ಯಕ್ಷರ ಭೇಟಿ

ಆಹಾರದ ಗುಣಮಟ್ಟ ಪರಿಶೀಲನೆ

ಕೊಪ್ಪಳ: ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಡಾ.ಎಚ್.ಕೃಷ್ಣ ಹಾಗೂ ಸದಸ್ಯರಾದ ಮಾರುತಿ ಎಂ.ದೊಡ್ಡಲಿಂಗಣ್ಣವರ ಅವರು ಬುಧವಾರ ಜಿಲ್ಲೆಯಲ್ಲಿ ಆಕಸ್ಮಿಕ ಭೇಟಿ ಕೈಗೊಂಡರು. ಬೆಳಗ್ಗೆ, ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಭೆ ನಡೆಸಿ, ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಕಾರ್ಯಾಚರಣೆ ಆರಂಭಿಸಿದ ಅಧ್ಯಕ್ಷರು, ಜಿಲ್ಲಾಡಳಿತ ಭವನದಿಂದ ನೇರವಾಗಿ ಕೊಪ್ಪಳ ಸಿಟಿಯ ಗಾಂಧೀನಗರದಲ್ಲಿನ ವಾರ್ಡ್ ನಂಬರ್ 23ರಲ್ಲಿನ 2ನೇ ಅಂಗನವಾಡಿಗೆ ಕೇಂದ್ರಕ್ಕೆ ತೆರಳಿ ಮೊದಲಿಗೆ ಆಹಾರ ದಾಸ್ತಾನು ಕೊಠಡಿ ಪ್ರವೇಶಿಸಿ ಪರಿಶೀಲನೆ ನಡೆಸಿದರು. ಈ ದಿನ ಮೆನು ಚಾರ್ಟ್ ಪ್ರಕಾರ ಮಕ್ಕಳಿಗೆ ಏನು ಕೊಡಬೇಕು? ಎಂದು ಕೇಳಿ, ಸತತ 2 ಗಂಟೆಗಳ ಕಾಲ ನಾನಾ ವಹಿಗಳನ್ನು ಪರಿಶೀಲಿಸಿದರು. ಅಂಗನವಾಡಿಗಳಲ್ಲಿ ದಾಖಲಾದ ಮಕ್ಕಳು, ಗರ್ಭಿಣಿಯರು ಹಾಗೂ ಬಾಣಂತಿಯರ ಸಂಖ್ಯೆ ಬಗ್ಗೆ ಕೇಳಿದರು. ಕಾಲಕಾಲಕ್ಕೆ ಭೇಟಿ ನೀಡ್ತೀರಾ ಎಂದು ಸಿಡಿಪಿಒ ಅವರಿಗೆ ಪ್ರಶ್ನಿಸಿದರು. 6 ತಿಂಗಳಿನಿಂದ 3 ವರ್ಷದವರೆಗಿನ ಮಕ್ಕಳಿಗೆ, ಗರ್ಭಿಣಿ ಮತ್ತು ಬಾಣಂತಿಯರ ಮನೆಗೆ ನೀಡುವ ಆಹಾರ ವಿತರಣಾ ಪುಸ್ತಕದಲ್ಲಿನ ವಿವರವನ್ನು ಇದೆ ವೇಳೆ ಪರಿಶೀಲಿಸಿದರು. ಅಂಗನವಾಡಿಯಲ್ಲಿ ಮೊಟ್ಟೆ ಖರೀದಿ ಬಿಲ್ಲುಗಳು ಸಮರ್ಪಕವಾಗಿಲ್ಲ, ಆಹಾರ ವಿತರಣೆ ವಹಿಯಲ್ಲಿ ದಾಖಲಾದ ಗರ್ಭಿಣಿಯರು ಮತ್ತು ಬಾಣಂತಿಯರ ವಿಳಾಸ ಮತ್ತು ಸಂಪರ್ಕ ಸಂಖ್ಯೆ ಹೊಂದಾಣಿಕೆ ಆಗುತ್ತಿಲ್ಲ, ಬ್ಯಾಂಕಿನಿಂದ ಡ್ರಾ ಮಾಡಿದ ಹಣಕ್ಕೆ ಸರಿಯಾದ ಲೆಕ್ಕಪತ್ರವಿಲ್ಲ ಎಂದು ಆಯೋಗದ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದರು.



ಬಳಿಕ ಅಧ್ಯಕ್ಷರು, ಮಧ್ಯಾಹ್ನ 1.25ರ ವೇಳೆಗೆ ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಭೇಟಿ ನೀಡಿದರು. ಆಸ್ಪತ್ರೆಯಲ್ಲಿನ ತುರ್ತು ಚಿಕಿತ್ಸಾ ನಿಗಾ ವಾರ್ಡನಲ್ಲಿನ ರೋಗಿಗಳನ್ನು ಮಾತನಾಡಿಸಿ, ಬಾಳೆ ಹಣ್ಣು, ಮೊಟ್ಟೆ ಕೊಟ್ಟಿದ್ದಾರಾ? ಎಂದು ರೋಗಿಗಳಿಗೆ ಕೇಳಿ ಮಾಹಿತಿ ಪಡೆದುಕೊಂಡರು. ಬಳಿಕ ಆಸ್ಪತ್ರೆ ಆವರಣದಲ್ಲಿನ ಅಡುಗೆ ತಯಾರಿಕಾ ಕೇಂದ್ರಕ್ಕೆ ತೆರಳಿ ಪರಿಶೀಲನೆ ನಡೆಸಿದರು. ಆಹಾರ ದಾಸ್ತಾನು ಕೊಠಡಿಯಲ್ಲಿನ ಮಸಾಲ ಸೇರಿದಂತೆ ವಿವಿಧ ಸಾಮಗ್ರಿಗಳ ಮೇಲಿನ ದಿನಾಂಕನ್ನು ಪರೀಕ್ಷಿಸಿದರು. ಅಕ್ಕಿ ಖರೀದಿಗೆ ಸಂಬಂಧಿಸಿದಂತೆ ಟೆಂಡರ್ ಪಾರ್ಮ್ ಹಾಗೂ ಬೇರೆ ಬೇರೆ ದಾಖಲಾತಿಗಳನ್ನು ಪರಿಶೀಲಿಸಿದರು. ಬಳಿಕ ಚಿಕ್ಕಮಕ್ಕಳ ವಿಭಾಗದಲ್ಲಿನ ಸ್ಟೋರ ರೂಮಗೆ ಭೇಟಿ ನೀಡಿ ಅಲ್ಲಿನ ಅಡುಗೆ ಸಾಮಗ್ರಿಗಳನ್ನು ಪರಿಶೀಲಿಸಿದರು. ಬಳಿಕ ವೈದ್ಯಕೀಯ ಅಧೀಕ್ಷಕರ ಕಚೇರಿಯಲ್ಲಿ ಸಭೆ ನಡೆಸಿ ಆಸ್ಪತ್ರೆಯಲ್ಲಿನ ಸೌಕರ್ಯಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಆಸ್ಪತ್ರೆಯಲ್ಲಿನ ರೋಗಿಗಳಿಗೆ ಗುಣಮಟ್ಟದ ಆಹಾರ ಪೂರೈಕೆಯಲ್ಲಿ ಲೋಪ ಕಂಡು ಬಂದ ಹಿನ್ನಲೆಯಲ್ಲಿ ಆಸ್ಪತ್ರೆಯ ನರ್ಸಿಂಗ್ ಸೂಪರಿಂಟೆಂಡೆಂಟ್ ಅವರ ಮೇಲೆ ಕ್ರಮ ಜರುಗಿಸಲು ಮತ್ತು ಆಸ್ಪತ್ರೆಗೆ ಆಹಾರ ಸಾಮಗ್ರಿ ಪೂರೈಸುವ ಈಗಿನ ಗುತ್ತಿಗೆದಾರರನ್ನು ಬದಲಿಸಲು ಕ್ರಮ ವಹಿಸಬೇಕು ಎಂದು ವೈದ್ಯಕೀಯ ಅಧೀಕ್ಷಕರಾದ ಡಾ.ಮಂಜುನಾಥ ಪಿ ಸಾಲ್ಮನಿ ಅವರಿಗೆ ಆಯೋಗದ ಅಧ್ಯಕ್ಷರು ನಿರ್ದೇಶನ ನೀಡಿದರು.

ಡಿಎಚ್ಒ ಡಾ.ಲಿಂಗರಾಜ್, ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶನ ಡಾ.ವೈಜನಾಥ ಇಟಗಿ, ವೈದ್ಯಾಧಿಕಾರಿ ಡಾ.ಅಲಕಾನಂದ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ಅಮರೇಶ ಹಾವಿನ, ಸಿಡಿಪಿಒ ರೋಹಿಣಿ ಕೊಟಗಾರ, ಜಿಲ್ಲಾ ನಿರೂಪಣಾಧಿಕಾರಿ ನಟರಾಜ ಹಾಗೂ ಇತರರು ಇದ್ದರು.

ಸರ್ವರ್ ಸಮಸ್ಯೆ ನಿವಾರಣೆಗೆ ಮನವಿ

ಬಳ್ಳಾರಿ: ನ್ಯಾಯಬೆಲೆ ಅಂಗಡಿಗಳಲ್ಲಿ ಸರ್ವರ್ ಸಮಸ್ಯೆಯಿಂದ ಪಡಿತರ ವಿತರಣೆ ವ್ಯವಸ್ಥೆಗೆ ಸಾಕಷ್ಟು ತೊಂದರೆಯಾಗುತ್ತಿದೆ, ಕೂಡಲೇ ಇದನ್ನು ಸರಿಪಡಿಸಬೇಕು ಎಂದು ಒತ್ತಾಯಿಸಿ ಪಡಿತರ ವಿತರಕರ ಸಂಘದ ರಾಜ್ಯಾಧ್ಯಕ್ಷ ಟಿ.ಕೃಷ್ಣಪ್ಪ ಅವರು, ಆಹಾರ ಇಲಾಖೆ ಕಾರ್ಯದರ್ಶಿ ಹಾಗೂ ಆಯುಕ್ತರಿಗೆ ಮನವಿ ಸಲ್ಲಿಸಿದರು.

ನಂತರ ಸಂಘದ ರಾಜ್ಯಾಧ್ಯಕ್ಷ ಟಿ.ಕೃಷ್ಣಪ್ಪ ಅವರು ಮಾತನಾಡಿ, ರಾಜ್ಯಾದ್ಯಂತ ನ್ಯಾಯಬೆಲೆ ಅಂಗಡಿಗಳಲ್ಲಿ ಸರ್ವರ್ ಸಮಸ್ಯೆ ಹೆಚ್ಚಾಗಿದ್ದು, ಜನರು ಬೆಳಿಗ್ಗೆಯಿಂದ ಸಂಜೆವರೆಗೆ ನಮ್ಮ ಅಂಗಡಿಗಳ ಎದುರು ಕಾಯುವ ಸ್ಥಿತಿ ನಿರ್ಮಾಣವಾಗಿದೆ. ಜನರು ನ್ಯಾಯಬೆಲೆ ಅಂಗಡಿ ಮಾಲೀಕರ ಮೇಲೆ ಹಾಗೂ ಸರ್ಕಾರದ ಮೇಲೆ ನಾನಾ ರೀತಿಯಲ್ಲಿ ಆರೋಪ ಪ್ರತ್ಯಾರೋಪಗಳನ್ನು ಮಾಡುತ್ತಿದ್ದಾರೆ. ಇದರಿಂದ ಪ್ರಾಮಾಣಿಕವಾಗಿ ಪಡಿತರ ಧಾನ್ಯಗಳನ್ನು ವಿತರಣೆ ಮಾಡುವ ನ್ಯಾಯಬೆಲೆ ಅಂಗಡಿಗಳ ಮಾಲೀಕರಿಗೆ ಸಾಕಷ್ಟು ತೊಂದರೆ ಅನುಭವಿಸುವಂತಾಗಿದೆ. ವ್ಯಾಪ್ತಿಯ ಕಾರ್ಡ್ ದಾರರನ್ನು ವಿರೋಧ ಕಟ್ಟಿಕೊಳ್ಳುವುದು ಸುಲಭದ ಮಾತಲ್ಲ, ಕೂಡಲೇ ಸರ್ವರ್ ಸಮಸ್ಯೆಯನ್ನು ಕೂಡಲೇ ಸರಿಪಡಿಸಬೇಕು ಎಂದು ಆಹಾರ ಇಲಾಖೆ ಸೇರಿದಂತೆ ಸಂಬಂದಿಸಿದ ಇಲಾಖೆಮೇಲಕಾರಿಗಳಿಗೆ ಒತ್ತಾಯಿಸಿದ ಹಿನ್ನೆಲೆ, ಇದೇ ದಿನವೇ ಸರಿಪಡಿಸುವ ಭರವಸೆ ಅಕಾರಿಗಳು ನೀಡಿದ್ದಾರೆ. ನಮ್ಮೆದುರು ಅಕಾರಿಗಳಿಗೆ ಖಡಕ್ ಆದೇಶ ನೀಡಿದ್ದಾರೆ ಎಂದರು.

ಕೆಲ ಕಡೆಗಳಲ್ಲಿ 3-4 ಲ್ಯಾಪ್ ಟಾಪ್ ಗಳನ್ನು ಇಟ್ಟು ಕೆಲಸ ಮಾಡುತ್ತಿರುವುದರಿಂದ ತೊಂದರೆಯಾಗುತ್ತಿದೆ ಎಂದು ಕಿರಿಯ ಅಕಾರಿಗಳ ಮಾತಾಗಿದೆ. ಆದರೆ, ಅವೆಲ್ಲವೂ ನಮಗೆ ಸಂಬಂಧಪಟ್ಟಿದ್ದಲ್ಲ, ಅದನ್ನು ಯಾರೂ ಮಾಡುತ್ತಾರೆ ಅವರನ್ನು ಪತ್ತೆ ಹಚ್ಚಿ ಅವರ ವಿರುದ್ಧ ಕ್ರಮ ಕೈಗೊಳ್ಳಿ. ಯಾರೋ ಒಬ್ಬರು ಈರೀತಿ ಮಾಡಿದ್ರೆ ರಾಜ್ಯ ಸರ್ಕಾರಕ್ಕೆ ಹಾಗೂ ಎಲ್ಲರಿಗೂ ಕೆಟ್ಟ ಹೆಸರು ಬರಲಿದೆ ಎಂದು ಅಕಾರಿಗಳಿಗೆ ಮನವರಿಕೆ ಮಾಡಿಕೊಡಲಾಗಿದೆ ಎಂದು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಪಡಿತರ ಸಂಘದ ವಿವಿಧ ಪದಾಕಾರಿಗಳು ಇತರರಿದ್ದರು.



ಉತ್ತಮ ಜೀವನ ಶೈಲಿಗೆ ಜಾನಪದ ಕಲೆ ಅವಶ್ಯ



ಗದಗ: ಗ್ರಾಮೀಣ ಪ್ರದೇಶದ ಸಂಸ್ಕೃತಿ, ಸಂಪ್ರದಾಯ ಮತ್ತು ಪರಂಪರೆಯನ್ನು ಅನಾವರಣಗೊಳಿಸುವ ಜಾನಪದ ಕಲೆಯನ್ನು ಉಳಿಸಿ ಬೆಳೆಸಲು ಜಾನಪದ ಕಲಾವಿದರನ್ನು ಪ್ರೋತ್ಸಾಹಿಸಬೇಕು ಎಂದು ಕೊಟ್ಟೂರೇಶ್ವರ ಮಠದ ಡಾ.ಕೊಟ್ಟೂರೇಶ್ವರ ಸ್ವಾಮೀಜಿ ಹೇಳಿದರು.

ನುಲಿಚಂದಯ್ಯ ಜಾನಪದ ಕಲಾ ಮೇಳ ಎಸ್‌ಸಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದಲ್ಲಿ ತಾಲೂಕಿನ ಲಕ್ಕುಂಡಿಯ ಮಾರುತಿ ನಗರದ ಸರಕಾರಿ ದ್ವಿ ಮಾಧ್ಯಮ ಪ್ರಾಥಮಿಕ ಹಮ್ಮಿಕೊಂಡಿದ್ದ ಜಾನಪದ ಉತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಜಾನಪದ ಕಲೆಯು ನಮ್ಮ ಜೀವನ ಶೈಲಿ, ನಡೆ, ನುಡಿಗಳನ್ನು ತಿದ್ದುವ ಒಂದು ಉತ್ತಮ ಕಾರ್ಯಕ್ರಮವಾಗಿದೆ. ನುಲಿಚಂದಯ್ಯನವರ ಹೆಸರಿನಲ್ಲಿ ಜಾನಪದ ಮೇಳವನ್ನು ರಚಿಸಿಕೊಂಡು ಜಾನಪದ ಕಲೆಯನ್ನು ಬೆಳೆಸಲು ಶ್ರಮಿಸುತ್ತಿರುವುದು ಶ್ಲಾಘನೀಯ ಎಂದರು.

ತಾಪಂ ಮಾಜಿ ಸದಸ್ಯ ಮಹೇಶ ಮುಸ್ಕಿನಭಾವಿ, ಜಿಲ್ಲಾ ಎಸ್‌ಸಿ ಎಸ್‌ಟಿ ಸಲಹಾ ಸಮಿತಿಯ ನಾಮ ನಿರ್ದೇಶಿತ ಸದಸ್ಯ ಬಸವರಾಜ ಮುಳ್ಳಾಳ ಮಾತನಾಡಿದರು. ಭಕ್ತಿ ಸಂಗೀತ, ದೀಪ ನೃತ್ಯ, ಸುಗಮ ಸಂಗೀತ, ಡೊಳ್ಳಿನ ಪದ, ಕೋಲಾಟ, ಜನಪದ ಸಂಗೀತ, ತತ್ವಪದ, ಮಲ್ಲಕಂಬ, ಜೋಗುತಿ ನೃತ್ಯ, ಭಜನೆ, ಗೀ ಗೀ ಪದ, ಕಾರ್ಯಕ್ರಮಗಳು ಜನಮನ ಸೆಳೆದವು. ದ್ವಿತೀಯ ಪಿಯುಸಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹನೀಯರನ್ನು ಸನ್ಮಾನಿಸಲಾಯಿತು. ಚನ್ನಬಸಪ್ಪ ಭಜಂತ್ರಿ ಅಧ್ಯಕ್ಷತೆ ಮಹಿಸಿದ್ದರು. ದೇವಪ್ಪ ಖಂಡು, ಕುಶ ಕವಲೂರು, ಲಕ್ಷ್ಮಣ ಗುಡಸಲಮನಿ, ಶಿವಪ್ಪ ಬಳಿಗೇರ, ಪ್ರಕಾಶ ಅರಹುಣಶಿ, ತಿಪ್ಪಣ್ಣ ಅಂಬಕ್ಕಿ, ಮಹಾಂತೇಶ ಗುರಿಕಾರ, ಬಸವರಾಜ ಬಳಿಗೇರ, ಸಿದ್ದಣ್ಣ ಮಂಗಳೂರು, ವಿನಾಯಕ ಡಿಗ್ಗಾವಿ, ಶಿವಪ್ಪ ಭಜಂತ್ರಿ ಇದ್ದರು. ವಿ.ಸಿ.ಕುಂಬಾರ ಸ್ವಾಗತಿಸಿದರು. ಶಿಕ್ಷಕ ಮುತ್ತುರಾಜ್ ಗಡ್ಡಿ ನಿರೂಪಿಸಿದರು. ಕೊಟ್ರಯ್ಯ ನಾಗಾವಿಮಠ ವಂದಿಸಿದರು.

ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯ ನಿರ್ವಹಿಸಿ

ಹುಬ್ಬಳ್ಳಿ: ಅತಿಯಾದ ಮಳೆ ಹಾಗೂ ಗಾಳಿ ಬೀಸಿದಾಗ ಇಲ್ಲವೇ ತುರ್ತು ಪರಿಸ್ಥಿತಿಗಳಲ್ಲಿ ಆದ್ಯತೆ ಮೇರೆಗೆ ಆಧಿಕಾರಿಗಳು ಸಮನ್ವಯತೆಯಿಂದ ಕಾರ್ಯ ಪ್ರವೃತರಾಗಿ, ಸಾರ್ವಜನಿಕ ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ಶಾಸಕ ಮಹೇಶ ಟೆಂಗಿನಕಾಯಿ ತಿಳಿಸಿದರು.



ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರದಲ್ಲಿ ಮಳೆಯಿಂದಾಗಿರುವ ತೊಂದರೆಗಳ ಬಗ್ಗೆ ಬುಧವಾರ ಹಮ್ಮಿಕೊಂಡಿದ್ದ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಜನರು ದೂರು ನೀಡಿದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂಬ ಆರೋಪಗಳು ಕೇಳಿ ಬರುತ್ತಿವೆ. ಎಂತಹದೇ ಮಹತ್ವದ ಕಾರ್ಯಗಳಿದ್ದರೂ ಆ ಕೆಲಸಗಳನ್ನು ಬದಿಗೊತ್ತಿ, ಆದ್ಯತೆ ಮೇರೆಗೆ ತುರ್ತು ಕೆಲಸಗಳನ್ನು ನಿರ್ವಹಿಸಬೇಕು ಎಂದರು.

ಕಳೆದೆರಡು ದಿನದ ಹಿಂದೆ ಸುರಿದ ಮಳೆಯಿಂದ ಪಾಲಿಕೆಯ 36, 47, 48 ಹಾಗೂ 49ನೇ ವಾರ್ಡ್‌ಗಳಲ್ಲಿ ಹೆಚ್ಚು ಮರಗಳು ಹಾಗೂ ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ಈ ವಾರ್ಡ್‌ಗಳಲ್ಲಿ ವಿದ್ಯುತ್ ಪೂರೈಕೆ ವ್ಯತ್ಯಯವಾಗಿದೆ. ಇನ್ನೂ ಬಂದಿಲ್ಲ, ಈ ಬಗ್ಗೆ ಕಳೆದ ಎರಡು ದಿನಗಳಲ್ಲಿ ಏನು ಕ್ರಮ ಕೈಗೊಂಡಿದ್ದರಿ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು.

ಇದಕ್ಕೆಸ್ಪಂದಿಸಿದಹೆಸ್ಕಾಂಅಧಿಕಾರಿಗಳು ಸೋಮವಾರ ಜೋರಾದ ಗಾಳಿ ಸಮೇತ ಮಳೆ ಬಂದಿದ್ದರಿಂದ 200 ಕ್ಕೂ ಹೆಚ್ಚು ದೂರುಗಳು ಬಂದಿವೆ. ಗಾಳಿಯಿಂದಾಗಿ 141 ಮರಗಳು ಬಿದ್ದಿದ್ದು, 75 ವಿದ್ಯುತ್ ಕಂಬಗಳು ಧರೆಗುರುಳಿದ್ದು, ಇದರಿಂದ ವಿದ್ಯುತ್ ವ್ಯತ್ಯವಾಗಿದೆ. ನಮ್ಮ ಸಿಬ್ಬಂದಿ ಸರಿಪಡಿಸುತ್ತಿದ್ದಾರೆ ಎಂದರು.

ಈಗಾಗಲೇ ಈವರೆಗೂ 14 ವಿದ್ಯುತ್ ಕಂಬಗಳನ್ನು ಮರುಸ್ಥಾಪಿಸಿ ಲೈನ್ ಅಳವಡಿಸಲಾಗಿದೆ. ಇನ್ನುಳಿದಂತೆ ಬುಧವಾರ ಸಂಜೆವರೆಗೂ 50 ವಿದ್ಯುತ್ ಕಂಬಗಳನ್ನು ಮರುಸ್ಥಾಪಿಸಿ ವಿದ್ಯುತ್ ಪೂರೈಕೆಗೆ ಕ್ರಮ ವಹಿಸಲಾಗಿದೆ. ಇನ್ನೂ ನಾಲ್ಕು ದಿನಗಳಲ್ಲಿ ಎಲ್ಲ ಕಾಮಗಾರಿಗಳನ್ನು ಪೂರ್ಣಗೊಳಿಸಿ ಎಲ್ಲೆಲ್ಲಿ ವಿದ್ಯುತ್ ಕಡಿತವಾಗಿದೆಯೋ ಅಲ್ಲಿ ವಿದ್ಯುತ್ ಪೂರೈಸಲಾಗುವುದು ಎಂದರು.

ಮಹಾನಗರ ಪಾಲಿಕೆ ಯಂತ್ರಗಳಿಲ್ಲ, ಇನ್ನಿತರ ವಸ್ತುಗಳು ಇಲ್ಲ ಎಂಬ ನೆಪ ಹೇಳುವುದನ್ನು ಅಧಿಕಾರಿಗಳುಬಿಡಬೇಕು. ನಮ್ಮ ವಿಭಾಗ ಕೆಲಸ ಅಲ್ಲ ಎಂದು ದೂರು ಬಂದರೂ ಸ್ಪಂದಿಸದಿರುವುದು ಸರಿಯಲ್ಲ, ಸಾರ್ವಜನಿಕರ ಸಮಸ್ಯೆಗೆ ತಕ್ಷಣ ಸ್ಪಂದಿಸಿ ಸಮಸ್ಯೆ ಪರಿಹರಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಗಣೇಶನಗರ, ಜಗದೀಶ ನಗರ ಹಾಗೂ ಟೆಂಡರ್ ಶ್ಯೂರ್ ರಸ್ತೆಗಳಲ್ಲಿ ಮರಗಳು ಬಿದ್ದಿವೆ. ಆದ್ಯತೆ ಮೇರೆಗೆ ಅಲ್ಲಿ ಬಿದ್ದ ಮರಗಳನ್ನು ತೆರವುಗೊಳಿಸಬೇಕು ಎಂದು ಪಾಲಿಕೆ ತೋಟಗಾರಿಕೆ ಇಲಾಖೆ ಆಧಿಕಾರಿಗಳಿಗೆ ಸೂಚನೆ ನೀಡಲಾಯಿತು. ಸಭೆಯಲ್ಲಿ ತೋಟಗಾರಿಕೆ ಇಲಾಖೆ ಅಧಿಕಾರಿ ನಮ್ಮ ಬಳಿ ಮರ ಸಾಗಿಸಲು ಕ್ರೇನ್ ಇಲ್ಲ ಎಂದು ಹೇಳಿದರೂ. ಇದಕ್ಕೆ ಉತ್ತರಿಸಿದ ಮಹೇಶ ಟೆಂಗಿನಕಾಯಿ ಯಂತ್ರೋಪಕರಣಗಳ ಸಮಸ್ಯೆ ಹೇಳಿ ಸಾರ್ವಜನಿಕರಿಗೆ ಇನ್ನಷ್ಟು ತೊಂದರೆ ನೀಡಬೇಡಿ ಎಲ್ಲಿ ಏನಿಲ್ಲ ಎಂದು ತಿಳಿದುಕೊಂಡು ತಕ್ಷಣ ಪಡೆದು ಜನರ ಕೆಲಸ ಮಾಡಿ ಎಂದು ಹೇಳಿದರು.

ಅರಣ್ಯ ಇಲಾಖೆ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿ, ಸರಿಸುಮಾರು 141 ಮರಗಳಿ ಗಾಳಿಯಿಂದಾಗಿ ನೆಲಕ್ಕೆ ಉರುಳಿದ್ದವು. ಅವುಗಳಲ್ಲಿ ಎಲ್ಲವನ್ನೂ ಕತ್ತರಿಸಿ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದೇವೆ. ಇನ್ನುಳಿದಂತೆ ಪಾಲಿಕೆಯವರು ಮರಗಳ ತುಂಡುಗಳನ್ನು ಸಾಗಣೆ ಮಾಡಬೇಕು ಎಂದು ಹೇಳಿದರು.

ಪಾಲಿಕೆ ಕಾರ್ಯ ನಿರ್ವಾಹಕ ಎಂಜಿನಿಯರ್ ವಿಠ್ಠಲ್ ತುಬಾಕಿ, ರಮೇಶ ಬೆಳಗಾವಿ, ಆರ್‌ಎಫ್‌ಒ ಆರ್.ಎಸ್. ಉಪ್ಪಾರ, ಹೆಸ್ಕಾಂ ಇಇ ನಾಗರಾಜ ಕೊಬ್ಬಳ್ಳಿ, ಎಇಇ ಪ್ರಕಾಶ ನಾಯಕ ಹಾಗೂ ಪಾಲಿಕೆ ಆಧಿಕಾರಿಗಳು ಸಭೆಯಲ್ಲಿದ್ದರು.

ಮೇ 23ಕ್ಕೆ ಜಾನಪದ ಸಂಭ್ರಮ, ಕವಿಗೋಷ್ಠಿ

ಬೀದರ್: ಸಾಹಿತ್ಯ ರತ್ನ ಅಣ್ಣಾಭಾವು ಸಾಠೆ ಸಾಂಸ್ಕೃತಿಕ ಮತ್ತು ಸಾಹಿತ್ತಿಕ ಲೋಕ ಮಂಚ್ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ನಗರದ ಕಿತ್ತೂರು ರಾಣಿ ಚನ್ನಮ್ಮ ವೃತ್ತದಲ್ಲಿರುವ ಮಹಾಲಕ್ಷ್ಮಿ ಸಾಂಸ್ಕೃತಿಕ ಭವನದಲ್ಲಿ ಮೇ 23ರಂದು ಬೆಳಿಗ್ಗೆ 11ಕ್ಕೆ ಜಾನಪದ ಸಂಭ್ರಮ, ಕವಿಗೋಷ್ಠಿ ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯ ಸಾಧಕ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಸುರೇಶ ಚನಶೆಟ್ಟಿ ಉದ್ಘಾಟಿಸುವರು.

ಸಾಹಿತ್ಯ ರತ್ನ ಅಣ್ಣಾಭಾವು ಸಾಠೆ ಸಾಂಸ್ಕೃತಿಕ ಮತ್ತು ಸಾಹಿತ್ತಿಕ ಲೋಕ ಮಂಚ್ ಟ್ರಸ್ಟ್ ಅಧ್ಯಕ್ಷ ಎಂ.ಎಸ್. ಮನೋಹರ ಅಧ್ಯಕ್ಷತೆ ವಹಿಸುವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ರಾಮ ಸಿಂಧೆ, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ವಿಜಯಕುಮಾರ ಸೋನಾರೆ, ಪಂಚಾಯತ್ ಕ್ಷೇಮಾಭಿವೃದ್ಧಿ ಸಂಘದ ರಾಜ್ಯ ಕಾರ್ಯದರ್ಶಿ ಶರತಕುಮಾರ ಅಭಿಮಾನ್, ಜೆಸ್ಕಾಂ ಬೀದರ್ ಕಚೇರಿಯ ಲೆಕ್ಕಾಧಿಕಾರಿ ಸುಮಂತ ಕಟ್ಟಿಮನಿ, ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿ ಸುಭಾಷ್ ರತ್ನ, ರಾಜ್ಯ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಮನೋಹರ ಮಿರ್ಜಾಪುರಕರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಪ್ರಚಲಿತ ವಿದ್ಯಮಾನ ಕುರಿತ ಕವಿಗೋಷ್ಠಿಯನ್ನು ಹಿರಿಯ ಸಾಹಿತಿ ಎಂ.ಜಿ. ದೇಶಪಾಂಡೆ ಉದ್ಘಾಟಿಸುವರು.

ಸಾಹಿತಿ ಗುರುನಾಥ ಅಕ್ಕಣ್ಣ ಅಧ್ಯಕ್ಷತೆ ವಹಿಸುವರು. ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಡಾ. ಸಂಜೀವಕುಮಾರ ಅತಿವಾಳೆ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಕಲಾವಿದರು ಜನಪದ ಗೀತೆ, ಭರತನಾಟ್ಯ, ತತ್ವಪದ, ಮಹಿಳಾ ಡೊಳ್ಳು, ಸೋಬಾನ ಪದ, ಬೌದ್ಧ ಗೀತೆ, ಲಂಬಾಣಿ ನೃತ್ಯ, ಬುಲಾಯಿ ಹಾಡು, ಭರತ ನಾಟ್ಯ, ಕನ್ನಡ ಗೀತೆ, ದೇಶಭಕ್ತಿ ಗೀತೆ, ವಚನ ಗಾಯನ, ಅಂಬೇಡ್ಕರ್ ಗೀತೆ, ಸುಗಮ ಸಂಗೀತ, ಕ್ರಾಂತಿ ಗೀತೆ, ಹಾಸ್ಯ ಹಾಗೂ ಜಾನಪದ ಜಾದೂ ನಡೆಸಿಕೊಡಲಿದ್ದಾರೆ ಎಂದು ಸಾಹಿತ್ಯ ರತ್ನ ಅಣ್ಣಾಭಾವು ಸಾಠೆ ಸಾಂಸ್ಕೃತಿಕ ಮತ್ತು ಸಾಹಿತ್ತಿಕ ಲೋಕ ಮಂಚ್ ಟ್ರಸ್ಟ್ ಕಾರ್ಯದರ್ಶಿ ಪ್ರವೀಣ ಚಂದ್ರ ತಿಳಿಸಿದ್ದಾರೆ. ಸಾಹಿತ್ಯ, ಕಲಾ ಆಸಕ್ತರು, ಪ್ರಗತಿಪರ ಚಿಂತಕರು ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಕೋರಿದ್ದಾರೆ.

ಸ್ಯಾಟ್‌ಲೈಟ್ ಬಸ್ ನಿಲ್ದಾಣಕ್ಕೆ 2 ಎಕರೆ ಜಮೀನು ಮಂಜೂರು

ಕಲಬುರಗಿ: ಸೇಡಂ ಮಾರ್ಗವಾಗಿ ಸಂಚರಿಸುವ ಬಸ್ಸುಗಳ ಸುಗಮ ಸಂಚಾರಕ್ಕೆ ಉದ್ದೇಶಿತ ಗುಲಬರ್ಗಾ ವಿವಿ ಬಳಿ ಸ್ಯಾಟಲೈಟ್ ಬಸ್ ನಿಲ್ದಾಣ ನಿರ್ಮಿಸಲು 2 ಎಕರೆ ಜಮೀನು ಕೆಕೆಆರ್‌ಟಿಸಿ ಸಂಸ್ಥೆಗೆ ಮಂಜೂರು ಮಾಡಿದ ಗುಲಬರ್ಗಾ ವಿ.ವಿ.ಸಿಂಡಿಕೇಟ್ ನಿರ್ಧಾರಕ್ಕೆ ಸಂತಸ ವ್ಯಕ್ತಪಡಿಸಿರುವ ಕೆಕೆಆರ್‌ಟಿಸಿ ಅಧ್ಯಕ್ಷ ಅರುಣಕುಮಾರ ಪಾಟೀಲ ಬುಧವಾರ ಸಿಂಡಿಕೇಟ್ ಸದಸ್ಯರಿಗೆ ಸತ್ಕರಿಸಿ ಅಭಿನಂದನೆ ಸಲ್ಲಿಸಿದರು.

ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯಿಂದ ಉದ್ದೇಶಿತ ಸೇಡಂ ಮಾರ್ಗದಲ್ಲಿ ಸ್ಯಾಟಲೈಟ್ ಬಸ್ ನಿಲ್ದಾಣ ನಿರ್ಮಾಣಕ್ಕೆ ಜಮೀನು ಮಂಜೂರು ಮಾಡಬೇಕೆಂಬ ಸಂಸ್ಥೆಯ ಪ್ರಸ್ತಾವನೆಗೆ ಗುಲಬರ್ಗಾ ವಿ.ವಿ.ಸಿಂಡಿಕೇಟ್ ಸಮಿತಿಯು ಸಾರ್ವಜನಿಕ ಹಿತಾಸಕ್ತಿ ಮತ್ತು ಜನಸೇವೆಯ ದೃಷ್ಟಿಯಿಂದ ಜಮೀನು ಮಂಜೂರಾತಿಗೆ ಮಹತ್ವದ ನಿರ್ಧಾರ ಕೈಗೊಂಡಿದ್ದು, ಇದು ಕಲಬುರಗಿ ನಗರದ ಸಾರಿಗೆ ವ್ಯವಸ್ಥೆಗೆ ಹೊಸ ದಿಕ್ಕು ನೀಡಲಿದೆ. ವಿದ್ಯಾರ್ಥಿಗಳು, ಪ್ರಯಾಣಿಕರು ಹಾಗೂ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲ ಕಲ್ಪಿಸಲಿದೆ ಎಂದು ಅರುಣಕುಮಾರ ಪಾಟೀಲ ಧನ್ಯವಾದ ತಿಳಿಸಿದರು.



> ನಿಗಮದಿಂದ ಸ್ಯಾಟಲೈಟ್ ಬಸ್ ನಿಲ್ದಾಣ ನಿರ್ಮಾಣಗೊಂಡ ಬಳಿಕ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರ ಸಂಚಾರಕ್ಕೆ ಮತ್ತಷ್ಟು ಅನುಕೂಲ ಒದಗಿಸುವ ಮತ್ತು ವಿಶ್ವವಿದ್ಯಾಲಯಕ್ಕೆ ಪ್ರತ್ಯೇಕ ಬಸ್ ಸೇವೆ ಕಲ್ಪಿಸಲಾಗುವುದು.ಅಲ್ಲದೆ ಸಿಂಡಿಕೇಟ್ ಸದಸ್ಯರು ನೀಡಿದ ಪ್ರಮುಖ ಸಲಹೆಗಳನ್ನು ಸಹ ಪರಿಗಣನೆಗೆ ತೆಗೆದುಕೊಳ್ಳಲಾಗುವುದು.
> ■ ಅರುಣಕುಮಾರ ಪಾಟೀಲ ಅಧ್ಯಕ್ಷ, ಕೆಕೆಆರ್‌ಟಿಸಿ

ಇನ್ನು ಜಮೀನು ಮಂಜೂರಾತಿಗೆ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ, ಉನ್ನತಶಿಕ್ಷಣ ಸಚಿವರು ಹಾಗೂ ಗುಲಬರ್ಗಾ ವಿಶ್ವವಿದ್ಯಾಲಯದ ಸಮ ಕುಲಾಧಿಪತಿ ಎಂ.ಸಿ.ಸುಧಾಕರ್, ಶಾಸಕರಾದ ಅಲ್ಲಮಪ್ರಭು ಪಾಟೀಲ್, ಕನೀಜ್ ಫಾತಿಮಾ ಅವರ ಸಹಕಾರ ಹಾಗೂ ಬೆಂಬಲ ಮತ್ತು ಸಹಕಾರವನ್ನು ಅಧ್ಯಕ್ಷರು ಇದೇ ಸಂದರ್ಭದಲ್ಲಿ ಕೊಂಡಾಡಿದರು.

ಗುಲಬರ್ಗಾ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರು ಹಾಗೂ ಕುಲಪತಿ ಪ್ರೊ.ಶಶಿಕಾಂತ ಎಸ್. ಉಡಿಕೇರಿ, ರಿಜಿಸ್ಟ್ರಾರ್ ರಮೇಶ್ ಲಂಡನ್ಕರ್, ಮೌಲ್ಯಮಾಪನ ವಿಭಾಗದ ಕುಲಸಚಿವ ನಿಂಗಪ್ಪ ಕಣ್ಣೂರ್, ವಿತ್ತಾಧಿಕಾರಿ ಜಯಾಂಬಿಕಾ, ಸಿಂಡಿಕೇಟ್ ಸದಸ್ಯರುಗಳಾದ ಉದಯ್ ಕಾಂತ್ ಪಾಟೀಲ, ಪೀರ್ ಜಾದ್ ಫಹಿಮುದ್ದೀನ್, ಮಲ್ಲಣ್ಣ ಎಸ್. ಮಡಿವಾಳ, ರಾಘವೇಂದ್ರ ಎಂ.ಭೈರಪ್ಪ, ಸಿದ್ದಪ್ಪ ಸುಳ್ಳದ ಉಪಸ್ಥಿತರಿದ್ದರು.

ಕುಡಿದ ಮತ್ತಿನಲ್ಲಿ ಬಸ್ ಚಾಲನೆ: ಚಾಲಕನಿಗೆ ತರಾಟೆ

ರಾಯಚೂರು: ಮದ್ಯ ಸೇವಿಸಿದ ಮತ್ತಿನಲ್ಲಿ ಬಸ್ ಚಾಲನೆ ಮಾಡುತ್ತಿದ್ದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಚಾಲಕನಿಗೆ ವಾಗ್ವಾಳಿ ನಡೆಸಿ ಬಸ್ ಚಾಲನೆ ಮಾಡದಂತೆ ಪ್ರಯಾಣಿಕರು ತಡೆದ ಘಟನೆ ಸೋಮವಾರ ಸಂಜೆ ಜರುಗಿದ್ದು ತಡವಾಗಿ ಬೆಳಕಿಗೆ ಬಂದಿದೆ.



ಸೋಮವಾರ ಸಂಜೆ 7.30 ಸಮಯಕ್ಕೆ ರಾಯಚೂರಿನಿಂದ ಜೂಕೂರಿಗೆ ತೆರಳುತ್ತಿದ್ದ ಬಸ್‌ನ ಚಾಲಕ ಬಸ್ಸಿನಲ್ಲಿ 30ಕ್ಕೂ ಹೆಚ್ಚು ಪ್ರಯಾಣಿಕರಿದ್ದಾರೆ. ಅವರನ್ನು ಸುರಕ್ಷಿತವಾಗಿ ತಲುಪಿಸಬೇಕೆಂಬ ಪರಿಜ್ಞಾನವೂ ಇಲ್ಲದೆ ಕಂಠಪೂರ್ತಿ ಕುಡಿದು ಬಸ್ ಚಾಲನೆ ಮಾಡಲು ಪ್ರಾರಂಭಿಸಿದ್ದಾರೆ. ರಾಯಚೂರಿನಿಂದ ಕೆಲ ಕಿಮೀಗಳ ದೂರದಲ್ಲಿರುವ ನಾಗಲಾಪುರ ಗ್ರಾಮದ ಬಳಿಯಲ್ಲಿನ ರಸ್ತೆ ತಿರುವಿನಲ್ಲಿ ಬಸ್ ತಿರುಗಿಸುವ ಸಂದರ್ಭದಲ್ಲಿ ಚಾಲಕನ ನಿಯಂತ್ರಣ ತಪ್ಪಿ ಬಸ್ ಪಲ್ಟಿ ಆಗುವ ಹಂತಕ್ಕೆ ಹೋಗಿತ್ತು. ಈ ಸಂದರ್ಭದಲ್ಲಿ ಚಾಲಕ ಹೇಗೋ ನಿಯಂತ್ರಣಕ್ಕೆ ತಗೆದುಕೊಂಡು ಬೀಳದಂತೆ ನಿಯಂತ್ರಿಸಿದ್ದಾರೆ. ಈ ಸಂದರ್ಭದಲ್ಲಿ ವೇಗವಾಗಿ ಚಲಿಸುತ್ತಿ ಬಸ್ಸು ಪಲ್ಟಿ ಆಗಿದ್ದರೆ ಎಷ್ಟು ಜನ ಪ್ರಯಾಣಿಕರ ಪ್ರಾಣ ಪಕ್ಷಿ ಹಾರುತ್ತಿತ್ತೋ ಎನ್ನುತ್ತಾರೆ ಪ್ರಯಾಣಿಕರೋರ್ವರು.

> ಬಸ್ ಚಾಲಕನನ್ನು ವೈದ್ಯಕೀಯ ಪರೀಕ್ಷೆ ಮಾಡಿಸಿ ಅವರ ವಿರುದ್ಧ ಪ್ರಕರಣವನ್ನು ದಾಖಲಿಸಲಾಗಿದೆ. ವಿಚಾರಣೆಯನ್ನು ಮಾಡಲಾಗುತ್ತಿದೆ.
> ■ ಚಂದ್ರಶೇಖರ, ಡಿಟಿಒ

ಈ ಸಂದರ್ಭದಲ್ಲಿ ಬಸ್ಸಿನಲ್ಲಿದ್ದ ಪ್ರಯಾಣಿಕರು ಚಾಲಕನನ್ನು ವಿಚಾರಿಸಲಾರಂಭಿಸಿದ್ದಾರೆ. ಆದರೆ ಚಲಕನಾನು ಮದ್ಯಪಾನಮಾಡಿಲ್ಲ ಎಂದುವಾದಿಸಿ ಮತ್ತು ಚಾಲನೆ ಮಾಡುವುದಕ್ಕೆ ಮುಂದಾಗಿದ್ದಾರೆ. ಈ ಸಂದರ್ಭದಲ್ಲಿ ಪ್ರಯಾಣಿಕರು ಚಾಲಕ ಮತ್ತು ನಿರ್ವಾಹಕರೊಂದಿಗೆ ವಾದಕ್ಕಿಳಿದಿದ್ದಾರಲ್ಲದೆ ಮತ್ತೆ ಚಾಲನೆ ಮಾಡದಂತೆ ತಡೆಹಿಡಿದ್ದಿದ್ದಾರೆ.

ಕುಜುಕೂರ ಗ್ರಾಮದ ಯುವಕರು ಕುಡಿದಿರುವ ಚಾಲಕ ಬಸ್ ಚಾಲನೆ ಮಾಡುವುದೇ ಬೇಡ ಎಂದು ಖಂಡತುಂಡ್ ಹೇಳಿದ್ದಾರೆ. ಈ ಸಮಯದಲ್ಲಿ ಟ್ರಕ್ ಚಾಲನೆ ಮಾಡಿದ ಅನುಭವವಿರುವ ಮಟಮಾರಿಯ ಯುವಕನೋರ್ವ ಬಸ್ ಚಾಲನೆ ಮಾಡಿಕೊಂಡು ಬಂದು ಮಟಮಾರಿ ಗ್ರಾಮವನ್ನು ಮುಟ್ಟಿಸಿದ್ದಾನೆ. ಆದರೆ, ಜೂಕೂರು ಸೇರಿದಂತೆ ಉಳಿದ ಗ್ರಾಮಗಳಿಗೆ ತೆರಳುವ ಪ್ರಯಾಣಿಕರು ಮಟಮಾರಿ ಬಸ್ ನಿಲ್ದಾಣದಲ್ಲಿ ಬಸ್ಸಿನಿಂದ ಕೆಳಗಿಳಿದು ಬೇರೆ ಬಸ್ಸಿಗಾಗಿ ಕಾಯುವಂತಾಗಿದೆ. ಈ ಘಟನೆಗೂ ಪೂರ್ವದಲ್ಲಿ ಬಸ್‌ನ ಮುಂಭಾಗದಲ್ಲಿ ಕುಳಿತ ಮಹಿಳಾ ಪ್ರಯಾಣಿಕರಿಗೆ ಡ್ರೈವರ ಬಸ್ಸನ್ನು ಯದ್ವಾ ತದ್ವಾ ಸ್ಟಾರ್ಟ್ ಮಾಡುತ್ತಿರುವುದನ್ನು ಗಮನಿಸಿ ಚಾಲಕ ಸಹಜ ಸ್ಥಿತಿಯಲ್ಲಿಲ್ಲ ಎಂಬ ಸಂಶಯ ಬಂದಿದೆ. ಈ ಸಂದರ್ಭದಲ್ಲಿ ಅವರನ್ನು ಮಾತನಾಡಿಸುವ ಪ್ರಯತ್ನವನ್ನು ಮಾಡಿದ್ದಾರೆ. ಈ ಸಂದರ್ಭದಲ್ಲಿ ಪ್ರಯಾಣಿಕರಿಗೆ ಸಹಜವಲ್ಲದ ಮಾತುಗಳನ್ನಾಡಿ ಅವರು ಮತ್ತೆ ಮಾತನಾಡದಂತೆ ಸುಮ್ಮನಿರಿಸಿದ್ದಾರೆ ಚಾಲಕ.

ರಾಯಚೂರು ಬಸ್ ನಿಲ್ದಾಣದಲ್ಲಿನೇ ಬಸ್ ಸ್ಟಾರ್ಟ್ ಮಾಡುವ ಸಂದರ್ಭದಲ್ಲಿನೇ ಮದ್ಯದ ಮತ್ತು ನೆತ್ತಿಗೇರಿದ್ದರಿಂದ ಅದಾಗಲೇ ಸ್ವಲ್ಪಮಟ್ಟಿಗೆ ದೇಹದನಿಯಂತ್ರಣದಕಳೆದುಕೊಂಡಿದ್ದು ಅವರಿಗೆ ಸ್ವಲ್ಪಮಟ್ಟಿಗೆ ಖಚಿತವಾದಂತಾಗಿದೆ ಆದರೂ ಎಲ್ಲ ಪ್ರಯಾಣಿಕರಂತೆ ಇವರು ಸುಮ್ಮನಿದ್ದಾರೆ. ಆದರೆ ಪಕ್ಕದ ಪ್ರಯಾಣಿಕರ ಗಮನಕ್ಕೆ ತಂದು ಚಾಲಕನ ಮೇಲೆ ನಿಗಾ ಇಡುವಂತೆ ತಿಳಿಸಿದ್ದಾರೆ.

ವಸ್ತು ಸಂಗ್ರಹಾಲಯ ಮಹತ್ವ ಅರಿಯಿರಿ

ವಿಜಯನಗರ: ಅಂತಾರಾಷ್ಟ್ರೀಯ ವಸ್ತು ಸಂಗ್ರಹಾಲಯಗಳ ಮಹತ್ವವನ್ನು ಇಂದಿನ ಯುವ ಪೀಳಿಗೆ ಅರಿಯಬೇಕಿದೆ. ಉತ್ಖನನದ ಸಂದರ್ಭದಲ್ಲಿ ದೊರೆತ ನಾಣ್ಯಗಳು, ಮಡಿಕೆಗಳು, ತಾಮ್ರಪಟಗಳು ಹಾಗೂ ಶಾಸನಗಳನ್ನು ಸಂರಕ್ಷಿಸುವ ಮಹತ್ತರ ಕೆಲಸವನ್ನು ವಸ್ತುಸಂಗ್ರಹಾಲಯಗಳು ಮಾಡುತ್ತವೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಸಚಿವ ಡಾ.ವಿರೂಪಾಕ್ಷಿ ಪೂಜಾರಹಳ್ಳಿ ಹೇಳಿದರು.

ವಿಶ್ವ ಪರಂಪರಾ ತಾಣವಾದ ಐತಿಹಾಸಿಕ ಹಂಪಿಯ ಕಮಲಾಪುರದಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಹಂಪಿ ವೃತ್ತ, ಶ್ರೀವಿರೂಪಾಕ್ಷೇಶ್ವರ ಪದವಿ ಕಾಲೇಜು ಹಾಗೂ ಹಂಪಿ ಪ್ಯಾಲೇಸ್ ಹೋಟೆಲ್ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಅಂತಾರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.



ಇತಿಹಾಸ ರಕ್ಷಣೆ ಪ್ರತಿಯೊಬ್ಬರ ಕರ್ತವ್ಯ: ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ (ಹಂಪಿ ವೃತ್ತ) ಪುರಾತತ್ವಅಧೀಕ್ಷಕರಾದಕೆ.ರಾಮಕೃಷ್ಣ ರೆಡ್ಡಿ ಅವರು ಮಾತನಾಡಿ, ಭಾರತದ ಸಂವಿಧಾನವು ನಮಗೆ ಮೂಲಭೂತ ಹಕ್ಕುಗಳನ್ನು ಕಲ್ಪಿಸುವುದರ ಜೊತೆಗೆ ಕೆಲವು ಕರ್ತವ್ಯಗಳನ್ನೂ ನೀಡಿದೆ. ನಮ್ಮ ದೇಶದ ಸಂಸ್ಕೃತಿ, ಪರಂಪರೆ ಮತ್ತು ಇತಿಹಾಸವನ್ನು ತಿಳಿಯುವುದು ಹಾಗೂ ಅದನ್ನು ರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ವಿದ್ಯಾರ್ಥಿಗಳು ದೇಶದ ಹೆಮ್ಮೆಯ ಚರಿತ್ರೆಯನ್ನು ಅರಿತು, ವಸ್ತುಸಂಗ್ರಹಾಲಯಗಳ ಪಾತ್ರವನ್ನು ಅರ್ಥಮಾಡಿಕೊಳ್ಳಬೇಕು ಎಂದು ಕರೆ ನೀಡಿದರು.

ವಿಶ್ವದ ಅತಿ ದೊಡ್ಡ ಜೀವಂತ ಬಯಲು ವಸ್ತುಸಂಗ್ರಹಾಲಯ: 1986ರಲ್ಲಿ ಕರ್ನಾಟಕದಿಂದಲೇ ಮೊಟ್ಟಮೊದಲ ಬಾರಿಗೆ ವಿಶ್ವ ಪರಂಪರೆ ಪಟ್ಟಿಗೆ ಸೇರಿದ ಹೆಗ್ಗಳಿಕೆ ಹಂಪಿಯದ್ದಾಗಿದೆ. ಇಲ್ಲಿನ ಶ್ರೀಮಂತ ಪರಂಪರೆ, ಸಂಸ್ಕೃತಿ ಮತ್ತು ಸ್ಮಾರಕಗಳನ್ನು ಗಮನಿಸಿದ ಯುನೆಸ್ಕೋ ಹಂಪಿಗೆ ''ಪ್ರಪಂಚದ ಜೀವಂತ ಬಯಲು ವಸ್ತು ಸಂಗ್ರಹಾಲಯ'' ಎಂಬ ಬಿರುದನ್ನು ನೀಡಿದೆ.

ಹಂಪಿ ಒಂದು ಬೃಹತ್ ವಸ್ತು ಸಂಗ್ರಹಾಲಯವಾಗಿದೆ. ವಿಜಯನಗರ ಸಾಮ್ರಾಜ್ಯ ಹಾಗೂ ಅದಕ್ಕೂ ಪೂರ್ವದಲ್ಲಿ ಆಳ್ವಿಕೆ ನಡೆಸಿದ ರಾಜವಂಶಗಳ ಕುರುಹುಗಳು, ಸ್ಮಾರಕಗಳು, ನಾಣ್ಯಗಳು ಮತ್ತು ಶಾಸನಗಳನ್ನು ಇಲ್ಲಿನ ಸಂಗ್ರಹಾಲಯವು ಅತ್ಯಂತ ಜಾಗರೂಕತೆಯಿಂದ ಸಂರಕ್ಷಿಸುತ್ತಿದೆ ಎಂದರು.

ಕಮಲಾಪುರದ ವಿರೂಪಾಕ್ಷೇಶ್ವರ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಬಸವರಾಜ್ ಎಮ್ಮಿಗನೂರು, ಜೆಎಸ್‌ಡಬ್ಲ್ಯೂ ಪ್ರತಿನಿಧಿ ಪಂಕಜ್ ಕುಮಾರ್, ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಉಪ ಅಧೀಕ್ಷಕ ದೇವರಾಜ್ ಉಪಸ್ಥಿತರಿದ್ದರು.

ಕ್ರಿ. ಮಿ. ನಂ: 107/2026

ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ಬ್ಯಾಡಗಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರ : ಶ್ರೀ ಚಂದ್ರಪ್ಪ ತಂದೆ ಬಸಪ್ಪ ಸೊಡ್ರಿ ಸಾ॥ ದುಮ್ಮಿಹಾಳ ತಾ॥ ಬ್ಯಾಡಗಿ ಜಿ॥ ಹಾವೇರಿ

ವಿರುದ್ಧ

ಎದುರುಗಾರರು : 1] ಮೇ॥ ತಹಶೀಲ್ದಾರರು ಬ್ಯಾಡಗಿ ತಾಲೂಕ ಹಾಗೂ ಇನ್ನೊಬ್ಬರು

ಇಸ್ತಿಹಾರ

ಮೇಲ್ಕಾಣಿಸಿದ ಅರ್ಜಿದಾರನ ತಾಯಿಯಾದ ಭೀಮವ್ವ ಕೋಂ. ಬಸಪ್ಪ ಸೊಡ್ರಿ ಇವರು ದಿನಾಂಕ: 12-09-1973 ರಂದು ಬ್ಯಾಡಗಿ ತಾಲೂಕ ದುಮ್ಮಿಹಾಳ ಗ್ರಾಮದ ನನ್ನ ಮನೆಯಲ್ಲಿ ಮರಣ ಹೊಂದಿದ್ದು ಇರುತ್ತದೆ ಅಂತಾ ಆದೇಶ ಪಡೆಯುವ ಕುರಿತು ಎದುರುಗಾರರ ಮೇಲೆ ಮಾನ್ಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಿಸ್ಲೆನಿಯಸ್ ನಂ: 107/2026 ನೇದ್ದನ್ನು ದಾಖಲ್ ಪಡಿಸಿದ್ದು ಇರುತ್ತದೆ.

ಕಾರಣ ಈ ಮೇಲ್ಕಂಡ ವಿಷಯದ ಬಗ್ಗೆ ಯಾರಾದರೂ ಹಿತಾಸಕ್ತಿಯುಳ್ಳವರು ಇದ್ದಲ್ಲಿ, ತಮ್ಮ ತಕರಾರು ಏನಾದರೂ ಇದ್ದಲ್ಲಿ ದಿನಾಂಕ: 11-06-2026 ಮುಂಜಾನೆ ಸರಿಯಾಗಿ 10-30 ಘಂಟೆಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಸಲ್ಲಿಸಬೇಕು. ತಪ್ಪಿದ್ದಲ್ಲಿ ಸದರ ಪ್ರಕರಣದಲ್ಲಿ ಮುಂದಿನ ಆದೇಶ ಮಾಡಲಾಗುವುದು.

ಈ ದಿವಸ 29ನೇ ಏಪ್ರೀಲ್ ತಿಂಗಳ 2026 ರಂದು ತಮ್ಮ ಸಹಿ ಹಾಗೂ ಕೋರ್ಟಿನ ಮೊಹರಿನೊಂದಿಗೆ ಕೊಡಲ್ಪಟ್ಟಿತು.

ಸ್ಥಳ : ಬ್ಯಾಡಗಿ
ದಿನಾಂಕ : 29-04-2026

ಸಹಿ/- (J. B. Barki), ಶಿರಸ್ತೇದಾರರು
ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ಇವರ ನ್ಯಾಯಾಲಯ ಬ್ಯಾಡಗಿ
ಸಹಿ/- ಶಂಕರ ಎನ್. ಬಾರ್ಕಿ
ಅರ್ಜಿದಾರನ ಪರ ವಕೀಲರು

ಸಾರ್ವಜನಿಕ ನೋಟಿಸು

ನಮ್ಮ ಪಕ್ಷಗಾರರಾದ ಶ್ರೀ ಅಮರ ಸೋಮನಾಥ ಘೂತ ಸಾ॥ ಕಾಶಿಪೇಠ, ರಾಮದುರ್ಗ ಇವರು ಕೊಟ್ಟ ಅಧಿಕಾರ ಮತ್ತು ಮಾಹಿತಿ ಮೇರೆಗೆ ನಾನು ಈ ಮೂಲಕ ಕೊಡುವ ಸಾರ್ವಜನಿಕ ನೋಟೀಸ್ ಏನೆಂದರೆ,

ಬೆಳಗಾಂವ ಜಿಲ್ಲಾ ರಾಮದುರ್ಗ ಸಬ್ ರಜಿಸ್ಟಾರ ಹದ್ದಿಯ ಪೈಕಿ ರಾಮದುರ್ಗ ಪುರಸಭೆಯ ವ್ಯಾಪ್ತಿಗೆ ಒಳಪಟ್ಟ ಲಕ್ಷ್ಮೀನಗರ ಹದ್ದಿಯ ಸಿ.ಟಿ.ಎಸ್. ನಂ. 3339/ಬಿ/23 ಟಿ.ಎಂ.ಸಿ. ನಂ 40-505-287 290.70 ಚ.ಮೀ ಇದ್ದು ಸದರಿ ಆಸ್ತಿಯು ನಮ್ಮ ಪಕ್ಷಗಾರರ ಮಾಲ್ಕಿ ವ, ಕಬ್ಜಾ ವಹಿವಾಟಿಯಲ್ಲಿರುತ್ತದೆ. ಸದರ ಆಸ್ತಿಗೆ ಸಂಬಂಧಪಟ್ಟ ದಿನಾಂಕ 21-02-2003 ರ ದಸ್ತಾವೇಜು ಸಂಖ್ಯೆ 2611/2003-04 ಪ್ರಕಾರ ನೋಂದಣಿಯಾಗಿದ್ದ ಅಸಲಿ ಖರೀದಿ ಪತ್ರ ದಿನಾಂಕ 10-04-2026 ರಂದು ಸರಕಾರಿ ಆಸ್ಪತ್ರೆ ಸರ್ಕಲ್‌ದಲ್ಲಿ ನಜರಚೂಕಿನಿಂದ ಕಳೆದುಕೊಂಡಿರುತ್ತಾರೆ. ಸದರಿ ಖರೀದಿ ಪತ್ರಗಳನ್ನು ಯಾವುದೇ ಸಂಘ ಸಂಸ್ಥೆಗಳಲ್ಲಿ ಅಡಮಾನವಾಗಿ ಇಟ್ಟಿರುವದಿಲ್ಲ. ಸದರಿ ಆಸ್ತಿಯ ಕುರಿತು ಯಾರಿಗಾದರೂ ಹಕ್ಕು ವ, ಹಿತಸಂಬಂಧವಿದ್ದಲ್ಲಿ ಪೂರಕ ದಾಖಲೆಗಳೊಂದಿಗೆ ಅಥವಾ ಒಂದು ವೇಳೆ ಸದರಿ ಕಾಗದ ಪತ್ರಗಳು ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗೆ ಕಾಣಿಸಿದ ವಿಳಾಸಕ್ಕೆ ಈ ನೋಟಿಸು ಪ್ರಕಟವಾದ 07 ದಿವಸಗಳ ಒಳಗಾಗಿ ಮುಟ್ಟಿಸಬೇಕು/ಸಲ್ಲಿಸಬೇಕಾಗಿ ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.

ರಾಮದುರ್ಗ
ದಿನಾಂಕ 20-05-2026

ಸಹಿ/- ಟಿ.ಆರ್. ರಾಜೂರ, ವಕೀಲರು
ಸಾ: ನಿಜಗುಲಿ ಬಿಲ್ಡಿಂಗ್ ನವಿಪೇಠ ರಾಮದುರ್ಗ
ಫೋನ್ ನಂ:- 9886599684

CHANGE OF NAME

I, **BIBI AYEESHA GADI** (Old Name) Resident of Sawmills S S Road Shiralakoppa, Shivamogga - 577428, have changed my name as **BIBI AYISHA GADI** (New Name) henceforth I will be called and recognized by new name for all future purposes, dated: 20/05/2026.

CHANGE OF NAME

I, **SANJAY KATARIA** (Old Name) Resident of Nana Ram Krupa 97, Adarsh Layout, Kusugal Road, Hubli - 580023, have changed my name as **SANJAYKUMAR KATARIA** (New Name) henceforth I will be called and recognized by new name for all future purposes, dated: 20/05/2026.

CHANGE OF NAME

I, **RAJASHEKHARA S/O SHIVANNA GOUDA PATILA** (Old Name) Resident of Bendartalhalli - 585216, Post Alhal Tq: Shorapur Dist: Yadgir, have changed my name as **RAJASHEKHAR** (New Name), and my father name from Sihivannagouda Patila To Shivanna Gowda for all purposes, vide affidavit dated: 20/05/2026 before notary **S S MALAGATTI** of Muddebihal.

CHANGE OF NAME

I, **MALANBI LAHORI** (Old Name) Resident of Maruti Nagar Muddebihal Vijayapura 586212 Karnataka, have changed my name as **MALANABI LALASO SALAVADAGI** (New Name) henceforth I will be called and recognized by new name for all future purposes, dated: 20/05/2026.

CHANGE OF NAME

I, **SANIYABANU RAHUTTAR** (Old Name) Resident of Millat Nagar, Mantur Road, Hubli, Hubballi – Dharwad City - 580020, Karnataka, India, have changed my name as **SANIYABANU ELIYAS BELGAUM** (New Name) henceforth I will be called and recognized by new name for all future purposes, dated: 20/05/2026.

CHANGE OF NAME

I, **MOHIT GURNANI** (Old Name) Resident of K K Gurnani Building, Bammapur Oni, Hubballi – Dharwad City - 580028, Karnataka, India, have changed my name as **MOHIT SACHIN GURNANI** (New Name) henceforth I will be called and recognized by new name for all future purposes, dated: 20/05/2026.

CHANGE OF NAME

I, **RAJASHEKHARA S/O SHIVANNAGOUDA PATILA** (Old Name) Resident of Bendartalhalli - 585216, Post Alhal Tq: Shorapur Dist: Yadgir, have changed my name as **RAJASHEKHAR** (New Name), and my father name from Sihivannagouda Patila To Shivanna Gowda for all purposes, vide affidavit dated: 20/05/2026 before notary **S S MALAGATTI** of Muddebihal.

CHANGE OF NAME

I, **SHAKERABI MAKANDAR** (Old Name) Resident of Bilal Mohalla At Post Kudachi 591311 (address), have changed my name as **SHAKERABI AZIZDIN MAKANDAR** (New Name) henceforth I will be called and recognized by new name for all future purposes, dated: 20/05/2026.

CHANGE OF NAME

I, **BHAGAVANTHI SANGAVI** (Old Name) Resident of Rakesh, Railway Station Road, Ranibennur, Haveri Karnataka Pin: 581115, have changed my name as **BHAGAVANTHI R SANGAVI** (New Name) henceforth I will be called and recognized by new name for all future purposes, dated: 20/05/2026.

CHANGE OF NAME

PIPPALLA VIJAYAMBICA (Old Name) Resident of 6-35 C/o A. Rambabu, Lineman Laxmi Nagar Jangareddy Gudem Road Tangellamudi Eluru R. S, West Godavari Andhra Pradesh - 534005, have changed my name as **PUSULURI VIJAYAMBICA** (New Name) henceforth I will be called and recognized by new name for all future purposes, dated: 20/05/2026.

ಕರ್ನಾಟಕ ಸರ್ಕಾರ

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮಂಡ್ಯ
ದೂರವಾಣಿ ಸಂಖ್ಯೆ:08232-224195 ಇ-ಮೇಲ್:eepredmandya@gmail.com

ಸಂಖ್ಯೆ:ಕಾಅ:ಪಂರಾಇಂ:ವಿ:ಮಂಡ್ಯ:ಸಇಂ-1:ಟೆಂ.ಪ್ರ:2026-27 ದಿನಾಂಕ: 15.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 02/2026-27

ಕರ್ನಾಟಕ ಸರ್ಕಾರದ ರಾಜ್ಯಪಾಲರುರವರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯರವರಿಂದ ನಾಗಮಂಗಲ ತಾಲ್ಲೂಕಿನ ವಿಧಾನ ಸಭಾಕ್ಷೇತ್ರಕ್ಕೆ ಸಂಬಂಧಿಸಿದಂತೆ **2025-26ನೇ** ಸಾಲಿನ ಲೆಕ್ಕಶೀರ್ಷಿಕೆ **4515-00-102-1-03-386** ಯೋಜನೆಯಡಿ ಅನುಮೋದನೆಯಾಗಿರುವ ನಾಗಮಂಗಲ ತಾಲ್ಲೂಕು ಪಂಚಾಯಿತಿ ಕಟ್ಟಡ ನಿರ್ಮಾಣ ಕಾಮಗಾರಿಯ ಟೆಂಡರ್‌ಗೆ ಇಡಲಾದ ಮೊತ್ತ **ರೂ.403.07ಲಕ್ಷ** ಮೊತ್ತದ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ದ್ವೀ-ಲಕೋಟೆ ಪದ್ಧತಿ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು **https://kppp.karnataka.gov.in, KPP Portal** ಆನ್‌ಲೈನ್ ಮೂಲಕ ಸಲ್ಲಿಸತಕ್ಕದ್ದು, ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ **ದಿನಾಂಕ:06.06.2026ರ ಸಂಜೆ 4.00ಗಂಟೆವರೆಗೆ.** ಹೆಚ್ಚಿನ ವಿವರಗಳಿಗಾಗಿ ಕೆ.ಪಿ.ಪಿ. ಪೋರ್ಟಲ್ ಅಥವಾ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯರವರ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಮಂಡ್ಯ

ವಾಸಾಸಂಇ/ಮಂಡ್ಯ/ಶಿರಡಿ ಸಾಜ/141/2026-27

CHANGE OF NAME

I, **BAGAVANT MALI** (Old Name) Resident of At Post: Savalagi, Tq: Jamakhandi, Dist: Bagalkot, Karnataka - 587330, have changed my name as **BHAGAVANT MALI** (New Name) henceforth I will be called and recognized by new name for all future purposes, dated: 20/05/2026.

CHANGE OF NAME

I, **MOHAMMED ADNAN LALLOTI** (Old Name) Resident of H No 40-76/3 W No 17 Khawaspura Ameena Complex Opp Govt Hospital Shahapur 585223 Karnataka, have changed my name as **MOHAMMED ADNAN** (New Name) henceforth I will be called and recognized by new name for all future purposes, dated: 20/05/2026.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಕರ್ನಾಟಕ ನೀರಾವರಿ ನಿಗಮ ನಿಯಮಿತ,
ನಂ.4, ಬಿ.ಆರ್.ಎಲ್.ಬಿ.ಸಿ, ವಿಭಾಗ, ಭದ್ರಾವತಿ
ಫೋನ್: 08282-271063 ಫ್ಯಾಕ್ಸ್ : 08282-271063
E-mail : eeknnlbdvt@yahoo.co.in

ಸಂ:ಕಾ.ಇಂ/ಕನೀನಿನಿ/ಬಿಡಿಯನ್-4/ತಾ.ಸಂ/ಪಿ.ಬಿ 1/4701 ಭದ್ರಾ ಟೆಂಡರ್
ಪ್ರಕಟಣೆ ಸಂಖ್ಯೆ: 03/2026-27 ದಿನಾಂಕ: 15.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೆ.ಟಿ.ಪಿ.ಪಿ ವೇದಿಕೆಯಡಿಯಲ್ಲಿ 4701 ಭದ್ರಾ ಲೆಕ್ಕ ಶೀರ್ಷಿಕೆಯಡಿಯಲ್ಲಿ 01 ಸಂಖ್ಯೆ ಕಾಮಗಾರಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ., ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರ-ರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿ.ಆರ್. ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.

(1) ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು : **20.05.2026,** ರಿಂದ **02.06.2026** ರವರೆಗೆ **17.30** ಗಂಟೆಗೆ. (2) Pre-Bid Meeting : **25.05.2026** ರಂದು **11.00** ಗಂಟೆಗೆ ಕಾರ್ಯಪಾಲಕ ಇಂಜಿನಿಯರ್, ಕನೀನಿನಿ., ನಂ.4 ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **03.06.2026** ರಂದು **17.30** ಗಂಟೆಗೆ (4) ಆರ್ಥಿಕ ಬಿಡ್ ತೆರೆಯುವ ದಿನಾಂಕ : **After obtaining approval of technical bid from competent authority** (5) ಕಾಲಾವಧಿ : **08 ತಿಂಗಳು (ಮಳೆಗಾಲ ಸಹಿತ)** (6) ಟೆಂಡರಿಗಿಟ್ಟ ಮೊತ್ತ : **ರೂ.304.70 ಲಕ್ಷಗಳವರೆಗೆ** (7) ಇ.ಎಂ.ಡಿ ಮೊತ್ತ : **ರೂ. 4.58/- lakhs (Rs.1.00 lakhs through e-cash and balance amt of Rs. 3.58 lakhs through e-BG)**

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಪೋನ್ : 8660573513.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಕ.ನೀ.ನಿ.ನಿ., ನಂ.4 ಬಿ.ಆರ್.ಎಲ್.ಬಿ.ಸಿ. ವಿಭಾಗ,
ಭದ್ರಾವತಿ

ವಾ.ಸಾ.ಸಂ.ಇ./ಶಿ/ನಂ.79-05
ಝೀಂಕಾರ್/2026-27

CHANGE OF NAME

I, **MOHAMMEDJAFFAR MOULAALI NEERMANI** (Old Name) Resident of #581, Guddad Oni, Shiggaon, Haveri, Karnataka - 581205, Karnataka India, have changed my name as **MAHAMMADJAFAR NEERMANI** (New Name) henceforth I will be called and recognized by new name for all future purposes, dated: 20/05/2026.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರವರ ಕಾರ್ಯಾಲಯ,
ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಧಾರವಾಡ-580001
ಕಛೇರಿ : 0836-2447090, ಇ-ಮೇಲ್ : kwbcen@gmail.com

ಟೆಂಡರ್ ಪ್ರಕಟಣೆ CALL-3 (ಎಲೆಕ್ಟ್ರಾನಿಕ್ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಅರ್ಹರಿರುವ ಸಂಸ್ಥೆ/ಗುತ್ತಿಗೆದಾರರಿಂದ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ (ದ್ವಿ-ಟೆಂಡರ್ ದಾಖಲೆ ಪದ್ಧತಿಯಲ್ಲಿ) ಟೆಂಡರ್ ಆಹ್ವಾನಿಸಲಾಗಿದೆ. ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:169 ದಿನಾಂಕ: 18-05-2026. ಕಾಮಗಾರಿಯ ಹೆಸರು : ಯೋಜನೆಯ ಉಳಿತಾಯದ ಮೊತ್ತದಡಿ ದಾಂಡೇಲಿ ಪಟ್ಟಣ ಒಳಚರಂಡಿ ಯೋಜನೆಯಡಿ ನಿರ್ಮಿಸಲಾಗಿರುವ ವಿವಿಧ ಘಟಕಗಳ 5 ವರ್ಷಗಳ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿ. (ಇಡುಗಂಟು ಟೆಂಡರ್-ವೇರಿಯೇಷನ್ ಇರುವುದಿಲ್ಲಾ). INDENT No.KUWSDB/2025-26/WS/WORK_INDENT/490/CALL-3. ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು ಅಥವಾ ಮುಖ್ಯ ಅಭಿಯಂತರು. ಕನನೀಸ ಮತ್ತು ಒಚ ಮಂಡಳಿ. ಧಾರವಾಡ ಕಚೇರಿಯನ್ನು ಸಂಪರ್ಕಿಸಬಹುದು.

ಸಹಿ/- ಮುಖ್ಯ ಅಭಿಯಂತರು,
ಕನನೀಸ ಮತ್ತು ಒಚ ಮಂಡಳಿ, ಧಾರವಾಡ

ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/206/2026-27

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಕ್ರ.ಸಂ:952/ಗದಗ/ಕಾನಿಇಂ(ವಿ)/2026-27/864 ದಿನಾಂಕ:19.05.2026

ಟೆಂಡರ್ ಪ್ರಕಟಣೆ

ಕವಿಪ್ರನಿನಿಯು ಗದಗ ಕಾರ್ಯಾಚರಣೆಗಳ ವಿಭಾಗ ವ್ಯಾಪ್ತಿಯಲ್ಲಿ ಈ ಕೆಳಗಿನ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

(1) 110ಕೆವಿ ಡಂಬಳ ಉಪಕೇಂದ್ರದಲ್ಲಿ ವಿಫಲವಾದ ಕೆಪ್ಯಾಸಿಟರ್ ಸೆಲ್ ಅನ್ನು ರೀಕಂಡೀಷನ್ ಮಾಡುವುದು. (2) 110ಕೆವಿ ಶಿರಹಟ್ಟಿ ಉಪಕೇಂದ್ರದಲ್ಲಿ 10 ಎಂವಿಎ, 110/11ಕೆವಿ ಪರಿವರ್ತಕ-1&2 ರ ತೈಲ ಸೋರುವಿಕೆಯನ್ನು ತಡೆಗಟ್ಟುವ ಕಾಮಗಾರಿ. (3) 110ಕೆವಿ ಮುಂಡರಗಿ ಉಪಕೇಂದ್ರದಲ್ಲಿ 20 ಎಂವಿಎ, 110/33ಕೆವಿ ಪರಿವರ್ತಕ-3 ರ ತೈಲ ಸೋರುವಿಕೆಯನ್ನು ತಡೆಗಟ್ಟುವ ಕಾಮಗಾರಿ. (4) 110ಕೆವಿ ಮುಂಡರಗಿ ಉಪಕೇಂದ್ರದಲ್ಲಿ ವಿಫಲವಾದ ಕೆಪ್ಯಾಸಿಟರ್ ಸೆಲ್ ಅನ್ನು ಮರು ಪರಿಶೀಲನೆ ಮಾಡುವುದು. (5) 110ಕೆವಿ ಬೆಳ್ಳಟ್ಟಿ ಉಪಕೇಂದ್ರದಲ್ಲಿ 20 ಎಂವಿಎ, 110/11ಕೆವಿ ಪರಿವರ್ತಕದ ತೈಲ ಸೋರುವಿಕೆಯನ್ನು ತಡೆಗಟ್ಟುವ ಕಾಮಗಾರಿ.

ವಿಚಾರಣೆಯ ವಿವರಗಳನ್ನು ದಿನಾಂಕ:21.05.2026 ರಂದು 10:00 ಗಂಟೆಯ ತದನಂತರ ಈ ಕಚೇರಿಯಿಂದ ಪಡೆಯಬಹುದು. ಕೊನೆಯ ದಿನಾಂಕ: 04.06.2026 ರಂದು ಸಂಜೆ: 4:00 ಗಂಟೆಯ ವರೆಗೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಕಾರ್ಯಾಚರಣೆಗಳ ವಿಭಾಗ, ಕವಿಪ್ರನಿನಿ,
ಬಾಪೂಜಿ ನಗರ, ಗದಗ. ದೂರವಾಣಿ: 08372-234350

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೀಳಗಿ.

ಕ್ರ.ಸಂ.ಕೃಉಮಾಸ/ಬೀ/ಅಭಿಕೆ/35/2026-27, ದಿನಾಂಕ:18-05-2026.

ಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮುಖಾಂತರ)

ಕ್ರ ಸಂ	ಕಾಮಗಾರಿಯ ಹೆಸರು	ಟೆಂಡರಗಿಟ್ಟ ಮೊತ್ತ (ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ. ಗಳಲ್ಲಿ)
1	PROVIDING INFRASTRUCTURE FACILITIES AT MAIN MARKET YARD OF APMC BILAGI UNDER RIDF-31 SCHEME-2025-26 Work Indent No:APMC/2025-26 /OW/WORK_INDENT870	4,10,96,779=00 (GST ಹೊರತು ಪಡಿಸಿ)	6,17,000=00

ಮೇಲ್ಕಾಣಿಸಿದ ಕಾಮಗಾರಿಯನ್ನು ಕಾರ್ಯಗತಗೊಳಿಸಲು KPP PORTAL ಮೂಲಕ ಟೆಂಡರ ಹೊರಡಿಸಲಾಗಿದ್ದು, ಬಿಡ್ ಪೂರ್ವಭಾವಿ ಸಭೆ ಮತ್ತು ಟೆಂಡರ ತಕರಾರು ಸಮಜಾಯಿಸಿ ನೀಡುವ ದಿನಾಂಕ:16-06-2026 ಬೆಳಿಗ್ಗೆ 11.30 ಗಂಟೆಗೆ ಟೆಂಡರನ್ನು ಸ್ವೀಕರಿಸುವ ಕೊನೆಯ ದಿನಾಂಕ:22-06-2026 ರ ಸಾಯಂಕಾಲ 5.30 ಗಂಟೆಯವರೆಗೆ ನಿಗದಿ ಪಡಿಸಿದ್ದು, ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಹಾಗೂ https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/-ಕಾರ್ಯದರ್ಶಿ
ಕೃಉಮಾಸ, ಬೀಳಗಿ.

DIPR/BGK/RO-NO-55/KSMCA/2026-27

ಸಹಿ/-ಆಡಳಿತಾಧಿಕಾರಿಗಳು
ಕೃಉಮಾಸ, ಬೀಳಗಿ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

49, 'ಪರಿಸರ ಭವನ', 1 ರಿಂದ 5ನೇ ಅಂತಸ್ತು, ಚರ್ಚ್ ರಸ್ತೆ,
ಬೆಂಗಳೂರು-560001, ಕರ್ನಾಟಕ,
ದೂರವಾಣಿ ಸಂಖ್ಯೆ : 25581383, 25589112, 25586520, ಫ್ಯಾಕ್ಸ್: 080-25586321
E-mail: ho@kspcb.gov.in, Website: https://kspcb.karnataka.gov.in

ಸಂಖ್ಯೆ:ಮಾನಿಮಂ/342/ಹಿಪಅ/ಗಣಿ/ಪಸಾಸ/2026-27/584 ದಿನಾಂಕ: 20.05.2026

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಶ್ರೀ. ನಾಗರಾಜ್ ಬಿನ್ ಚಂದಪ್ಪ ಇವರು ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕು ದೊಂಡಂಬಳಿ ಗ್ರಾಮದ ಸರ್ವೆ ನಂ. 7/*/*ರ ಸಮೀಪದಲ್ಲಿರುವ ಕೃಷ್ಣ ನದಿಪಾತ್ರ ಯೋಜನೆಯಲ್ಲಿರುವ "ಆರ್‌ಎಸ್‌ಬಿ-25, ದೊಂಡಂಬಳಿ ಮರಳು ಗಣಿಗಾರಿಕೆ ಬ್ಲಾಕ್-01" ರಲ್ಲಿ ಒಟ್ಟು 5.0585 ಹೆಕ್ಟೇರ್ (12.20 ಎಕರೆ) ಪ್ರದೇಶದಲ್ಲಿ ವಾರ್ಷಿಕ 26,100 ಟನ್ ಉತ್ಪಾದನಾ ಸಾಮರ್ಥ್ಯದ ನದಿ ಮರಳು ಗಣಿಗಾರಿಕೆ ಯೋಜನೆಯನ್ನು 5 ವರ್ಷಗಳ ಅವಧಿಗೆ ಕೈಗೊಳ್ಳಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯು ಪರಿಸರ ಆಘಾತ ಅಧ್ಯಯನ ಅಧಿಸೂಚನೆ, 2006 ಮತ್ತು ತಿದ್ದುಪಡಿಗಳಂತೆ ಬಿ1 ವರ್ಗದ ಚಟುವಟಿಕೆ 1(ಎ) – 'ಖನಿಜಗಳ ಗಣಿಗಾರಿಕೆ' ವರ್ಗವೆಂದು ಪರಿಗಣಿಸಲಾಗಿದೆ.

ಸದರಿ ಯೋಜನೆಯ ಪ್ರವರ್ತಕರು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ (ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರಿಂದ ಮೊದಲೇ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಿಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರ Terms of Reference ಪತ್ರ ಸಂಖ್ಯೆ: SEIAA 30 MIN 2026, ದಿನಾಂಕ:03.03.2026 ಹಾಗೂ ಯೋಜನದಾರರು ನೀಡಿದ ನಿವೇದನೆಯ ಪತ್ರ ದಿನಾಂಕ:20.03.2026 ರ ಪ್ರಕಾರ ಮತ್ತು ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ, ರಾಯಚೂರು, ಇವರ ಪತ್ರ ದಿನಾಂಕ:13.05.2026 ರಲ್ಲಿ ಸೂಚಿಸಿದ ದಿನಾಂಕದಂತೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ. **ಯೋಜನೆಯ ವಿವರಗಳು ಕೆಳಕಂಡಂತಿವೆ.**

1. **ಕಂಪನಿಯ ಹೆಸರು ಮತ್ತು ವಿಳಾಸ :** ಶ್ರೀ. ನಾಗರಾಜ್ ತಂದೆ ಚಂದಪ್ಪ, #96, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ-584 111.
2. **ಉದ್ದೇಶಿತ ಯೋಜನೆಯ ಸ್ಥಳ :** ಸರ್ವೆ ನಂ. 7/*/*ರ ಸಮೀಪದಲ್ಲಿರುವ ಕೃಷ್ಣ ನದಿಪಾತ್ರ ಯೋಜನೆಯ "ಆರ್‌ಎಸ್‌ಬಿ-25, ದೊಂಡಂಬಳಿ ಮರಳು ಗಣಿಗಾರಿಕೆ ಬ್ಲಾಕ್-01, ದೊಂಡಂಬಳಿ ಗ್ರಾಮ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ
3. **ಉದ್ದೇಶಿತ ಯೋಜನೆಯ ವಿವರ :** ವಾರ್ಷಿಕ 26,100 ಟನ್ ಉತ್ಪಾದನಾ ಸಾಮರ್ಥ್ಯದ ನದಿ ಮರಳು ಗಣಿಗಾರಿಕೆ ಯೋಜನೆಯನ್ನು 5 ವರ್ಷಗಳ ಅವಧಿಗೆ ಕೈಗೊಳ್ಳಲು ಉದ್ದೇಶಿಸಿರುತ್ತಾರೆ.
4. **ಪರಿಸರ ಸಾರ್ವಜನಿಕ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ : ದಿನಾಂಕ : 22.06.2026 (ಸೋಮವಾರ), ಸಮಯ : ಬೆಳಿಗ್ಗೆ 11:30 ಗಂಟೆ, ಸ್ಥಳ: ಆನೆಮಲ್ಲೇಶ್ವರ ದೇವಸ್ಥಾನ ಹತ್ತಿರ, ಬೆಣಕಲ್ ಗ್ರಾಮ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ**

5. ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಷೆಗೆ ಲಭ್ಯವಿರುವ ಸ್ಥಳ: (ಅ)ಜಿಲ್ಲಾಧಿಕಾರಿಗಳ ಕಛೇರಿ, ರಾಯಚೂರು ಜಿಲ್ಲೆ, ರಾಯಚೂರು. (ಆ)ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ರಾಯಚೂರು ಜಿಲ್ಲೆ, ರಾಯಚೂರು. (ಇ)ತಹಶೀಲ್ದಾರರ ಕಾರ್ಯಾಲಯ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ. (ಈ) ಗಣಿ ಮತ್ತು ಭೂವಿಜ್ಞಾನ ಇಲಾಖೆ, ರಾಯಚೂರು ಜಿಲ್ಲೆ.(ಉ) ಪುರಸಭೆ ಕಾರ್ಯಾಲಯ, ದೇವದುರ್ಗ, ರಾಯಚೂರು ಜಿಲ್ಲೆ. (ಊ)ಗ್ರಾಮ ಪಂಚಾಯತ್ ಕಾರ್ಯಾಲಯ, ದೊಂಡಂಬಳಿ, ದೇವದುರ್ಗ ತಾಲ್ಲೂಕು. (ಋ)ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ರಾಯಚೂರು. (ಎ) ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಕರ್ನಾಟಕ, ಬೆಂಗಳೂರು-560 001. (ಏ)ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ", ನೆಲ ಮಹಡಿ, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು-560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ-ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ-ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ, ರಾಯಚೂರು) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: **https://kspcb.karnataka.gov.in/** ನಲ್ಲಿ ಪಡೆಯಬಹುದು.

ಸಹಿ/-
ಸದಸ್ಯ ಕಾರ್ಯದರ್ಶಿ

ಕರ್ನಾಟಕ ಸರ್ಕಾರ

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ

ದೂರವಾಣಿ: 08382-220556 ಇ-ಮೇಲ್: predkarwar@gmail.com
ಕ್ರ.ಸಂ:ಪಂರಾ.ಇಂ/ಕಾ/ಪಿಬಿ-1/2026-27/08 ದಿ: 19.05.2026

ಟೆಂಡರ್ ಪ್ರಕಟಣೆ-08/2026-27 (ಕೆ.ಪಿ.ಪಿ.ಪಿ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಕಾರವಾರ ಇವರಿಂದ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ 2026-27ನೇ ಸಾಲಿನ ವಿವಿಧ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗೆ 3ನೇ ತಂಡ ತಪಾಸಣಾ ಸಂಸ್ಥೆ ನೇಮಿಸುವುದಕ್ಕಾಗಿ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನ K.W-4 ರ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿಯ ಹೆಸರು: **EMPANELMENT FOR PROJECT MANAGEMENT CONTRACT (PMCTHIRD PARTY INSPECTION FOR QUALITY OF WORKS) UNDER DIFFERENT HEAD OF ACCOUNTS IN PRE DIVISION KARWAR IN UTTARA KANNADA DISTRICT, RDPR/2026-27/SE3907,** ಅಂದಾಜು ಮೊತ್ತ ರೂ. 20.00 ಲಕ್ಷ, ಮುಂಗಡ ಠೇವಣಿ ರೂ. 25,000.00, ಕಾಲಮಿತಿ (ಮಳೆಗಾಲ ಸಹಿತ): 12 ತಿಂಗಳು

(1) ಕಾಮಗಾರಿಯ ಟೆಂಡರ್ ಶೆಡ್ಯೂಲ್-ಬಿಗಳನ್ನು ಮತ್ತು Technical Bid ನ್ನು ವೆಬ್‌ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: 27.05.2026 ರ ಮಧ್ಯಾಹ್ನ 16.30 ಘಂಟೆವರೆಗೆ. (2) ಕಾಮಗಾರಿಯ Technical Bid ನ್ನು ತೆರೆಯುವ ದಿನಾಂಕ: 29.05.2026 ಬೆಳಿಗ್ಗೆ 10.31 ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರೀಕ ಬಿಡ್‌ನಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.

DIPR/KWR/KSMCA/145/26-27 dt. 20.05.2026

ಸಹಿ/- ಕಾರ್ಯನಿರ್ವಾಹಕ ಇಂಜನೀಯರು,
ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಕಾರವಾರ

ಗದಗ-ಬೆಟಗೇರಿ ನಗರಸಭೆ ಕಾರ್ಯಾಲಯ-582101

ಜಿಲ್ಲಾ: ಗದಗ, ರಾಜ್ಯ: ಕರ್ನಾಟಕ
ದೂ:08372-259932, ಇ-ಮೇಲ್: ka.gadag.betageri.cmc@gmail.com

ನಂ.ಗಬೆನಸ/ಶಾಂ.ವಿ/ವಹಿ/ ಟೆಂಡರ್/2026-27 ದಿನಾಂಕ: 20-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999-2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ನಿಯಮದನ್ವಯ ಗದಗ-ಬೆಟಗೇರಿ ನಗರಸಭೆಯ ಸನ್ 2026-27 ನೇ ಸಾಲಿನ ನಗರಸಭೆ ಅನುದಾನ **ಒಟ್ಟು 01** ಕಾಮಗಾರಿಗಳಿಗೆ ಇಂಡೆಂಟ್ ನಂ:**DMA/2026-27/OW/WORK_INDENT:58650** ಟೆಂಡರ್‌ಗಿಟ್ಟ ಮೊತ್ತ **ರೂ.11.50** ಲಕ್ಷಗಳಿಗೆ ಟೆಂಡರ್ ಆಹ್ವಾನಿಸಿದ್ದು, ಆಸಕ್ತರು ಇ-ಸಂಗ್ರಹಣಾ ವೇದಿಕೆಯಡಿ. ವಾರ್ಡ ನಂ 22 ಹಾಗೂ ವಾರ್ಡ ನಂ 03ರಲ್ಲಿ ಟೆಂಡರ್ ಕರೆದಿದ್ದು, **http://kppp.karnataka.gv.in** ನಲ್ಲಿ ಸಂಪರ್ಕಿಸಿ ಟೆಂಡರ್ ಸಲ್ಲಿಸಬಹುದಾಗಿದೆ.

ಆದರಂತೆ ಬಿಡ್‌ದಾರರು ಟೆಂಡರ್ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಪಡೆದು, ಸಂಬಂಧಿಸಿದ ಇಎಂಡಿ ಟೆಂಡರ್ ಫೀಗಳನ್ನು Electronic ಪದ್ಧತಿಯಲ್ಲಿ ತುಂಬಿ ನಿಗದಿ ಪಡಿಸಿದ ದಿನಾಂಕದೊಳಗಾಗಿ ಟೆಂಡರ್ ಸಲ್ಲಿಸಬಹುದಾಗಿದೆ.

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	**01-06-2026 Up to 16.00 Hours**
ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (Technical Bids)	**02-06-2026 Up to 16.30 Hours**

ಸದರಿ ಟೆಂಡರ್‌ಗೆ ಸಂಭಂಧಿಸಿದ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ kppp portal ನಲ್ಲಿ ಪ್ರಕಟಿಸಲಾಗುವುದು, ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/-
ಪೌರಾಯುಕ್ತರು
ಗದಗ-ಬೆಟಗೇರಿ ನಗರಸಭೆ

DIPR/Gadag/78/Deshpandepublicity/2026-27

ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಸಮಗ್ರ ಶಿಕ್ಷಣ ಕರ್ನಾಟಕ,

ನಂ. 205, ಜಿಲ್ಲಾ ಆಡಳಿತ ಭವನ, 2ನೇ ಮಹಡಿ, ಚಾಮರಾಜನಗರ ಜಿಲ್ಲೆ,
ಚಾಮರಾಜನಗರ. ದೂರವಾಣಿ: 08226 224429
ಇ-ಮೇಲ್ : dpocham@gmail.com

ಸಂಖ್ಯೆ: ಸಿ1/ಸ.ಶಿ.ಕ./ಹೊ.ಗು.ನೇ/04/2026-27 ದಿನಾಂಕ: 20.05.2026

ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್

ಸಮಗ್ರ ಶಿಕ್ಷಣ ಕರ್ನಾಟಕ ಕಾರ್ಯಕ್ರಮದಡಿಯಲ್ಲಿ ಜಿಲ್ಲಾ ಕಛೇರಿಗೆ 01 ಜಿಲ್ಲಾ ಕಂಪ್ಯೂಟರ್ ಪ್ರೋಗ್ರಾಮರ್, 02 ಡಾಟಾ ಎಂಟ್ರಿ ಆಪರೇಟರ್ ಮತ್ತು 01 'ಡಿ' ದರ್ಜೆ ನೌಕರರು ಹಾಗೂ ಬ್ಲಾಕ್ ಹಂತಕ್ಕೆ 5 ಜೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, 05 ಲೆಕ್ಕ ಸಹಾಯಕರು, 05 ಡಾಟಾ ಎಂಟ್ರಿ ಆಪರೇಟರ್ ಮತ್ತು 05 "ಡಿ" ದರ್ಜೆ ನೌಕರರು ಜಿಲ್ಲೆಯಲ್ಲಿ ಒಟ್ಟು 24 ಜನರ ಹೊರಗುತ್ತಿಗೆ ಸೇವೆಯನ್ನು ಪಡೆಯಲು ಅಂದಾಜು ಮೊತ್ತ ರೂ.46.22 ಲಕ್ಷಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಕರೆಯಲಾಗಿದೆ ಹಾಗೂ ಟೆಂಡರ್‌ನ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಮತ್ತು ತಿರಸ್ಕರಿಸುವ ಹಕ್ಕನ್ನು ಟೆಂಡರ್ ಪ್ರಾಧಿಕಾರಿಯು ಹೊಂದಿರುತ್ತಾರೆ. ಆಸಕ್ತ ಮತ್ತು ಅರ್ಹ ಏಜೆನ್ಸಿಯವರು ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಆನ್‌ಲೈನ್ ಮೂಲಕ ದಿನಾಂಕ:03.06.2026ರೊಳಗೆ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಾಂತ್ರಿಕ ಕಾರಣಗಳಿಂದಾಗಿ ಟೆಂಡರ್ ತೆರೆಯುವ ದಿನಾಂಕವನ್ನು ಮುಂದೂಡಲ್ಪಟ್ಟಲ್ಲಿ ಮುಂದೂಡಲಾದ ದಿನಾಂಕವನ್ನು ಪರಿಗಣಿಸುವುದು, ಹೆಚ್ಚಿನ ಮಾಹಿತಿಗಾಗಿ www.kppp.karnataka.gov.inನಲ್ಲಿ ನೋಡಬಹುದಾಗಿದೆ.

ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ
ಯೋಜನಾ ಸಮನ್ವಯಾಧಿಕಾರಿಗಳು,
ಸಮಗ್ರ ಶಿಕ್ಷಣ ಕರ್ನಾಟಕ,
ಚಾಮರಾಜನಗರ ಜಿಲ್ಲೆ, ಚಾಮರಾಜನಗರ,

ಸಂ. ವಾಸಾಸಂಇ.ಚಾ.ನಗರ/121/2026-27

ಕರ್ನಾಟಕ ಸರ್ಕಾರ
(ಅರಣ್ಯ ಇಲಾಖೆ)

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಪ್ರಾದೇಶಿಕ ಅರಣ್ಯ ಉಪ ವಿಭಾಗ ಕಲಬುರಗಿ

ಸಂ:ಸಅಸಂ/ಉವಿಕ/GUG/Nimans/ಅಡ/ಗಿಡ.ಕಟಾ/ಆಕ್ಷೇಪಣೆ/ಸಿಆರ್-2025-26 ದಿನಾಂಕ: 19.05.2026

:: ಸಾರ್ವಜನಿಕ ಪ್ರಕಟಣೆ ::

ಕಲಬುರಗಿ ನಗರದ ಗುಲಬರ್ಗಾ ವಿಶ್ವವಿದ್ಯಾಲಯ ಆವರಣದಲ್ಲಿರುವ ವಿವಿಧ ಜಾತಿಯ ಮರಗಳ ಕಟಾವಣೆಗೆ ಸಹಾಯಕ ಕಾರ್ಯನಿರ್ವಹಕ ಅಭಿಯಂತರರು ಅ&ಕುಕ ಇಂಜಿನಿಯರಿಂಗ್ ಉಪ ವಿಭಾಗ ಕಲಬುರಗಿ ಇವರು ಅರ್ಜಿ ಸಲ್ಲಿರುತ್ತಾರೆ. ಸದರಿ ಅರ್ಜಿಯ ಮೇರೆ ಸ್ಥಳ ಪರಿಶೀಲನೆ ಮಾಡಲಾಗಿ ಸದರಿ ಸ್ಥಳವಾದ ಕಲಬುರಗಿ ನಗರದ ಗುಲಬರ್ಗಾ ವಿಶ್ವವಿದ್ಯಾಲಯ ಆವರಣದಲ್ಲಿ Construction of Nimans & De-Addiction Center in the premises of Gulbarga University ಕಾಮಗಾರಿ ಕೈಗೊಳ್ಳುತ್ತಿದ್ದು, ಸದರಿ ಕಟ್ಟಡ ನಿರ್ಮಾಣ ಮಾಡುವ ಸ್ಥಳದಲ್ಲಿ ವಿವಿಧ ಜಾತಿಯ 216 ಮರಗಳಿದ್ದು, ಕಾರಣ ಸದರಿ ವಿವಿಧ ಜಾತಿಯ 216 ಮರಗಳ ಕಟಾವಣೆಗೆ ಅನುಮತಿ ನೀಡಬೇಕಾಗಿದ್ದು, ಕಾರಣ ಸದರಿ 216 ಮರಗಳ ಕಟಾವಣೆಗೆ ದಿನಾಂಕ: 27.05.2026 ರಂದು ಬೆಳಿಗ್ಗೆ 11.00 ಗಂಟೆಗೆ ಈ ಕೆಳ ಸಹಿದಾರರ ಕಛೇರಿಯಲ್ಲಿ ಸಾರ್ವಜನಿಕ ಹರಾಜು ಪ್ರಕ್ರಿಯೇಯನ್ನು ಜರುಗಿಸಲಾಗುವುದು. ಆಸಕ್ತಿಯುಳ್ಳವರು Deputy Conservator of Forests, Territorial Forest Division Kalaburagi ರವರ ಹೆಸರಿನಲ್ಲಿ ರೂ. 5000/-ಗಳ ಡಿ.ಡಿ.ಯನ್ನು ಸಲ್ಲಿಸಿ, ಸದರಿ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ಅರಣ್ಯ ಉಪ ವಿಭಾಗ ಕಲಬುರಗಿ, ಮೊಬೈಲ್ ಸಂಖ್ಯೆ: +91 9481993202, ಇ-ಮೇಲ್ ಐಡಿ: dcf_tgulbarga@yahoo.co.in

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು
ಪ್ರಾದೇಶಿಕ ಅರಣ್ಯ ಉಪ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/143/ಕೆ.ಎಸ್.ಎಂ.ಸಿ.&ಎ/2026-27

ಕರ್ನಾಟಕ ಸರಕಾರ

ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ

(ಕರ್ನಾಟಕ ಸರಕಾರ ಸ್ವಾಯತ್ತ ಸಂಸ್ಥೆ)
ಇ-ಮೇಲ್: directorgimsgulbarga@gmail.com ದೂ.08472-260252

ಸಂಖ್ಯೆ: GIMS/KLB/TENDER/CEN-LAB/CR/20/2026-27/400 ದಿನಾಂಕ:-19/05/2026

:: ಟೆಂಡರ ಪ್ರಕಟಣೆ ::

ಜಿಮ್ಸ್ ಆಸ್ಪತ್ರೆ, ಕಲಬುರಗಿಯ ಕೇಂದ್ರ ಪ್ರಯೋಗಾಲಯಕ್ಕೆ ಅವಶ್ಯಕವಿರುವ ಕೇಮಿಕಲ್ಸ್ ರೀ ಎಜೇಂಟ್ಸ್ ಮತ್ತು ಕನ್ಸೂಮೇಬಲ್ಸ್‌ಗಳನ್ನು ಖರೀದಿಸಲು ಅಧೀಕೃತ ಏಜೇನ್ಸಿ (ಸಂಸ್ಥೆ) ಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೋಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು https://kppp.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ.

1) ಟೆಂಡರ್ ಪ್ರಕಟಣೆ ದಿನಾಂಕ: No. GIMS/KLB/TENDER/CEN-LAB/CR/20/2026-27, Date:19/05/2026, INDENT NO:- DME/2026-27/IND2339, 2) ಅನ್‌ಲೈನ್‌ನಲ್ಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು, ಟೆಂಡರ್ ಅನ್ನು ಇ-Procurement Portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: **03-06-2026 ಸಾಯಂಕಾಲ 4:30ಕ್ಕೆ,** 3) ಆನಲೈನ್ ಮುಖಾಂತರ ಪ್ರಶ್ನೆಗಳನ್ನು ಸಲ್ಲಿಸುವ ಕೋನೆಯ ದಿನಾಂಕ: **26-05-2026 ಸಾಯಂಕಾಲ 5.00 ಗಂಟೆಯ ವರೆಗೆ,** 4) ಟೆಂಡರ ಪೂರ್ವಭಾವಿ ಸಭೆ: **ದಿನಾಂಕ:27-05-2026 ಮಧ್ಯಾಹ್ನ 11:30ಕ್ಕೆ,** 5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **04-06-2026 ಸಾಯಂಕಾಲ 5:00ಕ್ಕೆ,** 6) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ: **05-06-2026 ಸಾಯಂಕಾಲ 5:30ಕ್ಕೆ,** 7) ಟೆಂಡರನ ಮೊತ್ತ: ರೂ. **26,52,090=00/-,** 8) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: ರೂ.53,042/-, 9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ): ನಿರ್ದೇಶಕರು, ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ. ದೂರವಾಣಿ ಸಂಖ್ಯೆ: 08472-260252, Office Email: directorgimsgulbarga@gmail.com, Cell:+91 9482093568 Tender Section Email: gimstenderklb22@gmail.com Cell:+91 9972688602

ಸಹಿ/- ನಿರ್ದೇಶಕರು,
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/147/ಕೆ.ಎಸ್.ಎಂ.ಸಿ.&ಎ/2026-27

ಕಿರುಸುದ್ದಿ

ಸಾಲಬಾಧೆ: ರೈತ ಆತ್ಮಹತ್ಯೆ

ಹಾವೇರಿ: ಸಾಲ ಬಾಧೆ ತಾಳಲಾರದೆ ರೈತರೊಬ್ಬರು ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ತಾಲೂಕಿನ ಎಂ.ಎ. ತಿಮ್ಮಾಪುರ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಸಂಕಪ್ಪ ಈರಪ್ಪ ಕರೆಗೊಂಡ್ರ (40) ಮೃತ ದುರ್ದೈವಿ. ಮೃತರು ಎರಡು ಎಕರೆ ಕೃಷಿ ಜಮೀನು ಹೊಂದಿದ್ದು, ಕೃಷಿ ಚಟುವಟಿಕೆಗಳಿಗಾಗಿ ಸಂಗೂರಿನ ಕೆವಿಜಿ ಬ್ಯಾಂಕಿನಲ್ಲಿ 2.50 ಲಕ್ಷ ರೂ.ಬೆಳೆಸಾಲ, ಆಕಳು ಖರೀದಿಗೆ ಅದೇ ಬ್ಯಾಂಕಿನಲ್ಲಿ 30 ಸಾವಿರ ರೂ.ಸಾಲ ಮಾಡಿಕೊಂಡಿದ್ದರು. ಅಷ್ಟೇಯಲ್ಲದೆ ಸರಿಯಾಗಿ ಬೆಳೆ ಬಾರದ ಹಿನ್ನೆಲೆ ಕುಟುಂಬ ನಿರ್ವಹಣೆಗಾಗಿ ಹಾವೇರಿಯ ಬ್ಯಾಂಕಿನಲ್ಲಿ ಚಿನ್ನಾಭರಣ ಅಡವಿಟ್ಟು ಮತ್ತೆ 2.50 ಲಕ್ಷ ರೂ.ಸಾಲ ಪಡೆದುಕೊಂಡಿದ್ದಾರೆ. ಊರಿನಲ್ಲಿ ಕೈಗಡ 6-7ಲಕ್ಷ ರೂ. ಸಾಲ ಮಾಡಿಕೊಂಡಿದ್ದು, ಜಮೀನಿನಲ್ಲಿ ಎರಡ್ಮೂರು ವರ್ಷಗಳಿಂದ ಬೆಳೆ ಸರಿಯಾಗಿ ಬಾರದ ಹಿನ್ನೆಲೆ ಮಾಡಿದ ಸಾಲ ತೀರಿಸುವುದು ಹೇಗೆ ಎಂಬ ಚಿಂತೆಯಲ್ಲಿ ಮನನೊಂದು ನೇಣು ಬಿಗಿದುಕೊಂಡು ಸಾವನ್ನಪ್ಪಿದ್ದಾನೆ ಎಂದು ಮೃತನ ಪತ್ನಿ ವೇದಾ ಕರೆಗೊಂಡ್ರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿರಿಧಾನ್ಯ ಉತ್ಪಾದನೆ ಹೆಚ್ಚಿಸಲು ಸಲಹೆ

ಧಾರವಾಡ: ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಜೊತೆ ಸಿರಿಧಾನ್ಯಗಳ ವಿಸ್ತೀರ್ಣ ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸಲು ರೈತರಿಗೆ ಅನುಕೂಲಕರ ಶಿಫಾರಸು ನೀಡುವಂತೆ ಬೆಳೆ ವಿಜ್ಞಾನ ವಿಭಾಗದ ಉಪಮಹಾನಿರ್ದೇಶಕ ಡಾ.ಡಿ.ಕೆ.ಯಾದವ ಹೇಳಿದರು.

ನಗರದ ಕೃಷಿ ವಿಶ್ವವಿದ್ಯಾಲಯದಲ್ಲಿ ನಡೆದ ಭಾರತೀಯ ಕೃಷಿ ಅನುಸಂದಾನ ಪರಿಷತ್ತಿನ ಸಜ್ಜೆ, ಜೋಳ ಮತ್ತು ಸಿರಿಧಾನ್ಯಗಳ ಅಖಿಲ ಭಾರತ ಸಂಯೋಜಿತ ಸಂಶೋಧನಾ ಯೋಜನೆಗಳ ಸಂಯುಕ್ತ ವಾರ್ಷಿಕ ಗುಂಪಿನ ಸಭೆ ಉದ್ಘಾಟಿಸಿ ಮಾತನಾಡಿದರು.

ಪ್ರಮಾಣಿಕೃತ ಗುಣಮಟ್ಟದ ಬೀಜಗಳು ರೈತರಿಗೆ ಲಭಿಸುವಂತೆ ವಿಜ್ಞಾನಿಗಳು ಹೆಚ್ಚಿನ ಗಮನ ಹರಿಸಬೇಕು. ಕೃಷಿಶಾಸ್ತ್ರ ಜೈವಿಕ, ಇತರ ಸಸ್ಯ ಸಂರಕ್ಷಣಾ ಘಟಕಗಳು ಬಲಪಡಿಸುವ ಸಲಹೆ ನೀಡಿ, ಕೃಷಿ ವಿವಿಯ ಸಂಶೋಧನಾ ಕಾರ್ಯಗಳನ್ನು ಪ್ರಶಂಸಿದರು.

ಡಾ. ಎಸ್.ಕೆ.ಪ್ರಧಾನ ಮಾತನಾಡಿ, ಸಿರಿಧಾನ್ಯಗಳು ಪೌಷ್ಟಿಕ ಧಾನ್ಯಗಳಾಗಿದ್ದರೂ ಅವುಗಳ ಪ್ರಗತಿ ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲ. ವಿಕಸಿತ ಭಾರತದ ಗುರಿ ತಲುಪಲು ರೈತರ ಪಾಲ್ಗೊಳ್ಳುವಿಕೆ ಮಹತ್ವ ತಿಳಿಸಿ, ದೇಶದ ಅಭಿವೃದ್ಧಿ ಕೊಡುಗೆ ನೀಡಲು ಹೇಳಿದರು.



ಡಾ. ಸಿ.ತಾರಾ ಸತ್ಯವತಿ ಮಾತನಾಡಿ, ಸಿರಿಧಾನ್ಯಗಳನ್ನು ಜಾಗತಿಕವಾಗಿ ಉಷ್ಣ ಮತ್ತು ಅರೆ ಉಷ್ಣ ಹಾಗೂ ಸಮಶಿತೋಷ್ಣ ವಲಯದಲ್ಲಿ ಹೆಚ್ಚಾಗಿ ಬೆಳೆಯುತ್ತಿದ್ದು, ಇಂತಹ ಸಿರಿಧಾನ್ಯಗಳ ಮಹತ್ವದ ಜೊತೆಗೆ ಪ್ರಸ್ತುತತೆ ತಮ್ಮ ಅನಿಸಿಕೆಗಳು ವ್ಯಕ್ತಪಡಿಸಿದರು.

ವಿವಿಧ ಕೇಂದ್ರಗಳಲ್ಲಿ ಕೈಗೊಂಡ ಸಂಶೋಧನೆಗಳ ಕುರಿತು ಸಜ್ಜೆ ಯೋಜನೆಯ ಯೋಜನಾ ಸಂಯೋಜಕ ಡಾ. ಎಸ್.ಎನ್.ಸೆಕ್ಸೇನಾ ಮತ್ತು ಜೋಳ-ಸಣ್ಣ ಸಿರಿಧಾನ್ಯಗಳ ಯೋಜನಾ ಸಂಯೋಜಕ ಡಾ. ಆರ್.ಮಧುಸೂಧನ್ ವಿಷಯ ಮಂಡಿಸಿದರು. ಕೃವಿವಿ ಕುಲಪತಿ ಡಾ. ಪಿ.ಎಲ್.ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಕೃಷಿ ವಿವಿಯ ಸಂಶೋಧನಾ ನಿರ್ದೇಶಕ ಡಾ. ಎ.ಎಸ್.ಸಜ್ಜನ ಮತ್ತು ಡಾ. ಎನ್.ಜಿ.ಹನಮರಟ್ಟಿ, ದೇಶದ ವಿವಿಧ ರಾಜ್ಯಗಳಿಂದ ಸಜ್ಜೆ, ಜೋಳ ಮತ್ತು ಸಿರಿಧಾನ್ಯಗಳ ವಿಜ್ಞಾನಿಗಳು ಪಾಲ್ಗೊಂಡಿದ್ದರು.

ಸಾಹಿತ್ಯ ಕೇಂದ್ರವಾಗಿದ್ದ ಪುಲಿಗೇರಿ



ಲಕ್ಷ್ಮೇಶ್ವರ: ಪಂಪನಿಗೂ ಲಕ್ಷ್ಮೇಶ್ವರಕ್ಕೂ (ಪುಲಿಗೇರಿ) ಅವಿನಾಭವ ಸಂಬಂಧ ಪುಲಿಗೇರಿ ಎಂಬುದು 6ಹಾಗೂ 7ನೇ ಶತಮಾನದಲ್ಲಿ ಬಹಳ ಮಹತ್ವದ ಸಾಹಿತ್ಯದ ಕೇಂದ್ರವಾಗಿತ್ತು ಎಂದು ನಿಕಟಪೂರ್ವ ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ನಾಡೋಜ ಡಾ. ಮನು ಬಳಿಗಾರ ಹೇಳಿದರು.

ಅವರು ಪಟ್ಟಣದ ಶ್ರೀ ರಂಭಾಪುರಿ ಜಗದ್ಗುರು ವೀರಗಂಗಾಧರ ಸಮುದಾಯ ಭವನದಲ್ಲಿ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಭಾರತೀಯ ಭಾಷಾ ಸಂಸ್ಥಾನ, ಉನ್ನತ ಶಿಕ್ಷಣ ಇಲಾಖೆ, ಶಿಕ್ಷಣ ಸಚಿವಾಲಯ, ಭಾರತ ಸರ್ಕಾರ, ಮಾನಸ ಗಂಗೋತ್ರಿ ಮೈಸೂರು ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಗದಗ ಹಾಗೂ ಲಕ್ಷ್ಮೇಶ್ವರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಇವರ ಸಹಯೋಗದೊಂದಿಗೆ ಪುಲಿಗೆರೆ ಪರಿಸರದ ಪ್ರಾಚೀನ ಕನ್ನಡ ಸಾಹಿತ್ಯ ರಾಜ್ಯಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿ, ಸಂಶೋಧನ ಲಿಪಿಗಳ ಕೇಂದ್ರದಲ್ಲಿ ಪುಲಿಗೇರಿಯು ಮಹತ್ವವನ್ನು ಪಡೆದುಕೊಂಡಿದೆ. ಮುನ್ನೂರು ಪ್ರಾಂತ್ಯಗಳ ರಾಜಧಾನಿ ಯಾಗಿತ್ತು. ಇಲ್ಲಿನ ಶಂಖ ಬಸದಿಯಲ್ಲಿ 600 ಶಾಸನಗಳು ಸಿಕ್ಕಿದ್ದು ಸೋಮೇಶ್ವರ ದೇವಸ್ಥಾನದಲ್ಲಿ 50 ರಿಂದ 60 ಶಿಲಾಶಾಸನಗಳು ದೊರೆತಿವೆ ಎಂದರು.

ಶಾಸಕ ಡಾ ಚಂದ್ರು ಲಮಾಣಿ ಮಾತನಾಡಿ, ಕನ್ನಡ ನಾಡು ನುಡಿಗೆ ಪ್ರತಿಯೊಬ್ಬರೂ ಕೆಲಸ ಮಾಡಬೇಕು. ಪಟ್ಟಣದ ಕನ್ನಡ ಸಾಹಿತ್ಯ ಭವನದ ನಿರ್ಮಾಣ ಕೆಲಸಕ್ಕೆ ಸಹಕಾರ ನೀಡುತ್ತೇನೆ ಎಂದರು.

ಅಧ್ಯಕ್ಷತೆಯನ್ನು ಕಸಾಪ ಜಿಲ್ಲಾಧ್ಯಕ್ಷ ವಿವೇಕಾನಂದಗೌಡ ಪಾಟೀಲ್ ವಹಿಸಿದ್ದರು. ಡಾ. ಎನ್.ಎಂ. ತಳವಾರ ಪ್ರಾಸ್ತಾವಿಸಿದರು. ಮಾಜಿ ಶಾಸಕ ಜಿ.ಎಂ. ಮಹಾಂತಶೆಟ್ಟರ, ರಾಮಣ್ಣ ಲಮಾಣಿ, ವಿಶ್ರಾಂತ ಪ್ರಾಚಾರ್ಯ ಪ್ರೊ. ಶಿವಕುಮಾರ ಶಿಗ್ಲಿ, ವಿಶ್ರಾಂತ ಪ್ರಾಧ್ಯಾಪಕ ಡಾ. ಆರ್.ಬಿ. ಬನ್ನೂರ, ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಆರ್.ಎನ್. ಪಾಟೀಲ್ ಇದ್ದರು. ಎಸ್.ಪಿ ಬಳಿಗಾರ, ಎಸ್.ಬಿ. ಮಳಲಿ, ಎಸ್.ಎಫ್. ಆದಿ, ನಾಗರಾಜ ಕಳಸಾಪುರ, ಸೋಮಶೇಖರ ಕೆರಿಮನಿ, ಎಸ್. ಬಿ. ಅಣ್ಣಿಗೇರಿ, ಈರಣ್ಣ ಗಾಣಿಗೇರ, ಸಿ.ಜಿ. ಹಿರೇಮಠ ಶಂಕರ ಸಿಳ್ಳಿನ, ನಾಗರಾಜ ಮಜ್ಜಿಗುಡ್ಡ ಲಲಿತಮ್ಮ ಕೇರಿಮನಿ, ಮಾಲಾದೇವಿ ದಂದರಗಿ ನಿರ್ಮಲಾ ಅರಳಿ ಅನೇಕರು ಇದ್ದರು. ಈಶ್ವರ. ಮೆಡ್ಲೇರಿ ಸ್ವಾಗತಿಸಿದರು, ಮಲ್ಲಿಕಾರ್ಜುನ ಕಳಸಾಪುರ ಪ್ರಾಥಿಸಿದರು. ಡಾ. ಎನ್.ಎಸ್. ಅನ್ನಪೂರ್ಣ ನಿರೂಪಿಸಿದರು.

ಮೇ 23: ಪಾಲೆಮಾರ್ 4 ಸಭಾಭವನಗಳ ಲೋಕಾರ್ಪಣೆ

ಇದು ಸಾಮಾಜಿಕ ಕ್ರಾಂತಿ

ಮಂಗಳೂರು: ಕರಾವಳಿಯ ಹೆಮ್ಮೆಯ ಹಾಗೂ ಅತ್ಯಂತ ಪ್ರತಿಷ್ಠಿತ ರಿಯಲ್ ಎಸ್ಟೇಟ್ ಸಂಸ್ಥೆಯಾದ ಲ್ಯಾಂಡ್ ಲಿಂಕ್ಸ್, ಕರಾವಳಿ ಭಾಗದಲ್ಲಿ ಕಳೆದ 45 ವರ್ಷಗಳಿಂದ ತನ್ನ ಪ್ರಾಮಾಣಿಕ ಮತ್ತು ಯಶಸ್ವಿ ಉದ್ಯಮದ ಮೂಲಕ ಲಕ್ಷಾಂತರ ಜನರ ನಂಬಿಕೆಯನ್ನು ಗಳಿಸಿದೆ. ಈ ಸುದೀರ್ಘ ಯಶಸ್ವಿ ಹಾದಿಯ ಸವಿನೆನಪಿಗಾಗಿ ಸಂಸ್ಥೆಯು ಮಂಗಳೂರಿನ ಪ್ರಮುಖ ನಾಲ್ಕು ಸ್ಥಳಗಳಲ್ಲಿ ಪ್ರಪ್ರಥಮ ಬಾರಿಗೆ ಅತ್ಯಾಧುನಿಕ ಸೌಲಭ್ಯಗಳನ್ನೊಳಗೊಂಡ, ನಾಡಿನ ಜನತೆಗೆ ಯೋಗ್ಯವಾದ ನಾಲ್ಕು ಭವ್ಯ ಸಭಾಭವನಗಳನ್ನು ಏಕಕಾಲದಲ್ಲಿ ಲೋಕಾರ್ಪಣೆ ಮಾಡಲಾಗುತ್ತಿದೆ ಎಂದು ಲ್ಯಾಂಡ್ ಲಿಂಕ್ಸ್ ಗ್ರೂಪ್‌ನ ಅಧ್ಯಕ್ಷ ಕೃಷ್ಣ ಜೆ. ಪಾಲೆಮಾರ್ ತಿಳಿಸಿದರು.

ಮೇರಿಹಿಲ್‌ನಲ್ಲಿ ಉದ್ಘಾಟನೆಗೆ ಸಿದ್ಧಗೊಂಡಿರುವ ಪಾಲೆಮಾರ್ ಕನ್ವೆನ್ಷನ್ ಸೆಂಟರ್‌ನಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 23ರಂದು ಪೂರ್ವಾಹ್ನ 10 ಗಂಟೆಗೆ ಪಾಲೆಮಾರ್ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಆಂಧ್ರ ಪ್ರದೇಶದ ರಾಜ್ಯಪಾಲ ಜಸ್ಟಿಸ್ ಎಸ್. ಅಬ್ದುಲ್ ನಜೀರ್ ಅವರು ನಾಲ್ಕೂ ಸಭಾಂಗಣಗಳನ್ನು ಅಧಿಕೃತವಾಗಿ ಲೋಕಾರ್ಪಣೆ ಮಾಡಲಿದ್ದಾರೆ ಎಂದರು.

ಸಮಾರಂಭದಲ್ಲಿ ಕೇಂದ್ರ ರೈಲ್ವೆ ಮತ್ತು





ಜಲಶಕ್ತಿ ರಾಜ್ಯ ಸಚಿವ ವಿ. ಸೋಮಣ್ಣ, ಸ್ಪೀಕರ್ ಯು.ಟಿ.ಖಾದರ್, ದ.ಕ. ಸಂಸದ ಕ್ಯಾ.ಬ್ರಿಜೇಶ್ ಚೌಟ, ಶಾಸಕರಾದ ಡಾ.ವೈ.ಭರತ್ ಶೆಟ್ಟಿ, ಡಿ.ವೇದವ್ಯಾಸ ಕಾಮತ್, ಉಮಾನಾಥ ಕೋಟ್ಯಾನ್ ಹಾಗೂ ವಿಧಾನ ಪರಿಷತ್ತಿನ ಸದಸ್ಯ ಐವನ್ ಡಿಸೋಜ ಸೇರಿದಂತೆ ಹಲವು ಮಂದಿ ಗಣ್ಯರು ಪಾಲ್ಗೊಳ್ಳುವರು ಎಂದು ಪಾಲೆಮಾರ್ ತಿಳಿಸಿದರು.

ಕೈಗೆಟಕುವ ದರದಲ್ಲಿ ಹಾಲ್‌ಗಳು ಲಭ್ಯ

ಕರಾವಳಿಯ ಸಾಂಸ್ಕೃತಿಕ ಶ್ರೀಮಂತಿಕೆಗೆ ಒತ್ತು ನೀಡುವುದು ಮತ್ತು ಇಲ್ಲಿನ ಜನರಿಗೆ ಸುಲಭವಾಗಿ ಕೈಗೆಟಕುವ ದರದಲ್ಲಿ ಅತ್ಯುನ್ನತ ಸೌಲಭ್ಯಗಳ ಸಭಾಂಗಣಗಳನ್ನು ಒದಗಿಸುವುದು ಮೂಲ ಉದ್ದೇಶವಾಗಿದೆ. ಈ ಸಭಾಭವನಗಳು ವಿವಾಹ ಕಾರ್ಯಕ್ರಮಗಳು, ಸಾಮೂಹಿಕ ವಿವಾಹಗಳು, ಧಾರ್ಮಿಕ-ಸಾಂಸ್ಕೃತಿಕ ಕಾರ್ಯಕ್ರಮಗಳು, ಉದ್ಯೋಗ ಮೇಳಗಳು, ವಸ್ತು ಪ್ರದರ್ಶನಗಳು, ಸಾರ್ವಜನಿಕ ಕಾರ್ಯಕ್ರಮಗಳು ಹಾಗೂ ಮಹಿಳಾ ಸಬಲೀಕರಣದಂತಹ ಸಮಾಜಮುಖಿ ಚಟುವಟಿಕೆಗಳಿಗೆ ಮುಕ್ತವಾಗಿರಲಿವೆ ಎಂದು ಕೃಷ್ಣ ಜೆ ಪಾಲೆಮಾರ್ ವಿವರಿಸಿದರು.

ಈ ಸಭಾಭವನಗಳನ್ನು ಲಾಭದ ದೃಷ್ಟಿಯಿಂದ ನಿರ್ಮಿಸಿದ್ದಲ್ಲ. ಕರಾವಳಿಯ ಜನತೆ ಕಳೆದ 45 ವರ್ಷಗಳಿಂದ ನಮಗೆ ನೀಡಿದ ಪ್ರೀತಿ ಮತ್ತು ಬೆಂಬಲಕ್ಕೆ ಪ್ರತಿಯಾಗಿ, ಸಮಾಜಕ್ಕೆ ಏನಾದರೂ ಕೊಡುಗೆಯನ್ನು ನೀಡಬೇಕು ಎಂಬ ಸದುದ್ದೇಶದಿಂದ ಇವುಗಳನ್ನು ರೂಪಿಸಿದ್ದೇನೆ. ಬಡ ಕುಟುಂಬಗಳ ಸಾಮೂಹಿಕ ವಿವಾಹದಂತಹ ಸಂದರ್ಭದಲ್ಲಿ ಹೆತ್ತವರ ಕಣ್ಣಲ್ಲಿ ಕಾಣುವ ಸಾರ್ಥಕತೆ ಮತ್ತು ನೆಮ್ಮದಿಯ ಭಾವವೇ ನನಗೆ ನಿಜವಾದ ಸಂಪತ್ತು ಎಂದವರು ಹೇಳಿದರು.

ಶೈಕ್ಷಣಿಕ ಸಾಧಕರಿಗೆ ಗೌರವ

ಕಾರ್ಯಕ್ರಮದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡುತ್ತಿರುವ ವಿಕಾಸ್ ಎಜ್ಯುಕೇಶನ್ ಟ್ರಸ್ಟ್ ವತಿಯಿಂದ ಶೈಕ್ಷಣಿಕ ಸಾಧಕರನ್ನು ಗೌರವಿಸಲಾಗುವುದು ಎಂದವರು ತಿಳಿಸಿದರು.

ಆಧುನಿಕತನ ಮತ್ತು ಸಾಂಪ್ರದಾಯಿಕತೆಯ ಅದ್ಭುತ ಸಮ್ಮಿಲನವೇ ಮೇರಿಹಿಲ್‌ನಲ್ಲಿರುವ ಪಾಲೆಮಾರ್ ಕನ್ವೆನ್ಷನ್ ಸೆಂಟರ್. ನೋಡುಗರ ಕಣ್ಣು ಸೆಳೆಯುವ ಮರದ ಕರಕುಶಲತೆಯಿಂದ ಕೂಡಿದ ಭವ್ಯ ಒಳಾಂಗಣ ವಿನ್ಯಾಸ ಇದರ ಪ್ರಮುಖ ಆಕರ್ಷಣೆಯಾಗಿದೆ.

ಪಾಲೆಮಾರ್ ಗಾರ್ಡನ್

ನಗರದ ಮೋರ್ಗನ್ಸ್ ಗೇಟ್‌ನಲ್ಲಿ ಸಾಂಸ್ಕೃತಿಕ ಪರಂಪರೆಯ ಶ್ರೀಮಂತಿಕೆಯನ್ನು ಪ್ರತಿಬಿಂಬಿಸು ವಂತೆ ಈ ಭವ್ಯ ಗಾರ್ಡನ್ ನಿರ್ಮಿಸಲಾಗಿದೆ.

ಸುರತ್ಕಲ್ ಸಮೀಪ 20 ಎಕರೆ ವಿಶಾಲವಾದ ಜಾಗದಲ್ಲಿ ಈ ಪಾಲೆಮಾರ್ ಫಾಮ್ಸ್ ಸಭಾಭವನ ಸಿದ್ಧಗೊಂಡಿದೆ. ಕಡೆಕಾರ್, ಜೆಪ್ಪಿನಮೊಗರುವಿನಲ್ಲಿರುವ ನೇತ್ರಾವತಿ ಸಭಾಭವನ ವಿವಾಹ ಕಾರ್ಯಕ್ರಮಗಳು, ಧಾರ್ಮಿಕ ಕಾರ್ಯಕ್ರಮಗಳು, ಸಂಗೀತ ಕಛೇರಿಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅತ್ಯಂತ ಪ್ರಶಸ್ತವಾಗಿದೆ ಎಂದು ಪಾಲೆಮಾರ್ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಲ್ಯಾಂಡ್ ಲಿಂಕ್ಸ್ ಗ್ರೂಪ್‌ನ ಉಪಾಧ್ಯಕ್ಷ ಪ್ರದೀಪ್ ಪಾಲೆಮಾರ್, ಟ್ರಸ್ಟಿಗಳಾದ ಕೊರಗಪ್ಪ, ಜೆ.ಕೆ.ರಾವ್, ಸೂರಜ್ ಕಲ್ಯ, ಜೆ.ಸಂತೋಷ್ ಕುಮಾರ್ ಉಪಸ್ಥಿತರಿದ್ದರು.

ಸಾಮೂಹಿಕ ವಿವಾಹ, ಶಿಬಿರಗಳಿಗೆ ಉಚಿತ

ಸಾಮಾಜಿಕ ಬದ್ಧತೆ ಮತ್ತು ಉಚಿತ ಸೇವೆ ಲ್ಯಾಂಡ್ ಲಿಂಕ್ಸ್ ಸಂಸ್ಥೆಯು ಸದಾ ಸಾಮಾಜಿಕ ಕಳಕಳಿಗೆ ಹೆಸರುವಾಸಿಯಾಗಿದೆ. ಜಾತಿ, ಧರ್ಮ, ಬಡವ-ಬಲ್ಲಿದ ಎಂಬ ಯಾವುದೇ ಭೇದಭಾವವಿಲ್ಲದೆ ಎಲ್ಲರನ್ನೂ ಸಮಾನವಾಗಿ ಕಾಣುವುದು ಸಂಸ್ಥೆಯ ಮುಖ್ಯ ಧ್ಯೇಯವಾಗಿದೆ. ಈ ಸಾಮಾಜಿಕ ಬದ್ಧತೆಯ ಭಾಗವಾಗಿ, ಸಮಾಜದ ಒಳಿತಿಗಾಗಿ ಆಯೋಜಿಸುವ ಸಾಮೂಹಿಕ ವಿವಾಹಗಳು ಹಾಗೂ ಸದುದ್ದೇಶದ ಉದಾತ್ತ ಸಾರ್ವಜನಿಕ ಕಾರ್ಯಕ್ರಮಗಳಿಗೆ ಈ ಎಲ್ಲಾ ಸಭಾಂಗಣಗಳನ್ನು ನಿಯಮಾನುಸಾರವಾಗಿ ಉಚಿತವಾಗಿ ನೀಡಲು ನಿರ್ಧರಿಸಲಾಗಿದೆ ಎಂದು ಪಾಲೆಮಾರ್ ತಿಳಿಸಿದರು.

ನೌಕರಿ ಕೊಡಿಸುವುದಾಗಿ 43 ಲಕ್ಷ ಪಂಗನಾಮ

ಹಾವೇರಿ: ಪೊಲೀಸ್ ಇಲಾಖೆಯಲ್ಲಿ ಸರ್ಕಾರಿ ನೌಕರಿ ಕೊಡಿಸುವುದಾಗಿ ನಂಬಿಸಿ ವ್ಯಕ್ತಿಯೊಬ್ಬರು ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಡಿವೈಎಸ್‌ಪಿ ಎಂದು ಪರಿಚಯವಾಗಿ ಸುಮಾರು 43 ಲಕ್ಷ ರೂ.ಗಳನ್ನು ಹಾಕಿಸಿಕೊಂಡು ನೌಕರಿ ಕೊಡಿಸದೆ ವಂಚಿಸಿರುವ ಘಟನೆ ನಡೆದಿದೆ. ಬೆಂಗಳೂರಿನ ಹುಣಸೆಮಾರನಹಳ್ಳಿ ರಾಜೇಶ್ವರಿನಗರದ ನಿವಾಸಿ ಗ್ಯಾನನಗೌಡ ಸಿದ್ದನಗೌಡ ಪಾಟೀಲ (46) ಎಂಬಾತನ ವಿರುದ್ಧ ಹಾವೇರಿ ಶಿವಯೋಗಿಶ್ವರ ನಗರದ ನಿವಾಸಿ ನಿಂಗಪ್ಪ ಮುದ್ದಣ್ಣನವರ ಎಫ್‌ಐಆರ್ ದಾಖಲಿಸಿದ್ದಾರೆ. ಕೊಪ್ಪಳ ಜಿಲ್ಲಾ ಕುಷ್ಟಗಿ ತಾಲೂಕು ಅಂಟರತಾನಾ ಗ್ರಾಮದ ಮಲ್ಲನಗೌಡ ಎಂಬುವವನೊಂದಿಗೆ ಗ್ಯಾನನಗೌಡ ಪಾಟೀಲ ಬಂದು ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಡಿವೈಎಸ್‌ಪಿಯಾಗಿ ಕೆಲಸ ಮಾಡುತ್ತಿದ್ದೇನೆ ಅಂತಾ ಹೇಳಿಕೊಂಡು ಪರಿಚಯವಾಗಿದ್ದ. 2023 ಜು.26ರಿಂದ 2024 ಸೆ.10ರ ನಡುವಿನ ಅವಧಿಯಲ್ಲಿ ಆವಾಗವಾಗ ಮನೆಗೆ ಬಂದು ಹೋಗಿ ಮಾಡುತ್ತಿದ್ದರು. ಮಹದೇವಪ್ಪ ಅಳಲಗೇರಿ ಎನ್ನುವವರ ಮಗನಿಗೆ ನೌಕರಿ ಕೊಡಿಸುತ್ತೇನೆ ಎಂದು 3,75,000 ರೂ.ಹಣವನ್ನು ಪಡೆದುಕೊಂಡಿದ್ದಾರೆ. ಇಷ್ಟೇಯಲ್ಲದೇ ಇನ್ನೂ 10 ಜನರಿಂದ 39,50,000 ಸೇರಿದಂತೆ ಒಟ್ಟು ನೌಕರಿ ಕೊಡಿಸುವುದಾಗಿ ನಂಬಿಸಿ 43.25ಲಕ್ಷ ರೂ.ಹಣವನ್ನು ಪಡೆದುಕೊಂಡು ಯಾರಿಗೂ ನೌಕರಿ ಕೊಡಿಸದೆ, ವಾಪಾಸ್ ಹಣವನ್ನೂ ನೀಡದೆ ವಂಚನೆ ಮಾಡಿದ್ದಾರೆ. ಕೊಟ್ಟ ಹಣವನ್ನು ವಾಪಾಸ್ ಕೇಳಿದರೆ ಸತಾಯಿಸುತ್ತಿದ್ದಾರೆಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಈ ಕುರಿತು ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೋರೋಗ ತಜ್ಞ ಜಿತೇಂದ್ರ ಮುಗಳಿ ಅಭಿಮತ

ಡಿಜಿಟಲ್ ವ್ಯಸನದಿಂದ ತಾರುಣ್ಯದ ಆನಂದ ದೂರ

ಗದಗ: ಡಿಜಿಟಲ್ ವ್ಯಸನದಿಂದ ಯುವಜನಾಂಗ ದೈಹಿಕ ಹಾಗೂ ಮಾನಸಿಕ ಶಕ್ತಿಯನ್ನು ಕಳೆದುಕೊಂಡು ತಾರುಣ್ಯದ ಆನಂದದಿಂದ ವಂಚಿತರಾಗಿದ್ದಾರೆ. ಮೆದುಳಿನ ಸೃಜನಶೀಲ ಚಿಂತನೆಗಳಿಗೆ ಇದರಿಂದ ಧಕ್ಕೆ ಉಂಟಾಗಿದೆ. ಇದರಿಂದ ಯುವಕರು ಮುದುಕರಂತೆ ವರ್ತಿಸುತ್ತಿದ್ದಾರೆ. ಯುವಶಕ್ತಿ ದೇಶದ ಶಕ್ತಿಯಾಗಿರುವದರಿಂದ ಕ್ರಿಯಾಶೀಲತೆಯ ಕೊರತೆ ದೇಶಕ್ಕೆ ಮಾರಕ ಎಂದು ಜಿಮ್ಸ್‌ದ ಮನೋರೋಗ ತಜ್ಞ ಜಿತೇಂದ್ರ ಮುಗಳಿ ತಿಳಿಸಿದರು.

ಯುವ ಸಾಹಿತ್ಯ ಸಮಾವೇಶ: ಡಿಜಿಟಲ್ ವ್ಯಸನ ಗೋಷ್ಠಿ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಆದರ್ಶ ಶಿಕ್ಷಣ ಸಮಿತಿಯ ವಾಣಿಜ್ಯ ಪದವಿ ಮಹಾವಿದ್ಯಾಲಯದ ಸಹಯೋಗದಲ್ಲಿ ಯುವ ಸಾಹಿತ್ಯ ಸಮಾವೇಶದಂಗವಾಗಿ ಜರುಗಿದ ಡಿಜಿಟಲ್ ವ್ಯಸನ ಮನೋದೈಹಿಕ ತೊಂದರೆಗಳು ವಿಷಯವಾಗಿ ಮಾತನಾಡಿದರು.


ಆನ್‌ಲೈನ್‌ಗೇಮಿಂಗ್, ಬೆಟ್ಟಿಂಗ್, ರೀಲ್ಸ ವೀಕ್ಷಣೆ ಮೂಲಕ ತಮ್ಮ ಅಮೂಲ್ಯ ಸಮಯವನ್ನು ವ್ಯಯಗೊಳಿಸಿ ಕುಟುಂಬದಲ್ಲಿ ಅಶಾಂತಿ ವಾತಾವರಣಕ್ಕೆ ಕಾರಣರಾಗಿದ್ದಾರೆ. ನಿದ್ರಾಹೀನತೆ, ನಿದ್ದೆಯಲ್ಲಿ ನಡಿಗೆ, ಬಡಬಡಿಸುವದು, ಹೆಣ್ಣುಮಕ್ಕಳ ತೂಕದಲ್ಲಿ ವ್ಯತ್ಯಾಸ, ಪಿಸಿಓಡಿ ಸಮಸ್ಯೆ ಅನೇಕ ದೈಹಿಕ ಮತ್ತು ಮಾನಸಿಕ ತೊಂದರೆಗಳು ಅಧಿಕವಾಗಿವೆ. ಈ ಹಿನ್ನೆಲೆಯಲ್ಲಿ ಡಿಜಿಟಲ್ ಸಾಮಗ್ರಿಗಳ ಬಳಕೆಯನ್ನು ಕಡಿಮೆಗೊಳಿಸಿ ಸೃಜನಶೀಲ ಚಟುವಟಿಕೆ, ಓದು, ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಳ್ಳಲು ಕರೆ ನೀಡಿದರು.

ಸೈಬರ್ ಅಪರಾಧಗಳ ಕುರಿತು ಎಂ.ಎಸ್.ತಿಪ್ಪಾಪೂರ ಇವರು ಮಾತನಾಡಿ, ಸೈಬರ್ ಅಪರಾಧಗಳ ಸಂಖ್ಯೆ ದಿನೇ ದಿನೇ ಅಧಿಕಗೊಳ್ಳುತ್ತಿವೆ. ನಮಗರಿವಿಲ್ಲದೇ ಓಟಿಪಿಗಳ ಮೂಲಕ ವಂಚನೆ ನಡೆಯುತ್ತಿದೆ. ವ್ಯವಸ್ಥಿತ ಜಾಲದಲ್ಲಿ ನಮ್ಮನ್ನು ಸಿಲುಕಿಸಿ ಆರ್ಥಿಕವಾಗಿ, ಮಾನಸಿಕವಾಗಿ ಕುಗ್ಗಿಸುವ ಕಾರ್ಯ ನಡೆಯುತ್ತಿರುವದರಿಂದ ಎಚ್ಚರಿಕೆ ಹೊಂದುವದು ಇಂದಿನ ಅಗತ್ಯವಾಗಿದೆ ಎಂದು ತಿಳಿಸಿದರು.



ಕವಿತಾ ವಿಭೂತಿ ಮಾತನಾಡಿ, ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆಯಿಮದ ಯುವಕರು ಹೇಗೆ ದಾರಿ ತಪ್ಪುತ್ತಿದ್ದಾರೆ ಮತ್ತು ಇಂದಿನ ದಿನಮಾನದಲ್ಲಿ ತಂತ್ರಜ್ಞಾನದ ಜೊತೆಗೆ ಹೇಗೆ ಬದುಕಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಡಾ.ಜಿ.ಬಿ.ಪಾಟೀಲ ಮಾತನಾಡಿ, ಅಂಗೈಯಲ್ಲಿರುವ ಸಾಧನವನ್ನು ತಮ್ಮ ಸಾಮರ್ಥ್ಯವನ್ನು ಇಮ್ಮಡಿಗೊಳಿಸಲು ಬಳಸಬೇಕು. ಮಾನಸಿಕ ಖಿನ್ನತೆ ಮತ್ತು ದೈಹಿಕ ತೊಂದರೆಗಳಿಂದ ಆಸ್ಪತ್ರೆಗಳಲ್ಲಿ ಪ್ರತ್ಯೇಕ ವಿಭಾಗಗಳು ನಿರ್ಮಾಣಗೊಳ್ಳುತ್ತಿರುವದು ಒಳ್ಳೆಯ ಬೆಳವಣಿಗೆಯಲ್ಲ, ಯುವಕರಲ್ಲಿ ಜಾಗೃತಿ ಮೂಡಿಸುವ ಇಂತಹ ಕಾರ್ಯಗಳು ನಿರಂತರವಾಗಿ ನಡೆಯಬೇಕು ಎಂದು ತಿಳಿಸಿದರು. ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ತಜ್ಞರು ಉತ್ತರಿಸಿದರು. ರಾಹುಲ ಗಿಡ್ನಂದಿ ನಿರೂಪಿಸಿದರು. ಡಿ.ಎಸ್.ಬಾಪುರಿ ಸ್ವಾಗತಿಸಿದರು. ಸತೀಶ ಚನ್ನಪ್ಪಗೌಡರ ವಂದಿಸಿದರು.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ (Q)	13	9	4	0	18	+1.065
ಗುಜರಾತ್ (Q)	13	8	5	0	16	+0.400
ಹೈದರಾಬಾದ್ (Q)	13	8	5	0	16	+0.350
ರಾಜಸ್ಥಾನ	13	7	6	0	14	+0.083
ಪಂಜಾಬ್	13	6	6	1	13	+0.227
ಚೆನ್ನೈ	13	6	7	0	12	+0.016
ದಿಲ್ಲಿ	13	6	7	0	12	-0.871
ಕೆಕೆಆರ್	12	5	6	1	11	-0.038
ಮುಂಬೈ	12	4	8	0	8	-0.504
ಲಖನೌ	13	4	9	0	8	-0.702

ನಾಲ್ಕನೇ ಸ್ಥಾನಕ್ಕೆ ರಾಜಸ್ಥಾನ | ಪ್ಲೇಆಫ್ ಹಾದಿ ಸುಗಮ

ಸಿಕ್ಸರ್‌ಗಳ ವೈಭವ



ಜೈಪುರ: ವೈಭವ್ ಸೂರ್ಯವಂಶಿ ಬಾರಿಸಿದ ಸಿಕ್ಸರ್‌ಗಳೆದುರು ತತ್ತರಿಸಿರುವ ಲಖನೌ ಸೂಪರ್ ಜೇಂಟ್ಸ್ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ 9ನೇ ಸೋಲು ಕಂಡಿದೆ. ರಾಜಸ್ಥಾನ ಗೆಲುವಿನೊಂದಿಗೆ ನಾಲ್ಕನೇ ಸ್ಥಾನಕ್ಕೇರಿದ್ದು ಪ್ಲೇಆಫ್‌ಗೇರುವ ಅವಕಾಶಗಳನ್ನು ಹೆಚ್ಚುಗೊಳಿಸಿದೆ.

ರವೀಂದ್ರ ಜಡೇಜಾ, ರಿಯಾನ್ ಪರಾಗ್ ಇಲ್ಲದ ಪಂದ್ಯದಲ್ಲಿ ರಾಜಸ್ಥಾನ ಅನುಭವ ಇಲ್ಲದ ತಂಡದೊಂದಿಗೆ ಮೈದಾನಕ್ಕಿಳಿಯಿತು. ವೈಭವ್ ಸೂರ್ಯವಂಶಿ ನಿಧಾನ ಆರಂಭ ಮಾಡಿದರು. ಇದೆಲ್ಲದರ ನಡುವೆ ದೊಡ್ಡ ಗುರಿ. ಗೆಲ್ಲಲೇಬೇಕಿದ್ದ ಪಂದ್ಯದಲ್ಲಿ ಎದುರಾಳಿ ಲಖನೌ ಒತ್ತಡ ಹಾಕಲು ಆರಂಭಿಸಿತು ಅನ್ನುವಷ್ಟರಲ್ಲಿ ಅಬ್ಬರಿಸಲಾರಂಭಿಸಿದರು ವೈಭವ್ ಸೂರ್ಯವಂಶಿ. 10 ಸ್ಫೋಟಕ ಸಿಕ್ಸರ್, 7 ಅಬ್ಬರದ ಬೌಂಡರಿ ಬಾರಿಸಿದ ನಂತರ ಸ್ಟ್ರೈಕ್ ರೇಟ್ ಗಗನದೆತ್ತರಕ್ಕೆ ಹಾರಿತು. ಪಂದ್ಯವನ್ನು ಗೆದ್ದು ಅಂಕಪಟ್ಟಿಯಲ್ಲೂ ರಾಜಸ್ಥಾನ ಮೇಲೇರಿತು.

ಟಾಸ್ ಗೆದ್ದ ರಾಜಸ್ಥಾನ ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಲಖನೌ ಪರ ಮಿಚೆಲ್ ಮಾರ್ಷ್ (96; 57ಎ, 11ಬೌ, 5ಸಿ), ಜೋಶ್ ಇಂಗ್ಲಿಸ್(60; 29ಎ, 7ಬೌ, 3ಸಿ) ಮಿಂಚಿದರು. ಪಂತ್(35) ಕೂಡ ಕೈಜೋಡಿಸಿದ ನಂತರ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡ ಲಖನೌ 220 ರನ್ ಗಳಿಸಿತು. ರಾಜಸ್ಥಾನ ಪರ ಯಶ್ 2 ವಿಕೆಟ್ ಪಡೆದುಕೊಂಡರು. ಗುರಿ ಬೆನ್ನತ್ತಿದ ರಾಜಸ್ಥಾನ 19.1 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 225 ರನ್ ಗಳಿಸಿತು. ಯಶಸ್ವಿ ಜೈಸ್ವಾಲ್ (43; 8ಬೌ, 1ಸಿ) ಅಬ್ಬರದ ಆರಂಭ ಕೊಟ್ಟರೆ, ವೈಭವ್ ಸೂರ್ಯವಂಶಿ(93; 38ಎ, 7ಬೌ, 10ಸಿ) ಪಂದ್ಯವನ್ನು ರಾಜಸ್ಥಾನದ ಜೇಬಿಗಿತ್ತರು. ಜುರೇಲ್ 53 ರನ್ ಗಳಿಸಿ ಜಯದ ಹಾದಿ ತೋರಿಸಿದರು. ಲಖನೌ ಪರ ಮೋಹ್ಸಿನ್ ಖಾನ್ 1 ವಿಕೆಟ್ ಪಡೆದುಕೊಂಡರು.

ವೈಭವ್ ಸಿಕ್ಸರ್‌ಗಳ ಅಬ್ಬರ: ಮೊದಲ ಬಾಲ್‌ನಿಂದಲೇ ದಂಡಿಸುವುದು. ಒತ್ತಡದ ಮೂಲಕ ಮಿಂಚುವುದು ಇದು ವೈಭವ್ ಸೂರ್ಯವಂಶಿಯ ಸಾಮಾನ್ಯ ಸ್ವಭಾವ. ಆದರೆ ಲಖನೌ ವಿರುದ್ಧದ ಪಂದ್ಯದಲ್ಲಿ ಆಟವೇ ಬೇರೆಯದ್ದಾಗಿತ್ತು. ಹೊಡೆಯುವ ಜವಾಬ್ದಾರಿ ಜೈಸ್ವಾಲ್ ಮೈಗೆತ್ತಿಕೊಂಡಿದ್ದರು. ವೈಭವ್ ನಿಧಾನ ಆರಂಭ ಮಾಡಿದರು. ಮೊದಲಿನ 10 ಬಾಲ್‌ಗಳಲ್ಲಿ 5 ರನ್ ಗಳಿಸಿದ್ದ ವೈಭವ್ ಬಳಿಕ ನೈಜ ಆಟದತ್ತ ಸಾಗಿದರು. ದೊಡ್ಡ ದೊಡ್ಡ ಬೌಲರ್‌ಗಳನ್ನು ಮನ ಬಂದಂತೆ ದಂಡಿಸುವ ಅವರ ಸ್ವಾಭಾವಿಕ ಆಟಕ್ಕೆ ಮರಳಿದರು. ಮುಂದಿನ 28 ಬಾಲ್‌ಗಳಲ್ಲಿ 88 ರನ್ ಚಚ್ಚಿದರು. ಪಂದ್ಯವನ್ನೇ ಕಸಿದುಕೊಂಡರು, ಲಖನೌ ಆತ್ಮವಿಶ್ವಾಸದ ಮೇಲೆ ಪೆಟ್ಟಿಟ್ಟು ಬರೆ ಎಳೆದರು. ಪಂದ್ಯದುದ್ದಕ್ಕೂ ವೈಭವ್ ಆಟಕ್ಕೆ ನಿಲ್ಲಿಸುವ ಸರ್ದಾರರವೇ ಇರಲಿಲ್ಲ. ಒಟ್ಟು 38 ಬಾಲ್‌ಗಳಲ್ಲಿ 93 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದ ಔಪಚಾರಿಕತೆ ಮುಗಿಸುವಲ್ಲಿ ತಂಡಕ್ಕೆ ಧ್ರುವ್ ಜುರೇಲ್ ಸಹಾಯ ಮಾಡಿದರು. 38 ಬಾಲ್ ಎದುರಿಸಿ ಔಟಾಗದೇ 53 ರನ್ ಗಳಿಸಿದರು.

ವೈಭವ್ ದಾಖಲೆ

ಸಿಕ್ಸರ್ ಬಾರಿಸುವುದರಲ್ಲಿ ವೈಭವ್ ಸೂರ್ಯವಂಶಿ ಆ್ಯಂಡ್ರೆ ರಸೆಲ್ ದಾಖಲೆ ಮುರಿದಿದ್ದಾರೆ. ಒಂದೇ ಸೀಸನ್‌ನಲ್ಲಿ ಅತಿ ಹೆಚ್ಚು ಸಿಕ್ಸರ್ ಬಾರಿಸಿದವರ ಪಟ್ಟಿಯಲ್ಲಿ ವೈಭವ್ 2ನೇ ಸ್ಥಾನಕ್ಕೇರಿದರು. ಈ ಬಾರಿಯ ಐಪಿಎಲ್‌ನಲ್ಲಿ 53 ಸಿಕ್ಸರ್ ಬಾರಿಸಿರುವ ಅವರು, ಇನ್ನೂ ಪಂದ್ಯಗಳನ್ನು ಆಡಬೇಕಿದೆ. ಇದರೊಂದಿಗೆ ಮೊದಲ ಸ್ಥಾನದಲ್ಲಿರುವ ಕ್ರಿಸ್ ಗೇಲ್ ದಾಖಲೆ ಮುರಿಯುವ ಅವಕಾಶಗಳನ್ನೂ ಹೊಂದಿದ್ದಾರೆ.

ಸಂಕ್ಷಿಪ್ತ ಸ್ಕೋರ್

ಲಖನೌ 20 ಓವರ್‌ಗಳಲ್ಲಿ 220/5: ಮಾರ್ಷ್ 96, ಇಂಗ್ಲಿಸ್ 60; ಯಶ್ ರಾಜ್ 35/2

ರಾಜಸ್ಥಾನ 19.1 ಓವರ್‌ಗಳಲ್ಲಿ 225/3: ವೈಭವ್ 93, ಜುರೇಲ್ 53*, ಜೈಸ್ವಾಲ್ 43; ಮೋಹ್ಸಿನ್ 31/1

ಅತಿ ಹೆಚ್ಚು ಸಿಕ್ಸರ್ (ಒಂದೇ ಆವೃತ್ತಿಯಲ್ಲಿ)		
1.	ಕ್ರಿಸ್ ಗೇಲ್	59
2.	ವೈಭವ್ ಸೂರ್ಯವಂಶಿ	53*
3.	ಆ್ಯಂಡ್ರೆ ರಸೆಲ್	52

ಇಂದು ಸೂಪರ್ ಕಿಂಗ್ಸ್ ವಿರುದ್ಧ ಪಂದ್ಯ

ಅಗ್ರ ಎರಡರ ಮೇಲೆ ಗುಜರಾತ್ ಪಡೆ ಕಣ್ಣು

ಅಹಮದಾಬಾದ್: ಕೈಯಲ್ಲಿದ್ದ ಎರಡು ಅವಕಾಶಗಳನ್ನು ಕಳೆದುಕೊಂಡಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಗೌರವ ವಿದಾಯಕ್ಕಾಗಿ ಗುಜರಾತ್ ತಂಡವನ್ನು ಸೋಲಿಸಬೇಕಿದೆ. ಇದು ಎರಡೂ ತಂಡಕ್ಕೂ ಈ ಬಾರಿಯ ಐಪಿಎಲ್‌ನ ಕೊನೆಯ ಪಂದ್ಯವಾಗಿರಲಿದೆ. ಟೈಟಾನ್ಸ್ ತಂಡ ಈಗಾಗಲೇ ಪ್ಲೇಆಫ್‌ಗೇರಿದೆ. ಅತ್ತ ಚೆನ್ನೈ ಸೂಪರ್ ಕಿಂಗ್ಸ್ ಆರನೇ ಸ್ಥಾನದಲ್ಲಿದೆ. ಅಧಿಕೃತವಾಗಿ ಪಂದ್ಯಾವಳಿಯಿಂದ ಹೊರಬೀಳದಿದ್ದರೂ ಚೆನ್ನೈ ಸೂಪರ್ ಕಿಂಗ್ಸ್ ಪ್ಲೇಆಫ್‌ಗೆ ಹೋಗಬಹುದಾದ ಎಲ್ಲಾ ಹಾದಿಗಳು ಮುಚ್ಚಿವೆ.

ಚೆನ್ನೈಗೆ ಔಪಚಾರಿಕತೆಯೇ ಜಾಸ್ತಿಯಾಗಿದ್ದರೂ ಟಾಪ್ ಟುಗೇರುವ ಅವಕಾಶ ಹೊಂದಿರುವ ಗುಜರಾತ್ ಟೈಟಾನ್ಸ್‌ಗೆ ಇದು ಮಹತ್ವದ ಪಂದ್ಯ. ಅಹಮದಾಬಾದ್‌ನಲ್ಲಿ ನಡೆಯಲಿರುವ ಈ ಪಂದ್ಯವನ್ನು ಗೆದ್ದರೆ, ಗುಜರಾತ್ ಟಾಪ್-2 ಬಹುತೇಕ ಖಚಿತಗೊಳ್ಳಲಿದೆ. ಅತ್ತ ಚೆನ್ನೈ ಆರನೇ ಸ್ಥಾನದಲ್ಲಿದ್ದು, ಮಿರ್‍ಯಾಕಲ್ ಆಗುವ ನಿರೀಕ್ಷೆಯಲ್ಲಿದೆ. ಒಂದು ವೇಳೆ ಚೆನ್ನೈ ಪ್ಲೇಆಫ್‌ಗೇರಬೇಕೆಂದರೆ, ಈ ಪಂದ್ಯದಲ್ಲಿ ದೊಡ್ಡ ಗೆಲುವು ಸಾಧಿಸಿ ಆರ್‌ಆರ್‌ಗಿಂತಲೂ ಹೆಚ್ಚಿನ ರನ್‌ರೇಟ್‌ನೊಂದಿಗೆ ನಾಲ್ಕನೇ ಸ್ಥಾನಕ್ಕೇರಬೇಕು. ಇಷ್ಟಾದರೂ, ಕೆಕೆಆರ್ ಒಂದು, ಪಂಜಾಬ್ ಒಂದು ಮತ್ತು ಆರ್‌ಆರ್ ಒಂದು ಪಂದ್ಯದಲ್ಲಿ ಸೋಲಬೇಕು.

ಗುಜರಾತ್‌ಗೆ ಭರವಸೆ: ಗುಜರಾತ್ ಟೈಟಾನ್ಸ್‌ಗೆ ಚೆನ್ನೈ ವಿರುದ್ಧದ ಪಂದ್ಯದ ಗೆಲುವು ಬೂಸ್ಟರ್ ಕೊಡಲಿದೆ. ಟಾಪ್ 2ರಲ್ಲಿ ಇದ್ದವರಿಗೆ ಪ್ಲೇಆಫ್‌ನಲ್ಲಿ ಎರಡು ಅವಕಾಶ ಸಿಗಲಿವೆ. ಈ ನಿಟ್ಟಿನಲ್ಲಿ ಗೆಲುವಿನ ದೊಡ್ಡ ಗುರಿ ಗುಜರಾತ್ ಹೊಂದಿದೆ. ಹಿಂದಿನ ಪಂದ್ಯದಲ್ಲಿ ಕೆಕೆಆರ್ ವಿರುದ್ಧ ಸೋತಿರುವುದು ಗುಜರಾತ್ ವಿವಿಧ ವಿಭಾಗಗಳನ್ನು ಗಟ್ಟಿಗೊಳಿಸಬೇಕಿದೆ. ಕೆಲವು ಬೌಲರ್‌ಗಳು ದುಬಾರಿಯಾಗಿದ್ದಾರೆ. ಆದರೆ ಚೆನ್ನೈ ವಿರುದ್ಧ ನಡೆದಿದ್ದ ಪಂದ್ಯದಲ್ಲಿ ಗಿಲ್ ಪಡೆ ಸ್ಪಷ್ಟ ಪ್ರಾಬಲ್ಯ ಸಾಧಿಸಿದೆ. ಬ್ಯಾಟಿಂಗ್ ವಿಭಾಗಕ್ಕೆ ಬಂದರೆ ಗಿಲ್, ಬಟ್ಲರ್ ಮತ್ತು ಸುದರ್ಶನ್ ಭರ್ಜರಿ ಲಯದಲ್ಲಿದ್ದು, ವಿಶ್ವಾಸ ಹೆಚ್ಚಿಸಿದೆ.

ಪುಟಿದೇಳುವುದೇ ಚೆನ್ನೈ?: ಒಬ್ಬರಾದ ಮೇಲೊಬ್ಬರು ಗಾಯಗೊಂಡು ಹೊರ ನಡೆಯುವುದು ಚೆನ್ನೈ ತಂಡ ದೊಡ್ಡ ಹಿನ್ನಡೆ. ಪಂದ್ಯಗಳನ್ನು ಗೆಲ್ಲಿಸುತ್ತಿದ್ದ ಜೆಮಿ ಓವರ್‌ಟನ್ ಕೂಡ ಗಾಯದಿಂದಾಗಿ ಹೊರನಡೆದಿದ್ದಾರೆ. ಈ ಹೊಡೆತವೇ ಚೆನ್ನೈಗೆ ಹಿಂದಿನ ಪಂದ್ಯಗಳಲ್ಲಿ ಸೋಲು ನೀಡಿದೆ. ಈ ನಿಟ್ಟಿನಲ್ಲಿ ಲಖನೌ ಮತ್ತು ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಚೆನ್ನೈ ಬೌಲಿಂಗ್‌ನಲ್ಲಿ ಅಲ್ಪ ಹಿನ್ನಡೆಯಷ್ಟೇ ಚೆನ್ನೈ ಸೂಪರ್ ಕಿಂಗ್ಸ್‌ಗೆ ಸೋಲಿನ ರುಚಿ ಕೊಟ್ಟಿವೆ. ಮುಖ್ಯವಾಗಿ ಬೌಲಿಂಗ್ ವಿಚಾರದಲ್ಲಿ ಒತ್ತಡ ಎದುರಿಸುತ್ತಿರುವ ಚೆನ್ನೈ ತಂಡದಲ್ಲಿ ಅನುಭವಿ ವೇಗಿಗಳೇ ಇಲ್ಲ. ವಿಕೆಟ್ ಪಡೆದು ಪರ್ಪಲ್ ಕ್ಯಾಪ್ ಪೈಪೋಟಿಯಲ್ಲಿದ್ದ ಅನ್ಶುಲ್ ಕಂಬೋಜ್ ಭಾರೀ ದುಬಾರಿಯಾಗಿದ್ದಾರೆ. ಸ್ಪೆನ್ಸರ್ ಜಾನ್ಸನ್ ಕಳೆದ ಪಂದ್ಯದಲ್ಲಿ ಉತ್ತಮವಾಗಿ ಕಾಣಿಸಿಕೊಂಡಿದ್ದು, ಹೆಚ್ಚುವರಿ ಬೌಲರ್ ಆದ ಗುರ್ಜಪ್ನೀತ್ ಕೂಡ ದುಬಾರಿಯಾಗಿದ್ದಾರೆ. ಬ್ಯಾಟಿಂಗ್ ವಿಭಾಗದಲ್ಲಿ ರುತುರಾಜ್, ದುಬೆ ಮೊದಲಾದವರು ಮಿಂಚಬೇಕಿದೆ.

ಪಿಚ್

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಹಿಂದಿನ ಪಂದ್ಯಗಳಲ್ಲಿ ಬೌಲರ್‌ಗಳು ಮೇಲುಗೈ ಸಾಧಿಸಿದ್ದಾರೆ. 200 ರನ್ ದಾಟುವುದೇ ಇಲ್ಲಿ ದೊಡ್ಡ ಸವಾಲು. ಹೆಚ್ಚಿನ ಬೌನ್ಸ್, ಕ್ರ್ಯಾಕ್ ಮತ್ತು ಸ್ವಿಂಗ್ ಬ್ಯಾಟಿಗರಿಗೆ ಕಾಟ ಕೊಡಬಹುದು. ಇಬ್ಬನಿ ಬೌಲರ್‌ಗಳಿಗೆ ಹಿನ್ನಡೆ ತರಬಹುದು.

ಪಂದ್ಯದ ವಿವರ

ಯಾವಾಗ: ಗುರುವಾರ, ಎಲ್ಲಿ: ಅಹಮದಾಬಾದ್, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಕಿರುಸುದ್ದಿ

ಸ್ಕ್ವಾಷ್: ಧೈರ್ಯಗೆ ಗಮನಾರ್ಹ ಗೆಲುವು

ಹೊಸದಿಲ್ಲಿ: 33ನೇ ಏಷ್ಯನ್ ಜೂನಿಯರ್ ವೈಯಕ್ತಿಕ ಸ್ಕ್ವಾಷ್ ಸ್ಪರ್ಧೆಯಲ್ಲಿ ಮಿಂಚಿರುವ ಭಾರತದ ಧೈರ್ಯ ಗೋಗಿಯಾ ವಿಶ್ವದ 5/8ನೇ ಶ್ರೇಯಾಂಕಿತ ಕಾ ಚುನ್ ಅವರನ್ನು ಸೋಲಿಸಿ ಗಮನ ಸೆಳೆದಿದ್ದಾರೆ. ಬುಧವಾರ ನಡೆದ ಅಂಡರ್-13 ಪಂದ್ಯಾವಳಿಯಲ್ಲಿ ಅವರು, 12-10, 10-12, 11-7, 11-7ರಿಂದ ಗೆದ್ದರು. ಮೊದಲಿನಿಂದಲೂ ಹಿಡಿತ ಸಾಧಿಸಿದ ಧೈರ್ಯ ತಮ್ಮ ಹೆಸರಿಗೆ ತಕ್ಕಂತೆ ಪ್ರದರ್ಶನ ನೀಡಿದರು. ಎರಡನೇ ಸೆಟ್‌ನಲ್ಲಿ ಎದುರಾಳಿ ಕಂಬ್ಯಾಕ್ ಮಾಡಿದರೂ, ಮೂರನೇ ಹಾಗೂ ನಾಲ್ಕನೇ ಸೆಟ್‌ನಲ್ಲಿ ಮತ್ತೆ ಪ್ರಾಬಲ್ಯ ಸಾಧಿಸಿದ ಅವರು, ಗೆಲುವು ಸಾಧಿಸಿ ಮುನ್ನಡೆದರು. ಅಂಡರ್-13 ಮಹಿಳೆಯರ ವಿಭಾಗದಲ್ಲಿ ಭಾರತ ಮೂಲದ ರಿಯಾ ದಲಾಲ್ ಧೀರ್ಯಾ ಮಿಥಾಲಿ ಅವರನ್ನು ಸೋಲಿಸಿದರು. ಅಂಡರ್-15 ವಿಭಾಗದಲ್ಲಿ ಧ್ರುವ್ ದಿಸಾಸ್ ಅವರನ್ನು ಸೋಲಿಸಿದರು. ಇನ್ನುಳಿದ ವಿಭಾಗಗಳಲ್ಲೂ ಭಾರತೀಯರು ಗಮನಾರ್ಹ ಪ್ರದರ್ಶನ ನೀಡಿದ್ದಾರೆ. ಜೂನಿಯರ್ ಪಂದ್ಯಾವಳಿಯು ಅಂಡರ್-13, ಅಂಡರ್-15, 17 ಮತ್ತು ಅಂಡರ್-19 ವಿಭಾಗದಲ್ಲಿ ನಡೆಯುತ್ತವೆ.

ಶೀಘ್ರವೇ ಭಾರತಕ್ಕೆ ಸಾಲ್ಟ್

ಹೊಸದಿಲ್ಲಿ: ವಾರಾಂತ್ಯದೊಳಗೆ ಫಿಲ್ ಸಾಲ್ಟ್ ಭಾರತಕ್ಕೆ ಬರಲಿದ್ದಾರೆಂದು ಹೇಳಲಾಗುತ್ತಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪ್ರಮುಖ ಆಟಗಾರ ಅನಿಸಿಕೊಂಡಿರುವ ಸಾಲ್ಟ್ ಬಹುದಿನಗಳಿಂದ ಇಂಗ್ಲೆಂಡ್‌ನಲ್ಲಿದ್ದಾರೆ. ಈ ಹಿಂದೆ ಅವರಿಗಾದ ಗಾಯದ ಪರಿಣಾಮ ಅವರು, ಹೆಚ್ಚಿನ ಚಿಕಿತ್ಸೆಗಾಗಿ ಲಂಡನ್‌ಗೆ ತಲುಪಿದ್ದರು. ಈ ಬೆನ್ನಲ್ಲೇ ಅವರು ಚಿಕಿತ್ಸೆ ಪೂರ್ಣಗೊಳಿಸಿದ್ದಾರೆ. ಶೀಘ್ರವೇ ಭಾರತಕ್ಕೆ ಮರಳಲಿದ್ದಾರೆ. ಪ್ಲೇಆಫ್‌ಗೂ ಮುನ್ನವೇ ತಂಡವನ್ನು ಸೇರಿಕೊಳ್ಳಲಿದ್ದಾರೆಂದು ವರದಿಯಾಗಿದೆ. ಅವರಲ್ಲದೆ, ಆರ್‌ಸಿಬಿ ನಾಯಕ ರಜತ್ ಪಾಟಿದಾರ್ ಕೂಡ ಚೇತರಿಸಿಕೊಳ್ಳುತ್ತಿದ್ದು, ಅವರೂ ತಂಡ ಸೇರಿಕೊಳ್ಳಲಿದ್ದಾರೆ ಎನ್ನಲಾಗಿದೆ. ಹಿಂದಿನ ಪಂದ್ಯಕ್ಕಾಗಿ ಅವರು ಧರ್ಮಶಾಲಾಗೆ ತಲುಪಿರಲಿಲ್ಲ, ಅವರ ಬದಲಿಗೆ ವೆಂಕಟೇಶ್ ಅಯ್ಯರ್ ಕಣಕ್ಕಿಳಿದರೆ, ಪಂದ್ಯದ ನಾಯಕತ್ವವನ್ನು ಜಿತೇಶ್ ಶರ್ಮ ನಿಭಾಯಿಸಿದ್ದರು.

ಹಾಕಿ: ಭಾರತಕ್ಕೆ ಜಯ

ಭೋಪಾಲ್: ಭಾರತ ಅಂಡರ್-18 ಮಹಿಳಾ ಹಾಕಿ ತಂಡ ಆಸ್ಟ್ರೇಲಿಯಾ ವಿರುದ್ಧದ ಸರಣಿಯ ಕೊನೆಯ ಪಂದ್ಯದಲ್ಲಿ ಭರ್ಜರಿ ಪ್ರದರ್ಶನ ನೀಡಿ 4-1 ಅಂತರದಲ್ಲಿ ಗೆಲುವು ಸಾಧಿಸಿದೆ. ಭೋಪಾಲ್‌ನ ಉದವ್ ದಾಸ್ ಮೆಹತಾ ಕೇಂದ್ರ ಸಾಯಿ ಕೇಂದ್ರದಲ್ಲಿ ಬುಧವಾರ ನಡೆದ ಈ ಪಂದ್ಯದಲ್ಲಿ ಭಾರತ ಸಂಪೂರ್ಣ ಮೇಲುಗೈ ಸಾಧಿಸಿತು. ಪಂದ್ಯದ ಆರಂಭದಲ್ಲೇ ಆಸ್ಟ್ರೇಲಿಯಾ ಮುನ್ನಡೆ ಸಾಧಿಸಿತು. ಎಂಟನೇ ನಿಮಿಷದಲ್ಲಿ ಔರೋರಾ ಕೋವಾಸೆವಿಚ್ ಗೋಲು ಬಾರಿಸಿ ಪ್ರವಾಸಿ ತಂಡಕ್ಕೆ 1-0 ಮುನ್ನಡೆ ತಂದರು. ಆದರೆ ಭಾರತ ಹೆಚ್ಚು ಸಮಯ ಹಿನ್ನಡೆಯಲ್ಲಿರಲಿಲ್ಲ. ನಾಯಕಿ ಸ್ವೀಟಿ ಕುಜುರ್ 13ನೇ ನಿಮಿಷದಲ್ಲಿ ಸಮಬಲದ ಗೋಲು ದಾಖಲಿಸಿ ಮೊದಲ ಕ್ವಾರ್ಟರ್ ಅಂತ್ಯಕ್ಕೆ ಪಂದ್ಯವನ್ನು 1-1 ಸಮಬಲಕ್ಕೆ ತಂದರು. ಎರಡನೇ ಕ್ವಾರ್ಟರ್‌ನಲ್ಲಿ ಭಾರತ ತನ್ನ ಆಕ್ರಮಣ ಮುಂದುವರಿಸಿತು. 25ನೇ ನಿಮಿಷದಲ್ಲಿ ದಿಯಾ ಗೋಲು ಬಾರಿಸಿ ತಂಡಕ್ಕೆ 2-1 ಮುನ್ನಡೆ ಒದಗಿಸಿದರು. ಇದರೊಂದಿಗೆ ಭಾರತ ಅರ್ಧಾವಧಿಗೆ ಮುನ್ನ ಮೇಲುಗೈ ಸಾಧಿಸಿತು. ಎರಡನೇ ಅರ್ಧದಲ್ಲೂ ಭಾರತೀಯ ಆಟಗಾರ್ತಿಯರು ಹಿಡಿತ ಕಳೆದುಕೊಳ್ಳಲಿಲ್ಲ.

ಮೂರನೇ ಕ್ವಾರ್ಟರ್‌ನಲ್ಲಿ ಪ್ರಿಯಾಂಕಾ ಮಿಂಜ್ 44ನೇ ನಿಮಿಷದಲ್ಲಿ ಗೋಲು ದಾಖಲಿಸಿ ಅಂತರವನ್ನು ಹೆಚ್ಚಿಸಿದರು. ಅಂತಿಮ ಕ್ವಾರ್ಟರ್‌ನಲ್ಲಿ ನೌಶೀನ್ ನಾಜ್ ಮತ್ತೊಂದು ಗೋಲು ಬಾರಿಸಿ ಭಾರತದ ಭರ್ಜರಿ ಗೆಲುವಿಗೆ ಮೆರಗು ತಂದರು. ಈ ಗೆಲುವಿನೊಂದಿಗೆ ಭಾರತ ಸರಣಿಯನ್ನು ಉತ್ಸಾಹಭರಿತವಾಗಿ ಮುಗಿಸಿತು. ಇದೇ ತಿಂಗಳ ಅಂತ್ಯದಲ್ಲಿ ಜಪಾನ್‌ನಲ್ಲಿ ನಡೆಯಲಿರುವ ಅಂಡರ್-18 ಏಷ್ಯಾಕಪ್‌ಗೆ ಸಿದ್ಧತೆಯ ಭಾಗವಾಗಿದ್ದ ಈ ಸರಣಿಯಲ್ಲಿ ಭಾರತೀಯ ತಂಡ ಉತ್ತಮ ಅನುಭವ ಪಡೆದುಕೊಂಡಿದೆ. ನಾಲ್ಕು ಪಂದ್ಯಗಳ ಸರಣಿಯನ್ನು ಆಸ್ಟ್ರೇಲಿಯಾ 3-1 ಅಂತರದಲ್ಲಿ ತನ್ನದಾಗಿಸಿಕೊಂಡಿತು.

ಕುಸಿದ ಮುಂಬೈ ಇಂಡಿಯನ್ಸ್



ಕೋಲ್ಕತ್ತಾ: ದಿಢೀರ್ ಕುಸಿತ ಕಂಡ ಮುಂಬೈ ಇಂಡಿಯನ್ಸ್ ಕೆಕೆಆರ್‌ಗೆ ಸಾಮಾನ್ಯ ಗುರಿ ಮಾತ್ರ ಕೊಟ್ಟಿತು. ಮಳೆ ಅಡ್ಡಿಯಾದ ಪಂದ್ಯದಲ್ಲಿ ಬ್ಯಾಟಿಂಗ್‌ಗಿಳಿದ ಮುಂಬೈ ಕೆಕೆಆರ್ ವೇಗಿಗಳ ದಾಳಿಗೆ ತತ್ತರಿಸಿತು. ಮಧ್ಯಮ ಓವರ್‌ಗಳಲ್ಲಿ ನಾಯಕ ಹಾರ್ದಿಕ್ ಪಾಂಡ್ಯ ಉತ್ತಮ ಬ್ಯಾಟಿಂಗ್ ಮಾಡಿವಂತೆ ಕಂಡರು. ಆದರೆ ಹೆಚ್ಚಿನ ಕೊಡುಗೆ ಕೊಡಲಿಲ್ಲ, ತಿಲಕ್ ವರ್ಮಾ 32 ಬಾಲ್‌ಗಳಲ್ಲಿ 20 ರನ್ ಮಾತ್ರ ಗಳಿಸಿ ವಿಕೆಟ್ ಒಪ್ಪಿಸಿದರು. ಅಂತಿಮದಲ್ಲಿ ಕಾರ್ಬಿನ್ ಬಾಷ್ ಸ್ಫೋಟಕ ಬ್ಯಾಟಿಂಗ್ ಮಾಡಿದ ನಂತರ ಮುಂಬೈ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 147 ರನ್ ಗಳಿಸಿತು.

ಬ್ಯಾಟಿಂಗ್‌ಗಿಳಿದ ಮುಂಬೈಗೆ ಆಘಾತ ಎದುರಾಯಿತು. ಎರಡನೇ ಓವರ್ ಮಾಡಲು ಬಂದ ಕ್ಯಾಮರೋನ್ ಗ್ರೀನ್ ರಯಾನ್ ರಿಕೆಲ್ಟನ್ ವಿಕೆಟ್ ಕಿತ್ತರು. ಮೂರನೇ ಕ್ರಮಾಂಕದಲ್ಲಿ ಬಂದ ನಮನ್ ಬರುತ್ತಿದ್ದಂತೆ ಪೆವಿಲಿಯನ್ ಹೊರಟರು. ರೋಹಿತ್ ಶರ್ಮ 15 ರನ್ ದಾಟಲಿಲ್ಲ, ಮಧ್ಯಮ ಕ್ರಮಾಂಕದಲ್ಲಿ ಸೂರ್ಯಕುಮಾರ್ ಯಾದವ್ ಮೊದಲಿನ ಎರಡು ಬಾಲ್‌ಗಳಲ್ಲಿ ಬೌಂಡರಿ ಬಾರಿಸಿದರೆ, ಒಂದು ಸಿಕ್ಸರ್ ಕೂಡ ಬಾರಿಸಿ ಸ್ಫೋಟಕ ಬ್ಯಾಟಿಂಗ್ ಮಾಡುವ ಭರವಸೆ ಮೂಡಿಸಿದರು. ಆದರೆ 15 ರನ್ ಗಳಿಗೆ ಅವರೂ ವಿಕೆಟ್ ಒಪ್ಪಿಸಿದರು. 8.4 ನೇ ಓವರ್ ವೇಳೆ ಮಳೆಯಿಂದಾಗಿ ಪಂದ್ಯ ನಿಂತಿತು. ಬಳಿಕ ಮತ್ತೆ ಮುಂಬೈ ತತ್ತರಿಸಿತು. ಅಂತಿಮ ಓವರ್‌ಗಳಲ್ಲಿ 18 ಬಾಲ್‌ಗಳಲ್ಲಿ 2 ಸಿಕ್ಸರ್, 3 ಬೌಂಡರಿಗಳೊಂದಿಗೆ 32 ರನ್ ಗಳಿಸಿದ ಬಾರ್ಷ್ ಸ್ಕೋರ್ ಹಿಗ್ಗಿಸಿದರು.

ಸಿದ್ಧಾರ್ಥ್ ನಾಯರ್‌ಗೆ ಜಯ




ವಿಜಯಪುರ: ಇಲ್ಲಿ ನಡೆಯುತ್ತಿರುವ ರಾಜ್ಯ ಬ್ಯಾಡ್ಮಿಂಟನ್ ಸ್ಪರ್ಧೆಯ 15 ವರ್ಷದೊಳಗಿನ ಸಿಂಗಲ್ಸ್ ಬಾಲಕರ ರೌಂಡಪ್ ವಿಭಾಗದಲ್ಲಿ ಬೆಂಗಳೂರಿನ ಸಿದ್ಧಾರ್ಥ ನಾಯರ್ ಅವರು ಬೆಂಗಳೂರಿನ ಪ್ರಥಮ ಹರ್ಷ ವಿರುದ್ಧ 21-6, 21-8 ಅಂತರದಿಂದ ಜಯಗಳಿಸಿದ್ದಾರೆ. ಬೆಂಗಳೂರು ಗ್ರಾಮಾಂತರದ ಯಶವರ್ಧನ ಎಸ್.ಆರ್. ಅವರು ದಕ್ಷಿಣ ಕನ್ನಡದ ದಕ್ಷಾ ಡಿ.ಸಿ. ವಿರುದ್ಧ 21-7, 21-7ರಿಂದ ಗೆದ್ದರು.

ರಾಯಚೂರಿನ ರೂಹನ್ ಕರುತುರಿ ಬೆಂಗಳೂರಿನ ಚೇತಸ್ ಮುಂಡುರಗಿ ವಿರುದ್ಧ 25-23, 22-20, ಮೈಸೂರಿನ ಗೌರವ ಎಸ್. ಅವರು ಬೆಂಗಳೂರಿನ ಕೃಷ್ಣಾ ಪ್ರದ್ಯುತ್ ವಿರುದ್ಧ 21-13, 21-14 ರಿಂದ ಪ್ರಾಬಲ್ಯ ಸಾಧಿಸಿದರು. 15 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್‌ನಲ್ಲಿ ಬೆಂಗಳೂರಿನ ಮೈತಾ ನಾಯ್ಡು ಸುರಿ ಶೆಟ್ಟಿ ಅವರು ದಕ್ಷಿತಾ ಮುಂಡ್ಲಾ ವಿರುದ್ಧ 21-10, 21-18 ಅಂತರದಿಂದ ಗೆದ್ದರೆ, ಬೆಂಗಳೂರಿನ ಅರ್ಪಿತಾ ಬಾಬು ಅವರು ಹಮ್ಸಿಕಾ ಪಾಣಿಗ್ರಾಹಿ ವಿರುದ್ಧ 21-8, 21-11, ಬೆಂಗಳೂರು ಗ್ರಾಮಾಂತರದ ಮಾನ್ಯ ಎಂ ಅವರು ಬೆಂಗಳೂರು ನಗರದ ಚೇಸ್ತಾ ಗುಪ್ತಾ ವಿರುದ್ಧ 21-11, 12-21, 21-9 ರಿಂದ ಗೆಲುವು ದಾಖಲಿಸಿದರು. 15 ವರ್ಷದೊಳಗಿನ ಬಾಲಕರ ಡಬಲ್ಸ್ ವಿಭಾಗದಲ್ಲಿ ಬೆಂಗಳೂರಿನ ಗೌತಮ್ ಎಸ್ ನಾಯರ್, ಸಿದ್ಧಾರ್ಥ ಎಸ್. ನಾಯರ್ ಅವರು ಬೆಂಗಳೂರಿನ ಓಜಸ್ ಕಾಂತ್ವಿ ನಾಯಕ, ದಾವಣಗೆರೆಯ ವರುಷ್ ಎಸ್ ಗೌಡ ವಿರುದ್ಧ 21-11, 21-10 ಅಂತರದಲ್ಲಿ ಜಯಗಳಿಸಿದ್ದಾರೆ. ದಕ್ಷಿಣ ಕನ್ನಡದ ಕಿಯಾನ್ ಅಬ್ದುಲ್ ನಿಸಾರ್, ಬೆಂಗಳೂರಿನ ಶೈಲೇಶ್ ಶ್ರವಣ ಅವರು ಬೆಂಗಳೂರು ಗ್ರಾಮಾಂತರದ ಚಾರ್ವಿಕ್‌ಗೌಡ, ಉಷ್ಕರ್ಷ ಬಿ. ಅಜಯ ವಿರುದ್ಧ 21-14, 21-19 ಅಂತರದಿಂದ ಗೆದ್ದರು.

ಮಾನಸಿಕ ಸವಾಲು ಎದುರಿಸಲು ರಾಹುಲ್ ಸಹಾಯ

ದ್ರಾವಿಡ್‌ರನ್ನು ಎಂದಿಗೂ ಮರೆಯಲಾರೆ: ವಿರಾಟ್



ಬೆಂಗಳೂರು: ನನ್ನ ಕ್ರಿಕೆಟ್ ವೃತ್ತಿಜೀವನದ ಉತ್ತುಂಗದಲ್ಲಿದ್ದಾಗಲೂ ನಾನು ಮಾನಸಿಕ ಸವಾಲುಗಳ ವಿರುದ್ಧ ಹೋರಾಡುತ್ತಲೇ ಇದ್ದೆ. ಈ ಸಮಯದಲ್ಲಿ ನನ್ನ ಕೈಹಿಡಿದವರೆಂದರೆ ರಾಹುಲ್ ದ್ರಾವಿಡ್ ಎಂದು ವಿರಾಟ್ ಕೊಹ್ಲಿ ತಿಳಿಸಿದರು.

ಮಂಗಳವಾರ ಬೆಂಗಳೂರಿನಲ್ಲಿ ನಡೆದ ಆರ್‌ಸಿಬಿ ಲ್ಯಾಬ್ ಇಂಡಿಯನ್ ಸ್ಪೋರ್ಟ್ಸ್ ಸಮ್ಮಿಟ್‌ನಲ್ಲಿ ಮಾತನಾಡಿದ ವಿರಾಟ್, ಟೆಸ್ಟ್ ಏಕದಿನ ಮತ್ತು ಟಿ20ಯಲ್ಲಿ ನಾಯಕನಾಗಿದ್ದಾಗ ವಿವಿಧ ರೀತಿಯ ಸವಾಲುಗಳನ್ನು ಎದುರಿಸಿದೆ. ಮುಖ್ಯವಾಗಿ ಮಾನಸಿಕ ಸವಾಲುಗಳು. ಇದೆಲ್ಲಾ ಸವಾಲುಗಳಿಂದ ಹೊರಬರಲು ನನಗೆ ಸಹಾಯ ಮಾಡಿದ್ದು ರಾಹುಲ್ ದ್ರಾವಿಡ್. ಅವರನ್ನು ನಾನು ಜೀವನದಲ್ಲಿ ಎಂದೆಂದಿಗೂ ಮರೆಯಲಾರೆ ಎಂದರು.

ನಾವು ಮೈದಾನದಲ್ಲಿ ಒಂದು ಸಣ್ಣ ಗೀಟಿನ ನಡುವೆ ಇರುತ್ತೇವೆ. ನಮ್ಮ ವೈಯಕ್ತಿಕ ಪ್ರದರ್ಶನದ ಬಗ್ಗೆ ನಮಗೆ ಯಾವಾಗಲೂ ಅನುಮಾನ ಹುಟ್ಟಲಾರಂಭಿಸುತ್ತದೆ. ಈಗಲೂ ನಾನು ನೆಟ್‌ನಲ್ಲಿ ಹೋದಾಗ ಉತ್ತಮ ಫಲಿತಾಂಶ ಬರದಿದ್ದರೆ ಈಗಿನ ಯುವಕರಲ್ಲಿ ಇವರು 20 ಆಡಿದವರೆ ಎಂಬ ಪ್ರಶ್ನೆ ಹುಟ್ಟಿದರೆ ಎಂಬ ಒತ್ತಡ ನನ್ನೆದುರಿಗೆ ಬರುತ್ತದೆ. ನಾನು ಟೆಸ್ಟ್ ತಂಡದ ನಾಯಕನಾಗಿದ್ದಾಗ ಇಂಥ ಪ್ರಶ್ನೆ ಬಹುತೇಕ ದಿನವೂ ಎದುರಿಸುತ್ತಿದೆ. ಆ ಸಮಯದಲ್ಲಿ ನನ್ನಲ್ಲಿ ಒಂದಿಷ್ಟು ಧೈರ್ಯ ತುಂಬಿದವರೆಂದರೆ ಅದು ಕೋಚ್ ರಾಹುಲ್ ಎಂದು ಹೇಳಿದರು.

ರಾಹುಲ್ ವೃತ್ತಿಜೀವನವೇ ಪ್ರೇರಣೆ: ನಾನು ಈ ಬಗ್ಗೆ ರಾಹುಲ್ ಮತ್ತು ಅಂದಿನ ಬ್ಯಾಟಿಂಗ್ ಕೋಚ್ ವಿಕ್ರಮ ರಾಥೋಡ್ ಅವರೊಂದಿಗೆ ಮಾತನಾಡುತ್ತಿದ್ದೆ. ಮುಖ್ಯವಾಗಿ ರಾಹುಲ್ ಅವರ ವೈಯಕ್ತಿಕ ಕರಿಯರ್ ನನಗೆ ಇದರಿಂದ ಹೊರಬರಲು ಪ್ರೇರಣೆ ನೀಡಿತ್ತು. ಈ ಬಗ್ಗೆ ಮಾತನಾಡುತ್ತಲೇ ನನಗೆ ಅವರಿಬ್ಬರೂ ನಾನು ಟೆಸ್ಟ್ ಕ್ರಿಕೆಟ್‌ಗೆ ಏನು ಮಾಡಿದ್ದೇನೆ, ನಾನು ಮಾಡಿದ ದಾಖಲೆಗಳೇನು. ಕೊಡುಗೆಗಳೇನು ಎಂಬುದರ ಬಗ್ಗೆ ನೆನಪಿಸುತ್ತಿದ್ದರು. ಅದರಿಂದಲೇ ನಾನು ಹೊರಬಂದು ಅಸಲು ಆಟವಾಡಲು ಸಾಧ್ಯವಾಗುತ್ತಿತ್ತು ಎಂದು ಕೊಹ್ಲಿ ಹೇಳಿದ್ದಾರೆ.


ಹಾಕಿ ಆಟಗಾರರಿಗೆ ಇರುವ ಫಿಟ್ನೆಸ್ ನಮಗಿಲ್ಲ: ನಮ್ಮ ದೇಶದಲ್ಲಿ ಕ್ರಿಕೆಟ್ ಒಂದು ಪ್ರೈಮ್ ಫೋಕಸ್ ಇರುವ ಕ್ರೀಡೆ. ಆದರೆ ನಾನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವ ವಿಚಾರವೇನೆಂದರೆ ಹಾಕಿ ಆಟಗಾರರಿಗಿರುವ ಶೇ. 15ರಷ್ಟು ಫಿಟ್ನೆಸ್ ಕೂಡ ನಮಗಿಲ್ಲ, ನಮ್ಮ ಫಿಟ್ನೆಸ್ ಮತ್ತು ಆಟದ ಸೆಷನ್‌ಗಳನ್ನು ನಮ್ಮ ದೇಶದ ಹಾಕಿ ಆಟಗಾರರು ನೋಡಿಬಿಟ್ಟರೆ ನಗುತ್ತಾರೆ. ಏಕೆಂದರೆ ಅವರು ನಾವು ಮಾಡುವ ಪರಿಶ್ರಮಕ್ಕಿಂತ ಹೆಚ್ಚಿನ ಕಷ್ಟಪಡುತ್ತಾರೆ.

ಟೆಸ್ಟ್ ಬಿಟ್ಟ ಕಾರಣ ಬಹಿರಂಗ

ನಮ್ಮ ಬ್ಯಾಟಿಂಗ್ ಘಟಕ ಮತ್ತು ನಾಯಕತ್ವದ ಕೇಂದ್ರಬಿಂದುವಾದ ಸ್ಥಳದಲ್ಲಿ ನಾನು ಕೊನೆಗೊಂಡೆ. ಭಾರತೀಯ ಕ್ರಿಕೆಟ್ ಉನ್ನತ ಸ್ಥಾನದಲ್ಲಿ ಉಳಿಯುವಂತೆ ನೋಡಿಕೊಳ್ಳಲು ನಾನು ತುಂಬಾ ಉತ್ಸುಕನಾಗಿದ್ದೆ. ಅದಕ್ಕಾಗಿಯೇ ನಾನು ನಾಯಕತ್ವವನ್ನು ತೊರೆಯುವ ಹೊತ್ತಿಗೆ, ನಾನು ಸಂಪೂರ್ಣವಾಗಿ ಕಳೆದುಹೋಗಿದ್ದೆ. ನಾನು ಅದರಿಂದ ಸಂಪೂರ್ಣವಾಗಿ ಮುಳುಗಿದ್ದೆ. ಅದು ಭಯಾನಕವಾಗಿತ್ತು. ನಿರೀಕ್ಷೆಗಳನ್ನು ನಿರ್ವಹಿಸುವುದು ಕಷ್ಟಕರವಾಗಿತ್ತು. ಕೊಹ್ಲಿ ಹೇಳಿದರು. ನಿಮಗೆ ತಿಳಿದಿದೆ, ಅಭದ್ರತೆ ಬದಲಾವಣೆಯಾಗಲು ಬಿಡುವುದಿಲ್ಲ, ಅದಕ್ಕಾಗಿ, ನಾನು ನಿರ್ವಹಣೆಗೆ ಮತ್ತು ತಂಡಕ್ಕೆ ಮನ್ನಣೆ ನೀಡಬೇಕು. ಆದರೆ ಫಾರ್ಮ್ ಹೆಚ್ಚು ಕಾಲ ಉಳಿಯುವುದಿಲ್ಲ, ಆಗ, ಹೌದು, ಆ ಎರಡೂ ಜವಾಬ್ದಾರಿಗಳು ನಿಮ್ಮ ಮೇಲೆ ಭಾರವಾಗಲು ಪ್ರಾರಂಭಿಸುತ್ತವೆ. ಆದ್ದರಿಂದ, ಕಠಿಣವಾಗಿತ್ತು, ಎಂದು ಅವರು ಹೇಳಿದರು.

ಎಸ್.ಎಂ ಕೃಷ್ಣ ಸ್ಮರಣಾರ್ಥ ಓಪನ್ ಟೆನಿಸ್ | ಮುನ್ನಡೆದ ಏಕೈಕ ಆಟಗಾರ

ಟೆನಿಸ್: ಕ್ವಾರ್ಟರ್‌ಗೆ ಶಶಿಕುಮಾರ್



ಬೆಂಗಳೂರು: ಇಲ್ಲಿ ನಡೆಯುತ್ತಿರುವ ಎಸ್.ಎಂ. ಕೃಷ್ಣ ಮೆಮೋರಿಯಲ್ ಓಪನ್ ಟೆನಿಸ್ ಟೂರ್ನಿಯಲ್ಲಿ ಭಾರತದ ಮುಕುಂದ್ ಶಶಿಕುಮಾರ್ ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದ ಏಕೈಕ ಭಾರತೀಯ ಆಟಗಾರರಾಗಿ ಹೊರಹೊಮ್ಮಿದರು.


ಇದೇ ವೇಳೆ ವೈಲ್ಡ್ ಕಾರ್ಡ್ ಆಟಗಾರ ಕ್ರಿಶ್ ತ್ಯಾಗಿ ಮತ್ತೊಮ್ಮೆ ಹೋರಾಟಮಯ ಪ್ರದರ್ಶನ ನೀಡಿದರೂ ಮೂರನೇ ಶ್ರೇಯಾಂಕಿತ ಬ್ರಿಟನ್‌ನ ಹ್ಯಾಮಿಷ್ ಸ್ಟುವರ್ಟ್ ವಿರುದ್ಧ ಸೋಲನುಭವಿಸಿ ತಮ್ಮ ಅಭಿಯಾನಕ್ಕೆ ತೆರೆ ಎಳೆದರು. ಜಪಾನ್‌ನ ಅರ್ಹತಾ ಸುತ್ತಿನ ಆಟಗಾರ ತೈಯೊ ಯಮಾನಾಕಾ ವಿರುದ್ಧ ಮುಕುಂದ್ 6-4, 7-6 (1) ಅಂತರದಲ್ಲಿ ಗೆದ್ದು ಕೊನೆಯ ಎಂಟರ ಘಟ್ಟ ತಲುಪಿದರು. ಮೊದಲ ಸೆಟ್‌ನ 10ನೇ ಗೇಮ್‌ನಲ್ಲಿ ನಿರ್ಣಾಯಕ ಬ್ರೇಕ್ ಸಾಧಿಸಿದ ಮುಕುಂದ್ ಮುನ್ನಡೆ ಪಡೆದರು. ಎರಡನೇ ಸೆಟ್ ತೀವ್ರ ಪೈಪೋಟಿಯಿಂದ ಕೂಡಿದ್ದು, ಯಮಾನಾಕಾ ಬಲಿಷ್ಠ ಸರ್ವ್ ಮೂಲಕ ಒತ್ತಡ ತಂದರು.

ಒಂದು ಹಂತದಲ್ಲಿ ಸೆಟ್ ಪಾಯಿಂಟ್ ಎದುರಿಸಿದ್ದ ಮುಕುಂದ್ ಅದ್ಭುತ ಮರಳಾಟ ನೀಡಿ ಟೈಬ್ರೇಕ್‌ಗೆ ಪಂದ್ಯ ಕೊಂಡೊಯ್ದರು. ಬಳಿಕ ಟೈಬ್ರೇಕ್‌ನಲ್ಲಿ ಕೇವಲ ಒಂದು ಅಂಕ ಬಿಟ್ಟುಕೊಟ್ಟು 1 ಗಂಟೆ 46 ನಿಮಿಷಗಳ ಹೋರಾಟದಲ್ಲಿ ಜಯ ಸಾಧಿಸಿದರು. ಡಬಲ್ಸ್ ವಿಭಾಗದಲ್ಲೂ ಮುಕುಂದ್ ಉತ್ತಮ ಪ್ರದರ್ಶನ ನೀಡಿದರು. ಆದಿಲ್ ಕಲ್ಯಾಣಪುರ ಜೊತೆಗೂಡಿ ಡೊಮಿನಿಕ್ ಪಾಲನ್ ಮತ್ತು ದಿಗ್ವಿಜಯಪ್ರತಾಪ್ ಸಿಂಗ್ ಜೋಡಿಯನ್ನು 6-3, 7-5 ಅಂತರದಲ್ಲಿ ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಕ್ರಿಶ್‌ಗೆ ನಿರಾಸೆ: ಇನ್ನೊಂದೆಡೆ, ಬೆಂಗಳೂರು ಮೂಲದ ಕ್ರಿಶ್ ತ್ಯಾಗಿ ಮೂರನೇ ಶ್ರೇಯಾಂಕಿತ ಹ್ಯಾಮಿಷ್ ಸ್ಟುವರ್ಟ್ ವಿರುದ್ಧ ಎರಡು ಗಂಟೆಗಳಿಗಿಂತ ಹೆಚ್ಚು ಕಾಲ ಕಠಿಣ ಹೋರಾಟ ನಡೆಸಿದರು. ಮೊದಲ ಸೆಟ್ 6-4 ಅಂತರದಲ್ಲಿ ಗೆದ್ದ ಕ್ರಿಶ್, ಎರಡನೇ ಸೆಟ್‌ನಲ್ಲೂ ಆರಂಭಿಕ ಮುನ್ನಡೆ ಪಡೆದಿದ್ದರು. ಆದರೆ ಅನುಭವದ ಆಟ ಪ್ರದರ್ಶಿಸಿದ ಸ್ಟುವರ್ಟ್ ಪಂದ್ಯವನ್ನು 4-6, 6-4, 6-3 ಅಂತರದಲ್ಲಿ ತಿರುಗಿಸಿಕೊಂಡರು. ಭಾರತದ ಸಿದ್ಧಾರ್ಥ್ ರಾವತ್ ಅಭಿಯಾನವೂ ಅಂತ್ಯಗೊಂಡಿತು. ಅವರು ಸರ್ಬಿಯಾದ ಆರನೇ ಶ್ರೇಯಾಂಕಿತ ಒಗ್ನೆನ್ ಮಿಲಿಕ್ ವಿರುದ್ಧ 6-3, 6-1 ಅಂತರದಲ್ಲಿ ಸೋತರು. ಮೊದಲ ಸುತ್ತಿನಲ್ಲಿ ಅಗ್ರ ಶ್ರೇಯಾಂಕಿತ ಕೀಗನ್ ಸ್ಮಿತ್ ವಿರುದ್ಧ ಅಚ್ಚರಿ ಜಯ ಸಾಧಿಸಿದ್ದ ಮನೀಶ್ ಸುರೇಶ್‌ಕುಮಾರ್ ಕೂಡ ಮಾಜಿ ವಿಶ್ವ ನಂ. 40 ಇಲ್ಯಾ ಇವಾಶ್ಕಾ ವಿರುದ್ಧ 1-6, 1-6 ಅಂತರದಲ್ಲಿ ಸೋತು ಟೂರ್ನಿಯಿಂದ ಹೊರಬಿದ್ದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5990

ಎಡದಿಂದ ಬಲಕ್ಕೆ

2.ವಾಚನ-ಲೋರಿ ಸೇರಿ ಕಣ್ಣೀರಾಯ್ತು (5)
6.ಪಾಪಿಗಳ ಲೋಕದ ಒಡೆಯ (2)
8.ಮಾನವಕುಲದ ಮೂಲಪುರುಷ (2)
9.ಅತಿಯಾದ ಕೌತುಕವಿದು (3)
10.ತಾತ್ಕಾಲಿಕ-ಕೂಡಲೆ ಬಂದು ಹೋಗುವಂಥಾದ್ದು (3)
11.ರಮಣನು ಏರಿ ಕುಳಿತ ವೃಕ್ಷ (2)
12.ತಿಂಡಿ ಕಡಿಯುವ ದಂತ ತಿರುಗಿದೆ (2)
14.ವಿವೇಚನಾ ಶಕ್ತಿ-ಅರಿವು ಇದು (5)
16.ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡ ಪಕ್ಷ (4)
17.ಚೂರುಚೂರಾಗಿರುವುದು ದ್ವಿರುಕ್ತಿಯಲ್ಲಿದೆ (4)

ಮೇಲಿನಿಂದ ಕೆಳಕ್ಕೆ

1.ಸಂಖ್ಯೆಯ ಕ್ರಮದಲ್ಲಿ ಮೂರನೆಯದು (3)
3.ಕೋಕಪಕ್ಷಿಯ ಮೊದಲು ಗಾಲಿಯಿದೆ (4)
4.ನೀರಲ್ಲಿ ಹುಟ್ಟುವ ಹೂವಿನಂಥಹ ಕಣ್ಣುಳ್ಳವನು (4)
5.ದಾಸನು ಶೇಖರಿಸಿಟ್ಟ ಸಾಮಾನು (3)
7.ಚುನಾವಣೆಯಲ್ಲಿ ತನ್ನ ಅಭಿಪ್ರಾಯ ತಿಳಿಸುವವನು (4)
8.ಮಮ-ಕಲ್ಲು ಒಳಗೊಂಡ ಮೃದುಬಟ್ಟೆ (4)
11.ಉಸುಕು ತುಂಬಿದ ವಿಶಾಲಪ್ರದೇಶ (4)
13.ಪಟ್ಟು ಹಿಡಿಯುವವನು-ಛಲ ಬಿಡದವನು (4)
14.ರೀತಿ-ಕ್ರಮವಿಲ್ಲಿ ತಲೆಕೆಳಗಾಗಿದೆ (3)
15.ಕೆಳಗಿನಿಂದ ಮೇಲೇರಿದ ಸಖಿ (3)

5989 ಉತ್ತರ

ಎಡದಿಂದ ಬಲಕ್ಕೆ:
1.ದೂರದರ್ಶಕಯಂತ್ರ
3.ಹರ 4.ಪಟ್ಟಿ
5.ಹಂದರ 7.ರಾಣಿವಾಸ
9.ಕಸಕಸೆ 11.ಅಡಕಲು
13.ಅಪಾದಿತ
15.ನಮೂದಿಸು
16.ಲಗಾಯಿಸು

ಮೇಲಿನಿಂದ ಕೆಳಕ್ಕೆ:
1.ದೂರವಾಣಿ 2.ಕರಪತ್ರ
5.ಹಂಸ 6.ಕರ
8.ವಾಹಕ 10.ಪಾಯಸ
11.ಅಡಮಾನ
12.ಲುಟಾಯಿಸು
13.ಆಪತ್ಕಾಲ 14.ತವಕಿಸು

ಶಾಲೆಗಳ ಮುಚ್ಚುವ ನಿರ್ಧಾರಕ್ಕೆ ಜನಾಕ್ರೋಶ | ಕಡಿಮೆ ಮಕ್ಕಳ ನೆಪ | ಶಾಲೆಗಳಿಗೆ ಬೀಗ

ಅಕ್ಷರ ಲೋಕಕ್ಕೆ ಜಿಪಂ ಕೊಡಲಿಪೆಟ್ಟು!

▸ ಮಹಾಂತೇಶ ಕಣವಿ

ಧಾರವಾಡ: ಶೈಕ್ಷಣಿಕ ನಗರಿ ಜಿಲ್ಲೆ ಧಾರವಾಡದಲ್ಲಿ ಕಡಿಮೆ ಮಕ್ಕಳ ದಾಖಲಾತಿ ಕುಂಟು ನೆಪವನ್ನೊಡ್ಡಿ ಸರ್ಕಾರಿ ಶಾಲೆಗಳನ್ನು ಮುಚ್ಚಲು ಜಿಲ್ಲಾ ಪಂಚಾಯತ್ ಮುಂದಾಗಿರುವ ನಿರ್ಧಾರ ಈಗ ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.

ಈಚೇಗೆ ನಡೆದ ಜಿಪಂ ಸಭೆಯಲ್ಲಿ ಒಂದು ಶಾಲೆಯಲ್ಲಿ ಸರಿ ಸುಮಾರು 25ಕ್ಕಿಂತ ಕಡಿಮೆ ಮಕ್ಕಳಿರುವ ಶಾಲೆಗಳನ್ನು ಮುಚ್ಚಲು ನಿರ್ಧಾರ ಕೈಗೊಂಡಿದ್ದು, ಇದು ಶಿಕ್ಷಣ ಪ್ರೇಮಿಗಳ, ಶಿಕ್ಷಣ ತಜ್ಞರ, ಜನರ ಸಹನೆಯ ಕಟ್ಟೆ ಒಡೆಯುವಂತೆ ಮಾಡಿದೆ.

ಬಡವರ, ದಲಿತರ, ಕೃಷಿಕರ, ಕಾರ್ಮಿಕರ ಮತ್ತು ಗ್ರಾಮೀಣ ಭಾಗದ ಮಕ್ಕಳ ಪಾಲಿಗೆ ಜ್ಞಾನದೇವಿಗೆಯಾಗಿದ್ದ ಶಾಲೆಗಳಿಗೆ ಬೀಗ ಜಡಿಯುವ ಈ ಆತುರದ ನಡೆ, ಸರ್ಕಾರದ ಹೊಣೆಗೇಡಿತನ ಮತ್ತು ಶಿಕ್ಷಣ ವಿರೋಧಿ ನೀತಿಯನ್ನು ಎತ್ತಿ ತೋರಿಸುತ್ತದೆ.

ಮಕ್ಕಳೇ ಬಲಿಯಾಗಬೇಕೇ? ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕ್ಷೀಣಿಸಲು ಮೂಲ ಕಾರಣ ಯಾರು? ಸೌಕರ್ಯಗಳ ಕೊರತೆ, ಶಿಕ್ಷಕರ ಕೊರತೆ ಮತ್ತು ಖಾಸಗಿ ಶಾಲೆಗಳ ಅಬ್ಬರದ ನಡುವೆ ಸರ್ಕಾರಿ ಶಾಲೆಗಳನ್ನು ಬಲಪಡಿಸಲು ವಿಫಲವಾದ ಸರ್ಕಾರ ಮತ್ತು ಶಿಕ್ಷಣ ಇಲಾಖೆ ನೇರ ಹೊಣೆ.



> ಕಡಿಮೆ ಮಕ್ಕಳಿರುವ ಸರ್ಕಾರಿ ಶಾಲೆ ಮುಚ್ಚದಿರುವ ಕುರಿತು ಸರ್ಕಾರದ ಗಮನಕ್ಕೆ ತರಲಿದೆ. ಅಲ್ಲದೇ, ಕಣ್ತಪ್ಪಿನಿಂದ ಶಾಲೆಗಳ ಮುಚ್ಚುವ ಆದೇಶ ವೆಬ್‌ಸೈಟ್‌ನಲ್ಲಿ ಪ್ರಕಟಗೊಂಡಿದೆ.
> ■ **ಮಲ್ಲಿಕಾರ್ಜುನ ತೊದಲಬಾಗಿ,** ಉಪಕಾರ್ಯದರ್ಶಿಗಳು ಜಿಲ್ಲಾ ಪಂಚಾಯತಿ-ಧಾರವಾಡ

ವ್ಯವಸ್ಥೆಯ ತಪ್ಪುಗಳನ್ನು ತಿದ್ದುಪಡಿ ಮಾಡುವುದನ್ನು ಬಿಟ್ಟು, ನೇರವಾಗಿ ಶಾಲೆಗಳನ್ನೇ ಮುಚ್ಚುವುದು ಯಾವ ನ್ಯಾಯ? ಇದು ಸಮಸ್ಯೆಗೆ ಪರಿಹಾರವಲ್ಲ, ಬದಲಿಗೆ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಹೇಡಿತನ. ವ್ಯವಸ್ಥೆಯ ವೈಫಲ್ಯಕ್ಕೆ ಮಕ್ಕಳು ಬಲಿಯಾಗಬೇಕೇ?

ಮಕ್ಕಳ ಶಿಕ್ಷಣ ಹಕ್ಕು ಹರಣ: ಗ್ರಾಮೀಣ ಭಾಗದ ಕೂಲಿಕಾರ್ಮಿಕರ ಮಕ್ಕಳಿಗೆ ಸರ್ಕಾರಿ ಶಾಲೆಗಳೇ ಆಸರೆ. ಈ ಶಾಲೆಗಳು ಮುಚ್ಚಿದರೆ, ದೂರದ ಊರುಗಳಿಗೆ ಹೋಗಿ ಕಲಿಯಲು ಸಾಧ್ಯವಾಗದೆ ಹೆಣ್ಣುಮಕ್ಕಳು ಸೇರಿದಂತೆ ಹಲವರು ಶಿಕ್ಷಣದಿಂದ ವಂಚಿತರಾಗುವ ಭೀತಿ ಕೂಡ ಎದುರಾಗಿದೆ.

> ಜಿಪಂ ಅಧಿಕಾರಿಗಳು ಹವಾನಿಯಂತ್ರಿತ ಕೊಠಡಿಗಳಲ್ಲಿ ಕುಳಿತು ಸಂಖ್ಯೆ ಆಧಾರದ ಅಡಿ ನಿರ್ಧಾರ ಕೈಗೊಳ್ಳುವುದು ನಿಲ್ಲಿಸಬೇಕು. ಶಾಲೆಗಳು ಮುಚ್ಚುವ ಬದಲು, ಅಲ್ಲಿ ಉತ್ತಮ ಶಿಕ್ಷಕರನ್ನು ನೇಮಿಸಿ, ಗುಣಮಟ್ಟದ ಶಿಕ್ಷಣ ನೀಡಿ, ಶಾಲೆಗೆ ಮಕ್ಕಳನ್ನು ಆಕರ್ಷಿಸುವ ಕೆಲಸವಾಗಬೇಕು.
> ■ **ಡಾ.ಲಿಂಗರಾಜ ಅಂಗಡಿ,** ಸಲಹೆಗಾರರು ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ

ಖಾಸಗಿ ಶಿಕ್ಷಣ ಮಾಫಿಯಾಕ್ಕೆ ಮಣೆ: ಸರ್ಕಾರಿ ಶಾಲೆಗಳನ್ನು ಮುಚ್ಚುವ ಮೂಲಕ ಪರೋಕ್ಷವಾಗಿ ಖಾಸಗಿ ಶಾಲೆಗಳ ದಂಧೆಗೆ ಸ್ವತಃ ಸರ್ಕಾರವೇ ಕುಮ್ಮಕ್ಕು ನೀಡುವ ಸಂಶಯ ದಟ್ಟವಾಗಿದೆ. ದಾಖಲಾತಿ ನೆಪದಲ್ಲಿ ಮಕ್ಕಳ ಹಕ್ಕಿನ ಮೇಲೆ ಗದಾಪ್ರಹಾರ ನಿಲ್ಲಬೇಕಿದೆ.

ಜಿಲ್ಲೆಯ ಪ್ರಜ್ಞಾವಂತ ನಾಗರಿಕರು, ಶಿಕ್ಷಣ ತಜ್ಞರು, ಪೋಷಕರು ಈ ನಿರ್ಧಾರದ ವಿರುದ್ಧ ಹೋರಾಟಕ್ಕೆ ಸಜ್ಜಾಗಿದ್ದು, ತೀವ್ರ ಸ್ವರೂಪದ ಹೋರಾಟಕ್ಕೂ ಮೊದಲೇ ಸರ್ಕಾರ ಮಧ್ಯಪ್ರವೇಶಿಸಿ, ಜಿಪಂನ ಈ ಆದೇಶ ಕೈಬಿಡುವಂತೆ ಆದೇಶಿಸುವುದೇ ಕಾದುನೋಡಬೇಕಿದೆ.

ಶೀಘ್ರದಲ್ಲೇ ಎಲ್ಲ ಗೊಂದಲಗಳು ನಿವಾರಣೆ

ಹುಬ್ಬಳ್ಳಿ: ನಮಗೆ ಸಮಾಜ ಮುಖ್ಯವಾಗಿದೆ. ಸಮಾಜಕ್ಕೆ ಗುರುಗಳ ಮಾರ್ಗದರ್ಶನ ಅವಶ್ಯಕ. ಪೀಠಗಳು ಬೇರೆಯಾದರೂ ಸಮಾಜ ಒಂದೆಯಾಗಿದೆ. ಮೊದಲು ಇಡೀ ಸಮಾಜ ಒಂದಾಗಬೇಕು. ಮುಂದೆ ಸ್ವಾಮೀಜಿಗಳ ಕುರಿತು ಚಿಂತಿಸುತ್ತೇವೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದರು.



ನಗರದಲ್ಲಿ ಬುಧವಾರ ಖಾಸಗಿ ಹೋಟೆಲ್‌ನಲ್ಲಿ ಪಂಚಮಸಾಲಿ ಸಮಾಜದ ಮುಖಂಡರೊಂದಿಗೆ ಸಭೆ ನಡೆಸಿ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಇಲ್ಲಿ ನಡೆದ ಸಭೆಯಲ್ಲಿ ಕೈಗೊಳ್ಳುವ ನಿರ್ಣಯಗಳಿಗೆ ಎರಡು ಬಣದವರು ಒಪ್ಪಿಗೆ ಸೂಚಿಸಿದ್ದಾರೆ. ಪಂಚಮಸಾಲಿಯ ಎರಡೇ ಪೀಠಗಳಿವೆ. ನಮ್ಮ ಮುಂದೆ ಮತ್ತೊಂದು ಪೀಠ ಸ್ಥಾಪನೆ ಮಾಡುವ ಬಗ್ಗೆ ಯಾವುದೇ ವಿಚಾರಗಳಿಲ್ಲ ಎಂದು ಸ್ಪಷ್ಟಪಡಿಸಿದರು.

ಮಠಗಳನ್ನು ಸುಧಾರಣೆ ಮಾಡುವುದೇ ನಮ್ಮ ಗುರಿ. ನಮಗೆ ನಮ್ಮ ಮಠಗಳು ಎಷ್ಟಿವೇ ಎಂಬುದೇ ಗೊತ್ತಿಲ್ಲ. ಆದರೆ, ಇಡೀ ಸಮಾಜ ಒಂದಾಗಿ ಹೋಗಬೇಕು. ಬೇರೆ ಮಠಾಧೀಶರು ಎಷ್ಟಿದ್ದಾರೆ, ಅಘೋಷಿತ ಮಠಾಧೀಶರು ಇದ್ದಾರೆ. ಅವೆಲ್ಲವನ್ನು ಸೇರಿ ಐದು ಪೀಠ, ಹತ್ತು ಪೀಠ ಮಾಡುವ ಉದ್ದೇಶ ನಮಗಿಲ್ಲ ಮತ್ತು ಇಂದಿನ ಸಭೆಯಲ್ಲಿ ಈ ಬಗ್ಗೆ ಚರ್ಚೆಗಳಾಗಿಲ್ಲ. ಇಲ್ಲಿ ಚರ್ಚೆಯಾಗಿರುವುದು ಎರಡು ಬಣಗಳ ನಡುವೆ ಇರುವ ಮನಸ್ತಾಪಗಳ ಬಗ್ಗೆ ಮತ್ತು ಮನಸ್ತಾಪಗಳಿಗೆ ಯಾವ ರೀತಿ ಪರಿಹಾರ ಕಂಡುಕೊಳ್ಳಬೇಕು ಎಂಬುದರ ಬಗ್ಗೆ. ಮುಂದಿನ ದಿನಗಳಲ್ಲಿ ದಿನಾಂಕ ನಿಗದಿ ಮಾಡಿ, ಎಲ್ಲ ಗೊಂದಲಗಳನ್ನು ನಿವಾರಿಸಿಕೊಳ್ಳುತ್ತೇವೆ ಎಂದರು.

ಮಾಜಿ ಸಚಿವ ಮುರಗೇಶ ನಿರಾಣಿ ಮಾತನಾಡಿ, ಎರಡು ಬಣಗಳ ನಡುವೆ ಲೆಕ್ಕಪತ್ರದ ಬಗ್ಗೆ ಮನಸ್ತಾಪಗಳಿವೆ.

ಇದು ಒಂದೇ ಬಾರಿ ಮುಗಿಯುವಂತದ್ದಲ್ಲ, ಇದಕ್ಕೆ ನಾಲ್ಕಾರು ಬಾರಿ ಸಭೆಗಳನ್ನು ಮಾಡಬೇಕಾಗುತ್ತದೆ. ಇಂದಿನ ಸಭೆಯಲ್ಲಿಯೇ ಸಾಕಷ್ಟು ಮನಸ್ತಾಪಗಳು ತಿಳಿಯಾಗಿವೆ ಎಂದು ಹೇಳಿದರು.

80 ಲಕ್ಷ ಜನರಿಗೆ ಒಂದೇ ಪೀಠ ಇದ್ದರೆ ಎಲ್ಲರೂ ಒಂದೇ ಕಡೆ ಹೋಗಲು ಸಾಧ್ಯವಿಲ್ಲ, ಹೀಗಾಗಿ ಜನರಿಗೆ ಲಭ್ಯವಾಗುವಂತೆ ಪೀಠಗಳನ್ನು ಮಾಡುತ್ತೇವೆ. ಐದು ಪೀಠಗಳು ಅಣ್ಣ-ತಮ್ಮರಂತೆ ಇರಬೇಕು ಎಂಬುದಾಗಿದೆ. ಇಲ್ಲಿ ಯಾವುದೇ ಪೀಠ ದೊಟ್ಟದು, ಸಣ್ಣದು ಎಂಬುವುದು ಇರುವುದಿಲ್ಲ ಎಂದರು.

ಮಹಿಳಾ ಪೀಠ

ಮೊದಲು ಎರಡು ಪೀಠಗಳ ಗೊಂದಲಗಳು ನಿವಾರಣೆಯಾಗಲಿ. ನಂತರ ಪೀಠಗಳ ಸ್ಥಾಪನೆ ಬಗ್ಗೆ ಮಾತನಾಡುತ್ತೇವೆ. ಪಂಚಮಸಾಲಿ ಪಂಚಪೀಠಗಳನ್ನು ಮಾಡುತ್ತೇವೆ. ಅದರಲ್ಲಿ ಒಂದು ಮಹಿಳಾಪೀಠ ಇರಲಿದೆ. ಇದರ ಉದ್ದೇಶ ಒಬ್ಬರ ಮೇಲೆ ಒಬ್ಬರನ್ನು ಎತ್ತಿ ಕಟ್ಟುವುದಿಲ್ಲ ಎಂದು ಮಾಜಿ ಸಚಿವ ಮುರಗೇಶ ನಿರಾಣಿ ಹೇಳಿದರು.

ಕಿರುಸುದ್ದಿ

ಪತ್ನಿಯಿಂದ ಪತಿಯ ಕೊಲೆ

ನರಗುಂದ: ಪತಿಯನ್ನು ಪತ್ನಿಯೇ ಹತ್ಯೆಗೈದ ಘಟನೆ ತಾಲೂಕಿನ ರಡ್ಡೇರ ನಾಗನೂರ ಗ್ರಾಮದಲ್ಲಿ ಬುಧವಾರ ನಡೆದಿದೆ. ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಪತಿಯ ತಲೆಗೆ ಕಬ್ಬಿಣದ ಹಾರಿಯಿಂದ ಬಲವಾಗಿ ಹೊಡೆದು ಹತ್ಯೆಗೈದಿದ್ದಾಳೆ.

ರಡ್ಡೇರನಾಗನೂರನ ವಿಶ್ವನಾಥ ಶ್ರೀಶೈಲಪ್ಪ ಹಾದಿಮನಿ (28) ಕೊಲೆಯಾದ ವ್ಯಕ್ತಿ. ಕೊಲೆ ಮಾಡಿದ ಪತ್ನಿ ಶ್ವೇತಾ ವಿಶ್ವನಾಥ ಹಾದಿಮನಿ ಆರೋಪಿಯನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಕಳೆದ ಮೂರು ವರ್ಷದ ಹಿಂದೆ ಮದುವೆಯಾಗಿದ್ದಳು. ಶ್ವೇತಾ ಕೌಟುಂಬಿಕ ಕಾರಣವೊಡ್ಡಿ ಪದೇ ಪದೇ ತವರು ಮನೆಗೆ ಹೋಗಿ ಬರುತ್ತಿದ್ದಳು.

ಮೂರು ವರ್ಷದ ಹಿಂದೆ ತವರು ಮನೆಗೆ ತೆರಳಿದ್ದ ಇವಳು ಈಚೆಗೆ ಪತಿಯ ಸಹೋದರಿ ಮದುವೆಗಾಗಿ ಗಂಡನ ಮನೆಗೆ ಬಂದಿದ್ದಳು. ಒಂದು ವಾರ ಗಂಡನ ಮನೆಯಲ್ಲಿ ಇದ್ದು ಮತ್ತೆ ತವರಿಗೆ ತೆರಳಿದ್ದಳು. ಸೋಮವಾರ ಮರಳಿ ಬಂದಿದ್ದಳು. ಮತ್ತೆ ಗಂಡನ ಮೇಲೆ ಸಿಟ್ಟಾಗಿ ಬುಧವಾರ ಬೆಳಗಿನ ಜಾವ ಪತಿಯನ್ನು ಕೊಲೆಗೈದಿದ್ದಾಳೆ. ನರಗುಂದ ಪೊಲೀಸ್ ಠಾಣೆಯಲ್ಲಿ ಈ ಪ್ರಕರಣ ದಾಖಲಾಗಿದೆ. ಈ ಕುರಿತು ಮೃತನ ತಾಯಿ ಗೌರವ್ವ ಹಾದಿಮನಿ ದೂರು ನೀಡಿದ್ದಾರೆ.

2.7 ಲಕ್ಷ ರೂ. ವಂಚನೆ

ಹುಬ್ಬಳ್ಳಿ: ನಗರದ ಮಹಿಳೆಯೊಬ್ಬರಿಗೆ ಜಾಹಿರಾತಿನ ಲಿಂಕ್ ಕಳುಹಿಸಿದ ಅಪರಿಚಿತರು ಅವರಿಂದ 2.7 ಲಕ್ಷ ರೂ. ವಂಚಿಸಿದ ಪ್ರಕರಣ ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ವಿಜಯಲಕ್ಷ್ಮೀ ಗಬ್ಬೂರ ಎಂಬುವರಿಗೆ ಸಾನಿಯಾ ಕುರತಿ ಕಲೆಕ್ಷನ್ ಹಾಗೂ ರಾಧಿಕಾ ಪ್ಯಾಸನ್ ಟೇಸ್ಟ್ ಜಾಹಿರಾತಿನ ಲಿಂಕ್ ಕಳುಹಿದ್ದಾರೆ. ಅದನ್ನು ನಂಬಿ ಲಿಂಕ್ ಓಪನ್ ಮಾಡಿದಾಗ ವಿವಿಧ ಖಾತೆಯಿಂದ ಹಣ ವರ್ಗಾಯಿಸಿಕೊಂಡು ವಂಚಿಸಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಲೋಕಾಯುಕ್ತರಿಂದ ಅಕ್ರಮ ಗಣಿಗಾರಿಕೆ ಅಡ್ಡೆ ಮೇಲೆ ದಾಳಿ

ಅಧಿಕಾರಿಗಳ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲು

ಬಾಗಲಕೋಟೆ: ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ವ್ಯಾಪಕವಾಗಿ ನಡೆಯುತ್ತಿದ್ದರೂ ಅದನ್ನು ನಿಯಂತ್ರಿಸಲು ವಿಫಲರಾದ ಭೂ ವಿಜ್ಞಾನ ಮತ್ತು ಗಣಿಗಾರಿಕೆ ಇಲಾಖೆಯ ನಿರ್ದೇಶಕರು, ಜಿಲ್ಲಾ ಗಣಿಗಾರಿಕೆ ಮತ್ತು ಭೂ ವಿಜ್ಞಾನ ಇಲಾಖೆಯ ಉಪನಿರ್ದೇಶಕ, ಜಿಲ್ಲಾಧಿಕಾರಿಗಳು ಮತ್ತು ಬಾದಾಮಿ, ಮುಧೋಳ, ಜಮಖಂಡಿ, ಹುನಗುಂದ ಮತ್ತು ಇಳಕಲ್ ತಾಲೂಕುಗಳ ತಹಶೀಲ್ದಾರ್ ವಿರುದ್ಧ ಲೋಕಾಯುಕ್ತ ಅಧಿಕಾರಿಗಳು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದ್ದಾರೆ.

> ಅಕ್ರಮ ಗಣಿಗಾರಿಕೆ ನಿಯಂತ್ರಿಸಲು ಅಧಿಕಾರಿಗಳು ವಿಫಲ

ಜಿಲ್ಲೆಯ ಕೃಷ್ಣಾ ನದಿಯ ದಡ ಹಾಗೂ ಇನ್ನಿತರ ಕಡೆ ವ್ಯಾಪಕ ಪ್ರಮಾಣದಲ್ಲಿ ಅಕ್ರಮ ಮರಳು ಗಣಿಗಾರಿಕೆ ನಡೆಯುತ್ತಿರುವ ಕುರಿತು ಬಂದ ದೂರುಗಳ ಆಧಾರದ ಮೇಲೆ ಕರ್ನಾಟಕ ರಾಜ್ಯ ಲೋಕಾಯುಕ್ತರ ಮಾರ್ಗದರ್ಶನದಲ್ಲಿ ಗೌಪ್ಯ ತನಿಖೆಯನ್ನು ನಡೆಸಿದ ಬಾಗಲಕೋಟೆ ಲೋಕಾಯುಕ್ತ ಎಸ್ಪಿ ಎಂ.ಬಿ.ನಂದಗಾಂವಿಯವರ ನೇತೃತ್ವದಲ್ಲಿ ಅಕ್ರಮ ಗಣಿಗಾರಿಕೆ ನಡೆಯುವ ಸ್ಥಳಗಳ ದಾಳಿ ನಡೆಸಲಾಯಿತು.

ಲೋಕಾಯುಕ್ತ ಕಚೇರಿಗೆ ಬಂದ ದೂರು ಸ್ವೀಕರಿಸಿದ ಮಾಹಿತಿ ಪ್ರಕಾರ ಪರಿಸರ ಕಾಯ್ದೆಗಳನ್ನು ಉಲ್ಲಂಘಿಸಿ ಯಂತ್ರೋಪಕರಣಗಳನ್ನು ಬಳಸಿ ನದಿ ದಡದಲ್ಲಿ ಅಕ್ರಮವಾಗಿ ಅತಿಯಾದ ಮರಳು ತೋಡಿಕೆ ನಡೆಯುತ್ತಿರುವುದು ಸ್ಪಷ್ಟವಾಗಿದೆ. ಲೋಕಾಯುಕ್ತ ಅಧಿಕಾರಿಗಳು ಅನಿರೀಕ್ಷಿತ ದಾಳಿ ನಡೆಸಿ ತಪ್ಪಿತಸ್ಥ ಅಧಿಕಾರಿಗಳನ್ನು ಗುರುತಿಸಿ ವರದಿಯೊಂದಿಗೆ ಅವರುಗಳ ವಿವರಗಳನ್ನು ಒದಗಿಸುವಂತೆ ಆದೇಶ ಮಾಡಲಾಗಿದೆ.

ಪ್ರಾಧಿಕಾರದ ಆದೇಶದ ಮೇರೆಗೆ ಲೋಕಾಯುಕ್ತ ಬಾಗಲಕೋಟೆಯ ಪೊಲೀಸ್ ಅಧೀಕ್ಷಕರು ಹಾಗೂ ಅಕ್ಕಪಕ್ಕದ ಜಿಲ್ಲೆಗಳ ಲೋಕಾಯುಕ್ತ ಅಧಿಕಾರಿಗಳ ಸಹಾಯದೊಂದಿಗೆ ಬುಧವಾರ ಬೆಳಿಗ್ಗೆ 36 ಸ್ಥಳಗಳನ್ನು ಒಳಗೊಂಡ 24 ಪ್ರದೇಶಗಳಲ್ಲಿ ಅನಿರೀಕ್ಷಿತ ದಾಳಿ ನಡೆಸಿದರು. ದಾಳಿಯಲ್ಲಿ 28 ಅಧಿಕಾರಿಗಳು ಮತ್ತು 90 ಸಿಬ್ಬಂದಿಗಳು ಭಾಗವಹಿಸಿದ್ದರು. ಮರಳು ಗಣಿಗಾರಿಕೆ ಚಟುವಟಿಕೆಗಳಲ್ಲಿ 65 ಟಿಪ್ಪರ್‌ಗಳು, 18 ಹಿಟಾಚಿ ಯಂತ್ರಗಳು, 14 ಯಾಂತ್ರೀಕೃತ ದೋಣಿಗಳು, 6 ಟ್ರಾಕ್ಟರ್‌ಗಳು ಹಾಗೂ 1 ಜೆಸಿಬಿ ಬಳಸಿರುವುದು ದಾಳಿಯ ವೇಳೆ ಪತ್ತೆಯಾಗಿದೆ.



> ಬಾಗಲಕೋಟೆ ಜಿಲ್ಲೆಯಾದ್ಯಂತ ವ್ಯಾಪಕವಾಗಿದ್ದ ಅಕ್ರಮ ಮರಳು ಗಣಿಗಾರಿಕೆ ಪ್ರಾಥಮಿಕವಾಗಿ ಗುರುತಿಸಲ್ಪಟ್ಟಿದ್ದು, ಮುಂದಿನ ತನಿಖೆಯ ನಂತರ ತಪ್ಪಿತಸ್ಥ ಅಧಿಕಾರಿಗಳು/ಸಿಬ್ಬಂದಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.
> ■ **ಎಂ.ಬಿ.ನಂದಗಾಂವಿ,** ಲೋಕಾಯುಕ್ತ ಎಸ್ಪಿ

ಅನೇಕ ಸ್ಥಳಗಳಲ್ಲಿ ಅಕ್ರಮ ಮರಳು ಸಂಗ್ರಹಿಸಿರುವುದು, ದೊಡ್ಡ ಪ್ರಮಾಣದ ಅಕ್ರಮಗಳು ಪ್ರಾಥಮಿಕವಾಗಿ ದೃಢಪಟ್ಟಿವೆ. ಗಣಿಗಾರಿಕೆ ಮತ್ತು ಭೂವಿಜ್ಞಾನ ಇಲಾಖೆ, ಆದಾಯ ತೆರಿಗೆ ಇಲಾಖೆ, ಅರಣ್ಯ ಹಾಗೂ ಪರಿಸರ ಇಲಾಖೆ ಅಧಿಕಾರಿಗಳು, ಆರ್‌ಟಿಒ, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಹಾಗೂ ಸಂಬಂಧಿಸಿದ ಪೊಲೀಸ್ ಅಧಿಕಾರಿಗಳಿಗೆ ಅಕ್ರಮ ಮರಳು ಗಣಿಗಾರಿಕೆಯಲ್ಲಿ ತೊಡಗಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವುದು, ಕೈಗೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸುವಂತೆ ಲೋಕಾಯುಕ್ತ ಎಸ್ಪಿ ಎಂ.ಬಿ.ನಂದಗಾಂವಿ ಸೂಚಿಸಿದ್ದಾರೆ.

ನೀಟ್ ಅಕ್ರಮ ಟೀಕಿಸುವವರಿಗೆ ಕೃಷಿ ಪರೀಕ್ಷಾ ಅಕ್ರಮ ಕಂಡಿಲ್ಲವೇಕೆ?

ಕಲಬುರಗಿ: ಪ್ರಧಾನಿಯವರ ವಿದೇಶಿ ಪ್ರವಾಸ ಟೀಕಿಸುವ ಮಲ್ಲಿಕಾರ್ಜುನ ಖರ್ಗೆ ಹಾಗೂ ಪ್ರಿಯಾಂಕ್ ಖರ್ಗೆ ರಾಹುಲ್ ವಿದೇಶ ಪ್ರವಾಸದ ಬಗ್ಗೆ ಮೌನ ವಹಿಸಿರುವುದು ಗಾಂಧಿ ಮನೆತನಕ್ಕೆ ತೋರುವ ನಿಷ್ಠೆಯೇ? ವಾಸ್ತವ ತಿಳಿಯದ ಮೌಢ್ಯತನಕ್ಕೆ ಇದು ಸಾಕ್ಷಿ ಎಂದು ಮಾಜಿ ಸಂಸದರಾದ ಡಾ. ಉಮೇಶ್ ಜಾಧವ್ ಟೀಕಿಸಿದ್ದಾರೆ.



ಪ್ರಧಾನಿ ಮೋದಿಯವರ ವಿದೇಶಿ ಪ್ರವಾಸ ರಾಜತಾಂತ್ರಿಕ ಸಂಬಂಧವನ್ನು ಗಟ್ಟಿಗೊಳಿಸುತ್ತಿದ್ದು ಆರ್ಥಿಕ ಬಲ ವೃದ್ಧಿ ಮಾಡುತ್ತಿದೆ. ಆದರೆ, ವಿಪಕ್ಷ ನಾಯಕ ರಾಹುಲ್ ಗಾಂಧಿಯವರು ಕೈಗೊಂಡ ವಿದೇಶ ಪ್ರವಾಸ ಯಾರ ಹಣದಿಂದ ಎಂಬುದನ್ನು ಸ್ಪಷ್ಟಪಡಿಸಬೇಕಾಗಿದೆ. 11 ಕೋಟಿ ಆಸ್ತಿ ಘೋಷಣೆ ಮಾಡಿರುವ ರಾಹುಲ್ ಗಾಂಧಿಯವರು ಇಲ್ಲಿಯವರೆಗೆ 22 ವರ್ಷಗಳಲ್ಲಿ ಸಂಸದರಾಗಿ ಆಯ್ಕೆ ಹೊಂದಿ ಸುಮಾರು 54 ವಿದೇಶ ಪ್ರವಾಸ ಕೈಗೊಂಡಿದ್ದಾರೆ. ಅದರ ಖರ್ಚು ಸುಮಾರು 60 ಕೋಟಿ ಎಂದು ಅಂದಾಜಿಸಲಾಗಿದೆ. ಇಷ್ಟೊಂದು ಹಣ ಯಾರ ಪ್ರಾಯೋಜಕತ್ವದಿಂದ ಆಗಿದೆ ಎಂಬುದನ್ನು ಜನತೆಗೆ ತಿಳಿಸಲಿ ಎಂದರು.

ಪುಕ್ಕಟೆ ಹೇಳಿಕೆಗಳ ಮೂಲಕ ಹಿಟ್ ಆ್ಯಂಡ್ ರನ್ ಆಗುವ ಖರ್ಗೆಯವರು ನೀಟ್ ಅಕ್ರಮವನ್ನು ಸಿಬಿಐಗೆ ಒಪ್ಪಿಸಿ ಸರಣಿ ಬಂಧನ ನಡೆಸಿ ಕಂಬಿ ಎಣಿಸುವಂತೆ ಮಾಡಿ ಕೇಂದ್ರ ಸರ್ಕಾರವು ದಿಟ್ಟ ಹೆಜ್ಜೆ ಇಟ್ಟಿರುವ ಬಗ್ಗೆ ಗಮನಕ್ಕೆ ಬಂದಿಲ್ಲವೇ? ಆದರೆ ರಾಜ್ಯದಲ್ಲಿ ಕೃಷಿ ಪರೀಕ್ಷೆ ಅಕ್ರಮ ನಡೆದು ರೈತರ ಮಕ್ಕಳ ಭವಿಷ್ಯವನ್ನು ಚಿವುಟಿ ಹಾಕಿದ ರಾಜ್ಯ ಸರ್ಕಾರ ಯಾರನ್ನು ಬಂಧಿಸಿದೆ? ಈ ಬಗ್ಗೆ ಸರಕಾರದ ವೈಫಲ್ಯ ಪ್ರಿಯಾಂಕ ಖರ್ಗೆ ಯವರಿಗೆ ಕಾಣುತ್ತಿಲ್ಲವೇ ? ಎಂದು ಖಾರವಾಗಿ ಪ್ರಶ್ನಿಸಿದ್ದಾರೆ.

ದೇಶದ ದಿವಂಗತ ಪ್ರಧಾನಿ ರಾಜೀವ್ ಗಾಂಧಿ ಅವರನ್ನು ಹತ್ಯೆಗೆದ ಎಲ್ ಟಿ ಟಿ ಇ ಮುಖ್ಯಸ್ಥ ಪ್ರಭಾಕರ ಹತ್ಯೆ ದಿನದಂದು ತಮಿಳುನಾಡಿನ ಕಾಂಗ್ರೆಸ್ ಬೆಂಬಲಿತ ಮುಖ್ಯಮಂತ್ರಿ ಜೋಸೆಫ್ ವಿಜಯ್ ತನ್ನ ಸಾಮಾಜಿಕ ಜಾಲತಾಣದಲ್ಲಿ ಶ್ರದ್ಧಾಂಜಲಿ ಹಂಚಿಕೊಂಡ ಬಗ್ಗೆ ಅಪ್ಪ - ಮಗ ಮೌನವಹಿಸಿದ್ದು ಏಕೆ ? ತಮ್ಮ ನಾಯಕನನ್ನು ಕೊಂದವರ ಬಗ್ಗೆ ಶ್ರದ್ಧಾಂಜಲಿ ಸಲ್ಲಿಸಿದರೂ ಪ್ರತಿಕ್ರಿಯಿಸದೆ ಅವನತಿ ಹಾದಿ ಹಿಡಿದ ಕಾಂಗ್ರೆಸ್ ತನ್ನ ಮಾನ ಉಳಿಸಲು ಅಪವಿತ್ರ ಮೈತ್ರಿ ಮಾಡಿಕೊಂಡ ಪರಿಣಾಮವಾಗಿ ಮೌನವಾಗಿ ಈ ನಾಟಕ ಮಾಡುತ್ತಿದೆ ಎಂದು ದೂರಿದ್ದಾರೆ.

ಬಳ್ಳಾರಿಯಲ್ಲಿ ಸುರಿದ ಮಳೆ, ಗಾಳಿಗೆ ಅವಾಂತರ ಸೃಷ್ಟಿ

ಬಳ್ಳಾರಿ: ನಗರ ಸೇರಿದಂತೆ ಜಿಲ್ಲೆಯಾದ್ಯಂತ ಮಂಗಳವಾರ ಸಂಜೆ ಕೆಲ ಕಾಲ ಸುರಿದ ಮಳೆಗೆ ಅವಾಂತರ ಸೃಷ್ಟಿಯಾಗಿದೆ. ಗುಡುಗು, ಗಾಳಿ, ಸಿಡಿಲು ಮಿಶ್ರಿತ ಭಾರಿ ಮಳೆಗೆ ಮಂಗಳವಾರ ರಂಗಮಂದಿರ ಬಳಿಯ ರೈಲ್ವೆ ಕೆಲ ಸೇತುವೆ ಮುಳುಗಡೆಯಾಗಿ, ಸುಗಮ ಸಂಚಾರಕ್ಕೆ ಅಡ್ಡಿಯಾಗಿದೆ. ಶ್ರೀ ಕನಕ ದುರ್ಗಮ್ಮ ದೇವಾಲಯದ ಬಳಿಯ ಕೆಳ ಸೇತುವೆ ಮುಳುಗಡೆಯಾಗಿ ಕೆಲ ಕಾಲ ಸುಗಮ ಸಂಚಾರಕ್ಕೆ ಅಡ್ಡಿಯಾಯಿತು. ಕೌಲ್ ಬಜಾರ್, ಸತ್ಯನಾರಾಯಣ ಪೇಟೆ, ಬಸವೇಶ್ವರ ನಗರ ಸೇರಿದಂತೆ ನಾನಾ ಬಡಾವಣೆಗಳಲ್ಲಿ ಒಳ ರಸ್ತೆಗಳ ಮೇಲೆ ಮರಗಳು ಮುರಿದು ಬಿದ್ದು, ಸುಗಮ ಸಂಚಾರಕ್ಕೆ ಅಡ್ಡಿಯಾಗಿತ್ತು. ಹೊಸ ಕಾರೊಂದರ ಮೇಲೆ ಮರ ಬಿದ್ದು ಕಾರು ಜಖಂ ಗೊಂಡ ಘಟನೆಯು ನಡೆದಿದೆ. ನಾನಾ ಕಡೆ ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಪಾಲಿಕೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ತ್ಯಾಜ್ಯ ತುಂಬಿದ ಚರಂಡಿ ನೀರು ರಸ್ತೆಮೇಲೆ ಹರಿದು ಸಂಚಾರಕ್ಕೆ ನಾನಾ ಸಮಸ್ಯೆಯಾಯಿತು. ಕೆಲ ಕಡೆ ಪಾಲಿಕೆ ಅಧಿಕಾರಿಗಳಿಗೆ ಹಿಡಿಶಾಪ ಹಾಕುವ ಮೂಲಕ ಮೂಗು ಮುಚ್ಚಿಕೊಂಡೇ ಪಾದಚಾರಿಗಳು ತಮ್ಮ ಮನೆ ಕಡೆಗೆ ಹೆಜ್ಜೆ ಹಾಕಿದರು.



ಸ್ಟೇಡಿಯಂ ಜಲಾವೃತ: ಮಂಗಳವಾರ ಸಂಜೆ ಸುರಿದ ಮಳೆಗೆ ನಗರದಲ್ಲಿ ಕೋಟ್ಯಂತರ ರೂ.ಖರ್ಚು ಮಾಡಿ ಇತ್ತೀಚೆಗೆ ನಿರ್ಮಿಸಿದ ಡಿಸ್ಟಿಕ್ ಸ್ಟೇಡಿಯಂ ಸಂಪೂರ್ಣ ಜಲಾವೃತಗೊಂಡಿದೆ. ಮಳೆ ನೀರು ಸರಾಗವಾಗಿ ಹರಿಯಲು ವ್ಯವಸ್ಥೆ ಮಾಡದ ಹಿನ್ನೆಲೆ ಇಡೀ ಸ್ಟೇಡಿಯಂ ಸಂಪೂರ್ಣ ಜಲಾವೃತಗೊಂಡ ದೃಶ್ಯವನ್ನು ಜನರು ಕುತೂಹಲದಿಂದ ವೀಕ್ಷಿಸಿದರು. ಅವೈಜ್ಞಾನಿಕವಾಗಿ ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರ ಹಾಗೂ ಅಧಿಕಾರಿಗಳ ವಿರುದ್ಧ ಕ್ರೀಡಾಭಿಮಾನಿಗಳು ಹಿಡಿಶಾಪ ಹಾಕಿದರು.

ಆಯೋಗದ ಅಧ್ಯಕ್ಷರಿಂದ ಅಧಿಕಾರಿಗಳಿಗೆ ಪಾಠ

ಕೊಪ್ಪಳ: ಅಧಿಕಾರಿಯಾಗಿ ಸೇವೆ ಮಾಡುವ ಅವಕಾಶ ಎಲ್ಲರಿಗು ಸಿಗುವುದಿಲ್ಲ, ಹಾಗಾಗಿ ತಾವು ಅಧಿಕಾರಿಗಳಾಗಿ ಇದನ್ನರಿತು ಜನಸೇವೆಯಲ್ಲಿ ತೊಡಗಬೇಕು. ಬಡವರ ಬದುಕಿನ ಬಗ್ಗೆ ತುಸು ಹೆಚ್ಚಿನ ಕಾಳಜಿ ಹೊಂದಬೇಕು ಎಂದು ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷರಾದ ಡಾ.ಎಚ್.ಕೃಷ್ಣ ಅವರು ಸಲಹೆ ಮಾಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮೇ 20ರಂದು ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು. ಯಾರೇ ವ್ಯಕ್ತಿ ಇರಲಿ. ಯಾರೂ ಸಹ ಹಸಿವಿನಿಂದ ಬಳಲಬಾರದು ಎಂಬುದನ್ನು ರಾಷ್ಟ್ರೀಯ ಅಹಾರ ಭದ್ರತಾ ಕಾಯ್ದೆ 2013 ಸ್ಪಷ್ಟಪಡಿಸುತ್ತದೆ. ಕಡು ಬಡವರು ಗರ್ಭಾಶಯದಿಂದಲೇ ಸರ್ಕಾರದ ಸೌಕರ್ಯ ಪಡೆಯಲು ಆರಂಭಿಸಿ ಜನಿಸಿದ ಬಳಿಕ ಬೇರೆ ಬೇರೆ ವಯೋಮಾನದಲ್ಲಿ ಸಹ ಸೌಕರ್ಯಕ್ಕೆ ಅರ್ಹರಾಗಿ ವೃದ್ಯಾಪ ವೇತನದವರೆಗೂ ಸೌಕರ್ಯ ಪಡೆಯುತ್ತಾರೆ. ಕೆಲವರು ಬಡತನದಲ್ಲಿ ಜನಿಸಿ ಬಳಿಕ ಆರ್ಥಿಕವಾಗಿ ಸಬಲರಾಗುತ್ತಾರೆ. ಇನ್ನು ಕೆಲವರು ಜನನದಿಂದ ಸಾಯುವವರೆಗೂ ಬಡತನ ಹೊದ್ದೆ ಬದುಕುತ್ತಾರೆ. ಅಂತಹ ಬಡ ವರ್ಗದ ಜನರ ಬಗ್ಗೆ ಅಧಿಕಾರಿಗಳು ಕಾಳಜಿ ಹೊಂದಬೇಕು. ನಮ್ಮ ಸುತ್ತಲು ಯಾರಾದರು ಬಡವರು ಕಾಣಿಸಿದರೆ ಅವರ ಬಗ್ಗೆ ಗಮನ ಹರಿಸಿ ಸರ್ಕಾರದಿಂದ ಅವರಿಗೆ ಸಿಗಬೇಕಾದ ಸೌಕರ್ಯ ತಲುಪಿಸಲು ಅಧಿಕಾರಿಗಳು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಸಲಹೆ ಮಾಡಿದರು.

ಅಧಿಕಾರಿಗಳಿಗೆ ನಿರ್ದೇಶನ: ಆಯೋಗವು ಮೇ 19ರಂದೇ ಕೊಪ್ಪಳ ನಗರಕ್ಕೆ ಆಗಮಿಸಿ ವಿವಿಧೆಡೆ ಭೇಟಿ ಕೈಗೊಂಡಿದ್ದು, ಅಯಾ ಕಡೆಗೆ ಕಂಡು ಬರುವ ನ್ಯೂನ್ಯತೆಗಳ ಬಗ್ಗೆ ಅಧಿಕಾರಿಗಳ ಗಮನಕ್ಕೆ ತರುತ್ತೇವೆ. ಆಯಾ ಇಲಾಖೆಯ ಅಧಿಕಾರಿಗಳು ನ್ಯೂನತೆಗಳ ಬಗ್ಗೆ ತಿಂಗಳೊಳಗೆ ಜಿಲ್ಲಾಧಿಕಾರಿಗಳಿಗೆ ವರದಿ ಮಾಡಬೇಕು ಎಂದು ಅಧ್ಯಕ್ಷರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕಿರುಸುದ್ದಿ

ಅವಿರೋಧ ಆಯ್ಕೆ




◆**ಮುಂಡರಗಿ:** ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಬೆಂಗಳೂರು ಇದರ ತಾಲೂಕು ಘಟಕದ ಪದಾಧಿಕಾರಿಗಳ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಎಂ.ಪಿ.ಶೀರನಹಳ್ಳಿ (ಅಧ್ಯಕ್ಷ, ಶ್ರೀಮತಿ ಎಸ್.ಎಂ.ಬಿ ಸ.ಹಿ.ಪ್ರಾ ಶಾಲೆ ಎಡಿ ನಗರ ಮುಂಡರಗಿ), ಸೋಮಶೇಖರ ಬಸೇಗೌಡ್ರ (ಪ್ರಧಾನ ಕಾರ್ಯದರ್ಶಿ, ಸಹಿಪ್ರಾಹೆಮ ಶಾಲೆ ಮುಂಡರಗಿ), ಹನುಮಪ್ಪ ಪವಾರ (ಉಪಾಧ್ಯಕ್ಷ, ಸಹಿಪ್ರಾ ಶಾಲೆ ಬೆಣ್ಣಿಹಳ್ಳಿ), ಮಾಬುಸಾಬ ಬಿಚುಗತ್ತಿ (ಖಜಾಂಚಿ, ಸಹಿಪ್ರಾ ಶಾಲೆ ಮುಷ್ಠಿಕೊಪ್ಪ), ಸಂಗಮೇಶ ನಿಡಗುಂದಿ (ಸಂಘಟನಾ ಕಾರ್ಯದರ್ಶಿ, ಸಹಿಪ್ರಾ ಶಾಲೆ ಶಿರೋಳ), ವಿಜಯಕುಮಾರ ಚವಡಿ (ಸಹ ಕಾರ್ಯದರ್ಶಿ, ಸಕಿಪ್ರಾ ಹೆಮ ಶಾಲೆ ಶಿಂಗಟಾಲೂರ) ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸುತ್ತೋಲೆ ಹಿಂಪಡೆಯಿರಿ



◆**ನರಗುಂದ:** ಕಡಿಮೆ ಕಾರ್ಯಭಾರವಿರುವ ಸರ್ಕಾರಿ ಪದವಿಪೂರ್ವ ಕಾಲೇಜುಗಳ ಖಾಯಂ ಉಪನ್ಯಾಸಕನ್ನು ವಾರದಲ್ಲಿ ಮೂರು ದಿನ ಬೇರೆ ಕಾಲೇಜುಗಳಿಗೆ ನಿಯೋಜನೆ ಮಾಡಬೇಕು ಎಂದು ಸರ್ಕಾರ ಆದೇಶಿಸಿದೆ. ಈ ಕುರಿತು ಮೇ 7 ರಂದು ಸುತ್ತೋಲೆ ಹೊರಡಿಸಿರುವ ಸರ್ಕಾರ 320:1 ಅನುಪಾತ ಅಂದರೆ 320 ವಿದ್ಯಾರ್ಥಿಗಳಿಗೆ ಒಬ್ಬ ಉಪನ್ಯಾಕ ಎಂಬ ನಿಯಮ ಅನುಸರಿಸಿದೆ ಇದು ಸಂಪೂರ್ಣ ಅವೈಜ್ಞಾನಿಕ ಪದ್ಧತಿಯಾಗಿದೆ ಎಂದು ನರಗುಂದ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರೊ. ಬಿ.ಸಿ. ಹನಮಂತಗೌಡ್ರ ಆಗ್ರಹಿಸಿದ್ದಾರೆ.

ಇದೇನಾದರೂ ಜಾರಿಯಾದರೆ ರಾಜ್ಯದಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿರುವ ಸುಮಾರು ನಾಲ್ಕು ಸಾವಿರಕ್ಕೂ ಅಧಿಕ ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಂಡು ಬೀದಿಗೆ ಬರುತ್ತಾರೆ ಹಾಗೂ ಗ್ರಾಮೀಣ ಭಾಗದಲ್ಲಿರುವ ಬಹುಪಾಲು ಸರ್ಕಾರಿ ಪದವಿಪೂರ್ವ ಕಾಲೇಜುಗಳಿಗೆ ಬೀಗ ಬೀಳುತ್ತದೆ ಮತ್ತು ಧಾಖಲಾತಿ ಸಂಖ್ಯೆ ಖುಷಿಯುವ ಸಂಭವವಿದೆ. ಇಂತಹ ಉದ್ಯೋಗ ಕಸಿಯುವ ಸುತ್ತೋಲೆ ಬೇಡ ಕೂಡಲೇ ಸರ್ಕಾರ ಮೇ 7ರಂದು ಹೊಡಿಸಿರುವ ಸುತ್ತೋಲೆಯನ್ನು ಹಿಂಪಡೆಯಬೇಕು. ಈ ಸುತ್ತೋಲೆಯನ್ನು ಹಿಂಪಡೆಯಲು ಆಗ್ರಹಿಸಿ ಮೇ 22 ರಂದು ಬೆಂಗಳೂರಿನ ಫ್ರೀಡಂ ಪಾರ್ಕನಲ್ಲಿ ರಾಜ್ಯಮಟ್ಟದ ಹೋರಾಟವನ್ನು ಆಯೋಜಿಸಲಾಗಿದೆ ಎಂದಿದ್ದಾರೆ.

ಅರ್ಜಿ ಆಹ್ವಾನ

◆**ಗದಗ:** ಪ್ರಸಕ್ತ ಸಾಲಿನ ಇಲಾಖೆಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಕೆಗೆ ಜೂ.8ರಂದು ಕೊನೆಯ ದಿನವಾಗಿದೆ. ತಾಲೂಕಿನ ಮೆಟ್ರಿಕ ಪೂರ್ವ ಬಾಲಕ ಹಾಗೂ ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪ.ಜಾ/ಪ.ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ ಅರ್ಜಿ ಸಲ್ಲಿಸಬಹುದಾಗಿದೆ. ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯಮಿತಿ (ಪ್ರವರ್ಗ–1, ಎಸ್.ಸಿ ಎಸ್.ಟಿ ರೂ. 2.50 ಲಕ್ಷ) ಹಾಗೂ (ಪ್ರವರ್ಗ–2ಎ, 2ಬಿ, 3ಎ, 3ಬಿ, ಇತರೆ ಹಿಂದುಳಿದ ವರ್ಗ ಹಾಗೂ ಇತರೆ ರೂ. 1.00 ಲಕ್ಷ) ಹೊಂದಿರಬೇಕು. ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ https://bcwd.kamataka.gov.in/ ನ್ನು ನೋಡಬಹುದು.

ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline@gmail.com ಇ–ಮೇಲ್ ಮುಖಾಂತರ ಅಥವಾ ಜಿಲ್ಲಾ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜೆ ಶೇಂಗಾ	3369-8359
ಅಜವಾನ	1100-10369
ಅಲಸಂದಿ	4177-6459
ಸಜ್ಜೆ	1609-1609
ಕಡಲೆ	2259-6469
ಉದ್ದು	5612-5612
ಹೆಸರು	609-13001
ಹುರಳಿ	1244-4293
ಜೋಳ	1361-4733
ಗೋವಿನಜೋಳ	1667-1949
ಸಾಜಿರಗಿ	9169-9169
ಸಬ್ಬಸಗಿ	7569-7569
ಕುಸಬಿ	4189-5333
ಸೂರ್ಯಕಾಂತಿ	5006-6706
ತೊಗರಿ	4744-4744
ಗೋಧಿ	1112-3812



ಲಕ್ಷ್ಮೇಶ್ವರ: ಆನ್‌ಲೈನ್‌ನಲ್ಲಿ ಔಷಧಿ ಮಾರಾಟ ವಿರೋಧಿಸಿ ಔಷಧ ವ್ಯಾಪಾರಸ್ಥರ ಸಂಘ ನೀಡಿದ್ದ ಕರೆಯ ಹಿನ್ನೆಲೆಯಲ್ಲಿ ಬುಧವಾರ ಶಿರಹಟ್ಟಿ ಹಾಗೂ ಲಕ್ಷ್ಮೇಶ್ವರ ತಾಲೂಕು ವ್ಯಾಪಾರಸ್ಥರು ತಮ್ಮ ಅಂಗಡಿಗಳನ್ನು ಮುಚ್ಚಿ ಬೆಂಬಲ ವ್ಯಕ್ತಪಡಿಸಿದ್ದು, ನಿತ್ಯದ ಔಷಧಿಗೆ ಬರುವ ಜನರು ಪರದಾಡುವಂತಾಗಿತ್ತು. ವ್ಯಾಪಾರಸ್ಥರ ಬಂದ್‌ಗೆ ಸಂಪೂರ್ಣ ಬೆಂಬಲ ವ್ಯಕ್ತವಾಗಿತ್ತು.

ಫಲಾನುಭವಿಗಳಿಗೆ ಮಂಜೂರಾಗದ ಸಹಾಯಧನ

◆**ಮುಂಡರಗಿ:** ಕೇಂದ್ರ ಸರ್ಕಾರವು ಪ್ರಧಾನಮಂತ್ರಿ ಆವಾಜ್ ಯೋಜನೆ ಅಡಿಯಲ್ಲಿ ಬಡವರಿಗೆ ನಿವೇಶನ ಕಟ್ಟಿಕೊಳ್ಳುವದಕ್ಕೆ ಪ್ರತಿ ಮನೆಗೆ 1.20 ಲಕ್ಷ ರೂ. ಸಹಾಯಧನ ನೀಡುತ್ತಿದೆ. ಆದರೆ ಕಳೆದ ಒಂದು ವರ್ಷದಿಂದ ಫಲಾನುಭವಿಗಳಿಗೆ ಸಹಾಯಧನ ಮಂಜೂರಾಗಿಲ್ಲ. ಇದರಿಂದಾಗಿ ಬಡವರು ಕಟ್ಟಿಕೊಳ್ಳುತ್ತಿರುವಂತಹ ಮನೆಗಳು ಅರ್ಧಕ್ಕೆ ನಿಂತುಬಿಟ್ಟಿವೆ ಮತ್ತು ಅನೇಕ ಬಡ ಕುಟುಂಬಗಳು ಬೀದಿಯ ಮೇಲೆ ವಾಸವಾಗಿವೆ ಎಂದು ಸಮಾಜ ಕಾರ್ಯಕರ್ತ ರಂಗನಾಥ ನಾಯಕ ಹೇಳಿದರು.

ಅವರು ಪತ್ರಿಕೆ ಪ್ರತಿನಿಧಿಯೊಂದಿಗೆ ಮಾತನಾಡಿ, ಪ್ರಧಾನಮಂತ್ರಿ ಆವಾಜ್ ಯೋಜನೆ ಅಡಿಯಲ್ಲಿ 2021–22 ಹಾಗೂ 2024–25ನೇ ಸಾಲಿನಲ್ಲಿ ಮುಂಡರಗಿ ತಾಲೂಕಿಗೆ ಕೇಂದ್ರ ಸರ್ಕಾರವು 2734 ಮನೆಗಳ ಕಟ್ಟಡಕ್ಕೆ ಮಂಜೂರಾತಿ ನೀಡಿದ್ದು, ಆದರೆ ಸರ್ಕಾರವು ಇದುವರಿಗೂ 2339 ಮನೆಗಳ ಫಲಾನುಭವಿಗಳಿಗೆ 1ನೇ ಕಂತು ಹಣ ಕೇವಲ 30 ಸಾವಿರ ಹಣ ನೀಡಿದ್ದಾರೆ. ಹಾಗೆಯೇ 512 ಮನೆಗಳ ಫಲಾನುಭವಿಗಳಿಗೆ ಮಾತ್ರ 2 ಮತ್ತು 3ನೇ ಕಂತು ಹಣ ನೀಡಿದ್ದಾರೆ. 136 ಮನೆಗಳ ಫಲಾನುಭವಿಗಳಿಗೆ ಪೂರ್ಣ ಪ್ರಮಾಣದ ಹಣ ನೀಡಿದ್ದಾರೆ. ಸಮಸ್ಯೆಗಳ ಬಗ್ಗೆ ವಿಚಾರಿಸಿದರೆ ಆನ್‌ಲೈನ್ ಸಮಸ್ಯೆ ಇದೆ, ಎಸ್.ಎನ್.ಎಸ್. ಸ್ಪರ್ಶ ಸಂಸ್ಥೆಯ ತಾಂತ್ರಿಕ ತೊಂದರೆಯಿಂದ ಕಳೆದ 1 ವರ್ಷಗಳಿಂದ ಫಲಾನುಭವಿಗಳಿಗೆ ಹಣ ಬಂದಿಲ್ಲ ಎಂದು ಹೇಳುತ್ತಿದ್ದಾರೆ. ಸರ್ಕಾರವು ನೀಡುವಂತಹ ಸಹಾಯಧನದ ಹಣವನ್ನು ನಂಬಿಕೊಂಡು ವಾಸವಾಗಿದ್ದ ಮನೆಯನ್ನು ಕೆಡವಿಕೊಂಡು ಅಲ್ಲಿ ಇಲ್ಲಿ ಸಾಲ ಸೋಲ ಮಾಡಿ ಬಡವರು ಸರ್ಕಾರವು ನೀಡಿರುವಂತಹ 30 ಸಾವಿರ ರೂಗಳಿಂದ ಪ್ಲಿಂತ್ ಹಾಕಿಸಿಕೊಂಡಿದ್ದಾರೆ. ಕೆಲವರು ಸಜ್ಜಾ ಹಂತಕ್ಕೆ ತಂದಿದ್ದಾರೆ. ಆದರೆ ಕಳೆದ 1 ವರ್ಷದಿಂದ ಕೇಂದ್ರದಿಂದ ಉಳಿದ ಕಂತುಗಳ ಹಣ ಬಂದಿಲ್ಲ ಎಂದು ದೂರಿದರು.



ಗಜೇಂದ್ರಗಡ: ಆನ್‌ಲೈನ್ ಔಷಧಿ ಮಾರಾಟ ತಡೆಗಟ್ಟುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪಟ್ಟಣದ ಔಷಧಿ ವ್ಯಾಪಾರಿಗಳು ಬುಧವಾರ ತಮ್ಮ ವ್ಯಾಪಾರ ವಹಿವಾಟು ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಿದರು. ಗಜೇಂದ್ರಗಡ: ಆನ್‌ಲೈನ್ ಔಷಧಿ ಮಾರಾಟ ತಡೆಗಟ್ಟುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪಟ್ಟಣದ ಔಷಧಿ ವ್ಯಾಪಾರಿಗಳು ಬುಧವಾರ ತಮ್ಮ ವ್ಯಾಪಾರ ವಹಿವಾಟು ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಿದರು.

ಇ–ಕಾಮರ್ಸ್ ಮೂಲಕ ಔಷಧಿ ಮಾರಾಟ ಬಂದ್‌ಗೆ ಆಗ್ರಹಿಸಿ ಮನವಿ

480ಕ್ಕೂ ಹೆಚ್ಚು ಔಷಧಿ ಅಂಗಡಿ ಬಂದ್



◆**ಗದಗ:** ದೇಶವ್ಯಾಪಿ ಕರೆಯಲಾಗಿರುವ ಇ–ಕಾಮರ್ಸ್ ಮೂಲಕ ಔಷಧಿ ಮಾರಾಟ ಬಂದ್ ಮಾಡುವ ಹಿನ್ನೆಲೆಯಲ್ಲಿ ಬುಧವಾರ ನಗರದಲ್ಲಿ ಅಖಿಲ ಭಾರತ ಔಷಧ ವ್ಯಾಪಾರಸ್ಥರ ಸಂಘದ ನೀಡಿದ ಬಂದ್ ಕರೆಗೆ ಜಿಲ್ಲೆಯಾದ್ಯಂತ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಜ್ಞಾನೇಶ್ವರ್ ಖೋಕಲೆ, ಎಂ.ಡಿ.ಕಾಬಳ್ಳಿ, ಎಂ.ಬಿ. ರಮಣಿ, ಮಹದೇಗೌಡ ಲಿಂಗನಗೌಡ, ಸುರೇಶ ನಡುಗುಂದಿ, ರಂಜಾನ್ ಸಾಬ್ ನದಾಫ್, ಬರಡ್ಡಿ ಪಂಕಜ್ಪಾರ್ಕರ್, ಜಾಫರ್ ಹೊಂಬಾಳ್, ಪುರುಷೋತ್ತಮ ಪುಣ್ಯ, ವಿಕ್ರಂ ಜೈನ್, ಸುರೇಂದ್ರ ಪತೇಪುರ್, ವಿನೋದ ಜೈನ್, ಉಮೇಶ್ ತುಪ್ಪದ, ಗಣೇಶ್ ಕಬಾಡಿ, ರಾಜಣ್ಣ ತ್ರಿಮಲೆ, ಭೀಮನಗೌಡ, ಶಫಿ ಕೊಪ್ಪಳ, ರಾಜು ಚೋಳಿ, ಅನಿಲ್ ಕುಣಿಕರ್, ಅನಿಲ್ ಬೂದಿಹಾಳ, ನಿವೃತ್ತಿನಾಥ್ ಖೋಕಲೆ ಇತರರಿದ್ದರು.

- ತೆರೆದಿದ್ದ ಪ್ರಧಾನ ಮಂತ್ರಿ ಜನೌಷಧಿ ಕೇಂದ್ರಗಳು
- ನಗರದಲ್ಲಿರುವ ಔಷಧ ವ್ಯಾಪಾರಸ್ಥರು ಅಂಗಡಿಗಳನ್ನು ಬಂದ್ ಮಾಡಿ ಬೈಕ್ ರ್‍ಯಾಲಿ ಮೂಲಕ ಜಿಲಾಡಳಿತ ಭವನವನ್ನು ತಲುಪಿ ಜಿಲ್ಲಾಧಿಕಾರಿಗೆ ಮನವಿ
- ಜಿಲ್ಲೆಯಲ್ಲಿರುವ 480ಕ್ಕೂ ಹೆಚ್ಚು ಔಷಧಿ ಅಂಗಡಿಗಳನ್ನು ಬಂದ್

"ಕೆಲವು ಆನ್‌ಲೈನ್ ಸಂಸ್ಥೆಗಳು ವೈದ್ಯರ ಚೀಟಿ ಇಲ್ಲದೆ ಔಷಧ ವಿತರಣೆ ಮಾಡುತ್ತಿದ್ದರೆ, ಇನ್ನೂ ಕೆಲವು ಕಡೆ ವೈದ್ಯರ ಚೀಟಿಗಳನ್ನು ನಕಲಿ ಸೃಷ್ಟಿಸುತ್ತಿದ್ದಾರೆ."
■ **ರಾಮನಗೌಡ ಗೌಡ್ರ**, ಜಿಲ್ಲಾ ಔಷಧ ವ್ಯಾಪಾರಸ್ಥರ ಮುಖಂಡ

ವ್ಯಾಪಾರ ವಹಿವಾಟು ಸ್ಥಗಿತ

ಗಜೇಂದ್ರಗಡ: ಆನ್‌ಲೈನ್ ಔಷಧಿ ಮಾರಾಟ ತಡೆಗಟ್ಟುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪಟ್ಟಣದ ಔಷಧಿ ವ್ಯಾಪಾರಿಗಳು ಬುಧವಾರ ತಮ್ಮ ವ್ಯಾಪಾರ ವಹಿವಾಟು ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಿದರು. ನಂತರ ತಹಶೀಲ್ದಾರ್ ಕಚೇರಿಗೆ ತೆರಳಿ ಮನವಿ ಪತ್ರ ಸಲ್ಲಿಸಿದರು. ಗಜೇಂದ್ರಗಡ ತಾಲೂಕು ಔಷಧಿ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಉಮೇಶ ಮೆಣಸಗಿ ಮಾತನಾಡಿ, ಒಂದಡೆ ಸರ್ಕಾರವು ಔಷದಿ ಅಂಗಡಿಗಳಿಗೆ ವೈದ್ಯರ ಸಲಹೆ ಇಲ್ಲದೆ ಔಷಧಿ ಪೂರೈಸಬಾರದು ಎನ್ನುತ್ತಾರೆ. ಮತ್ತೊಂದಡೆ ಆನ್‌ಲೈನ್ ಔಷಧ ಮಾರಾಟದಿಂದಾಗಿ ಪರವಾನಗಿ ಪಡೆಯದೆ ಮಾರಾಟ ಮಾಡಲಾಗುತ್ತಿದೆ. ಇದರಿಂದ ಗುಣಮಟ್ಟವಿಲ್ಲದ ಔಷಧಿಗಳು ಜನ ಸಾಮಾನ್ಯರ ಕೈ ಸೇರುವ ಆತಂಕವಿದೆ. ಕೂಡಲೇ ನಮ್ಮ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂದು ಆಗ್ರಹಿಸಿದರು. ಔಷಧಿ ಅಂಗಡಿಗಳು ಏಕಾಏಕಿ ಬಂದ್ ಆಗಿದ್ದರಿಂದ ದೂರದ ಊರುಗಳಿಂದ ಬಂದಿದ್ದ ರೋಗಿಗಳು ಪರದಾಡಬೇಕಾಯಿತು. ತುರ್ತು ಚಿಕಿತ್ಸೆಗೆ ಅಗತ್ಯವಿರುವ ಮಾತ್ರೆಗಳಿಗಾಗಿ ಜನರು ಸರ್ಕಾರಿ ಆಸ್ಪತ್ರೆಯತ್ತ ಮುಖ ಮಾಡಿದ್ದ ದೃಶ್ಯ ಕಂಡುಬಂದಿತು. ಮನವಿ ಸ್ವೀಕರಿಸಿದ ತಹಶೀಲ್ದಾರ್ ಕಿರಣಕುಮಾರ ಕುಲಕರ್ಣಿ ಮಾತನಾಡಿ, ವ್ಯಾಪಾರಿಗಳ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರುವುದಾಗಿ ಭರವಸೆ ನೀಡಿದರು. ಔಷಧಿ ವ್ಯಾಪಾರಿಗಳ ಸಂಘದ ರಮೇಶ ಮಾರನಬಸರಿ, ಕಲ್ಲಪ್ಪ ಪಾಗಿ, ಜಗದೀಶ ಕನಕೇರಿ, ಮಹೇಶ ಮಳಗಿ, ಮೋಹನ ಕನಕೇರಿ, ಸಂಗಮೇಶ ಮ್ಯಾಗೇರಿ, ಬಾಳು ಪವಾರ, ಅಮರೇಶ ಮಾಲಗಿತ್ತಿ, ಶೌಕತ್ ಅರಳಿಕಟ್ಟಿ, ಕಳಕೇಶ ಅಳವಂಡಿ, ಚಿದಾನಂದ ಹುದ್ದಾರ, ಸಂತೋಷ ಬೇನಾಳ, ಅಶೋಕ ಮುದೇನೂರ, ರಾಘವೇಂದ್ರ ಚವಡಿಮನಿ, ಹನುಮಂತಪ್ಪ ಕೇರಿಕಟ್ಟಿ, ನಿಖಿಲ ರಾಜಪುರೋಹಿತ, ಶಬ್ಬಿರ ಕಟ್ಟಿಮನಿ, ಅಜಯ ವನ್ನಾಲ, ಮಂಜುನಾಥ ಗಡಾದ ಇತರರಿದ್ದರು.

ಔಷಧಿಗೆ ಪರದಾಟ

ಲಕ್ಷ್ಮೇಶ್ವರ: ಆನ್‌ಲೈನ್‌ನಲ್ಲಿ ಔಷಧಿ ಮಾರಾಟ ವಿರೋಧಿಸಿ ಔಷಧ ವ್ಯಾಪಾರಸ್ಥರ ಸಂಘ ನೀಡಿದ್ದ ಕರೆಯ ಹಿನ್ನೆಲೆಯಲ್ಲಿ ಬುಧವಾರ ಶಿರಹಟ್ಟಿ ಹಾಗೂ ಲಕ್ಷ್ಮೇಶ್ವರ ತಾಲೂಕು ವ್ಯಾಪಾರಸ್ಥರು ತಮ್ಮ ಅಂಗಡಿಗಳನ್ನು ಮುಚ್ಚಿ ಬೆಂಬಲ ವ್ಯಕ್ತಪಡಿಸಿದ್ದು, ನಿತ್ಯದ ಔಷಧಿಗೆ ಬರುವ ಜನರು ಪರದಾಡುವಂತಾಗಿತ್ತು. ವ್ಯಾಪಾರಸ್ಥರ ಬಂದ್‌ಗೆ ಸಂಪೂರ್ಣ ಬೆಂಬಲ ವ್ಯಕ್ತವಾಗಿತ್ತು. ಅಂಗಡಿಗಳನ್ನು ಬಂದ್ ಮಾಡಿದ್ದ ಔಷಧ ವ್ಯಾಪಾರಸ್ಥರು ತಹಶೀಲ್ದಾರ್ ಕಚೇರಿಗೆ ತೆರಳಿ ತಹಶೀಲ್ದಾರ್ ಧನಂಜಯ ಎಂ. ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಈ ವೇಳೆ ಮಾತನಾಡಿದ ತಾಲೂಕು ಔಷಧ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಚಂದ್ರಶೇಖರಗೌಡ ಪಾಟೀಲ, ದೇಶದಲ್ಲಿ ಆನ್‌ಲೈನ್ ಇ–ಫಾರ್ಮಸಿ ಮೂಲಕ ಔಷಧಿಗಳನ್ನು ಮಾರಾಟ ಮಾಡುತ್ತಿರುವ ಕಾರ್ಪೋರೇಟ್ ಕಂಪನಿಗಳು ಭಾರೀ ಪ್ರಮಾಣದಲ್ಲಿ ಔಷಧಿಗಳಿಗೆ ರಿಯಾಯತಿಯನ್ನು ನೀತಿ ಅನುಸರಿಸುತ್ತಿರುವುದನ್ನು ಖಂಡಿಸುತ್ತೇವೆ. ಇದರಿಂದ ನಿತ್ಯ ವ್ಯಾಪಾರ ಮಾಡುವ ಬಹುತೇಕ ಔಷಧಿ ವ್ಯಾಪಾರಸ್ಥರ ವಹಿವಾಟಿನ ಮೇಲೆ ಸಾಕಷ್ಟು ಪರಿಣಾಮ ಬೀರುತ್ತಿದೆ ಎಂದರು. ಮನವಿ ಸ್ವೀಕರಿಸಿದ ತಹಶೀಲ್ದಾರ್ ಧನಂಜಯ ಎಂ., ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಕಳುಹಿಸುವುದಾಗಿ ಭರವಸೆ ನೀಡಿದರು. ಸಂಘದ ಉಪಾಧ್ಯಕ್ಷ ವಿನಾಯಕ ಹೆಬ್ಬಳ್ಳಿ, ಆನಂದ ಒದು, ಮಲ್ಲಿಕಾರ್ಜುನ ದೊಡ್ಡೂರ, ಸಿ.ಆರ್.ಪಾಟೀಲ, ಗಂಗಾಧರ ಮೆಕ್ಕಿ, ಶಿವಪುತ್ರಪ್ಪ ಮಲ್ಲಾಡದ, ಪ್ರಕಾಶ ವಡಕಣ್ಣವರ, ಮಲ್ಲಿಕಾರ್ಜುನ ಕೊಟಗಿ, ರಂಗನಾಥ ಬದಿ, ಬಸವರಾಜ ಕೂಸನೂರ, ಜಯಣ್ಣ ಮೇಗಿಲಮನಿ, ಪ್ರಸಾದ ಗುಡಗೇರಿ, ಸಾಹಿಲ್ ಡಿ., ಫಕೀರಸ್ವಾಮಿ ದಿಗಂಬರಮಠ, ಎಸ್.ಬಿ.ಮುಳಗುಂದ ಸೇರಿದಂತೆ ಅನೇಕರಿದ್ದರು.

ಅರ್ಹರಿಗೆ ದೊರೆಯದ ನಿವೇಶನ: ಪ್ರತಿಭಟನೆ

◆**ಮುಂಡರಗಿ:** ಸರ್ಕಾರದಿಂದ ನಿರಾಶ್ರಿತರಿಗೆ ನಿವೇಶನ ನೀಡುವುದಕ್ಕಾಗಿ 2017ರಲ್ಲಿಯೇ 24 ಎಕರೆ ಜಮೀನು ಖರೀದಿಸಿದ್ದರೂ ಪುರಸಭೆ ಆಡಳಿತ ಮಂಡಳಿ ಹಾಗೂ ನಮ್ಮನ್ನಾಳುವ ಜನಪ್ರತಿನಿಧಿಗಳು ನಿರಾಸಕ್ತಿ ತೋರುತ್ತಿದ್ದು, ನಿವೇಶನಗಳನ್ನು ವಿತರಿಸುವಂತೆ ವಿವಿಧ ಸಂಘಟನೆಗಳು ಅನೇಕ ಬಾರಿ ಧರಣಿ ಸತ್ಯಾಗ್ರಹ ನಡೆಸಿ ಮನವಿ ಸಲ್ಲಿಸಿದರೂ ಇದುವರೆಗೂ ಅರ್ಹ ಫಲಾನುಭವಿಗಳಿಗೆ ನಿವೇಶನಗಳು ದೊರೆತಿಲ್ಲ ಎಂದು ಆರೋಪಿಸಿ ಕಿಸಾನ ಜಾಗೃತಿ ವಿಕಾಸ ಸಂಘದಿಂದ ನಡೆಯುತ್ತಿರುವ ಪ್ರತಿಭಟನೆ ಮೂರನೇ ದಿನವೂ ಮುಂದುವರೆದಿದೆ.

ಕಳೆದ ಅನೇಕ ವರ್ಷಗಳಿಂದ ನಿರಾಶ್ರಿತರಿಗೆ ನಿವೇಶನಗಳನ್ನು ನೀಡದಿರುವುದರಿಂದ ಮುಂಡರಗಿ ಪುರಸಭೆಯ 23 ವಾರ್ಡ್‌ಗಳಲ್ಲಿ ಸಾವಿರಾರು ಜನ ಸ್ವಂತ ಮನೆಯಿಲ್ಲದ ನಿರಾಶ್ರಿತರಿದ್ದು, ಎಲ್ಲರಿಗೂ ನಿವೇಶ ಹಂಚಿಕೆ ಮಾಡುವ ಉದ್ದೇಶದಿಂದ 2017ರಲ್ಲಿ ಅಂದಿನ ಕಾಂಗ್ರೆಸ್ ಪಕ್ಷದ ಶಾಸಕರಾಗಿದ್ದ ರಾಮಕೃಷ್ಣ ದೊಡ್ಡಮನಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಸಹಕಾರದಿಂದ ಪುರಸಭೆ ವ್ಯಾಪ್ತಿಯ ಶಿರೋಳದ ಹತ್ತಿರ 24ಎಕರೆ ಜಮೀನು ಖರೀದಿಸಿದರು. ಜಮೀನು ಖರೀದಿಸಿ 9 ವರ್ಷಗಳು ಕಳೆದಿದ್ದರೂ ಫಲಾನುಭವಿಗಳಿಗೆ ನಿವೇಶನ ಇನ್ನೂ ಮರಿಚೀಕೆಯಾಗಿವೆ.

ಪುರಸಭೆಯ 23 ವಾರ್ಡ್‌ಗಳಲ್ಲಿ 3 ರಿಂದ 4 ಸಾವಿರಕ್ಕೂ ಹೆಚ್ಚು ನಿರಾಶ್ರಿತರ ಅರ್ಜಿಗಳಿದ್ದು, 2024ರ ಡಿಶಂಬರ್‌ನಲ್ಲಿ ಶಾಸಕ ಡಾ.ಚಂದ್ರು ಲಮಾಣಿ ಆಶ್ರಯ ಕಮಿಟಿ ಸಭೆ ನಡೆಸಿ 2024ರ ಡಿಶಂಬರ್ ಕೊನೆಯ ಅಥವಾ 2025ರ ಜನವರಿ ಮೊದಲ ವಾರದಲ್ಲಿ ಅರ್ಹ ಆಶ್ರಯ ಫಲಾನುಭವಿಗಳ ಮೊದಲ ಪಟ್ಟಿ ಸಿದ್ಧಪಡಿಸಿ ಪುರಸಭೆ ನೋಟಿಸ್ ಬೋರ್ಡಿಗೆ ಹಚ್ಚಿ, ನಂತರದಲ್ಲಿ ರಾಜೀವ ಗಾಂಧಿ ವಸತಿ ನಿಗಮಕ್ಕೆ ಕಳುಹಿಸಲಾಗುವುದು ಎಂದು ತಿಳಿಸಿ, ಕೆಲವು ನಿರಾಶ್ರಿತರ ಪಟ್ಟಿ ಸಿದ್ಧ ಮಾಡಿದ್ದರು. ಅದರಲ್ಲಿಯೂ ಲೋಪಗಳಿವೆ ಎಂಬ ಆರೋಪದಿಂದಾಗಿ ವಿಳಂಬವಾಗಿದ್ದು, ಇದುವರೆಗೂ ನಿವೇಶನ ಹಂಚಿಕೆ ಆಗಿಲ್ಲ.

ಇದೀಗ ಪುರಸಭೆಯಲ್ಲಿ ಆಡಳಿತ ಮಂಡಳಿ ಇಲ್ಲ, ಜಿಲ್ಲಾ ಉಪವಿಭಾಗಾಧಿಕಾರಿ ಆಡಳಿತಾಧಿಕಾರಿ ಇದ್ದು, ಶಾಸಕರು ಆಶ್ರಯ ಸಮಿತಿ ಅಧ್ಯಕ್ಷರಾಗಿದ್ದಾರೆ. ಆಶ್ರಯ ಕಮಿಟಿ ಜತೆಗೆ ಚರ್ಚೆ ನಡೆಸಿ ನಿವೇಶನ ಹಂಚಿಕೆ ನಿರ್ಧಾರ ಮಾಡಬೇಕೆನ್ನುವುದು ಫಲಾನುಭವಿಗಳ ಒತ್ತಾಯವಾಗಿದೆ.



ದುಶ್ಚಟಮುಕ್ತ ಸಮಾಜ ನಿರ್ಮಾಣ ಶಿಬಿರದ ಗುರಿ

◆**ನರಗುಂದ:** ಕುಡಿತದಿಂದ ಸತ್ತ ವ್ಯಕ್ತಿಯ ಕುಟುಂಬವು ಕತ್ತಲಲ್ಲಿ ಮುಳಗಬಾರದು. ದುಶ್ಚಟಮುಕ್ತ ಸಮಾಜ ನಿರ್ಮಾಣ ಮಾಡುವ ಉದ್ದೇಶವನ್ನಿಟ್ಟುಕೊಂಡು ಈ ಶಿಬಿರವನ್ನು ಮಾಡುತ್ತಿದ್ದೇವೆ ಎಂದು ಕೊಪ್ಪಳ ಜನಜಾಗೃತಿ ಯೋಜನಾಧಿಕಾರಿ ನಾಗೇಶ ವೈ.ಎ. ಹೇಳಿದರು.

ಪಟ್ಟಣದ ರೋಟರಿಯಾರ್ಕ್ಟ್ ಕನ್ನಡ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆ ಆವರಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ತಾಲೂಕಿನ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಬುಧವಾರ ಲ್ಯಾಲ ಬೆಳ್ಳಂಗಡಿಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ವ್ಯಸನಮುಕ್ತಿ ಹಾಗೂ ಸಂಶೋಧನಾ ಕೇಂದ್ರ ವಿಸ್ತರಣಾ ಕಾರ್ಯಕ್ರಮದ ಅಂಗವಾಗಿ ಜರುಗಿದ 2059ನೇ ಮದ್ಯವರ್ಜನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ತಹಶೀಲ್ದಾರ್ ಶ್ರೀಶೈಲ ತಳವಾರ ಮಾತನಾಡಿ, ಕುಡಿತಕ್ಕೆ ದಾಸರಾದ ವ್ಯಕ್ತಿಗಳಿಂದ ಅವರ ಕುಟುಂಬ ಬೀದಿಪಾಲಾಗುತ್ತದೆ. ಹೀಗಾಗಿ ಕುಟುಂಬದ ಹಿತದೃಷ್ಟಿಯಿಂದ ಸರ್ವರೂ ದುಶ್ಚಟದಿಂದ ದೂರವಿರಬೇಕು ಎಂದರು.

ಜಿಲ್ಲಾ ನಿರ್ದೇಶಕ ಕೇಶವ ದೇವಾಂಗ ಮಾತನಾಡಿ, ಸರ್ವತೋಮುಖ ಅಭಿವೃದ್ಧಿ ಹಾಗೂ ಸ್ವಾವಲಂಬಿ ಜೀವನ ನಡೆಸಬೇಕು. ದುಶ್ಚಟಮುಕ್ತ ಸಮಾಜ ನಿರ್ಮಾಣ ಆಗಬೇಕು. 34 ವರ್ಷಗಳಲ್ಲಿ 2059 ಶಿಬಿರಗಳನ್ನು ನಡೆಸಲಾಯಿತು. ಆಡು ಮುಟ್ಟದ ಸೊಪ್ಪಿಲ್ಲ ಧರ್ಮಸ್ಥಳ ಸಂಘವು ಮುಟ್ಟದ ಯೋಜನೆಗಳಿಲ್ಲ ಎನ್ನುವಂತೆ ಧರ್ಮಸ್ಥಳ ಸಂಘವು ಅಷ್ಟೊಂದು ಸಮಾಜುಪಯೋಗಿ ಯೋಜನೆಗಳನ್ನು ಸಮಾಜಕ್ಕೆ ಕೊಡುತ್ತಾ ಬಂದಿದೆ ಎಂದರು. ಶಿವಕುಮಾರ ಮಾತನಾಡಿ, ಶಿಬಿರದ ಉದ್ದೇಶ ಅರ್ಥ ಮಾಡಿಕೊಳ್ಳಬೇಕು. ಕುಟುಂಬದ ಕಷ್ಟಕ್ಕೆ ಕುಡಿತವೇ ಕಾರಣ. ಕುಡಿತವೇ ಜೀವನ ಆಗಬಾರದು. ಕುಡುಕರ ಜೀವನ ಏನಾಗಿದೆ ಎಂಬುದನ್ನು ನೋಡಿಕೊಳ್ಳಿರಿ ಎಂದರು. ಸಮಿತಿ ಗೌರವಾಧ್ಯಕ್ಷ ರಾಜು ಕಲಾಲ, ಜಿಲ್ಲಾ ಜನಜಾಗೃತಿ ನಿಕಟಪೂರ್ವ ಅಧ್ಯಕ್ಷ ಎಚ್.ಬಿ. ಅಸೂಟಿ, ಚನ್ನಪ್ಪ ಕಂಠಿ, ವಿಜಯ ಕುಲಕರ್ಣಿ, ಮಂಜುನಾಥ ಮೆಣಸಗಿ, ಕಳಸಾ ಬಂಡೂರಿ ಹೋರಾಟಗಾರ ವಿಜಯ ಕುಲಕರ್ಣಿ ಅವರುಗಳು ಮಾತನಾಡಿದರು. ಸಮಿತಿ ಅಧ್ಯಕ್ಷ ಮಂಜುನಾಥ ಮೆಣಸಗಿ, ಪ್ರಶಾಂತ ಜೋಶಿ, ಚಂದ್ರಗೌಡ ಪಾಟೀಲ, ಕೊಟ್ರೇಶ ಕೊಟ್ರಶೆಟ್ಟಿ, ಶಂಕ್ರಣ್ಣ ಇಂಗಳಳ್ಳಿ, ವಿ.ಎನ್. ಕೊಳ್ಳಿಯವರ, ನೀಲಪ್ಪ ಗುಡದನ್ನವರ, ಪರಶುರಾಮ ಭೋವಿ, ನಬೀಸಾಬ ಕಿಲೇದಾರ, ಉಮಾ ದ್ಯಾವನೂರ, ಶಿಬಿರಾಧಿಕಾರಿ ರಮೇಶ ಕೆ., ಆರೋಗ್ಯ ಸಹಾಯಕ ವೆಂಕಟೇಶ, ಜನಜಾಗೃತಿ ಮೇಲ್ವಿಚಾರಕ ಸಚಿನ್, ಯೋಗ ಶಿಕ್ಷಕ ಎಫ್.ವಿ. ಶಿರೂಂದಮಠ, ರಾಜೇಶಸಾಬ ತಹಶೀಲ್ದಾರ, ಆನಂದ ಗೌಳಿ ಹಾಗೂ ನವಜೀವನ ತಂಡ, ಶೌರ್ಯಶ್ರೀ ವಿಪತ್ತು ನಿರ್ವಹಣಾ ತಂಡದವರು ಇದ್ದರು. ಯೋಜನಾಧಿಕಾರಿ ಮಾಲತಿ ದಿನೇಶ ಸ್ವಾಗತಿಸಿದರು.



ನರೇಗಾ ಕಾಮಗಾರಿ ಪರಿಶೀಲಿಸಿದ ಇಒ



◆**ಶಿರಹಟ್ಟಿ:** ತಾಲೂಕಿನ ಕಡಕೋಳ ಮತ್ತು ಛಬ್ಬಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ನರೇಗಾ ಯೋಜನೆಗಳ ಕಾಮಗಾರಿ ಸ್ಥಳಕ್ಕೆ ತಾಪಂ ಇಒ ರಾಮಣ್ಣ ದೊಡ್ಡಮನಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ವೇಳೆ ಮಾತನಾಡಿದ ಅವರು, ಕೂಲಿ ಕಾರ್ಮಿಕರು ಅಳತೆ ಪ್ರಕಾರ ಕೆಲಸ ಮಾಡುತ್ತಿದ್ದು, ಪ್ರತಿದಿನ ಒಬ್ಬರಿಗೆ 370 ರೂ. ವೇತನ ನೀಡಲಾಗುತ್ತದೆ. ಹಿರಿಯ ನಾಗರಿಕರಿಗೆ, ಗರ್ಭಿಣಿಯರಿಗೆ, ವಿಶಿಷ್ಟಚೇತನರಿಗೆ ಕೆಲಸದ ಪ್ರಮಾಣದಲ್ಲಿ ರಿಯಾಯಿತಿ ಇರುತ್ತದೆ. ಎಲ್ಲ ಕಾರ್ಮಿಕರು ಅಳತೆಗೆ ತಕ್ಕ ಕೆಲಸವನ್ನು ಮಾಡಿ ಎರಡು ಬಾರಿ ಹಾಜರಾತಿ ಹಾಕಬೇಕು, ಎರಡು ಬಾರಿ ಹಾಜರಾತಿ ಹಾಕದಿದ್ದರೆ ಕೂಲಿ ಹಣ ಪಾವತಿಯಾಗುವುದಿಲ್ಲ, ಎಲ್ಲರೂ ಸರಿಯಾಗಿ ಕೆಲಸ ನಿರ್ವಹಿಸಿ 370 ರೂ. ವೇತನ ಪಡೆದುಕೊಳ್ಳಿ ಎಂದರು.

ಕೂಲಿಕಾರರ ಆರೋಗ್ಯ ಬಹಳ ಮುಖ್ಯ. ಎಲ್ಲರೂ ವೈಯಕ್ತಿಕ ಶುಚಿತ್ವ, ಮನೆ, ಸುತ್ತಮುತ್ತಲಿನ ಪರಿಸರದ ಸ್ವಚ್ಛತೆ ಕಾಯ್ದುಕೊಂಡು ಆರೋಗ್ಯವಂತರಾಗಿ ಬದುಕಬೇಕು. ಮುಂಜಾನೆ ಬೇಗ ಬಂದು ಅಳತೆಗೆ ತಕ್ಕ ಕೆಲಸ ನೀಡಿ ಬೇಗ ಮುಗಿಸಿಕೊಂಡು ಹಾಜರಾತಿ ನೀಡಿ ಮನೆಗೆ ಹೋಗಬೇಕು. ಎರಡು ಬಾರಿ ಹಾಜರಾತಿ ನೀಡಿದವರಿಗೆ 370 ರೂ ಕೂಲಿ ಜಮೆ ಆಗಲಿದೆ. ಕೆಲಸದಿಂದ ಬಂದ ಕೂಲಿ ಹಣವನ್ನು ಕೃಷಿ ಚಟುವಟಿಕೆಗಳಿಗೆ ಬಳಸಿಕೊಳ್ಳಿ, ಮಕ್ಕಳ ಶಿಕ್ಷಣದ ಅಗತ್ಯತೆಗಳಿಗೆ, ಬಳಸಿಕೊಳ್ಳಬೇಕು ಎಂದರು. ಕಡಕೋಳ ಗ್ರಾಪಂ ಅಧಿಕಾರಿ ಶಿವಾನಂದ ಮಾಳವಾಡ, ಛಬ್ಬಿ ಗ್ರಾಪಂ ಪಿಡಿಒ ಸುಜಾತಾ ಕಪ್ಪಲಿ, ಟಿಐ ಇ ಸಿ ವಿರೇಶ ಪಟ್ಟಣಶೆಟ್ಟಿ, ತಾಂತ್ರಿಕ ಸಹಾಯಕ ಆಂಜನೇಯ, ಲಿಂಗರಾಜ, ಬಿಎಫ್‌ಟಿ, ಡಿಇಒ, ಕಾಯಕ ಬಂಧುಗಳು, ನರೇಗಾ ಕೂಲಿ ಕಾರ್ಮಿಕರು ಉಪಸ್ಥಿತರಿದ್ದರು.

ನಾಳೆಯಿಂದ ರಾಷ್ಟ್ರೀಯ ಕಲ್ಪಿತ ನ್ಯಾಯಾಲಯ ಸ್ಪರ್ಧೆ

◆**ಗದಗ:** ನಗರದ ಕೆಎಲ್‌ಇ ಸಂಸ್ಥೆಯ ಎಸ್.ಎ.ಮಾನ್ವಿ ಕಾನೂನು ಮಹಾವಿದ್ಯಾಲಯದಲ್ಲಿ ಮೇ 22ರಿಂದ ಮೂರು ದಿನಗಳು ಕಾನೂನು ಅಕಾಡೆಮಿಯ 3ನೇ ರಾಷ್ಟ್ರೀಯ ಕಲ್ಪಿತ ನ್ಯಾಯಾಲಯ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಸ್ಥಳೀಯ ಆಡಳಿತಾಧಿಕಾರಿ ಸಿದ್ರಾಮಪ್ಪ ಮಾನ್ವಿ ಹೇಳಿದರು.

ನಗರದ ಎಸ್.ಎ.ಮಾನ್ವಿ ಕಾನೂನು ಮಹಾವಿದ್ಯಾಲಯದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ವರ್ಷದ ಕಲ್ಪಿತ ನ್ಯಾಯಾಲಯ ಸ್ಪರ್ಧೆಯಲ್ಲಿ ಹಿಂದೂ ಕಾನೂನಿನ ದಾಂಪತ್ಯ ಹಕ್ಕುಗಳ ಮರುಸ್ಥಾಪನೆ ವಿಷಯಯದ ಕುರಿತು ಸ್ಪರ್ಧೆ ನಡೆಯಲಿದೆ ಎಂದರು.

ಮೇ 22ರಂದು ಸಂಜೆ 5ಕ್ಕೆ ನಗರದ ಜೆ.ಟಿ.ಕಾಲೇಜು ಆವರಣದ ಸಭಾಂಗಣದಲ್ಲಿ ಸ್ಪರ್ಧೆಯ ಉದ್ಘಾಟನಾ ಸಮಾರಂಭ ನಡೆಯಲಿದೆ. ಈ ಕಾರ್ಯಕ್ರಮ ಗ್ರಾಮೀಣ ವಿವಿ ಕುಲಪತಿ ಪ್ರೊ. ಸುರೇಶ ನಾಡಗೌಡ್ರ ಉದ್ಘಾಟಿಸಲಿದ್ದಾರೆ. ಗೌರವ ಅತಿಥಿಗಳಾಗಿ ವಕೀಲ ಡಾ.ಜಗದೀಶ ಹಾಲಶೆಟ್ಟಿ, ಪ್ರೊ.ಪಿ.ಜಿ. ಪಾಟೀಲ ಉಪಸ್ಥಿತಿ ಇರಲಿದ್ದಾರೆ ಎಂದರು.

ಮೇ 24 ರಂದು ಮಧ್ಯಾಹ್ನ 3ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ನಿವೃತ್ತ ನ್ಯಾಯಾಧೀಶ ಬಿ.ಎ.ಪಾಟೀಲ ಸಮಾರೋಪ ಸಮಾರಂಭ ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಉಮೇಶ ಮಂಜುನಾಥಭಟ್ ಅಡಿಗ, ಎಂ.ಐ.ಶಿಲ್ಲ, ಡಾ.ಜೆ.ಎಂ. ಮಲ್ಲಿಕಾರ್ಜುನ ಯ್ಯ, ಬಿ.ಜಿ.ಶೆಲ್ಲಿಕೇರಿ, ಎಸ್.ಎಫ್. ಹಾದಿಮನಿ, ಡಾ.ಸಂಜೀವ ಹುಲ್ಲೂರ ಭಾಗವಹಿಸುವರು ಎಂದರು.

ಪ್ರಾಚಾರ್ಯ ಡಾ.ಸಂಜೀವ ಹುಲ್ಲೂರು ಮಾತನಾಡಿ, ಒಟ್ಟು 28 ತಂಡಗಳು ಭಾಗವಹಿಸಲಿದ್ದಾರೆ. ಒಂದು ತಂಡದಲ್ಲಿ ಮೂವರು ಸ್ಪರ್ಧಾರ್ಥಿಗಳು ಇರಲಿದ್ದಾರೆ. ಉತ್ತಮ ಪುರುಷ ಅಡ್ವೋಕೆಟ್, ಉತ್ತಮ ಮಹಿಳಾ ಅಡ್ವೋಕೇಟ್‌ಪ್ರಶಸ್ತಿ ನೀಡಲಾಗುವುದು. ಈ ಸ್ಪರ್ಧೆಯಲ್ಲಿ ತೆಗೆದುಕೊಂಡಿರುವ ವಿಷಯವು ಈಗಾಗಲೇ ಸುಪ್ರೀಂಕೋರ್ಟ್‌ನಲ್ಲಿ ದಾಖಲಾಗಿದ್ದ ಪ್ರಕರಣ ಆಗಿದೆ. ಅದೇ ವಿಷಯ ಕಲ್ಪಿತ ಸ್ಪರ್ಧೆ ಇದಾಗಿದ್ದು, ಅರ್ಜಿದಾರರು, ಪ್ರತಿವಾದಿಗಳು ತಮ್ಮ ವಾದ ಮಂಡಿಸಲಿದ್ದಾರೆ. ಅಂತಿಮ ಸುತ್ತಿನ ತೀರ್ಪುಗಾರರಾಗಿ ನಿವೃತ್ತ ನ್ಯಾಯಾಧೀಶ ಬಿ.ಎ.ಪಾಟೀಲ ಹಾಗೂ ಉಮೇಶ ಅಡಿಗ ಅವರು ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಎಸ್.ಎಫ್. ಹಾದಿಮನಿ, ಬಿ.ಜೆ.ಶೆಲ್ಲಿಕೇರಿ, ಪಿ.ಜಿ.ಪಾಟೀಲ ಇದ್ದರು.



ಸ್ನೇಹಿತ ಬೈಕೇರಿಕರಗೆ ಸನ್ಮಾನ



◆**ಲಕ್ಷ್ಮೇಶ್ವರ:** ಪಟ್ಟಣದ ವಿದ್ಯಾಪೀಠ ಪಾಠಶಾಲ ಶಾಲೆಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಸ್ನೇಹಿತ ಬೈಕೇರಿಕರಗೆ 1995–96ಸಾಲಿನಲ್ಲಿ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ ನಂ 1 ರಲ್ಲಿ 7ನೇ ತರಗತಿ ಕಲಿತ ಹಳೆಯ ವಿದ್ಯಾರ್ಥಿಗಳ ಸಹಪಾಠಿ ರೂಪಾ ವೆಣೇಕರ್ ಪುತ್ರನಾಗಿರುವ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡ 98, ಹಿಂದಿ 98, ಇಂಗ್ಲಿಷ್ 120, ವಿಜ್ಞಾನ 96, ಸಮಾಜ 99, ಗಣಿತ 94 ಒಟ್ಟು 605 ಅಂಕ 96.08ಶೇ ಪ್ರತಿಶತ ಪಡೆದು ಸಾಧನೆ ಮಾಡಿದ್ದಕ್ಕೆ ಸನ್ಮಾನಿಸಲಾಯಿತು.

ಈ ವೇಳೆ ಮಾತನಾಡಿದ ಪತ್ರಕರ್ತ ಶಿವಲಿಂಗಯ್ಯ ಹೊತಗಿಮಠ, ನಿರಂತರ ಪರಿಶ್ರಮ, ಶಿಕ್ಷಕರ ಮಾರ್ಗದರ್ಶನ ಹಾಗೂ ಪೋಷಕರ ಪ್ರೋತ್ಸಾಹದಿಂದ ಈ ಸಾಧನೆ ಸಾಧ್ಯವಾಗಿದೆ. ಮುಂದಿನ ಉನ್ನತ ವಿದ್ಯಾಭ್ಯಾಸದಲ್ಲಿಯೂ ಇದೇ ಉತ್ಸಾಹ ಮತ್ತು ಶಿಸ್ತು ಮುಂದುವರೆದು ಸಾಧನೆ ಮಾಡಲಿ ಎಂದರು.

ಸುನಂದಾ ವೆರ್ಣೇಕರ್, ವೆಂಕಟೇಶ ವೆರ್ಣೇಕರ್, ಶರಣಪ್ಪ ಕೋರಿಶೆಟ್ಟರ, ಅನೀಲ ಮುಂಜಿ, ನಾಗರಾಜ ಕೊಂಗಿ, ಸೋಮಶೇಖರಪಾಟೀಲ, ಮಂಜುನಾಥ ನಾವ್ಹಿ, ರೂಪಾ ಬೈಕೇರಿಕರ, ಲಕ್ಷ್ಮೀ ಕೆಂಚನಗೌಡ್ರ, ಈರಣ್ಣ ಹುಲಕೋಟಿ ಸೇರಿದಂತೆ ಇತರರಿದ್ದರು.

ಮಧುಮತಿ ಉಳ್ಳಟ್ಟಿಗೆ ಸನ್ಮಾನ

◆**ಲಕ್ಷ್ಮೇಶ್ವರ:** ಪಟ್ಟಣದ ಶ್ರೀಮತಿ ಕಮಲಾ ಮತ್ತು ಶ್ರೀ ವೆಂಕಪ್ಪ ಎಂ. ಅಗಡಿ ಪದವಿಪೂರ್ವ ಮಹಾವಿದ್ಯಾಲಯದ ಪಿಯುಸಿ ವಿದ್ಯಾರ್ಥಿನಿ ಮಧುಮತಿ ಸತೀಶ ಉಳ್ಳಟ್ಟಿ ವಿಜ್ಞಾನ ವಿಭಾಗದ ಕನ್ನಡ 99, ಇಂಗ್ಲಿಷ್ 91, ಭೌತಶಾಸ್ತ್ರ 84, ರಸಾಯನಶಾಸ್ತ್ರ 91, ಗಣಿತ 100, ಜೀವಶಾಸ್ತ್ರ 84 ಒಟ್ಟು 549 ಅಂಕ ಶೇ 91.5 ಗಳಿಸುವ ಮೂಲಕ ಸಾಧನೆ ಮಾಡಿದ್ದು ಇವಳಿಗೆ ಸನ್ಮಾನಿಸಲಾಯಿತು. 1995–96ಸಾಲಿನಲ್ಲಿ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ ನಂ 1 ರ 7 ನೇ ತರಗತಿ ಹಳೆಯ ವಿದ್ಯಾರ್ಥಿಗಳಿಂದ ಕೆಎಸ್‌ಆರ್‌ಟಿಸಿ ನೌಕರ ಸತೀಶ್ ಉಳ್ಳಟ್ಟಿ ಅವರ ಪುತ್ರಿ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಸಾಧನೆ ಮಾಡಿದ್ದಾಳೆ.

ಈ ವೇಳೆ ಮಾತನಾಡಿದ ಪತ್ರಕರ್ತ ಶಿವಲಿಂಗಯ್ಯ ಹೊತಗಿಮಠ, ನಿರಂತರ ಪರಿಶ್ರಮ, ಶಿಕ್ಷಕರ ಮಾರ್ಗದರ್ಶನ ಹಾಗೂ ಪೋಷಕರ ಪ್ರೋತ್ಸಾಹದಿಂದ ಈ ಸಾಧನೆ ಸಾಧ್ಯವಾಗಿದೆ. ಮುಂದಿನ ಉನ್ನತ ವಿದ್ಯಾಭ್ಯಾಸದಲ್ಲಿಯೂ ಇದೇ ಉತ್ಸಾಹ ಮತ್ತು ಶಿಸ್ತು ಮುಂದುವರೆದು ಸಾಧನೆ ಮಾಡಲಿ ಎಂದರು.

ಮಾಳಮ್ಮ ಉಳ್ಳಟ್ಟಿ ಅನಿಲ ಮುಂಜಿ, ನಾಗರಾಜ ಕೊಂಗಿ, ಸೋಮಶೇಖರ ಪಾಟೀಲ್, ಮಂಜುನಾಥ ನಾವ್ಹಿ, ಮಂಜುನಾಥ ಬನ್ನಿ ಸತೀಶ ಉಳ್ಳಟ್ಟಿ, ಲಕ್ಷ್ಮೀ ಉಳ್ಳಟ್ಟಿ, ಈರಣ್ಣ ಹುಲಕೋಟಿ ಅನೇಕರು ಇದ್ದರು.



ವಿದ್ಯಾರ್ಥಿಗಳಿಂದ ಜಾಗೃತಿ ಪರೇಡ್



◆**ಗಜೇಂದ್ರಗಡ:** ವಿಶ್ವ ರೆಡ್ ಕ್ರಾಸ್ ದಿನದ ಅಂಗವಾಗಿ ನಗರದ ಬಿ.ಎಸ್.ಎಸ್.ಕಾಲೇಜಿನ ವತಿಯಿಂದ ರಕ್ತದಾನ ಶಿಬಿರ ಆಯೋಜನೆಯನ್ನು ಗುರುವಾರ ಕಾಲೇಜಿನ ಸಭಾ ಭವನದಲ್ಲಿ ಹಮ್ಮಿಕೊಂಡ ಹಿನ್ನೆಲೆಯಲ್ಲಿ ಕಾಲೇಜಿನಿಂದ ಜಾಗೃತಿ ಪರೇಡ್ ಆರಂಭಗೊಂಡು ಬಸ್ ನಿಲ್ದಾಣದಲ್ಲಿ ರಕ್ತದಾನ ಶಿಬಿರದ ಅರಿವು ಮೂಡಿಸಲಾಯಿತು. ದಾರಿಯುದ್ದಕ್ಕೂ ಕಾಲೇಜಿನ ವಿದ್ಯಾರ್ಥಿಗಳು ರಕ್ತದಾನದ ಮಹತ್ವವನ್ನು ತಿಳಿಸುವ ಘೋಷಣೆ, ಪೋಸ್ಟರ್ ಪ್ರದರ್ಶನ ಮಾಡಿದರು.

ಕಾಲೇಜಿನ ಪ್ರಾಚಾರ್ಯ ಬಸವಂತಪ್ಪ ಹೊಸಳ್ಳಿ ಮಾತನಾಡಿ, ರಕ್ತದಾನ ಶಿಬಿರದ ಬಗ್ಗೆ ಸಾರ್ವಜನಿಕರಲ್ಲಿ ವಿಶೇಷವಾಗಿ ಯುವಜನರಲ್ಲಿ ರಕ್ತದಾನದ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿ ಜಾಗೃತಿ ಮೂಡಿಸಲು ಇದು ಉತ್ತಮ ವೇದಿಕೆಯಾಗಿದೆ. ಸ್ವಯಂಪ್ರೇರಿತ ರಕ್ತದಾನ ಶಿಬಿರಗಳನ್ನು ಆಯೋಜಿಸುವುದು ಅತ್ಯಂತ ಮಾನವೀಯ ಕಾರ್ಯವಾಗಿದೆ ಎಂದರು.

ಪ್ರಶಾಂತ ಹುಲಕುಂದ, ವಿಶ್ವನಾಥ ಕೆ.ಎಸ್., ಎಂ.ವೈ. ಜಟ್ಟಣ್ಣನವರ, ಹನಮೇಶ ನಾಯಕ, ಅಜಿತಕುಮಾರ ಪೂಜಾರ, ಉಮಾಕಾಂತ ಲಮಾಣಿ, ಸುನೀತಾ ಎನ್., ಸಿದ್ದೇಶ ಕೆ., ಹಿತೇಶ ಬಿ., ಮಂಜುನಾಥ ಹೊಸಮನಿ, ಜಗದೀಶ ಬಿ., ಶೋಭಾ ಕಡಿ, ಅರುಣ ಅಂಗಡಿ, ಶರಣಪ್ಪ ದುಗ್ಗಲದ ಸೇರಿದಂತೆ ಅನೇಕರು ಇದ್ದರು.

ಸರ್ಕಾರದ ಮಾರ್ಗಸೂಚಿ ಪಾಲನೆ ಕಡ್ಡಾಯ

◆**ಮುಂಡರಗಿ:** ತ್ಯಾಗ ಮತ್ತು ಬಲಿದಾನದ ಸಂಕೇತವಾಗಿರುವ ಬಕ್ರೀದ್ ಹಬ್ಬವನ್ನು ಶಾಂತಿ, ಸೌಹಾರ್ದತೆ ಹಾಗೂ ಸಹೋದರತ್ವದ ಭಾವನೆಯೊಂದಿಗೆ ಆಚರಿಸುವುದರ ಜೊತೆಗೆ ಸರ್ಕಾರದ ಮಾರ್ಗಸೂಚಿ ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಮುಂಡರಗಿ ಸಿಪಿಐ ಅಯ್ಯನಗೌಡ ಪಾಟೀಲ ಹೇಳಿದರು.

ಅವರು ತಾಲೂಕಿನ ಡಂಬಳ ಗ್ರಾಮದ ಪೊಲೀಸ್ ಹೊರ ಠಾಣೆಯಲ್ಲಿ ಬಕ್ರೀದ್ ಹಬ್ಬದ ಶಾಂತಿ ಸಭೆಯಲ್ಲಿ ಮಾತನಾಡಿ, ಪ್ರತಿಯೊಬ್ಬರ ವ್ಯಕ್ತಿತ್ವ ಪ್ರಗತಿಯಾದಾಗ ಮಾತ್ರ ಕುಟುಂಬ ಮತ್ತು ಗ್ರಾಮ ಪ್ರಗತಿಯಾಗುತ್ತದೆ. ಪ್ರತಿ ಧರ್ಮಗಳು ಶಾಂತಿಯನ್ನು ಭಯಸುತ್ತವೆ ಆ ಹಿನ್ನೆಲೆಯಲ್ಲಿ ಪ್ರತಿಯೊಬ್ಬರೂ ಶಾಂತಿಯನ್ನು ಪಾಲನೆ ಮಾಡುವುದು ಬಹಳ ಮುಖ್ಯವಾಗಿದೆ ಎಂದರು. ಸಿದ್ದಪ್ಪ ಮಠದ, ಅಂಜುಮನ ಅಧ್ಯಕ್ಷ ಬಶೀರಹಮ್ಮದ ತಾಂಬೋಟಿ, ಬಸಪ್ಪ ಕೋತಂಬ್ರಿ, ಶಶಿಕಾಂತ ಬಂಡಿಹಾಳ, ರಾಜೇಸಾಬ ಹಿರೇಮನಿ, ಜಿ.ಎಂ.ಯಲಿಗಾರ, ರಾಜಪ್ಪ ಮೇವುಂಡಿ, ಮಹಬೂಬಲಿ ಆಲೂರ, ಸಿದ್ದಯ್ಯ ಕಾಡಸಿದ್ದೇಶ್ವರಮಠ, ಸುರೇಶ ಕೋತಂಬ್ರಿ, ಮಹಬೂಬಲಿ ಮೂಲಿಮನಿ, ಶ್ರೀಕಾಂತ ಹಂಚನಾಳ, ಪೊಲೀಸ್ ಸಿಬ್ಬಂದಿ ಎಸ್.ಎಸ್. ಕೆಂಚಗಾರ, ಬಾಬುಜಾನ ಕಮ್ಮಾರ, ಎನ್.ಬಿ. ಪೂಜಾರ, ಯುವಕರು, ಗ್ರಾಮದ ಹಿರಿಯರು ಇದ್ದರು.



ಉಪ ಕಾರಾಗೃಹದಲ್ಲಿ ನಿಲ್ಲದ ಅಕ್ರಮ ಚಟುವಟಿಕೆಗಳು?

▸ ವಿಜಯಕುಮಾರ ಬೆಳ್ಳೇರಿಮಠ

ದಿಗಂತ ವಿಶೇಷ

ಹುಬ್ಬಳ್ಳಿ: ನಗರದ ಉಪ ಕಾರಾಗೃಹದಲ್ಲಿ ಕಾರಾಗೃಹ ಇಲಾಖೆ ಹಲವಾರು ಸುಧಾರಣಾ ಕ್ರಮಗಳನ್ನು ಕೈಗೊಂಡರೂ ಸಹ ಅಲ್ಲಿ ನಡೆಯುತ್ತಿರುವ ಅಕ್ರಮಗಳಿಗೆ ಕಡಿವಾಣ ಬೀಳುತ್ತಿಲ್ಲ.

ವಿಚಾರಣಾಧೀನ ಕೈದಿಗಳು, ಸಜಾ ಬಂಧಿಗಳು ಜೈಲಿನಲ್ಲಿ ವಿವಿಧ ಬ್ಯಾರಕ್‌ಗಳಲ್ಲಿ ವಿಡಿಯೋ ಕರೆ ಮಾಡುತ್ತಿರುವ, ಜೈಲಿನ ಒಳಗಿಂದ ಹೊರಗಿದ್ದವರಿಗೆ ಬೆದರಿಕೆ ಹಾಕುವ, ಜೈಲಿನ ಸಿಬ್ಬಂದಿಗೆ ನಿಂದನೆ, ಕಾರಾಗೃಹದೊಳಗೆ ಗಾಂಜಾ ಪೂರೈಕೆ, ಮೊಬೈಲ್ ಫೋನ್‌ಗಳ ಕದ್ದು ಮುಚ್ಚಿ ಸಾಗುಸುವಂತಹ ಪ್ರಕರಣಗಳು ಸಾಮಾನ್ಯವಾಗಿವೆ.

2026ರಿಂದ ಇಲ್ಲಿವರೆಗೆ ಉಪ ಕಾರಾಗೃಹದ ಜೈಲಿನ ಸಿಬ್ಬಂದಿ, ವಿಚಾರಣಾಧೀನ ಕೈದಿಗಳ, ಸಜಾ ಬಂಧಿಗಳು ಹಾಗೂ ಇವರಿಗೆ ಹೊರಗಡೆಯಿಂದ ಸಹಾಯ ಮಾಡಿದವರ ವಿರುದ್ಧ ಐದು ಪ್ರಕರಣಗಳ ಪೈಕಿ 28 ಜನರ ವಿರುದ್ಧ ಅಶೋಕ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿವೆ.

ಫೆಬ್ರವರಿ ತಿಂಗಳಲ್ಲಿ ಕಾರಾಗೃಹ ಹಾಗೂ ಸುಧಾರಣಾ ಸೇವೆಗಳ ಇಲಾಖೆಯ ರಾಜ್ಯ ಪೊಲೀಸ್ ಮಹಾನಿರ್ದೇಶಕ(ಡಿಜಿಪಿ) ಅಲೋಕಕುಮಾರ ಕಾರಾಗೃಹಕ್ಕೆ ಭೇಟಿ ನೀಡಿ ಪರಿಶೀಲಿಸಿ, ಜೈಲಿನಲ್ಲಿ ನಡೆಯುವ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಹಲವಾರು ಕ್ರಮ ಕೈಗೊಳ್ಳುವುದಾಗಿ ಸೂಚಿಸಿದ್ದರು. ಇಷ್ಟಾದರೂ ಜೈಲನಲ್ಲಿ ಅಕ್ರಮ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿದ್ದು, ಅದರಲ್ಲಿ ಕೆಲವೊಂದು ಮಾತ್ರ ಹೊರಗಡೆ ಬರುತ್ತಿವೆ.



> ಅಶೋಕ ನಗರದ ಉಪಕಾರಾಗೃಹದಲ್ಲಿ ಅಕ್ರಮ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ತಿಳಿದು ಬಂದಿದ್ದು, ಶೀಘ್ರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಾಗುವುದು.
> ■ ಸ್ನೇಹಲ್.ಆರ್, ಜಿಲ್ಲಾಧಿಕಾರಿ

ಬೆಂಡಿಗೇರಿ ಪೊಲೀಸ್ ಠಾಣೆ ವ್ಯಾಪ್ತಿಯ ಕೊಲೆ ಪ್ರಕರಣ ಆರೋಪಿ ಪ್ರಜ್ವಲ್ ನೆಟ್ಟೂರ ಹಾಗೂ ಇತರರು ಫೆಬ್ರವರಿ ತಿಂಗಳಲ್ಲಿ ಉಪ ಕಾರಾಗೃಹದಲ್ಲಿ ಮಾದಕ ವಸ್ತುಗಳ ಇಟ್ಟು ಕೊಂಡಿರುವ ಕುರಿತು ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರದಾಡಿತ್ತು. ಇನ್ನೊಂದು ವಿಚಾರಣಾಧೀನ ಕೈದಿ ಅಯೂಬ್ ಬ್ಯಾಳಿ ಎಂಬಾತನಿಗೆ ಬ್ರೆಡ್ ಪೊಟ್ಟಣದಲ್ಲಿ ಮೊಬೈಲ್ ಹಾಗೂ ಸಿಮ್ ಸರಬರಾಜು ಮಾಡಿದ ಆರೋಪದ ಮೇಲೆ ಮೇ 16ರಂದು ಮೂವರ ವಿರುದ್ಧ ಪ್ರಕರಣ ದಾಖಲಾಗಿದೆ. ಅಷ್ಟೇ ಅಲ್ಲದೇ ಆರೋಪಿಯೋರ್ವ ಉಪ ಕಾರಾಗೃಹದಲ್ಲಿದ್ದುಕೊಂಡು ತನ್ನ ಪ್ರೇಯಸಿಯೊಂದಿಗೆ ಮಾತನಾಡಲು ನಗರದ ವ್ಯಕ್ತಿಯೊಬ್ಬರನಿಗೆ ಕರೆ ಫೋನ್ ಹೋಗಿ ನೀಡದಿದ್ದರೆ ಜೀವ ಸಹಿತ ಬಿಡಲ್ಲ ಎಂದು ಬೆದರಿಕೆ ಹಾಕಿರುವ ಕುರಿತು ದೂರವೊಂದ ದಾಖಲಾಗಿತ್ತು. ಇಂತಹ ಅನೇಕ ಅಕ್ರಮ ಚಟುವಟಿಕೆಗಳು ಜೈಲಿನಲ್ಲಿ ನಡೆಯುತ್ತಿದ್ದು, ಕಡಿವಾಣವಿಲ್ಲವಾಗಿದೆ ಎಂದು ಸಾರ್ವಜನಿಕರ ದೂರಾಗಿದೆ.

ನಿಂತರ ಬ್ಯಾರಕ್‌ಗಳ ಪರಿಶೀಲನೆ

ಜೈಲಿಗೆ ಬರುವ ಹಾಗೂ ಹೊರಗಡೆ ಹೋಗುವ ಕೈದಿಗಳನ್ನು ಪರಿಶೀಲಿಸಲು, ಜೈಲಿನ ಬ್ಯಾರಕ್‌ಗಳ ಪರಿಶೀಲನೆ, ಕೈದಿಗಳ ಚಲನವಲನಗಳ ಬಗ್ಗೆ ಗಮನ ಹರಿಸಲು ಕಾರಾಗೃಹ ಹಾಗೂ ಸುಧಾರಣಾ ಸೇವೆಗಳ ಇಲಾಖೆಯ ಡಿಜಿಪಿಯಾದ ಅಲೋಕ ಕುಮಾರ ಸೂಚಿಸಿದ್ದರು. ಅದರಂತೆ ಜೈಲು ಸಿಬ್ಬಂದಿ ಕಾರ್ಯಪ್ರವೃತರಾದಾಗ ಮೊಬೈಲ್, ಗಾಂಜಾ, ಸಿಮ್ ಬಳಕೆ ಮಾಡುತ್ತಿರುವ ಪ್ರಕರಣಗಳು ಕಂಡು ಬರುತ್ತಿವೆ. ಜೈಲಿನಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲಾಗುತ್ತಿದೆ. ಸನ್ನಡತೆ ಹಾಗೂ ಶಿಕ್ಷೆಯ ಅವಧಿ ಮುಕ್ತಾಯವಾದ ಮೇಲೆ ಜೈಲಿನಿಂದ ಬಿಡಗಡೆ ಆದವರು ಸಮಾಜದಲ್ಲಿ ಉತ್ತಮ ಬದುಕು ಕಟ್ಟಿಕೊಳ್ಳಬೇಕು ಎಂಬ ಉದ್ದೇಶದಿಂದ ಡಿಜಿಟಲ್ ಸಾಕ್ಷರತೆ, ತಂತ್ರಜ್ಞಾನ ಆಧಾರಿತ ತರಬೇತಿ ನೀಡಲು ಸೂಚಿಸಿದ್ದಾರೆ ಎಂದು ಉಪ ಕಾರಾಗೃಹದ ಸಿಬ್ಬಂದಿಯೊಬ್ಬರು ತಿಳಿಸಿದರು.

₹31.82 ಲಕ್ಷ ಕಾಣಿಕೆ ಸಂಗ್ರಹ

ಹುಬ್ಬಳ್ಳಿ: ಶ್ರೀ ಸಿದ್ಧಾರೂಢಸ್ವಾಮಿ ಮಠಕ್ಕೆ 31.82 ಲಕ್ಷ ಕಾಣಿಕೆ ಸಂಗ್ರಹವಾಗಿದೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಶ್ರೀ ಸಿದ್ಧಾರೂಢ ನಗರ ಶಾಖೆಯ ಮ್ಯಾನೇಜರ್ ಮತ್ತು ಸಿಬ್ಬಂದಿ ಹಾಗೂ ಭಕ್ತರ ಸಮ್ಮುಖದಲ್ಲಿ ತೆರೆದು ಎಣಿಕೆ ಮಾಡಲಾಗಿದ್ದು, 31,82,905 ಕಾಣಿಕೆ ಸಂಗ್ರಹವಾಗಿದೆ. 5,89,518ಮೌಲ್ಯದ ಬಂಗಾರ ಮತ್ತು ಬೆಳ್ಳಿ ಸಾಮಗ್ರಿಗಳು ಸಂಗ್ರಹವಾಗಿದೆ. ಏ.23ರಿಂದ ಮೇ 20ರವರೆಗೆ 27 ದಿವಸಗಳಲ್ಲಿ ಸಂಗ್ರಹವಾದ ಕಾಣಿಕೆಯಾಗಿದೆ. ಎಣಿಕೆ ಮೇಲ್ವಿಚಾರಣೆಯನ್ನು ಟ್ರಸ್ಟ್ ಕಮೀಟಿಯ ಚೇರ್‌ಮನ್ ಬಾಳು ಟಿ. ಮಗಜಿಕೊಂಡಿ ಸೇರಿದಂತೆ ಟ್ರಸ್ಟ್‌ನ ಪದಾಧಿಕಾರಿಗಳು ವಹಿಸಿದ್ದರು.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ಧಿ

ಮಳೆ: ಅಡಕೆ ತೋಟಕ್ಕೆ ಹಾನಿ



◆**ಸಿದ್ದಾಪುರ:** ತಾಲೂಕಿನ ನಾಣಿಕಟ್ಟಾ ಗ್ರಾಪಂ ವ್ಯಾಪ್ತಿಯ ಹಂಗಾರ ಖಂಡದ ಮಂಜುನಾಥ ಮಹಾಬಲೇಶ್ವರ ಹೆಗಡೆ ಅವರ ಅಡಕೆ ತೋಟ ಗಾಳಿ-ಮಳೆಗೆ ಭಾರೀ ಗಾತ್ರದ ಕಾಡು ಜಾತಿಯ ಮರವೊಂದು ಬಿದ್ದು 85ಕ್ಕೂ ಹೆಚ್ಚು ಅಡಕೆ ಮರಗಳು ಹಾಗೂ ಬಾಳೆಮರಗಳು ನೆಲಕಚ್ಚಿವೆ.

ಆನ್‌ಲೈನ್ ಔಷಧ ಮಾರಾಟ ವಿರೋಧಕ್ಕೆ ಬೆಂಬಲ



◆**ಮುಂಡಗೋಡ:** ಅಖಿಲ ಭಾರತ ಔಷಧ ವ್ಯಾಪಾರಿಗಳ ಸಂಘದ ವತಿಯಿಂದ ಬುಧವಾರ ಕರೆ ನೀಡಿದ್ದ ದೇಶಾದ್ಯಂತ ಮುಷ್ಕರಕ್ಕೆ ತಾಲೂಕಿನಲ್ಲಿ ಬೆಂಬಲ ಸಿಕ್ಕಿತಾದರೂ ಸಾರ್ವಜನಿಕರಿಗೆ ಔಷಧಿಗಳ ತುರ್ತುಸೇವೆಯ ಯಾವುದೇ ತೊಂದರೆಯಾಗಲಿಲ್ಲ. ಪಟ್ಟಣದಲ್ಲಿರುವ ಸುಮಾರು 14ಕ್ಕಿಂತ ಹೆಚ್ಚು ಖಾಸಗಿ ಔಷಧ ಅಂಗಡಿಗಳು ಬಂದ್ ಆಗಿದ್ದವು ಆದರೆ ಅಪೋಲೋ, ಮೆಡ್‌ಪ್ಲಸ್ ಮತ್ತು ಜನೌಷಧಿ ಕೇಂದ್ರಗಳು ಎಂದಿನಂತೆ ತೆರೆದು ಕಾರ್ಯನಿರ್ವಹಿಸಿದ ಕಾರಣ ಸಾರ್ವಜನಿಕರಿಗೆ ಔಷಧಿಗಳ ಕೊರತೆ ಕಂಡುಬರಲಿಲ್ಲ. ಖಾಸಗಿ ಔಷಧ ಅಂಗಡಿಗಳ ಮಾಲೀಕರು ಮಾತ್ರ ಅಂಗಡಿಗಳನ್ನು ಸಂಪೂರ್ಣ ಬಂದ್ ಮಾಡಿ ಮುಷ್ಕರಕ್ಕೆ ಬೆಂಬಲ ನೀಡಿದರು.

ಡಾ.ಪ್ರೀತಿ ಭಂಡಾರಕರ ನೇಮಕ



◆**ಕುಮಟಾ:** ಕಮಲಾ ಬಾಳಿಗಾ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಪ್ರೀತಿ ಪಿ. ಭಂಡಾರಕರ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ಕುಲಪತಿಗಳು ಸ್ನಾತಕ ಶಿಕ್ಷಣ ಶಾಸ್ತ್ರ ವಿಷಯದ ನಾಲ್ಕು ವರ್ಷಗಳ ನೂತನ ಹಾಗೂ ಎರಡು ವರ್ಷಗಳ ಬಿ.ಇಡಿ. ಅಭ್ಯಾಸಸೂಚಿ (ಸಿಲೇಬಸ್) ನಿರ್ಮಾಣದ ಮಂಡಳಿಯ ಸದಸ್ಯರಾಗಿ ಎರಡು ವರ್ಷಗಳ ಅವಧಿಗೆ ನೇಮಿಸಿ ಆದೇಶ ಹೊರಡಿಸಿದ್ದಾರೆ.ಈ ಮಹತ್ವದ ನೇಮಕಾತಿಗೆ ಕೆನರಾ ಕಾಲೇಜ್ ಸೊಸೈಟಿಯ ಕಾರ್ಯಾಧ್ಯಕ್ಷ ಹನುಮಂತ ಕೆ. ಶಾನಭಾಗ, ಕಾರ್ಯದರ್ಶಿ ಯಶವಂತ ವಿ. ಶಾನಭಾಗ, ಆಡಳಿತ ಮಂಡಳಿಯ ಸದಸ್ಯರುಗಳು, ಕೌನ್ಸಿಲ್ ಸದಸ್ಯರುಗಳು ಹಾಗೂ ಕಮಲಾ ಬಾಳಿಗಾ ಶಿಕ್ಷಣ ಮಹಾವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.



ಯಲ್ಲಾಪುರ : ಪಟ್ಟಣದ ವೀರಭದ್ರೇಶ್ವರ ದೇವಸ್ಥಾನದಲ್ಲಿ ವೀರಶೈವ ಲಿಂಗಾಯತ ಸಮುದಾಯದ ವೀರಭದ್ರ ಭಜನಾ ಸಂಘ, ಅಕ್ಕನ ಬಳಗದಿಂದ ರೇಣುಕಾಚಾರ್ಯ ಜಯಂತಿಯನ್ನು ಸಂಭ್ರಮದಿಂದ ಆಚರಿಸಿದರು. ಭಜನಾ ಮಂಡಳಿ, ಅಕ್ಕನ ಬಳಗದ ಸದಸ್ಯರು ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ದೇವರ ಕೃಪೆಗೆ ಪಾತ್ರರಾದರು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	663099	71199
ಬಿಳಿಗೋಟು	21608	36599
ಕೆಂಪುಗೋಟು	21099	36899
ಬೆಟ್ಟೆ	41399	52099
ರಾಶಿ	50699	53199
ಚಾಲಿ	44299	47599



ಹೊನ್ನಾವರ: ಪಟ್ಟಣದ ಎಸ್.ಡಿ.ಎಂ. ಪದವಿ ಕಾಲೇಜಿನಲ್ಲಿ ಬಿ.ಸಿ.ಎ. ವಿಭಾಗದವರು ಆಯೋಜಿಸಿದ್ದ 'ಎನಿಗ್ಮಾ' ಕಾರ್ಯಕ್ರಮ ಎಕ್ಸೆಂಚರ್‌ನ ಉದ್ಯೋಗಿ ವಿನಾಯಕ ಹೆಗಡೆ ನೀಲ್ಕೋಡ್ ಉದ್ಘಾಟಿಸಿ ಮಾತನಾಡಿದರು.

ರಮ್ಯಾ ಹೆಗಡೆ ರಾಜ್ಯಕ್ಕೆ 8ನೇ ರ್‍ಯಾಂಕ್



◆**ಕುಮಟಾ:** ತಾಲೂಕಿನ ಮೂರೂರಿನ ಪ್ರಗತಿ ವಿದ್ಯಾಲಯ ಆಂಗ್ಲ ಮಾಧ್ಯಮ ಪ್ರೌಢಶಾಲೆ ವಿದ್ಯಾರ್ಥಿನಿ ರಮ್ಯಾ ಸುರೇಶ್ ಹೆಗಡೆ ಅವರು ಎಸ್ಸೆಸ್ಸೆಲ್ಸಿ ಮರುಮೌಲ್ಯಮಾಪನ ಫಲಿತಾಂಶದಲ್ಲಿ ರಾಜ್ಯಕ್ಕೆ 8ನೇ ರಾಂಕ್ ಪಡೆದು ಶಾಲೆ ಹಾಗೂ ತಾಲೂಕಿಗೆ ಕೀರ್ತಿ ತಂದಿದ್ದಾರೆ. ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯ ಪ್ರಾಥಮಿಕ ಫಲಿತಾಂಶ ಪ್ರಕಟವಾದ ಸಂದರ್ಭದಲ್ಲಿ ರಮ್ಯಾ ಹೆಗಡೆ ಅವರು 625ಕ್ಕೆ 612 ಅಂಕಗಳನ್ನುಗಳಿಸಿದ್ದರು. ನಂತರ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ಹಿನ್ನೆಲೆ ಇಂಗ್ಲಿಷ್ ಹಾಗೂ ವಿಜ್ಞಾನ ವಿಷಯಗಳಲ್ಲಿ ತಲಾ ಮೂರು ಅಂಕಗಳು ಹೆಚ್ಚಾಗಿ ದೊರೆತು, ಒಟ್ಟು ಆರು ಅಂಕಗಳ ಹೆಚ್ಚಳದೊಂದಿಗೆ 625ಕ್ಕೆ 618 ಅಂಕ ಪಡೆದು ರಾಜ್ಯಕ್ಕೆ 8ನೇ ರ್‍ಯಾಂಕ್ ಪಡೆದುಕೊಂಡಿದ್ದಾಳೆ. ವಿದ್ಯಾರ್ಥಿನಿಯ ಈ ಸಾಧನೆಗೆ ಸಂಸ್ಥೆಯ ಪ್ರಾಚಾರ್ಯರು, ಶಿಕ್ಷಕರು ಹಾಗೂ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಪ್ರಗತಿ ವಿದ್ಯಾಲಯ ಆಂಗ್ಲ ಮಾಧ್ಯಮ ಶಾಲೆ ರಾಜ್ಯ ಮಟ್ಟದಲ್ಲಿ ಒಟ್ಟು ಮೂರು ರಾಂಕ್‌ಗಳನ್ನು ಪಡೆದು, ಶೇ.100 ಫಲಿತಾಂಶ ದಾಖಲಿಸಿರುವುದು ಶಾಲೆಯ ಶೈಕ್ಷಣಿಕ ಗುಣಮಟ್ಟ ಹಾಗೂ ಶಿಕ್ಷಕರ ಶ್ರಮಕ್ಕೆ ಸಾಕ್ಷಿಯಾಗಿದೆ. ಈ ಸಾಧನೆಯು ಮೂಲಕ ಶಾಲೆ ಶಿಕ್ಷಣ ಕ್ಷೇತ್ರದಲ್ಲಿ ಮತ್ತೊಂದು ಮಹತ್ವದ ಹೆಜ್ಜೆಯನ್ನು ಇಟ್ಟಿದೆ.



ಯಲ್ಲಾಪುರ: ತಾಲೂಕಿನ ಲೋಕೋಪಯೋಗಿ ಇಲಾಖೆಯ ನೂತನ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರರಾಗಿ ರಾಮಲಿಂಗೇಶ್ವರ ಅಧಿಕಾರವಹಿಸಿಕೊಂಡರು. ಈ ಮೊದಲು ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ವರ್ಗಾವಣೆಗೊಂಡ ಸಂಜೀವ ಪಾತ್ರೋಟ ಅವರನ್ನು ಸನ್ಮಾನಿಸಿ ಬೀಳ್ಕೊಟ್ಟರು. ಈ ವೇಳೆ ಗುತ್ತಿಗೆದಾರರು ಹಾಗೂ ಸಿಬ್ಬಂದಿ ಇದ್ದರು.

ಶಿರೂರು ಗುಡ್ಡ ಕುಸಿತ | ನದಿಯಲ್ಲಿ ಮಣ್ಣಿನ ರಾಶಿ

ಯಂತ್ರ ಬಳಸಿ ತೆರವಿಗೆ ಮುಹೂರ್ತ

▶ನಾಗರಾಜ ಶೆಟ್ಟಿ

◆**ಅಂಕೋಲಾ:** ದೇಶಾದ್ಯಂತ ಸುದ್ದಿಯಾದ ತಾಲೂಕಿನ ಶಿರೂರು ಗುಡ್ಡ ಕುಸಿತದಿಂದಾಗಿ ಕಳೆದ ಎರಡು ವರ್ಷಗಳಿಂದ ಗಂಗಾವಳಿ ನದಿಯಲ್ಲಿ ರಾಶಿಯಾಗಿ ಬಿದ್ದು ನಡುಗಡ್ಡೆಯನ್ನು ಸೃಷ್ಟಿಸಿರುವ ಕುಸಿದ ಗುಡ್ಡದ ಕಲ್ಲು, ಮಣ್ಣುಗಳ ರಾಶಿಯನ್ನು ತೆರವುಗೊಳಿಸಲು ಕೊನೆಗೂ ಕಾಲ ಕೂಡಿ ಬಂದಿದ್ದು

ಮಣ್ಣು ತೆರವಿಗೆ ನದಿಯಲ್ಲಿ ಯಂತ್ರಗಳನ್ನು ಇಳಿಸಲು ಬೇಕಾದ

ಆಳ, ಬಾರ್ಜ್ ಸಾಗಲು ಅನುಕೂಲವಾಗುವ ಜಲಮಾರ್ಗದ ನಕ್ಷೆ, ಉಬ್ಬರ ಇಳಿತದ ಸಂದರ್ಭದಲ್ಲಿ ನದಿಯ ಆಳ, ಯಂತ್ರಗಳು ಕಾರ್ಯನಿರ್ವಹಿಸುವ ಸಾಮರ್ಥ್ಯದ ಕುರಿತಂತೆ ಬಂದರು ಇಲಾಖೆ ಮತ್ತು ಜಿಲ್ಲಾಧಿಕಾರಿ ಕಚೇರಿಯ ಪ್ರಾಕೃತಿಕ ವಿಭಾಗದ ವತಿಯಿಂದ ಗಂಗಾವಳಿ ನದಿಯಲ್ಲಿ

ಸರ್ವೆ ಕಾರ್ಯ ನಡೆಸಲಾಗಿದೆ.

ಮಳೆಗಾಲ ಆರಂಭವಾಗುವ ಪೂರ್ವದಲ್ಲೇ ಮಣ್ಣು ತೆರವು ಕಾರ್ಯಾಚರಣೆ ನಡೆಸುವುದು ಸೂಕ್ತ ಆಗಿರುವುದರಿಂದ ಇದೇ ತಿಂಗಳಲ್ಲಿ ಯಂತ್ರೋಪಕರಣ ಹೊತ್ತ ಬಾರ್ಜುಗಳು ಕಾರ್ಯಾಚರಣೆ ಆರಂಭಿಸುವ ಸಾಧ್ಯತೆ ಇದೆ.

ಶಿರೂರು ಗುಡ್ಡ ಕುಸಿತದಿಂದಾಗಿ ಸಾವಿರಾರು ಟನ್ನುಗಳಷ್ಟು ಗುಡ್ಡದ ಮಣ್ಣು ಮತ್ತು ಬಂಡೆಗಳು ಗಂಗಾವಳಿ ನದಿಯಲ್ಲಿ ಸಂಗ್ರಹವಾಗಿ ಹಲವು ದ್ವೀಪಗಳ ರೀತಿಯಲ್ಲಿ ಕಂಡು ಬರತೊಡಗಿದ್ದು ಮಣ್ಣು ಸಂಗ್ರಹದಿಂದ ಸುತ್ತ ಮುತ್ತಲಿನ ನದಿ ತೀರದ ಗ್ರಾಮಗಳಲ್ಲಿ ಮಳೆಗಾಲದಲ್ಲಿ ಕೃತಕ ಪ್ರವಾಹ ಸೃಷ್ಟಿಯಾಗಲಿದೆ ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿ ಹಲವು ಮನವಿಗಳನ್ನು ನೀಡಿದ್ದರು.

ದುರ್ಘಟನೆ ನಡೆದ ನಂತರ ಕಳೆದ ವರ್ಷದ ಮಳೆಗಾಲ ಕಳೆದರೂ ಮಳೆಯ ತೀವ್ರತೆ ಅಪಾಯಕಾರಿ ರೀತಿಯಲ್ಲಿ ಇಲ್ಲದಿರುವುದರಿಂದ ಕೃತಕ ನೆರೆಯಂತ ಯಾವುದೇ ಅನಾಹುತ ಸಂಭವಿಸಿರಲಿಲ್ಲ.

ಗಂಗಾವಳಿ ನದಿಯಲ್ಲಿ ತುಂಬಿರುವ ಮಣ್ಣು ತೆರವುಗೊಳಿಸುವ ಕಾರ್ಯಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ 2 ಕೋಟಿ ರೂಪಾಯಿ ಅನುದಾನ ನೀಡಲಾಗಿತ್ತು ಆದರೆ, ಆದರೆ ಕಾರ್ಯಾಚರಣೆಗೆ ಸುಮಾರು 4 ಕೋಟಿಗಳಿಗಿಂತ ಹೆಚ್ಚಿನ ಹಣದ ಅಗತ್ಯ ಇರುವುದರಿಂದ ಕಾರವಾರ ಅಂಕೋಲಾ ಶಾಸಕ ಸತೀಶ ಸೈಲ್ ಅವರು ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿರುವುದರಿಂದ ಸರ್ಕಾರ ರಾಜ್ಯ ವಿಪತ್ತು ನಿರ್ವಹಣಾ ನಿಧಿಯಿಂದ 2.34 ಕೋಟಿ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮ ಕಲಂ 4 ಜಿ ಅನ್ವಯ ನಿರ್ದಿಷ್ಟ ಸೇವೆಗಾಗಿ ಟೆಂಡರ್ ನಿಯಮಗಳ ವಿನಾಯತಿ ನಿಯಮದಡಿ ಶೀಘ್ರದಲ್ಲಿ ಮಣ್ಣು ತೆರವು ಕಾರ್ಯಾಚರಣೆ ನಡೆಯಲಿದ್ದು, ಈ ಹಿಂದೆ ನದಿಯಲ್ಲಿ ಮೃತದೇಹಗಳ ಶೋಧ ಕಾರ್ಯ ನಡೆಸಿರುವ ಕೇರಳದ ಲಾರಿ ಮತ್ತು ಲಾರಿ ಚಾಲಕ ಅರ್ಜುನ್ ಅವರನ್ನು

ಶೋಧಿಸಿದ ಸಂಸ್ಥೆ ಮಣ್ಣು ತೆರವುಗೊಳಿಸುವ ಕಾರ್ಯಾಚರಣೆ ನಡೆಸಲಿದೆ ಎಂದು ತಿಳಿದು ಬಂದಿದೆ.



ಗುಡ್ಡ ಕುಸಿತದ ಭೀಕರತೆ ನೆನಪಿಸಿದ ಮಣ್ಣು ರಾಶಿ

ಭಾರೀ ಮಳೆಯಿಂದಾಗಿ 2024 ರ ಜುಲೈ 16 ರಂದು ಬೆಳಗ್ಗೆ ಅಂಕೋಲಾ ತಾಲೂಕಿನ ಶಿರೂರು ಬಳಿ ರಾಷ್ಟ್ರೀಯ ಹೆದ್ದಾರಿ 66 ಪಕ್ಕದಲ್ಲಿರುವ ಗುಡ್ಡ ಭಾರೀ ಪ್ರಮಾಣದಲ್ಲಿ ಕುಸಿದು ಅನಾಹುತ ಸಂಭವಿಸಿತ್ತು. ಗುಡ್ಡದ ಮಣ್ಣಿನ ಜೊತೆಗೆ ನದಿ ತೀರದಲ್ಲಿರುವ ಸಣ್ಣ ಹೋಟೆಲ್, ರಾಷ್ಟ್ರೀಯ ಹೆದ್ದಾರಿಯ ಪಕ್ಕ ನಿಂತ ವಾಹನಗಳು, ಗಿಡ ಮರಗಳು ಸೇರಿದಂತೆ ಗಂಗಾವಳಿ ನದಿ ಪಾಲಾಗಿದ್ದ ದುರಂತದಲ್ಲಿ 11 ಜನ ಮೃತಪಟ್ಟಿದ್ದರು. ಸುಮಾರು ಮೂರು ತಿಂಗಳುಗಳ ಕಾಲ ನಡೆದ ರಕ್ಷಣಾ ಕಾರ್ಯಾಚರಣೆಯಲ್ಲಿ ಆರಂಭದ 10 ದಿನಗಳಲ್ಲಿ 8 ಮೃತದೇಹಗಳು ಪತ್ತೆಯಾದರೆ ಕೇರಳದ ಲಾರಿ ಮತ್ತು ಚಾಲಕನ ಮೃತದೇಹ 70 ದಿನಗಳ ನಂತರ ಪತ್ತೆಯಾಗಿತ್ತು. ಸ್ಥಳೀಯ ಇಬ್ಬರ ಮೃತದೇಹಗಳು ಇದುವರೆಗೆ ಪತ್ತೆಯಾಗದೆ ಗಂಗಾವಳಿ ನದಿಯಲ್ಲಿ ತುಂಬಿರುವ ಮಣ್ಣುರಾಶಿ ದುರಂತದ ಭೀಕರತೆಯನ್ನು ನೆನಪಿಸುವಂತಿತ್ತು.

ದಿಗಂತ ವಿಶೇಷ

ಕಡಲ ತೀರಗಳಲ್ಲಿ ಬೋಟಿಂಗ್, ಜಲ ಕ್ರೀಡೆಗಳು ಮುಂದುವರಿಕೆ

◆**ಕಾರವಾರ:** ಭಾರತ ಸರ್ಕಾರದ ಹವಾಮಾನ ಇಲಾಖೆಯಿಂದ ಚಂಡಮಾರುತ ಹಾಗೂ ಭಾರಿ ಗಾಳಿ ಬೀಸುವ ಬಗ್ಗೆ ಮಾಹಿತಿ ಲಭ್ಯವಾಗಿದ್ದು ಅಲ್ಲದೆ ಮಳೆಗಾಲ ಕೂಡ ಪ್ರಾರಂಭವಾಗುತ್ತಿರುವ ಹಿನ್ನಲೆಯಲ್ಲಿ, ಬೋಟಿಂಗ್ ಮತ್ತು ಜಲ ಸಾಹಸ ಕ್ರೀಡೆಗಳು ಸೇರಿದಂತೆ ಎಲ್ಲಾ ಚಟುವಟಿಕೆಯನ್ನು ಸ್ಥಗಿತಗೊಳಿಸಲು ತಿಳಿಸಲಾಗಿತ್ತು.

ಆದರೆ ಮೇ 19ರ ಸಂಜೆಯಿಂದ ಕಡಲ ತೀರದಲ್ಲಿ ಅಬ್ಬರದ ಅಲೆಗಳು ಸ್ವಲ್ಪ ಮಟ್ಟಿಗೆ ಕಡಿಮೆಯಾಗಿರುತ್ತದೆ. ಅಲ್ಲದೇ ದೂರದ ಊರುಗಳಿಂದ ಬರುವ ಪ್ರವಾಸಿಗರಿಗೆ ನಿರಾಶೆಯಾಗ ಬಾರದೆಂಬ ದೃಷ್ಟಿಯಿಂದ ವಾತಾವರಣವನ್ನು ಪರಿಗಣಿಸಿಕೊಂಡು, ಸುರಕ್ಷಿತಾ ಕ್ರಮಗಳನ್ನು ಅನುಸರಿಸಿಕೊಂಡು ಸದರಿ ಎಲ್ಲಾ ಚಟುವಟಿಕೆಗಳನ್ನು ಮುಂದಿನ ಆದೇಶದವರೆಗೆ ಕೈಗೊಳ್ಳಬಹುದಾಗಿದೆ ಎಂದು ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕರು ಹಾಗೂ ರಿವರ್ ರಾಫ್ಟಿಂಗ್ ಮತ್ತು ಜಲ ಸಾಹಸ ಕ್ರೀಡೆ ನಿರ್ವಹಣೆ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಡಲ ತೀರದ ಸ್ವಚ್ಛತೆಗೆ ಆಗ್ರಹ



◆**ಗೋಕರ್ಣ:** ಇಲ್ಲಿನ ಆರೋಗ್ಯ ಸೇವಾ ಸಂಸ್ಥೆಯ ವತಿಯಿಂದ ವಿವಿಧ ಕಡಲ ತೀರದಲ್ಲಿ ಪ್ರವಾಸಿಗರು ಎಸೆದು ಹೋಗುವ ತ್ಯಾಜ್ಯಗಳನ್ನು ತೆಗೆದು ಸ್ವಚ್ಛಗೊಳಿಸಿ ಸಂಗ್ರಹಿಸುತ್ತಿದ್ದು, ಆದರೆ ಇದನ್ನ ಗ್ರಾಪಂ ವಿಲೇವಾರಿ ಮಾಡದೆ ನಿರ್ಲಕ್ಷಿಸಿದೆ ಎಂದು ಸಾರ್ವಜನಿಕರು ಆಗ್ರಹಿಸಿದರು. ಒಂದು ಸಂಸ್ಥೆ ಸ್ವಯಂಪ್ರೇರಣೆಯಿಂದ ತಿಂಗಳಲಲ್ಲಿ ನಾಲ್ಕು ಬಾರಿ ಕಡಲತೀರದ ಸ್ವಚ್ಛತಾ ಕಾರ್ಯ ಮಾಡುತ್ತಿದೆ. ಪ್ರವಾಸಿ ತಾಣದ ಸ್ವಚ್ಛತಾ ಕಾರ್ಯಕ್ಕೆ ಪ್ರೋತ್ಸಾಹಿಸಿ ಬೆಂಬಲಿಸ ಬೇಕಾದ ಸ್ಥಳೀಯ ಆಡಳಿತ ಅಲಕ್ಷಿಸಿರುವುದು ಖೇದಕರವಾಗಿದೆ.

ಕೊಟ್ಟಿಗೆ ಮನೆಗೆ ಬೆಂಕಿ: ಅಪಾರ ಹಾನಿ

◆**ಸಿದ್ದಾಪುರ:** ಸಮೀಪದ ಬರಡಹಳ್ಳಿ ಗ್ರಾಮದ ನಿವಾಸಿಗಳಾದ ಮಂಜಮ್ಮ ಮತ್ತು ತಿಮ್ಮ ಎಂಬುವವರಿಗೆ ಸೇರಿದ ಕೊಟ್ಟಿಗೆ ಮನೆಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಮೌಲ್ಯದ ಆಸ್ತಿ-ಪಾಸ್ತಿ ನಷ್ಟವಾಗಿರುವ ಘಟನೆ ನಡೆದಿದೆ. ಕೊಟ್ಟಿಗೆಯಿಂದ ದಿಢೀರನೆ ಬೆಂಕಿಯ ಜ್ವಾಲೆ ಹಾಗೂ ದಟ್ಟ ಹೊಗೆ ಏಳುತ್ತಿರುವುದನ್ನು ಗಮನಿಸಿದ ಸ್ಥಳೀಯರು ತಕ್ಷಣವೇ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದಾರೆ. ಸುದ್ದಿ ತಿಳಿಯುತ್ತಿದ್ದಂತೆಯೇ ಅಗ್ನಿಶಾಮಕ ದಳದ ಸಿಬ್ಬಂದಿ, ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ಸಂಪೂರ್ಣವಾಗಿ ಹತೋಟಿಗೆ ತರುವಲ್ಲಿ ಯಶಸ್ವಿಯಾಗಿದ್ದಾರೆ. ಕೊಟ್ಟಿಗೆ ಮನೆಯಲ್ಲಿ ಯಾವುದೇ ಪ್ರಾಣಿಗಳು ಇಲ್ಲದೆ ಇದ್ದಿದ್ದರಿಂದ ಹೆಚ್ಚಿನ ಅನಾಹುತ ತಪ್ಪಿದೆ. ಅಗ್ನಿಶಾಮಕ ಸಿಬ್ಬಂದಿಯ



ಸಮಯಪ್ರಜ್ಞೆಯಿಂದಾಗಿ ಸುತ್ತಮುತ್ತಲಿನ ಮನೆಗಳಿಗೆ ಬೆಂಕಿ ವ್ಯಾಪಿಸುವುದು ತಪ್ಪಿದೆಯಾದರೂ, ಕೊಟ್ಟಿಗೆಯಲ್ಲಿದ್ದ ಮೇವು ಮತ್ತು ಇತರ ಸಾಮಗ್ರಿಗಳು ಸುಟ್ಟು ಭಸ್ಮವಾಗಿವೆ.

ಈ ಯಶಸ್ವಿ ರಕ್ಷಣಾ ಕಾರ್ಯಾಚರಣೆಯಲ್ಲಿ ಅಗ್ನಿಶಾಮಕ ಠಾಣಾಧಿಕಾರಿ ಎ. ಸುಬ್ರಮಣ್ಯ, ಲೀಡಿಂಗ್ ಫೈರ್‌ಮ್ಯಾನ್ ಕಾಂತರಾಜ ನಾಯ್ಕ, ಬಾಲೇಶ, ಫೈರ್‌ಮ್ಯಾನ್‌ಗಳಾದ ವಿನಯ ಮತ್ತು ಸುನೀಲ ಇದ್ದರು.



ಕುಮಟಾ: ಮರು ಮೌಲ್ಯಮಾಪನದಲ್ಲಿ ಅಂಕ ವ್ಯತ್ಯಾಸ ಸರಿಪಡಿಸಿಕೊಂಡು ರಾಜ್ಯ ಶ್ರೇಯಾಂಕಿತರ ಪಟ್ಟಿಯಲ್ಲಿ ಸ್ಥಾನ ಖಚಿತಪಡಿಸಿಕೊಂಡ ಡಾ. ಎ.ವಿ. ಬಾಳಿಗಾ ಆಂಗ್ಲ ಮಾಧ್ಯಮ ಪ್ರೌಢಶಾಲೆ ವಿದ್ಯಾರ್ಥಿ ಆದಿತ್ಯ ದತ್ತಾತ್ರೇಯ ಹೆಗಡೆ (622/625) ಅವರನ್ನು ವಾತಜಾತಾ ಫಾರ್ಮಾ ಫುಡ್ಸ್ ಪ್ರೈ. ಲಿಮಿಟೆಡ್ ವತಿಯಿಂದ ಸನ್ಮಾನಿಸಲಾಯಿತು.

ಆನ್‌ಲೈನ್ ಔಷಧಿ ಮಾರಾಟ ನಿಲ್ಲಲಿ

◆**ಭಟ್ಕಳ:** ಆನ್‌ಲೈನ್ ಮೂಲಕ ಔಷಧ ಮಾರಾಟ ನಿಷೇಧ ಸೇರಿದಂತೆ ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಷ್ಟ್ರೀಯ ಕರೆಯ ಮೇರೆಗೆ ಉತ್ತರ ಕನ್ನಡ ಕೆಮಿಸ್ಟ್ ಡ್ರಗ್ಗಿಸ್ಟ್ ಅಸೋಸಿಯೇಶನ್‌ನ ಭಟ್ಕಳ ತಾಲೂಕು ಘಟಕದ ವತಿಯಿಂದ ಬುಧವಾರ ಮೆಡಿಕಲ್ ಬಂದ್ ಮಾಡಿ ಮುಷ್ಕರ ನಡೆಸಲಾಯಿತು.

ಭಟ್ಕಳ ನಗರ, ಗ್ರಾಮೀಣ ಹಾಗೂ ಮುರುಡೇಶ್ವರ ಪೊಲೀಸ್ ಠಾಣೆ ವ್ಯಾಪ್ತಿಯ ಸುಮಾರು 36 ಔಷಧ ಅಂಗಡಿಗಳು ಬಂದ್ ಮಾಡಿ ಮುಷ್ಕರಕ್ಕೆ ಬೆಂಬಲ ಸೂಚಿಸಿದವು. ಆನ್‌ಲೈನ್ ಔಷಧ ಮಾರಾಟಕ್ಕೆ ಅವಕಾಶ ನೀಡಿರುವುದರಿಂದ ಔಷಧ ವ್ಯಾಪಾರಿಗಳು, ವಿತರಕರು ಹಾಗೂ ಅವರ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಲಿವೆ ಎಂದು ಸಂಘಟಕರು ಆತಂಕ ವ್ಯಕ್ತಪಡಿಸಿದರು. ಗುಣಮಟ್ಟವಿಲ್ಲದ ಔಷಧಗಳ ಮಾರಾಟ ಹಾಗೂ ದರ ಪೈಪೋಟಿಯಿಂದ ಸಣ್ಣ ವ್ಯಾಪಾರಿಗಳಿಗೆ ತೀವ್ರ ಹೊಡೆತ ಬೀಳುತ್ತಿದೆ ಎಂದು ದೂರಿದರು. 2020ರ ಮಾರ್ಚ್ 26 ಹಾಗೂ



2018ರ ಆಗಸ್ಟ್ 28ರಂದು ಹೊರಡಿಸಿದ ಆನ್‌ಲೈನ್ ಔಷಧ ಮಾರಾಟ ಸಂಬಂಧಿತ ಅಧಿಸೂಚನೆಗಳನ್ನು ರದ್ದುಗೊಳಿಸಬೇಕು. ಕಾರ್ಪೋರೇಟ್ ಕಂಪನಿಗಳಿಗೆ ನೀಡಲಾಗುತ್ತಿರುವ ಭಾರಿ ರಿಯಾಯಿತಿ ನೀತಿಯನ್ನು ಹಿಂಪಡೆದು ಏಕರೂಪದ ರಿಯಾಯಿತಿ ದರ ಜಾರಿಗೊಳಿಸಬೇಕು. ನಕಲಿ ಹಾಗೂ ಕಲುಷಿತ ಔಷಧ ತಯಾರಿಕೆಯನ್ನು ಕಟ್ಟುನಿಟ್ಟಾಗಿ ತಡೆಯಬೇಕು ಎಂದು ಔಷಧಿ ಅಂಗಡಿ ಮಾಲಿಕರು ಆಗ್ರಹಿಸಿದರು.

ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ

◆**ಗೋಕರ್ಣ:** ಇಲ್ಲಿನ ಕೆನರಾ ಶಿಕ್ಷಣ ಪ್ರಸಾರಕ ಮಂಡಳದ ಸಮೂಹ ವಿದ್ಯಾಸಂಸ್ಥೆಗಳ ಪದವಿ ಪೂರ್ವ ವಿಭಾಗ ಹಾಗೂ ಪ್ರೌಢಶಾಲೆಯ ಕನ್ನಡ ಮಾಧ್ಯಮ ಹಾಗೂ ಆಂಗ್ಲ ಮಾಧ್ಯಮ ವಿಭಾಗದಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಸಾಧಕ ಸನ್ಮಾನ ಕಾರ್ಯಕ್ರಮ ಕಾಲೇಜಿನ ದಿ.ಜಿ ಕೆ ಹೆಗಡೆ ಸಂಸ್ಮರಣಾ ಸಭಾಭವನದಲ್ಲಿ ಮಂಗಳವಾರ ನಡೆಯಿತು.

ಉದ್ಯಮಿ ಹಾಗೂ ಕೆನರಾ ಶಿಕ್ಷಣ ಪ್ರಸಾರಕ ಮಂಡಳದ ಕೋಶಾಧ್ಯಕ್ಷರಾದ ರವೀಂದ್ರ ಕೊಡ್ಲೆಕೆರೆ ಅವರು ಆರ್.ಕೆ ಹಾರ್ಡವೇರ್ ವತಿಯಿಂದ ಆಯೋಜಿಸಿದ ಕಾರ್ಯಕ್ರಮವನ್ನ ಪದವಿ ಪೂರ್ವ ಕಾಲೇಜಿನ ಪ್ರಾ. ಎಸ್ ಸಿ.ನಾಯ್ಕ, ಮುಖ್ಯಾಧ್ಯಾಪಕ ಸಿ ಜಿ. ನಾಯಕ ದೊರೆ, ಭದ್ರಕಾಳಿ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯಾಧ್ಯಾಪಕಿ ರೇವತಿ ಮಲ್ಲನ್ ಜಂಟಿಯಾಗಿ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು ನಮ್ಮ ವಿದ್ಯಾಸಂಸ್ಥೆಯಲ್ಲಿ ಕಲಿತಿರುವ ಮಕ್ಕಳು ಸ್ಪರ್ಧಾತ್ಮಕ ಯುಗದಲ್ಲಿ ನಿರಂತರ ಪರಿಶ್ರಮದಿಂದ ಮುಂದಿನ ಅಧ್ಯಯನವನ್ನು ನಡೆಸಿ ಉತ್ತಮ ಮೌಲ್ಯಯುತ ವ್ಯಕ್ತಿಗಳಾಗಬೇಕು ಎಂದು ಆಶಿಸಿದರು.

ಕೆನರಾ ಶಿಕ್ಷಣ ಪ್ರಸಾರಕ ಮಂಡಳದ ಸದಸ್ಯರಾದ ರಮೇಶ ಪ್ರಸಾದ ಹಾಗೂ ಗುರುಪ್ರಕಾಶ ಹೆಗಡೆ ಮಾತನಾಡಿ, ಜನ್ಮಕೊಟ್ಟ ನೆಲ,ಉತ್ತಮ



ವ್ಯಕ್ತಿಯಾಗಿ ರೂಪಿಸುವ ಶಿಕ್ಷಣ ಕಲಿಸಿದ ವಿದ್ಯಾಸಂಸ್ಥೆ, ತಂದೆ ತಾಯಿಗಳ ಋಣವನ್ನು ತೀರಿಸಲು ಸಾಧ್ಯವಿಲ್ಲ ಎಂದು ಹೇಳಿದರು.ಡಾ.ರಾಮಚಂದ್ರ ಮಲ್ಲನ್ ಹಾಗೂ ಸಿಬ್ಬಂದಿ ಪ್ರತಿನಿಧಿಗಳಾದ ರಾಮಮೂರ್ತಿ ನಾಯಕ ಅಭಿನಂದನಾ ನುಡಿಗಳನ್ನಾಡಿದರು.ಅಧ್ಯಕ್ಷತೆ ವಹಿಸಿದ್ದ ಆಯೋಜಕರಾದ ರವೀಂದ್ರ ಕೊಡ್ಲೆಕೆರೆ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಸಾಧಕ ಸನ್ಮಾನ ಗುರುಪ್ರಕಾಶ ಹೆಗಡೆ ವೇದ ಘೋಷ ಹಾಗೂ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರತಿಭಾವಂತ ವಿದ್ಯಾರ್ಥಿಗಳು ತಮ್ಮ ಅನಿಸಿಕೆಯನ್ನು ಹಂಚಿಕೊಂಡರು. ಈ ವೇಳೆ ವಿದ್ಯಾರ್ಥಿಗಳ ಪಾಲಕರು, ಭದ್ರಕಾಳಿ ಸಮೂಹ ವಿದ್ಯಾ ಸಂಸ್ಥೆಯ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು. ಉನ್ಯಾಸಕಿ ಡಾ.ಪಲ್ಲವಿ ಹೆಗಡೆ ನಿರ್ವಹಿಸಿದರು. ಸಾವಿತ್ರಿ ಗೌಡ ವಂದಿಸಿದರು.

ಶ್ರದ್ಧಾ, ಭಕ್ತಿಯ ದುರ್ಗಾ ನಮಸ್ಕಾರ



◆**ದಾಂಡೇಲಿ:** ದುರ್ಗಾ ನಮಸ್ಕಾರ ಅಥವಾ ದುರ್ಗಾ ದೀಪ ನಮಸ್ಕಾರವು ಹಿಂದೂ ಧರ್ಮದಲ್ಲಿ ದುರ್ಗಾದೇವಿಗೆ ಸಲ್ಲಿಸುವ ಅತ್ಯಂತ ಶಕ್ತಿಶಾಲಿ ಮತ್ತು ಪವಿತ್ರವಾದ ಪೂಜಾ ವಿಧಾನವಾಗಿದೆ. ಇದು ದೇವಿಯ ಅನುಗ್ರಹವನ್ನು ಪಡೆಯಲು, ಶತ್ರುಬಾಧೆಗಳನ್ನು ನಿವಾರಿಸಲು ಮತ್ತು ಕಷ್ಟಗಳನ್ನು ದೂರ ಮಾಡಲು ಮಾಡುವ ಪ್ರಾರ್ಥನೆಯಾಗಿದ್ದು, ಇಂತಹ ಪವಿತ್ರ ದುರ್ಗಾ ನಮಸ್ಕಾರ ಪೂಜೆಯನ್ನು ನಗರದ ಕುಳಗಿ ರಸ್ತೆಯಲ್ಲಿರುವ ವಿದ್ಯಾಧಿರಾಜ ಸಭಾ ಭವನದಲ್ಲಿ ಅತ್ಯಂತ ಶ್ರದ್ಧಾಭಕ್ತಿಯಿಂದ ನೆರವೇರಿಸಲಾಯ್ತು.

ದೈವಿಕ ಶಕ್ತಿಯನ್ನು ಆಹ್ವಾನ, ನಕಾರಾತ್ಮಕ ಶಕ್ತಿಗಳ ನಿವಾರಣೆ, ಕುಟುಂಬದಲ್ಲಿ ಸಮೃದ್ಧಿ ಮತ್ತು ಸಂತೋಷದ ಅನುಗ್ರಹಕ್ಕಾಗಿ ಮತ್ತು ಕುಟುಂಬದಲ್ಲಿ ಸದಾ ಆರೋಗ್ಯ ಮತ್ತು ಸುಖ ಪ್ರಾಪ್ತಿಗಾಗಿ ಅತ್ಯಂತ ಶ್ರದ್ಧಾ ಭಕ್ತಿಯಿಂದ ದುರ್ಗಾ ನಮಸ್ಕಾರ ಪೂಜೆಯನ್ನು ಮಾಡಲಾಗುತ್ತದೆ. ಇಂದಿನ ಈ ದುರ್ಗಾ ನಮಸ್ಕಾರ ಪೂಜಾ ಕಾರ್ಯಕ್ರಮದಲ್ಲಿ ಜಿ.ಎಸ್.ಬಿ ಸಮಾಜ ಬಾಂಧವರು ಶ್ರದ್ಧಾಭಕ್ತಿಯಿಂದ ಭಾಗವಹಿಸಿದ್ದರು.

ಮನೆಗೊಂದು ಗ್ರಂಥಾಲಯ ಅವಶ್ಯ:ಡಾ.ಮಾನಸ

◆**ಕುಮಟಾ:** ನಮಗಿಷ್ಟವಾದ ಪುಸ್ತಕಗಳು ನಮ್ಮ ಜೊತೆಗಿದ್ದರೆ ನಾವು ಬಯಸಿದ್ದೆಲ್ಲವನ್ನು ಸಾಧಿಸಬಹುದು. ಮನೆ-ಮನವನ್ನು ಬೆಳಗಲು ಪುಸ್ತಕದಿಂದ ಮಾತ್ರ ಸಾಧ್ಯ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ ರವರು ಹೇಳಿದರು.

ರೋಹಿದಾಸ್ ನಾಯಕರವರ ಮನೆಯಲ್ಲಿ ನಡೆದ ಮನೆಗೊಂದು ಗ್ರಂಥಾಲಯ ಸಮಾರಂಭದಲ್ಲಿ ಗ್ರಂಥಾಲಯ ನಿರ್ಮಿಸಲು ಪುಸ್ತಕ ನೀಡುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ವನಿತಾ ನಾಯ್ಕ, ಮಾದೇವಿ ಪಟಗಾರ, ಈಶ್ವರ ಮುಕ್ರಿ ,ಪ್ರವೀಣ್ ಮಡಿವಾಳರವರಿಗೆ ಮನೆಗೊಂದು ಗ್ರಂಥಾಲಯ ರಚಿಸಲು ಪುಸ್ತಕ ನೀಡಿದರು.

ಅಧ್ಯಕ್ಷತೆವಹಿಸಿದ ಜಿಲ್ಲಾ ಸಂಚಾಲಕ ಕೃಷ್ಣನಾಯಕ ಹಿಚ್ಕಡ, ಕಾರ್ಯಕ್ರಮ ಸಂಯೋಜಕ ರೋಹಿದಾಸ ನಾಯಕ್, ಮುಖ್ಯ ಅತಿಥಿ ಡಾ.ದಯಾನಂದ ಭಟ್ ಮಾತನಾಡಿದರು. ರೋಹಿದಾಸ್ ನಾಯಕರ ಕತ್ತಲೆ ದಾರಿ ದೂರ ಕಥಾಸಂಕಲನವನ್ನು ಲೇಖಕಿ ಮಮತಾ ನಾಯ್ಕ ಪರಿಚಯಿಸಿದರು. ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪ್ರಮೋದ್ ನಾಯ್ಕ್, ರವೀಂದ್ರ



ಭಟ್ ಸೂರಿ,ಸಂಚಾಲಕ ಎಸ್. ಹೆಚ್. ಗುನಗ, ಯಮುನಾ ಗಾಂವ್ಕರ್ ಉಪಸ್ಥಿತರಿದ್ದರು. ಶಿಕ್ಷಕ ಯೋಗೇಶ ಪಟಗಾರ ಸ್ವಾಗತಿಸಿದರು. ಮನೆಗೊಂದು ಗ್ರಂಥಾಲಯ ತಾಲೂಕಾ ಸಮಿತಿ ಸದಸ್ಯ ಪಿ.ಆರ್.ನಾಯ್ಕ ವಂದಿಸಿದರು. ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಮಾನಸ ರವರು ರವೀಂದ್ರ ಭಟ್ ಸೂರಿ, ಟಿ. ಜಿ. ಭಟ್ ಹಾಸಣಗಿ, ಎಂ.ಜಿ.ನಾಯ್ಕ,ಯೋಗೇಶ್ ಪಟಗಾರ, ಜಟ್ಟಿ ಮುಕ್ರಿ, ಬೀರಣ್ಣ ನಾಯಕ, ರೋಹಿದಾಸ ನಾಯಕ ಇವರ ಮನೆಯಲ್ಲಿರುವ ಗ್ರಂಥಾಲಯಕ್ಕೆ ಭೇಟಿ ನೀಡಿ ಈ ಎಲ್ಲಾ ಗಣ್ಯರನ್ನು ಪ್ರಾಧಿಕಾರದ ಪರವಾಗಿ ಅವರ ಮನೆಯಲ್ಲಿ ಸನ್ಮಾನಿಸಿ ಗೌರವಿಸಿದರು. ಇವರ ಜೊತೆಯಲ್ಲಿ ಜಿಲ್ಲಾ ಜಾಗೃತ ಸಮಿತಿ ಸದಸ್ಯರಾದ ಕೃಷ್ಣ ನಾಯಕ ಹಿಚ್ಕಡ, ಮನಾಸುತ ಶಂಭು ಹೆಗಡೆ, ಎಸ್.ಹೆಚ್.ಗುನಗ, ಪಿ.ಆರ್.ನಾಯ್ಕ, ಯಮುನಾ ಗಾಂವ್ಕರ ಇದ್ದರು.

ಬಿತ್ತನೆ ಬೀಜ ಖರೀದಿಗೆ ಮುಂದಾದ ರೈತಾಪಿ ವರ್ಗ

◆**ಮುಂಡಗೋಡ:** ಕಳೆದ ಒಂದು ವಾರದಲ್ಲಿ ಎರಡು ಮೂರು ಬಾರಿ ಉತ್ತಮ ಮಳೆಯಾಗಿದ್ದರಿಂದ ಬಿತ್ತನೆಗೆ ಭೂಮಿ ಹದವಾಗಿದ್ದು, ರೈತರು ಕೃಷಿ ಚಟುವಟಿಕೆಗಳು ಆರಂಭವಾಗಿದ್ದರಿಂದ ಬಿತ್ತನೆ ಬೀಜ ಗೊಬ್ಬರಕ್ಕೆ ರೈತ ಸಂಪರ್ಕ ಕೇಂದ್ರಗಳಲ್ಲಿ ದಾಸ್ತಾನು ಮಾಡಲಾಗುತ್ತಿದೆ. ಪಟ್ಟಣ ಸೇರಿದಂತೆ ಗ್ರಾಮೀಣ ಭಾಗದ ರೈತರು ಗದ್ದೆಗಳಲ್ಲಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿದ್ದಾರೆ.

ತಾಲೂಕಿನಲ್ಲಿ ಒಟ್ಟು 11,700ಸಾವಿರ ಹೆಕ್ಟೇರ್ ಕೃಷಿ ಜಮೀನಿದ್ದು, ಇದರಲ್ಲಿ 5,700 ಹೆಕ್ಟೇರ್ ಜಮೀನಿನಲ್ಲಿ ಭತ್ತ, 4,500 ಹೆಕ್ಟೇರ್ ಜಮೀನಿನಲ್ಲಿ ಗೋವಿನ ಜೋಳ, 1400 ಹೆಕ್ಟೇರ್ ಜಮೀನಿನಲ್ಲಿ ಕಬ್ಬು, 4-5 ಹೆಕ್ಟೇರ್ ಜಮೀನಿನಲ್ಲಿ ಹತ್ತಿ ಬೆಳೆಯಲಾಗುತ್ತಿದೆ. ಹೋಬಳಿ ಮಟ್ಟದ ರೈತ ಸಂಪರ್ಕ ಕೇಂದ್ರಗಳಾದ ಮುಂಡಗೋಡ ಮತ್ತು ಪಾಳಾಯಲ್ಲಿ ರಿಯಾಯಿತಿ ದರದಲ್ಲಿ ನೀಡಲು ಇಲಾಖೆ ತಯಾರಾಗಿದೆ. ಎರಡು ಸಂಪರ್ಕ ಕೇಂದ್ರದಲ್ಲಿ ಭತ್ತದ ಬಿತ್ತನೆ ಬೀಜಗಳಾದ ಆರ್‌ಎನ್‌ಆರ್ ತಳಿಯ 100 ಕ್ವಿಂಟಲ್, ಎಂಟಿಯು 1010 ತಳಿಯ 120 ಕ್ವಿಂಟಲ್, 1001 300 ಕ್ವಿಂಟಲ್ ಭತ್ತದ ಬೀಜಗಳು ದಾಸ್ತಾನು ಇದೆ.

ಮೆಕ್ಕೆಜೋಳ ಸಿಪಿ555 ತಳಿ, ಸಿಪಿ 818 ತಳಿ ಮತ್ತು ಸಿಪಿ 201ತಳಿ ಸೇರಿದಂತೆ ವಿವಿಧ ಕಂಪನಿ ತಳಿ ಸೇರಿ 17,400 ಕೆಜಿ ಬಿತ್ತನೆ ಬೀಜ ದಾಸ್ತನು ಇದ್ದು ಬೇಡಿಕೆಯಂತೆ ಹಂತ ಹಂತವಾಗಿ ಬಿತ್ತನೆ ಬೀಜಗಳು ಬರಲಿವೆ. ಕೃಷಿ ಇಲಾಖೆಯಿಂದ ಅಧಿಕೃತವಾಗಿ ರಸಗೊಬ್ಬರ ಮಾರಾಟಕ್ಕೆ ಪರವಾನಗಿ ಪಡೆದುಕೊಂಡವರು ರಸಗೊಬ್ಬರವನ್ನು ಮಾರಾಟಕ್ಕೆ ದಾಸ್ತಾನು ಇಟ್ಟಿದ್ದಾರೆ. ಇದರಲ್ಲಿ1302 ಮೆಟ್ರಿಕ್ ಟನ್ ದಾಸ್ತನು ಇದೆ ಎಂದು ಕೃಷಿ ಅಧಿಕಾರಿಗಳು ತಿಳಿಸಿದ್ದಾರೆ.



ತಾಲೂಕಿನಲ್ಲಿ ಕೆಲ ದಿನಗಳ ಹಿಂದೆ ಮಳೆಯಾಗಿದ್ದರಿಂದ ರೈತರು ಗದ್ದೆಗಳನ್ನು ಹದಗೊಳಿಸಿದ್ದಾರೆ. ರೈತ ಸಂಪರ್ಕ ಕೇಂದ್ರಗಳಲ್ಲಿ ಭತ್ತ ಹಾಗೂ ಮೆಕ್ಕೆಜೋಳ ವಿವಿಧ ತಳಿಯ ಬಿತ್ತನೆ ಬೀಜ ದಾಸ್ತಾನು ಮಾಡಲಾಗುತ್ತಿದೆ. ಇನ್ನೂ ಉಳಿದ ಬಿತ್ತನೆ ಬೀಜ ಹಂತ ಹಂತವಾಗಿ ಬರಲಿವೆ.

■ **ಕೆ.ಎನ್ ಮಹಾರೆಡ್ಡಿ,**
ಕೃಷಿ ಇಲಾಖೆ ಸಹಾಯಕ ನಿರ್ದೇಶಕ

ಕೆಲ ದಿನಗಳಿಂದ ಮಳೆ ಬೀಳುತ್ತಿರುವುದ್ದರಿಂದ ಕೃಷಿ ಚುವಟಿಕೆಗೆ ಅನೂಕುಲಕರವಾಗಿದೆ. ಹೀಗಾಗಿ ಗದ್ದೆಗಳನು ಸ್ವಚ್ಛಗೊಳಿಸಿ ಹದ ಮಾಡಿದ್ದೇವೆ. ಬಿತ್ತನೆಗಾಗಿ ಭತ್ತದ ಬೀಜ ಖರೀದಿ ಮಾಡಲು ಕೃಷಿ ಇಲಾಖೆಗೆ ಬಂದಿದ್ದೇನೆ.

■ **ದುರ್ಗಪ್ಪ ಭೋವಿ ವಡ್ಡರ,**
ಕೊಪ್ಪಾ ಗ್ರಾಮದ ರೈತ

ಕಿರುಸುದ್ದಿ

ಮೇ 25ರಂದು ಸಂದರ್ಶನ

◆**ಗುತ್ತಲ:** ಸಮೀಪದ ನೆಗಳೂರ ಗ್ರಾಮದ ಶ್ರೀ ಗುರುಶಾಂತೇಶ್ವರ ಸಂಸ್ಥಾನ ಹಿರೇಮಠದ ಜಗದ್ಗುರು ಪಂಚಾಚಾರ್ಯ ಧಾರ್ಮಿಕ ಪಾಠಶಾಲೆಗೆ ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ 8ನೇ ತರಗತಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಪ್ರವೇಶ ಪ್ರಾರಂಭವಾಗಿವೆ. ಮೇ 23 ಹೆಸರು ನೋಂದಾಯಿಸಿಕೊಳ್ಳಲು ಕೊನೆಯ ದಿನವಾಗಿದೆ. ಮೇ 25ರಂದು ನೋಂದಾಯಿಸಿಕೊಂಡ ವಿದ್ಯಾರ್ಥಿಗಳಿಗೆ ಮಠದಲ್ಲಿ ಬೆಳಗ್ಗೆ 10 ಗಂಟೆಗೆ ಸಂದರ್ಶನವಿರುತ್ತದೆ. ಸಂದರ್ಶನದಲ್ಲಿ ಆಯ್ಕೆಯಾದ 15 ವಿದ್ಯಾರ್ಥಿಗಳಿಗೆ ಮಾತ್ರ ಮಠದಲ್ಲಿ ಆಶ್ರಯ ನೀಡಿ ವೇದ, ಸಂಸ್ಕೃತ, ಜ್ಯೋತಿಷ್ಯ, ಸಂಗೀತ ವಿಷಯಗಳ ಕುರಿತು ಮೂರು ವರ್ಷಗಳ ಕಾಲ ಶಾಲಾ ಶಿಕ್ಷಣದ ಜೊತೆಗೆ ಧಾರ್ಮಿಕ ಶಿಕ್ಷಣ ಪಡೆಯಲು ಅವಕಾಶವಿದ್ದು ಆಸಕ್ತ ವಿದ್ಯಾರ್ಥಿಗಳು ಅಂತಿಮ ದಿನಾಂಕದೊಳಗಾಗಿ ಹೆಸರು ನೋಂದಾಯಿಸಿಕೊಂಡು ಸಂದರ್ಶನದಲ್ಲಿ ಭಾಗವಹಿಸಬಹುದು ಎಂದು ತಿಳಿಸಿದ್ದಾರೆ.

ಮೆಟ್ರಿಕ್ ಪೂರ್ವ ಹಾಸ್ಟೆಲ್‌ಗೆ ಅರ್ಜಿ ಆಹ್ವಾನ

◆**ಹಾವೇರಿ:** ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲೆಯ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಹೊಸದಾಗಿ ಪ್ರವೇಶಕ್ಕೆ ವಿದ್ಯಾರ್ಥಿಗಳಿಂದ 2026–27ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಪ್ರವರ್ಗ–1, ಎಸ್.ಸಿ. ಮತ್ತು ಎಸ್.ಟಿ. ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂ.2.50 ಲಕ್ಷದೊಳಗೆ ಹಾಗೂ ಪ್ರವರ್ಗ–2ಎ, 2ಬಿ, 3ಎ, 3ಬಿ ವರ್ಗದವರ ಆದಾಯ ರೂ. ಒಂದು ಲಕ್ಷದೊಳಗಿರಬೇಕು. ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಜೂ.8ರೊಳಗಾಗಿ ವೆಬ್‌ಸೈಟ್ https://shp.karnataka.gov.in/ bcwd ನಲ್ಲಿ ಅರ್ಜಿ ಸಲ್ಲಿಸಬೇಕು. ತಾಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ https://bcwd.karnataka.gov.in ಅನ್ನು ನೋಡಬಹುದು. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline@gmail.com ಇ–ಮೇಲ್ ಮುಖಾಂತರ ಅಥವಾ ಜಿಲ್ಲಾ, ತಾಲೂಕು ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಬೇಕು. ಎಂದು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

◆**ಹಾವೇರಿ:** ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಹೊಸದಾಗಿ ಪ್ರವೇಶಕ್ಕೆ ಪಿಯುಸಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ 2026–27ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಪ್ರವರ್ಗ–1, ಎಸ್.ಸಿ. ಮತ್ತು ಎಸ್.ಟಿ. ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂ.2.50 ಲಕ್ಷದೊಳಗೆ ಹಾಗೂ ಪ್ರವರ್ಗ–2ಎ, 2ಬಿ, 3ಎ, 3ಬಿ ವರ್ಗದವರ ಆದಾಯ ರೂ. ಒಂದು ಲಕ್ಷದೊಳಗಿರಬೇಕು. ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಜೂ.15ರೊಳಗಾಗಿ ವೆಬ್‌ಸೈಟ್ https://shp.karnataka.gov.in/ bcwdನಲ್ಲಿ ಅರ್ಜಿ ಸಲ್ಲಿಸಬೇಕು. ತಾಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ https://bcwd.karnataka.gov.inಅನ್ನು ನೋಡಬಹುದು. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwd-helpline@gmail.com ಇ–ಮೇಲ್ ಮುಖಾಂತರ ಅಥವಾ ಜಿಲ್ಲಾ, ತಾಲೂಕು ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಬೇಕು ಎಂದು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿದ್ದಪ್ಪ ಮುತ್ತಣ್ಣವರ ನಿಧನ

◆**ನವಲಗುಂದ:** ತಾಲೂಕಿನ ಗುಡಿಸಾಗರ ಗ್ರಾಮದ ಕುರುಬ ಸಮಾಜದ ಹಿರಿಯ ಶಿದ್ದಪ್ಪ ಚಂ. ಮುತ್ತಣ್ಣವರ (75 ವರ್ಷ) ಮಂಗಳವಾರ ರಾತ್ರಿ ನಿಧನರಾದರು.



ಶಿಕ್ಷಕ ಶಿವಾನಂದ ಮುತ್ತಣ್ಣವರ ಇವರ ಪುತ್ರರಾಗಿದ್ದು, ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಇವರ ನಿಧನಕ್ಕೆ ಶಾಸಕ ಎನ್. ಎಚ್. ಕೋನರಡ್ಡಿ, ಮಾಜಿ ಸಚಿವರಾದ ಕೆ. ಎನ್. ಗಡ್ಡಿ, ಶಂಕರ ಪಾಟೀಲ ಮುನೇನಕೊಪ್ಪ, ಮುಖಂಡರಾದ ವಿನೋದ ಅಸೂಟಿ, ದೇವರಾಜ ದಾಡಿಬಾವಿ ಸೇರಿದಂತೆ ಕುರುಬ ಸಮಾಜದ ಬಾಂಧವರು, ಗ್ರಾಮಸ್ಥರು ಸಂತಾಪ ಸೂಚಿಸಿದ್ದಾರೆ.



ರಾಣೇಬೆನ್ನೂರ: ತಾಲೂಕಿನ ಕಾಕೋಳ ಗ್ರಾಪಂ ವ್ಯಾಪ್ತಿಯಲ್ಲಿ ನರೇಗಾ ಕೂಲಿ ಕಾರ್ಮಿಕರು ನರೇಗಾ ಯೋಜನೆ ಅಡಿ ಸುಮಾರು ನಾಲ್ಕು ಲಕ್ಷ ಅನುದಾನದಲ್ಲಿ ಕಾಕೋಳ ಕದರ ಮಂಡಲಗಿ ರಸ್ತೆ ಅವಧಿ ನೀರುಗಾಲ್ವೆ ಕಾಮಗಾರಿಯನ್ನು ಪಿಡಿಒ ಅಶೋಕ್ ಪೂಜಾರ ವೀಕ್ಷಿಸಿದರು.

ಅರ್ಹತಾ ಪಟ್ಟಿ ಪ್ರಕಟ, ಆಕ್ಷೇಪಣೆಗೆ ಅವಕಾಶ

◆**ಹಾವೇರಿ:** ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ 'ಸಹಾಯಕ ಸಂಚಾರ ನಿರೀಕ್ಷಕ' ಹುದ್ದೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಹೊರಡಿಸಿದ ಅಧಿಸೂಚನೆ ಸಂಖ್ಯೆ: ಇಡಿ, ಕೆಇಎ, ಆಡಳಿತ, ಸಿ.ಆರ್.04/2025 (ಆರ್ ಪಿಸಿ) ದಿ: 08–10–2025 ರನ್ವಯ ಅರ್ಜಿ ಸಲ್ಲಿಸಿ ದೈಹಿಕ ಅರ್ಹತೆ, ಮೂಲ ದಾಖಲಾತಿ ಪರಿಶೀಲನೆಗೆ ಅರ್ಹರಾದ ಸಂಭವನೀಯ ಅಭ್ಯರ್ಥಿಗಳ Cut-off Percentage ವಿವರಗಳನ್ನು ಸಂಸ್ಥೆಯ ವೆಬ್‌ಸೈಟ್ ವಿಳಾಸ NWKRTC ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಲಾಗಿದೆ.ಈ ಅರ್ಹತಾ ಪಟ್ಟಿಯಲ್ಲಿ ಸೇರ್ಪಡೆಗೊಂಡಿರುವ ಕೊನೆಯ ಅಭ್ಯರ್ಥಿಗಳ ಶೇಕಡಾವಾರು ಅಂಕಗಳು (Cut-offPercentage) ಮತ್ತು ಹುಟ್ಟಿದ ದಿನಾಂಕದ ವಿವರಗಳು ಲಭ್ಯವಿರುತ್ತವೆ. ಅರ್ಹತಾ ಪಟ್ಟಿಯಲ್ಲಿ ಸೇರ್ಪಡೆಯಾಗಿರುವ ಅಭ್ಯರ್ಥಿಗಳು ದೈಹಿಕ ಅರ್ಹತೆ, ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾಗಲು ಅನುವಾಗುವಂತೆ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ನೋಂದಣಿ ಸಂಖ್ಯೆ, ಜನ್ಮ ದಿನಾಂಕವನ್ನು ನಮೂದಿಸಿ ಕರೆಪತ್ರವನ್ನು ಮೇ 24ರಿಂದ ಮುದ್ರಿಸಿಕೊಂಡು ಕರೆಪತ್ರದಲ್ಲಿ ಸೂಚಿಸಲಾದ ಸ್ಥಳ, ದಿನಾಂಕ ಮತ್ತು ಸಮಯಕ್ಕೆ ಸರಿಯಾಗಿ ಸಂಬಂಧಿಸಿದ ಮೂಲ ದಾಖಲಾತಿಗಳೊಂದಿಗೆ ತಪ್ಪದೇ ಹಾಜರಾಗಲು ಸೂಚಿಸಲಾಗಿದೆ. ಈ ಅರ್ಹತಾ ಪಟ್ಟಿಗೆ ಆಕ್ಷೇಪಣೆಗಳಿದ್ದಲ್ಲಿ ಅಭ್ಯರ್ಥಿಗಳು ಈ ಕುರಿತು ಮೇ 23ರೊಳಗಾಗಿ ಆನ್‌ಲೈನ್ ಮೂಲಕ ಅಥವಾ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಅಧ್ಯಕ್ಷರು, ಆಯ್ಕೆ ಸಮಿತಿ, ವಾಕರಸಾ ಸಂಸ್ಥೆ, ಗೋಕುಲ ರಸ್ತೆ, ಹುಬ್ಬಳ್ಳಿ ಇವರಿಗೆ ಖುದ್ದಾಗಿ ಲಿಖಿತ ಆಕ್ಷೇಪಣೆಯನ್ನು ಸಲ್ಲಿಸಬೇಕು. ನಿಗದಿತ ದಿನಾಂಕ ಮತ್ತು ಸಮಯದ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವದಿಲ್ಲವೆಂದು ಸಂಸ್ಥೆಯು ಪ್ರಕಟಣೆಯಲ್ಲಿ ತಿಳಿಸಿದೆ.



ಹಾವೇರಿ:ಆನ್‌ಲೈನ್ ಹಾಗೂ ಇ–ಫಾರ್ಮಸಿ ಮೂಲಕ ಔಷಧ ವ್ಯಾಪಾರ ನಡೆಸುತ್ತಿರುವುದನ್ನು ಖಂಡಿಸಿ ಜಿಲ್ಲಾ ಔಷಧ ವ್ಯಾಪಾರಿಗಳ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಆನ್‌ಲೈನ್ ಔಷಧಿ ಮಾರಾಟ ವಿರೋಧಿಸಿ ಪ್ರತಿಭಟನೆ

◆**ಹಾವೇರಿ:** ಆನ್‌ಲೈನ್ ಹಾಗೂ ಇ–ಫಾರ್ಮಸಿ ಮೂಲಕ ಔಷಧ ವ್ಯಾಪಾರ ಖಂಡಿಸಿ ಜಿಲ್ಲಾ ಔಷಧ ವ್ಯಾಪಾರಿಗಳ ಸಂಘದ ಪದಾಧಿಕಾರಿಗಳು ಜಿಲ್ಲೆಯಾದ್ಯಂತ ಔಷಧಿ ಅಂಗಡಿಗಳನ್ನು ಬಂದ್ ಮಾಡಿ ಬುಧವಾರ ಒಂದು ದಿನದ ಸಾಂಕೇತಿಕ ಪ್ರತಿಭಟನೆ ನಡೆಸಿದರು.

ಇಲ್ಲಿನ ಪುರಸಿದ್ದೇಶ್ವರ ದೇವಸ್ಥಾನದಿಂದ ಪ್ರತಿಭಟನಾ ಮೆರವಣಿಗೆ ಆರಂಭಿಸಿ, ಎಂ.ಜಿ. ರಸ್ತೆ ಮೂಲಕ ಸಾಗಿ ಹುತಾತ್ಮ ಮೈಲಾರ ಮಹದೇವಪ್ಪ ವೃತ್ತವನ್ನು ತಲುಪಿದರು. ಆನ್‌ಲೈನ್ ಮೂಲಕ ಔಷಧಿ ಮಾರಾಟಕ್ಕೆ ಕೇಂದ್ರ ಸರ್ಕಾರ ಅವಕಾಶ ಕಲ್ಪಿಸಿದ್ದರ ವಿರುದ್ಧ ಪ್ರತಿಭಟನಾಕಾರರು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಔಷಧ ವ್ಯಾಪಾರಿಗಳ ಸಂಘದ ಅಧ್ಯಕ್ಷ ಸತ್ಯನಾರಾಯಣ ಕೇಲಗಾರ ಮಾತನಾಡಿ, ಅಖಿಲ ಭಾರತ ಔಷಧ ವ್ಯಾಪಾರಿಗಳ ಸಂಘದ ಕರೆಯಂತೆ ದೇಶಾದ್ಯಂತ ಎಲ್ಲ ಔಷಧ ವ್ಯಾಪಾರ ಮಳಿಗೆ ಬಂದ್ ಮಾಡಿದ್ದು, ಹಾವೇರಿ ಜಿಲ್ಲೆಯಲ್ಲೂ ಸ್ವಯಂಪ್ರೇರಿತವಾಗಿ ಅಂಗಡಿಗಳನ್ನು ಬಂದ್ ಮಾಡಿ ಪ್ರತಿಭಟನೆಗೆ ಬೆಂಬಲ ಸೂಚಿಸಿದ್ದೇವೆ. ದೇಶದಲ್ಲಿ ನಡೆಯುತ್ತಿರುವ ಆನ್‌ಲೈನ್ ಔಷಧ ವ್ಯಾಪಾರ ನಿಲ್ಲಿಸಬೇಕು. ಕೇಂದ್ರ ಸರ್ಕಾರ ಕೋವಿಡ್ ಸಮಯದಲ್ಲಿ ಹೊರಡಿಸಿದ್ದ ಆದೇಶಗಳನ್ನು ಹಿಂಪಡೆಯಬೇಕು. ಕಾರ್ಪೋರೇಟ್ ಕಂಪನಿಗಳಿಂದ ನಡೆಯುತ್ತಿರುವ ವಿನಾಯಿತಿ (ಡಿಸ್ಕೌಂಟ್) ವ್ಯಾಪಾರ ನಿಲ್ಲಿಸಬೇಕು. ನಕಲಿ ಔಷಧಿಗಳ ಹಾವಳಿ ನಿಲ್ಲಿಸಿ ಸರಳ ಕಾನೂನುಗಳಿಂದ ಔಷಧ ವ್ಯಾಪಾರಿಗಳನ್ನು ರಕ್ಷಿಸಬೇಕೆಂದು ಒತ್ತಾಯಿಸಿದರು.

ಆನ್‌ಲೈನ್‌ನಲ್ಲಿ ವೈದ್ಯರ ಚೀಟಿ ಇಲ್ಲದೆ ಅಥವಾ ಒಂದೇ ಚೀಟಿ ಬಳಸಿ ಪದೇ ಪದೇ ಔಷಧ ಖರೀದಿ ಮಾಡುವುದರಿಂದ ಅಪಾಯ ಹೆಚ್ಚಿದೆ ಎಂದು ಎಚ್ಚರಿಸಿದ ಅವರು, ಇ–ಫಾರ್ಮಸಿಗಳ ಮೇಲೆ



ಮೆಡಿಕಲ್ ಶಾಪ್ ಬಂದ್
ಪ್ರತಿಭಟನೆಯ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿರುವ ಬಹುತೇಕ ಮೆಡಿಕಲ್ ಶಾಪ್‌ಗಳು ಬಾಗಿಲು ಹಾಕಿದ್ದವು. ಹೀಗಾಗಿ ಅಗತ್ಯ ಔಷಧಿಗಳನ್ನು ಖರೀದಿಸಲು ಗ್ರಾಹಕರು ಪರದಾಡುವಂತಾಯಿತು. ಜಿಲ್ಲಾಸ್ಪತ್ರೆ ಸೇರಿದಂತೆ ಸರ್ಕಾರಿ ಆಸ್ಪತ್ರೆಗಳ ಮೆಡಿಕಲ್ ಶಾಪ್‌ಗಳು ಎಂದಿನಂತೆ ಕಾರ್ಯನಿರ್ವಹಿಸಿದವು. ಅಗತ್ಯ ಔಷಧಿಗಳನ್ನು ಖರೀದಿಸಲು ಗ್ರಾಹಕರು ಜನೌಷಧಿ ಕೇಂದ್ರಗಳತ್ತ ಮುಖ ಮಾಡುವುದು ಸಾಮಾನ್ಯವಾಗಿತ್ತು.

ಸರ್ಕಾರದಿಂದ ಸರಿಯಾದ ನಿಯಂತ್ರಣವಿಲ್ಲ. ನಾವು ಯಾರಿಗೆ ಎಷ್ಟು ಔಷಧ ಮಾರಾಟ ಮಾಡಿದ್ದೇವೆ ಎಂಬ ಮಾಹಿತಿಯನ್ನು ಸಂಬಂಧಿಸಿದ ಇಲಾಖೆಗೆ ನೀಡುತ್ತೇವೆ. ಆದರೆ ಆನ್‌ಲೈನ್ ಪ್ಲಾಟ್ ಫಾರ್ಮ್‌ಗಳು ಔಷಧ ಮಾರಾಟದ ಯಾವುದೇ ಮಾಹಿತಿ ನೀಡುವುದಿಲ್ಲ. ಹಾಗಾಗಿ ಸರ್ಕಾರ ಆನ್‌ಲೈನ್ ಹಾಗೂ ಇ–ಫಾರ್ಮಸಿ ಮೂಲಕ ಔಷಧ ವ್ಯಾಪಾರ ನಡೆಸುತ್ತಿರುವುದನ್ನು ನಿಲ್ಲಿಸಬೇಕೆಂದು ಆಗ್ರಹಿಸಿದರು.

ಜಿಲ್ಲಾ ಔಷಧ ವ್ಯಾಪಾರಿಗಳ ಸಂಘದ ಉಪಾಧ್ಯಕ್ಷ ಶರದ ಕುದರಿ ಮಾತನಾಡಿ, ಜಿಲ್ಲೆಯಲ್ಲಿ 700 ಔಷಧ ಮಾರಾಟ ಮಳಿಗೆಗಳು ನೋಂದಣಿಯಾಗಿದ್ದು, ಪ್ರಸ್ತುತ 600ಕ್ಕೂ ಅಧಿಕ ಮಳಿಗೆಗಳು ಕಾರ್ಯನಿರ್ವಹಿಸುತ್ತಿವೆ. ಮಧ್ಯಪ್ರಾಚ್ಯ ಯುದ್ಧದ ಪರಿಣಾಮ ಸಾಗಾಟದಲ್ಲಿ ವಿಳಂಬದಿಂದ ಅಗತ್ಯ ಔಷಧಗಳ ಕಚ್ಚಾವಸ್ತುಗಳ ಬೆಲೆ ಏರಿಕೆಯಾಗಿವೆ. ಜತೆಗೆ ದರದಲ್ಲಿ ಶೇ.10ರಷ್ಟು ಹೆಚ್ಚಳವಾಗಿದೆ. ಸರ್ಕಾರಗಳು ಆನ್‌ಲೈನ್ ಹಾಗೂ ಇ–ಫಾರ್ಮಸಿ ಮೂಲಕ ಔಷಧ ವ್ಯಾಪಾರ ನಡೆಸುವುದನ್ನು ನಿಯಂತ್ರಿಸಿ ಔಷಧ ವ್ಯಾಪಾರಿಗಳಿಗೆ ಬಲ ತುಂಬುವ ಕೆಲಸ ಮಾಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆ ಬಳಿಕ ತಹಶೀಲ್ದಾರ ಕಚೇರಿ ಅಧಿಕಾರಿಗಳ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಜಿಲ್ಲಾ ಔಷಧ ವ್ಯಾಪಾರಿಗಳ ಸಂಘದ ಕಾರ್ಯದರ್ಶಿ ರಾಜೇಂದ್ರ ಇರಕಲ್ಲ, ಖಜಾಂಚಿ ರಾಜೇಶ್ ಲೊಡಾಯಿ, ಹಾವೇರಿ ತಾಲೂಕು ಔಷಧ ವ್ಯಾಪಾರಿಗಳ ಸಂಘದ ಅಧ್ಯಕ್ಷ ಸಿದ್ದಣ್ಣ ಮೆಣಸಿನಹಾಳ, ಹಾವೇರಿ ತಾಲೂಕು ಔಷಧ ಸಂಘದ ಕಾರ್ಯದರ್ಶಿ ಸುಬ್ರಮಣ್ಯ ಉದಗಟ್ಟಿ, ನೀಲಕಂಠ ನಾಡಿಗೇರ, ಗೋಪಣ್ಣ, ಹನುಮಂತ ಕಲಾಲ, ಬಿ.ಎಸ್. ಪಾಟೀಲ, ಆದರ್ಶ ಬಶೆಟ್ಟಿ ಸೇರಿದಂತೆ ಅನೇಕ ವ್ಯಾಪಾರಿಗಳು ಹಾಜರಿದ್ದರು.

ಅಂಧರಿಗೆ ಪ್ರೋತ್ಸಾಹ ನೀಡಿ: ಲಮಾಣಿ

◆**ರಾಣೇಬೆನ್ನೂರ:** ಅಂಧರನ್ನು ಸಮಾಜದಮುಖ್ಯವಾಹಿನಿಗೆತರಬೇಕಾದರೆ ಸಮಾಜದಲ್ಲಿ ಎಲ್ಲರ ಸಹಕಾರ ಅಗತ್ಯವಿದೆ. ದೇವರು ಅವರಿಗೆ ವಿಶಿಷ್ಟವಾದ ಶಕ್ತಿಯನ್ನು ನೀಡಿದ್ದು, ಅವರಿಗೆ ಸಾಧಿಸುವ ಛಲ ಅಪಾರವಾಗಿರುತ್ತದೆ. ಅವರಿಗೆ ಪ್ರೋತ್ಸಾಹ ನೀಡಿದಲ್ಲಿ, ಅವರು ಎಲ್ಲಾ ಸವಾಲುಗಳನ್ನು ಎದುರಿಸಬಲ್ಲರು ಎಂದು ಉಪಸಭಾಪತಿ ರುದ್ರಪ್ಪ ಲಮಾಣಿ ಹೇಳಿದರು.

ನಗರದ ಬಿ.ಎ.ಜೆ.ಎಸ್.ಎಸ್ ಮಹಾವಿದ್ಯಾಲಯದಲ್ಲಿ ಜ್ಞಾನವಂದನಾ ಸಂಸ್ಥೆಯಿಂದ ಏರ್ಪಡಿಸಿದ ಸ್ಪರ್ಧಾತ್ಮಕ ಪರೀಕ್ಷೆಗಳ ಆಫ್‌ಲೈನ್ ತರಗತಿ ವಿದ್ಯಾರ್ಥಿಗಳ ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ರಾಮಕೃಷ್ಣಾಶ್ರಮದ ಪ್ರಕಾಶಾನಂದಜಿ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಶಾಸಕ ಪ್ರಕಾಶ ಕೋಳಿವಾಡ, ಸಂಸ್ಥೆಯ ಆಡಳಿತಾಧಿಕಾರಿ ಆರ್.ಎಂ.ಕುಬೇರಪ್ಪ ಮಾತನಾಡಿದರು.

ಜಿ.ಎಂ ಬತ್ತಿಕೊಪ್ಪದ, ರವೀಂದ್ರಗೌಡ ಪಾಟೀಲ, ಕೆ.ಸಿ ನಾಗರಜ್ಜಿ, ರುಕ್ಮೀಣಿ ಸಾಹುಕಾರ, ವಿ.ಎಸ್. ಹಿರೇಮಠ, ಪರಮೇಶಯ್ಯ ಮಠದ, ವೀರಯ್ಯಾ ಹೊಳಗುಂದಿಮಠ, ರಾಮಚಂದ್ರರೆಡ್ಡಿ ಬಜರೆಡ್ಡಿ, ಕೃಷ್ಣಸಾ ಲದ್ವ, ಅಚ್ಯುತನಾಯಕ, ಕುಮಾರ ಸಿ, ಗಣೇಶ ಅರ್ಕಾಚಾರಿ, ಬಿ.ಕೆ ರಾಜನಹಳ್ಳಿ, ಪ್ರಭು ಅರ್ಕಾಚಾರಿ ಸೇರಿದಂತೆ ಮತ್ತಿತರರು ಇದ್ದರು.



ರಾಣೇಬೆನ್ನೂರ: ನಗರದ ಬಿ.ಎ.ಜೆ.ಎಸ್.ಎಸ್ ಮಹಾವಿದ್ಯಾಲಯದಲ್ಲಿ ಜ್ಞಾನವಂದನಾ ಸಂಸ್ಥೆಯಿಂದ ಏರ್ಪಡಿಸಿದ ಸ್ಪರ್ಧಾತ್ಮಕ ಪರೀಕ್ಷೆಗಳ ಆಫ್‌ಲೈನ್ ತರಗತಿ ವಿದ್ಯಾರ್ಥಿಗಳ ಸಮಾರೋಪ ಸಮಾರಂಭ ಉಪಸಭಾಪತಿ ರುದ್ರಪ್ಪ ಲಮಾಣಿ ಉದ್ಘಾಟಿಸಿದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

◆**ಬ್ಯಾಡಗಿ:** ತಾಲೂಕಿನಲ್ಲಿ 2025–26 ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ 90 % ಕ್ಕಿಂತ ಹೆಚ್ಚಿಗೆ ಅಂಕ ಪಡೆದ ಲಿಂಗಾಯತವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರವನ್ನು ಹಮ್ಮಿಕೊಂಡಿದ್ದು, ಆನ್‌ಲೈನ್ ಮೂಲಕ ಅರ್ಜಿಯನ್ನು ವೆಬ್‌ಸೈಟ್ www.aivlm.org ಮೂಲಕ ಮೇ 25ರ ಒಳಗಾಗಿ ಅರ್ಜಿ ಸಲ್ಲಿಸಬೇಕು ಎಂದು ತಾಲೂಕು ಘಟಕದ ಅಧ್ಯಕ್ಷ ವಿಶ್ವನಾಥ ಅಂಕಲಕೋಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಪಂ ಕಟ್ಟಡ ಕಾಮಗಾರಿ ಅಪೂರ್ಣ: ಮುದಿಯಪ್ಪನವರ

◆**ರಟ್ಟೀಹಳ್ಳಿ:** ರಟ್ಟೀಹಳ್ಳಿ ಪಟ್ಟಣದ ನೂತನ ಪಟ್ಟಣ ಪಂಚಾಯತ ಕಾರ್ಯಾಲಯದ ಕಟ್ಟಡ ಎರಡು ವರ್ಷಗಳಿಂದ ಕಾಮಗಾರಿ ನಡೆಯುತ್ತಿದ್ದು ಇನ್ನೂ ಅಪೂರ್ಣವಾಗಿ ಉಳಿದಿದೆ. ಕಟ್ಟಡ ಕಾಮಗಾರಿ ಪೂರ್ಣವಾಗದೇ ಇರುವುದರಿಂದ ಪಟ್ಟಣದ ಅಭಿವೃದ್ಧಿ ಮರೀಚಿಕೆಯಾಗಿದೆ. 2 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ಪ್ರಾರಂಭವಾಗಿದ್ದು, ಇನ್ನೂ ಏಕೆ ಮುಗಿದಿಲ್ಲ ಎಂಬುದು ಪ್ರಶ್ನೆಯಾಗಿದೆ ಎಂದು ಪಪಂ ಅಧ್ಯಕ್ಷ ರವೀಂದ್ರ ಮುದಿಯಪ್ಪನವರ ಆರೋಪಿಸಿದರು.

ಪಟ್ಟಣಪಂಚಾಯತಕಾರ್ಯಾಲಯದಲ್ಲಿ ಸುದ್ದಿಗಾರರನ್ನು ಉದ್ದೇಶಿಸಿ ಮಾತನಾಡಿದ ಅವರು, ಪಟ್ಟಣದಲ್ಲಿ ಅನೇಕ ಅಭಿವೃದ್ಧಿಗಳು ಪ್ರಾರಂಭವಾಗಿ ತಿಂಗಳು, ವರ್ಷಗಳೇ ಉರುಳಿವೆ. ಆದರೆ ಇನ್ನೂ ಪೂರ್ಣವಾಗಿಲ್ಲ. ಪಪಂ ಕಟ್ಟಡ ಕಾಮಗಾರಿ ಕಳೆದ 10 ತಿಂಗಳಿನಿಂದ ಅರ್ಧಕ್ಕೆ ನಿಂತಿದೆ. ಕೂಡಲೇ ಅಧಿಕಾರಿಗಳು ಗಮನ ಹರಿಸಿ ಕಾಮಗಾರಿ ಪೂರ್ಣಗೊಳಿಸಬೇಕು.

ಕುಡಿಯುವ ನೀರಿನ ಕಾಮಗಾರಿ ಪ್ರಾರಂಭವಾಗಿ ವರ್ಷಗಳು ಕಳೆದಿವೆ. ಎಲ್ಲ ಕಡೆ ರಸ್ತೆಯ ಬದಿಗೆ ಪೈಪುಗಳನ್ನು ಹಾಕಿದ್ದಾರೆ. ಆದರೆ ರಸ್ತೆ ಅಗೆದಿದ್ದು ಅದನ್ನು ಸರಿಪಡಿಸಿಲ್ಲ. 4 ಓವರ್ ಹೆಡ್ ಟ್ಯಾಂಕ್ ಕಟ್ಟಲು ಸ್ಥಳ ನೀಡಲಾಗಿದೆ ಆದರೂ ಇನ್ನೂ ಕಟ್ಟಿಲ್ಲ. ಗುತ್ತಿಗೆದಾರರು ತ್ವರಿತ ಗತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು. ರಾಷ್ಟ್ರೀಯ ಹೆದ್ದಾರಿ 766 ಸಿ.ರಸ್ತೆಯ ಎರಡೂ ಬದಿಗೆ ಹೈಮಾಸ್ಟ ದೀಪ ಅಳವಡಿಸಿದರೂ ಪ್ರಯೋಜನವಾಗಿಲ್ಲ ಎಂದರು.

ಈ ಸಂದರ್ಭದಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷ ಬಸವರಾಜ ಆಡಿನವರ, ಸದಸ್ಯ ರವಿ ಹದಡೇರ ಹಾಗೂ ಪಪಂ ಸಿಬ್ಬಂದಿ ಉಪಸ್ಥಿತರಿದ್ದರು.



ಕೆರೆಯ ತೂಬಿಗೆ ಗೇಟ್ ಅಳವಡಿಕೆಗೆ ಆಗ್ರಹ

▶ಸಂತೋಷ ಪವಾರ

◆**ರಟ್ಟೀಹಳ್ಳಿ:** ತಾಲೂಕಿನ ಚೋಕನಾಳ ಗ್ರಾಮದ ಬಳಿಯಿರುವ ಭಗವತಿ ಕೆರೆ ತನ್ನ ಪ್ರಕೃತಿ ಸೌಂದರ್ಯದ ಮೂಲಕ ಬಿರು ಬೇಸಿಗೆಯಲ್ಲೂ ಎಲ್ಲರನ್ನೂ ತನ್ನತ್ತ ಕೈಬೀಸಿ ಸೆಳೆಯುತ್ತಿದೆ. ತಾಪಮಾನ ದಿನದಿಂದ ದಿನಕ್ಕೆ ಏರುತ್ತಲೇ ಇದೆ ಆದರೂ ಇಲ್ಲಿನ ವಾತಾವರಣ ಮಾತ್ರ ಸದಾಕಾಲ ತಂಪಾಗಿದೆ.



ದಿಗಂತ ವಿಶೇಷ

ಬೆಟ್ಟಗುಡ್ಡಗಳಿಂದ ಸುತ್ತುವರೆದ ಪ್ರದೇಶವಾಗಿದೆ. ಬೇಸಿಗೆಯಲ್ಲಿ ಎಲ್ಲೆಲ್ಲೂ ನೀರಿನ ಬರ ಎದುರಾದರೆ ಇಲ್ಲಿ ಮಾತ್ರ ನೀರಿನ ಚಿಲುಮೆ ಸದಾಕಾಲವಿರುತ್ತದೆ. ಅನೇಕ ವರ್ಷಗಳಿಂದ ನೀರಿನ ಸೆಲೆ ಕಾಲುವೆಯ ಮೂಲಕ ಹರಿಯುತ್ತಿತ್ತು.ಭಗವತಿ ಕೆರೆ ಎಂದು ಹೋದ ಪ್ರವಾಸಿಗರಿಗೆ ನಿರಾಶೆ ಕಾಯುತ್ತಿತ್ತು. ಕೇವಲ ಕಾಲುವೆಯನ್ನು ನೋಡಿ ಕೆರೆಯೆಂದರೆ ಹೇಗೆ ಎಂಬ ಪ್ರಶ್ನೆ ಉದ್ಭವಿಸುತ್ತಿತ್ತು.ಆದರೆ ನೀರಿನ ಸೆಲೆ ಮಾತ್ರ ಎಂದಿಗೂ ಬತ್ತುತ್ತಿಲ್ಲ. ಭಗವತಿಕೆರೆ ಅಭಿವೃದ್ಧಿ ಮಾಡಬೇಕೆಂದು ಹತ್ತಾರು ವರ್ಷಗಳ ಹಿಂದೆ ಕಾಮಗಾರಿ ಪ್ರಾರಂಭ ಮಾಡಲಾಗಿತ್ತು.

ಆಸಮಯದಲ್ಲಿಇಲ್ಲಿನನೀರುಕೆಂಪಾಗಿ ಗೋಚರ ವಾಗಲು ಪ್ರಾರಂಭವಾಯಿತು. ಭಗವತಿಯ ಶಾಪವೆಂದು ಅರಿತು ಆ ಕಾಮಗಾರಿಯನ್ನು ಅಲ್ಲಿಗೇ ನಿಲ್ಲಿಸಲಾಗಿತ್ತು.

ಇತ್ತೀಚಿನ ದಿನಗಳಲ್ಲಿ ಅಂದರೆ ಬಿ.ಸಿ.ಪಾಟೀಲರು ಕೃಷಿ ಸಚಿವರಾಗಿದ್ದಾಗ ಕೆರೆಯ ಅಭಿವೃದ್ಧಿಗೆ ಮತ್ತೆ ಮುನ್ನುಡಿ ಬರೆಯಲಾಯಿತು. ಆದರೆ ಯಾವುದೇ ಅಡೆತಡೆಗಳು ಎದುರಾಗದೆ ಕಾಮಗಾರಿ ಪೂರ್ಣಗೊಳ್ಳುತ್ತ ಬಂದಿತು. ಇದರ ಫಲವಾಗಿ ಇಂದು ಬೃಹತ್ ಕೆರೆ ಗೋಚರವಾಗುತ್ತಿದೆ.

ಎತ್ತರದಸ್ಥಳದಲ್ಲಿಕೆರೆನಿರ್ಮಾಣವಾಗಿರುವುದರಿಂದ ಅತ್ಯುತ್ತಮ ಪ್ರವಾಸಿ ತಾಣವನ್ನಾಗಿ ಮಾಡುವ ಎಲ್ಲ ಅವಕಾಶಗಳೂ ಇವೆ. ಕೆರೆ ತುಂಬಿದರೆ ಹೆಚ್ಚಿನ ನೀರು ಹರಿದು ಹೋಗುವಂತೆ ವ್ಯವಸ್ಥೆ ಮಾಡಲಾಗಿದೆ. ಈ ಕೆರೆಯ ನಿರ್ಮಾಣದಿಂದ ಕಣವಿಸಿದ್ಗೇರಿ, ಪರ್ವತಸಿದ್ಗೇರಿ, ಚೋಕನಾಳ ಗ್ರಾಮದ ವ್ಯಾಪ್ತಿಯಎಲ್ಲ ಹೊಲಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚಾಗಿದೆ. ಇದೇ ಪ್ರದೇಶದಲ್ಲಿ ಭಗವತಿ ದೇವಸ್ಥಾನ ಈಶ್ವರ ದೇವಸ್ಥಾನಗಳಿವೆ. ಔಷಧಿಯ ಸಸ್ಯಗಳು ಇಲ್ಲಿವೆ. ಇಲ್ಲಿನ ನೀರು ಹರಿದು ಮುಂದೆ ಸಾಗುವುದು ಕಡೂರ ಗ್ರಾಮದವರ ಮಾಜಿಗೌಡ್ರ ಎಂಬುವವರ ಹೊಲಕ್ಕೆ ಮಾತ್ರ. ನೀರನ್ನು ಬೇರೆ ಕಡೆ ಹರಿಸಿದರೂ ನೀರು ಹರಿಯುವುದೇ ಇಲ್ಲ. ಇವರ ಹೊಲದಲ್ಲಿ ಇಂಗುವ ನೀರು ಮುಂದೆ ಎಲ್ಲಿ ಸಾಗಬಹುದು ಎಂಬುವುದಕ್ಕೆ ಉತ್ತರವಿಲ್ಲ. ಆದರೆ ಹಿರಿಯರಯ ಹೇಳುವ ಪ್ರಕಾರ ಆ ನೀರು ಭೂಮಿಯಲ್ಲಿ ಇಂಗಿ ಮುಂದೆ ಕುಮದ್ವತಿ ನೀರನ್ನು ಸೇರುತ್ತದೆ ಎನ್ನುತ್ತಾರೆ. ಆದರೆ ಪ್ರಸ್ತುತ ಕೆರೆಯ ತೂಬಿಗೆ ಗೇಟ್ ಅಳವಡಿಸಬೇಕೆಂಬುದು ಕಣವಿಸಿದ್ಗೇರಿ ಗ್ರಾಮಸ್ಥರ ಆಗ್ರಹವಾಗಿದೆ.

ನರೇಗಾ ಯೋಜನೆಯ ಕೂಲಿಕಾರ್ಮಿಕರಿಗೆ ಇ-ಕೆವೈಸಿ ಅಗತ್ಯ: ಪೂಜಾರ

◆**ರಾಣೇಬೆನ್ನೂರ:** ಕೂಲಿ ಕಾರ್ಮಿಕರು ಗುಳೆ ಹೋಗುವುದನ್ನು ತಡೆಯುವ ಉದ್ದೇಶದಿಂದ ದುಡಿ ಯೋಣ ಬಾ ಅಭಿಯಾನದಡಿ ನರೇಗಾ ಯೋಜನೆ ಅಡಿ ಕೂಲಿ ಕಾರ್ಮಿಕರಿಗೆ ಕೂಲಿ ಕೆಲಸ ನೀಡಲಾಗುವುದೆಂದು ಪಿಡಿಒ. ಅಶೋಕ್ ಪೂಜಾರ ಹೇಳಿದರು.

ತಾಲೂಕಿನ ಕಾಕೋಳ ಗ್ರಾಪಂ ವ್ಯಾಪ್ತಿಯಲ್ಲಿ ನರೇಗಾ ಕೂಲಿ ಕಾರ್ಮಿಕರು ನರೇಗಾ ಯೋಜನೆ ಅಡಿ ಸುಮಾರು ನಾಲ್ಕು ಲಕ್ಷ ಅನುದಾನದಲ್ಲಿ ಕಾಕೋಳ ಕದರ ಮಂಡಲಗಿ ರಸ್ತೆ ಅವಧಿ ನೀರುಗಾಲ್ವೆ ಕಾಮಗಾರಿಯನ್ನು ವೀಕ್ಷಿಸಿ ಮಾತನಾಡಿದ ಅವರು, ಉದ್ಯೋಗ ಚೀಟಿ ಹೊಂದಿದ ಕೂಲಿಕಾರ್ಮಿಕರು ನರೇಗಾ ಸೌಲಭ್ಯ ಪಡೆಯಬೇಕಾದರೆ ಮೇ 31ರ ಒಳಗಾಗಿ ಪ್ರತಿಯೊಬ್ಬರು ಈ ಕೆ ವೈಸಿ ಮಾಡಿಸುವುದು ಅಗತ್ಯವಿದೆ ಎಂದು ತಿಳಿಸಿದರು.

ತಾಲೂಕ ಸಂಯೋಜಕ ದಿಂಗಾಲೇಶ್ವರ ಅಂಗೂರ ಮಾತನಾಡಿ, ಬೇಸಿಗೆ ಬಿಸಿಲು ಇದ್ದು ಕೆಲಸ ಮಾಡುವ ಸಂದರ್ಭದಲ್ಲಿ ಕೂಲಿ ಕಾರ್ಮಿಕರು ಹೆಚ್ಚು ನೀರು ಕುಡಿಯಬೇಕು. ಮುಂದಿನ ವಾರದಲ್ಲಿ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗುವುದು ಕೂಲಿ ಕಾರ್ಮಿಕರು ಭಾಗವಹಿಸಬೇಕು ಎಂದರು.

ಈ ಸಂದರ್ಭದಲ್ಲಿ ಬಿ.ಎಫ್.ಟಿ ಮಂಜು ಚಲವಾದಿ, ವನಸಿರಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಕಾರ್ಯಕರ್ತ ಪರಶುರಾಮ, ಕರ ವಸುಲಿಗಾರ ಸುರೇಶ, ಮೇಟುಗಳಾದ ಅಶೋಕ, ಅಕ್ಕಮ್ಮ ಮತ್ತು ಕೂಲಿ ಕಾರ್ಮಿಕರು ಇದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯ



◆**ಬ್ಯಾಡಗಿ:** ಆನಲೈನ್ ಔಷಧಿ ಮಾರಾಟ ವಿರೋಧಿಸಿ ಬುಧವಾರ ದೇಶಾದ್ಯಂತ ಕರೆದಿದ್ದ ಔಷಧಿ ಮಳಿಗೆ ಬಂದ್ ಕರೆಗೆ ಪಟ್ಟಣದಲ್ಲಿ ಎಲ್ಲಾ ಔಷಧಿ ಅಂಗಡಿಗಳನ್ನು ಬಂದ್ ಮಾಡುವಮೂಲಕ ವಿವಿಧ ಬೇಡಿಕೆ ಈಡೇರಿಸಲು ವ್ಯಾಪಾರಿಗಳು ತಹಶೀಲ್ದಾರ್ ಕಚೇರಿಯ ಬಳಿ ಪ್ರತಿಭಟನೆ ನಡೆಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ತಾಲೂಕು ಔಷಧ ಮಾರಾಟಗಾರರ ಸಂಘದ ಹಿರಿಯ ಸದಸ್ಯ ಡಾ.ಎ.ಎಂ ಸೌದಾಗರ್ ಮಾತನಾಡಿ, ಆನಲೈನ್ ಮೂಲಕ ನಿಯಂತ್ರಣವಿಲ್ಲದೆ ನಡೆಯುತ್ತಿರುವ ಔಷಧ ಮಾರಾಟದಿಂದ ಹಲವು ಸಮಸ್ಯೆಗಳು ಎದುರಾಗುತ್ತಿವೆ ಇದನ್ನು ಕೂಡಲೇ ಬಂದ್ ಮಾಡಿಸಬೇಕು. ಮತ್ತು ಜಿಎಸ್ ಆರ್ 220 ಈ ನಿಯಮವನ್ನು ಹಿಂಪಡೆಯಬೇಕು. ಅಕ್ರಮ ಇ–ಫಾರ್ಮಸಿಗಳನ್ನು ಬಂದು ಮಾಡಬೇಕು ಅತಿಯಾದ ಡಿಸ್ಕೌಂಟ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಸಣ್ಣ ಔಷಧಿ ವ್ಯಾಪಾರಿಗಳನ್ನು ರಕ್ಷಿಸಬೇಕು ಹಾಗೂ ವ್ಯಸನಕಾರಿ ಔಷಧಿಗಳ ದುರುಪಯೋಗ. ರೋಗಿ ಮತ್ತು ಫಾರ್ಮಸಿಸ್ಟ ನಡುವಿನ ನೇರ ಸಂಪರ್ಕದ ಕೊರತೆ ಸರಿಯಾದ ಸಂಗ್ರಹಣವಿಲ್ಲದೆ ಔಷಧಿ ಅಪಾಯ ಮತ್ತು ಭಾರಿ ರಿಯಾತಿಗಳಿಂದ ಸಣ್ಣ ವ್ಯಾಪಾರಿಗಳಿಗೆ ಹೊಡೆತ ಬೀಳುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮೆಡ್ ಪ್ಲಸ್, ಅಪೋಲೋ. ಹಾಗೂ ಜನೌಷಧಿ ಕೇಂದ್ರಗಳು ಎಂದಿನಂತೆ ತೆಗೆಯಲಟ್ಟಿದ್ದವು.

ಈ ಸಂದರ್ಭದಲ್ಲಿ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಶಿವರಾಜ್ ಚೂರಿ, ಅರವಿಂದ್ ಮುದ್ದಣ್ಣನವರ, ಸತೀಶ್ ಆಗಡಿ ನಿಜಾಮ್ ಖಾಜಿ, ಕುಮಾರ್ ಹಿರೇಮಠ, ವಿನಾಯಕ ನಂದಿಹಳ್ಳಿ, ಶಿವಕುಮಾರ್ ತೋಟದ, ಹರೀಶ್ ನಾಯಕರ, ಭರಮರೆಡ್ಡಿ ಅಜ್ಜಮ್ಮನವರ ಅನೇಕರು ಉಪಸ್ಥಿತರಿದ್ದರು.

ಜಿಲ್ಲಾ ಪದಾಧಿಕಾರಿಗಳ ಸಭೆ | ಅಧ್ಯಕ್ಷ ರಾಜೀವ ಶೆಟ್ಟಿ ಹೇಳಿಕೆ

ರೆಡ್ ಕ್ರಾಸ್ ಸಂಸ್ಥೆಯ ಕಾರ್ಯ ಪ್ರತಿ ಹಳ್ಳಿಗೆ ತಲುಪಲಿ

◆**ಹಾವೇರಿ:** ರೆಡ್ ಕ್ರಾಸ್ ಸಂಸ್ಥೆಯ ಸೇವಾ ಕಾರ್ಯಗಳು ಪ್ರತಿ ಹಳ್ಳಿ ಹಳ್ಳಿಗೂ ತಲುಪಲು ಎಲ್ಲಾ ಪದಾಧಿಕಾರಿಗಳು ಬದ್ಧರಾಗಬೇಕಿದೆ. ರಾಜ್ಯ ಘಟಕದಿಂದ ಜಿಲ್ಲಾ ಶಾಖೆಗೆ ಎಲ್ಲ ರೀತಿಯ ಸಹಕಾರ ನೀಡಲಾಗುವುದು ಎಂದು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ರಾಜ್ಯ ಘಟಕದ ಅಧ್ಯಕ್ಷ ರಾಜೀವ ಶೆಟ್ಟಿ ಹೇಳಿದರು.

ಇಲ್ಲಿನ ಪ್ರವಾಸಿ ಮಂದಿರದಲ್ಲಿ ಜಿಲ್ಲಾ ಪದಾಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿ, ನಾಲ್ಕು ಬಾರಿ ನೊಬೆಲ್ ಪ್ರಶಸ್ತಿ ಪಡೆದ ಏಕೈಕ ಸೇವಾ ಸಂಸ್ಥೆಯಾಗಿರುವ ರೆಡ್ ಕ್ರಾಸ್ ಸಂಸ್ಥೆಯು ನಿರಂತರವಾಗಿ ಉತ್ತಮ ಸೇವಾ ಕಾರ್ಯ ಮಾಡುತ್ತಾ ಬರುತ್ತಿದೆ. ರಾಜ್ಯದ ಎಲ್ಲಾ ಜಿಲ್ಲಾ ಘಟಕ ಬಲಪಡಿಸುವ ಉದ್ದೇಶದಿಂದ ರಾಜ್ಯದ ಎಲ್ಲಾ ಜಿಲ್ಲೆ– ತಾಲೂಕ ಘಟಕಗಳ ಪದಾಧಿಕಾರಿಗಳನ್ನು ಭೇಟಿ ಮಾಡಿ ಸೇವೆ ಕಾರ್ಯ ಮಾಡಲು ಉತ್ತೇಜನ ನೀಡಲಾಗುತ್ತಿದೆ. ಹಾವೇರಿ ಜಿಲ್ಲೆಯಲ್ಲಿ ಕ್ರಿಯಾಶೀಲ ಪದಾಽಕಾರಿಗಳು ಇದ್ದು, ಉತ್ತಮ ಚಟುವಟಿಕೆಗಳನ್ನು ಮಾಡಲಾಗುತ್ತಿದೆ. ಆರು ತಿಂಗಳ ಒಳಗಾಗಿ ಬ್ಲಡ್ ಬ್ಯಾಂಕ್ ಕಟ್ಟಡ ಪೂರ್ಣಗೊಳಿಸಿ. ಬ್ಲಡ್ ಬ್ಯಾಂಕಿಗೆ ಪೀಠೋಪಕರಣ ಹಾಗೂ ಆರ್ಥಿಕ



ಸಹಕಾರ ನೀಡಲಾಗುವುದು ಎಂದರು.

ಜಿಲ್ಲಾ ಗೌರವ ಕಾರ್ಯಾಧ್ಯಕ್ಷ ಸಂಜೀವಕುಮಾರ ನೀರಲಗಿ ಮಾತನಾಡಿ, ಎಲ್ಲಾ ಪದಾಧಿಕಾರಿಗಳು ಅನುಭವ ಹೊಂದಿದವರಾಗಿದ್ದು ರೆಡ್ ಕ್ರಾಸ್ ಸಂಸ್ಥೆಯ ಕಾರ್ಯ ಚಟುವಟಿಕೆಗಳನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಮಾಡುತ್ತೇವೆ. ಬ್ಲಡ್ ಬ್ಯಾಂಕ್‌ಗೆ ಆರ್ಥಿಕ ನೆರವು ನೀಡಿದರೆ ರೆಡ್ ಕ್ರಾಸ್ ಹೆಚ್ಚು ಕೆಲಸ ಮಾಡಲು ಸಾಧ್ಯ. ಜಿಲ್ಲೆಗೆ ಆಗಮಿಸಿದ ರಾಜ್ಯ ಘಟಕದ ಎಲ್ಲಾ ಪದಾಧಿಕಾರಿಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು.

ರಾಜ್ಯಾಧ್ಯಕ್ಷರಾದ ರಾಜೀವಶೆಟ್ಟಿ, ರಾಜ್ಯ ಸಮಿತಿ ಸದಸ್ಯರಾದ ಮಹಾಂತೇಶ ವೀರಾಪುರ, ಬಾಲಕೃಷ್ಣವಿ, ರವಿ ಮೆಣಸಿನಕಾಯಿ ಅವರನ್ನು ಸನ್ಮಾನಿಸಲಾಯಿತು.

ಜಿಲ್ಲಾ ಗೌರವ ಕಾರ್ಯದರ್ಶಿ ನಿಂಗಪ್ಪ ಆರೇರ, ಜಿಲ್ಲಾ ಖಜಾಂಚಿ ಪ್ರಭು ಹಿಟ್ನಳ್ಳಿ, ಸಹಕಾರ್ಯದರ್ಶಿ ಡಾ.ಪದೀಪ ದೊಡ್ಡಗೌಡ್ರ, ಜಿಲ್ಲಾ ಸಮಿತಿ ಸದಸ್ಯ ಹನುಮಂತಗೌಡ ಗೊಲ್ಲರ, ರವಿ ಹಿಂಚಿಗೇರಿ, ಸಿದ್ದರಾಜ ಕಲಕೋಟಿ, ಉಡಚಪ್ಪ ಮಾಳಗಿ, ಎಸ್.ಸಿ.ಹಿರೇಮಠ, ಮಲ್ಲಿಕಾರ್ಜುನ ಕೊಟೂರ, ನಾಗರಾಜ ಇಚ್ಚಂಗಿ,ವಿಜಯಕುಮಾರ ಚಿನ್ನಿಕಟ್ಟಿ, ಪ್ರಕಾಶ ಶೆಟ್ಟಿ, ಉಜ್ವಲ ಹಿರೇಗೌಡ್ರ, ಡಿಡಿಆರ್‌ಸಿ ನೋಡಲ್ ಅಧಿಕಾರಿ ಪೂರ್ಣಿಮಾ ಮಠದ, ಡಾ.ಅಂಕಿತ ಆನಂದ, ಇರ್ಶಾದಲಿ ದುಂಡಸಿ, ನವೀನ ಮುಗದೂರ, ಜಗದೀಶ ಬೇಟಗೇರಿ ಇದ್ದರು.

ವ್ಯಕ್ತಿ ಆತ್ಮಹತ್ಯೆ

◆**ಹಾವೇರಿ:** ಯಾವುದೋ ವಿಷಯವನ್ನು ಮನಸ್ಸಿಗೆ ಹಚ್ಚಿಕೊಂಡು ವ್ಯಕ್ತಿಯೊಬ್ಬರು ಮನೆಯಲ್ಲಿ ನೇಣುಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಸವಣೂರ ತಾಲೂಕು ಯಲವಿಗಿ ಗ್ರಾಮದಲ್ಲಿ ನಡೆದಿದೆ. ಯಲವಿಗಿ ಗ್ರಾಮದ ಸಹದೇವಪ್ಪ ಹುಚ್ಚಪ್ಪ ಹರ್ತಿ (67) ಮೃತರು. ಇವರು ಈ ಮೊದಲು ಬಾರ್ ಅಂಗಡಿಯಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡಿಕೊಂಡಿದ್ದರು. ಮಕ್ಕಳು ದೊಡ್ಡವರಾಗಿ ನೌಕರಿ ಮಾಡುತ್ತಿದ್ದು, ಇನ್ನು ಮುಂದೆ ನೀವು ಕೆಲಸಕ್ಕೆ ಹೋಗುವುದು ಬೇಡ, ಆರಾಮ ಆಗಿ ಮನೆಯಲ್ಲಿ ಇರುವಂತೆ ತಿಳಿಸಿದ್ದಾರೆ. ಕಳೆದ ಎರಡು ವರ್ಷಗಳಿಂದ ಕೆಲಸಕ್ಕೆ ಹೋಗುವುದನ್ನು ಬಿಡಿಸಿದ್ದರು. ಅವಾಗಿಂದ ಮನೆಯಲ್ಲಿ ಇರುತ್ತಿದ್ದ ಮೃತರು, ಒಬ್ಬರೆ ಫೋನ್‌ನಲ್ಲಿ ಹಾಡು ಕೇಳುವುದು, ಯಾರ ಜತೆಗೂ ಸರಿಯಾಗಿ ಮಾತನಾಡದೆ ಇರುತ್ತಿದ್ದರು. ಈ ಹಿನ್ನೆಲೆ ಯಾರಿಗೂ ಏನೂ ಹೇಳದೆ ಮನಸ್ಸಿನಲ್ಲಿ ಯಾವುದೋ ವಿಷಯವನ್ನು ಇಟ್ಟುಕೊಂಡು ತನ್ನಷ್ಟಕ್ಕೆ ತಾನೆ ಮನೆಯಲ್ಲಿ ಮೇಲ್ಛಾವಣಿಯ ಹುಕ್ಕಿಗೆ ಹಗ್ಗದಿಂದ ನೇಣು ಹಾಕಿಕೊಂಡು ಮೃತಪಟ್ಟಿದ್ದಾರೆ ಎಂದು ಮೃತರ ಪತ್ನಿ ರೇಣುಕಾ ಹರ್ತಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಸವಣೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಿರುಸುದ್ದಿ

ಶೋಭಾಯಾತ್ರೆ, ಸಮ್ಮೇಳನ ಮೇ 24 ರಂದು



ಖಾನಾಪುರ: ಗಿರಿಜನ ಸುರಕ್ಷಾ ವೇದಿಕೆಯ ವತಿಯಿಂದ ಮೇ 24ರಂದು ದೆಹಲಿಯ ಕೆಂಪುಕೋಟೆ ಆವರಣದಲ್ಲಿ ಗಿರಿಜನ ಸಾಂಸ್ಕೃತಿಕ ಮಹಾ ಶೋಭಾಯಾತ್ರೆ ಮತ್ತು ಸಾಂಸ್ಕೃತಿಕ ಸಮ್ಮೇಳನವನ್ನು ಆಯೋಜಿಸಲಾಗಿದೆ ಎಂದು ವೇದಿಕೆಯ ಪ್ರಾಂತ ಸಂಯೋಜಕ ಧೋಂಡು ಪಾಟೀಲ ಮಾಹಿತಿ ನೀಡಿದರು.

ಪಟ್ಟಣದಲ್ಲಿ ಬುಧವಾರ ಆಯೋಜಿಸಿದ್ದ ಗಿರಿಜನ ಸುರಕ್ಷಾ ವೇದಿಕೆ ಪದಾಧಿಕಾರಿಗಳ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಅನಾದಿಕಾಲದಿಂದಲೂ ಅರಣ್ಯದಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನಾಂಗದ ಗಿರಿಜನರ ಸಂಸ್ಕೃತಿ-ಸಂಪ್ರದಾಯಗಳನ್ನು ಮುಂದಿನ ಪೀಳಿಗೆಗೆ ಉಳಿಸಿಕೊಂಡು ಹೋಗುವ ನಿಟ್ಟಿನಲ್ಲಿ ಈ ಸಮ್ಮೇಳನ ಆಯೋಜಿಸಲಾಗಿದೆ. ಬುಡಕಟ್ಟು ಹಾಗೂ ಗಿರಿಜನರ ಮಹಾನಾಯಕ ಭಗವಾನ್ ಬಿರ್ಸಾ ಮುಂಡಾ ಅವರ 150ನೇ ಜಯಂತಿ ಅಂಗವಾಗಿ ರಾಜಧಾನಿಯಲ್ಲಿ ಆಯೋಜಿರುವ ಸಮ್ಮೇಳನದಲ್ಲಿ ದೇಶದ ವಿವಿಧ ರಾಜ್ಯಗಳಿಂದ ಅಸಂಖ್ಯಾತ ಗಿರಿಜನರು ಆಗಮಿಸಿ ತಮ್ಮ ಸಾಂಪ್ರದಾಯಿಕ ಉಡುಗೆ ತೊಡುಗೆಗಳನ್ನು ತೊಟ್ಟು ಭಾಗವಹಿಸಲಿದ್ದಾರೆ. ಸಮ್ಮೇಳನದಲ್ಲಿ ಗಿರಿಜನರ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ, ಬುಡಕಟ್ಟು ಅರಣ್ಯ ಹಕ್ಕು 2006 ಜಾರಿಗೆ ಒತ್ತಾಯ, ವನವಾಸಿ ಗಿರಿಜನರ ಹಕ್ಕುಗಳ ಸಂರಕ್ಷಣೆ ಮತ್ತು ಬುಡಕಟ್ಟು ಜನಾಂಗದ ಶ್ರೇಯೋಭಿವೃದ್ಧಿ ಹಾಗೂ ಸುರಕ್ಷೆಗಾಗಿ ಅಗತ್ಯ ಕ್ರಮ ಸೇರಿದಂತೆ ಹಲವು ಬೇಡಿಕೆಗಳ ಕುರಿತು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದು ವಿವರಿಸಿದರು.ಈ ಸಂದರ್ಭದಲ್ಲಿ ಗಿರಿಜನ ಸುರಕ್ಷಾ ವೇದಿಕೆಯ ಮುಖಂಡರಾದ ಬಮ್ಮು ಪಾಟೀಲ, ಲಕ್ಷ್ಮೀ ಜೈನ್ ಹಾಗೂ ಇತರರು ಇದ್ದರು.

ಬಾಲಕರ ವಸತಿ ನಿಲಯಕ್ಕೆ ಅರ್ಜಿ ಆಹ್ವಾನ

ಬೆಳಗಾವಿ: 2026-27ನೇ ಶೈಕ್ಷಣಿಕ ವರ್ಷಕ್ಕೆ ನಗರದ ರೈಲು ನಿಲ್ದಾಣದ ಎದುರಿಗಿರುವ ಮಿಲಿಟರಿ ಬಾಲಕರ ವಸತಿ ನಿಲಯಕ್ಕೆ ಯುದ್ಧ ಸಂತ್ರಸ್ಥರು ಮತ್ತು ಮಾಜಿ ಸೈನಿಕರ ಮಕ್ಕಳಿಗೆ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿಗಳು ಬೆಳಗಾವಿ ನಗರದ ಯಾವುದೇ ಶೈಕ್ಷಣಿಕ ಸಂಸ್ಥೆಗಳಲ್ಲಿ 5ನೇ ತರಗತಿಯಿಂದ ಪಿಯುಸಿ, ಡಿಪ್ಲೋಮಾ ಹಾಗೂ ಐಟಿಐದಲ್ಲಿ ವ್ಯಾಸಂಗಕ್ಕಾಗಿ ಪ್ರವೇಶವನ್ನು ಪಡೆಯಬಹುದು ನಿಲಯದಲ್ಲಿ ಊಟ ಹಾಗೂ ವಸತಿ ಉಚಿತವಾಗಿರುತ್ತದೆ.

ಆಸಕ್ತ ಮಾಜಿ ಸೈನಿಕರು ಮತ್ತು ಯುದ್ಧ ಸಂತ್ರಸ್ಥರು ತಮ್ಮ ಮಕ್ಕಳಿಗೆ ವಸತಿ ನಿಲಯದ ಪ್ರವೇಶಕ್ಕೆ ಅರ್ಜಿಯನ್ನು ಜಂಟಿ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಬೆಳಗಾವಿ ಇವರ ಕಾರ್ಯಾಲಯದಿಂದ ಉಚಿತವಾಗಿ ಪಡೆಯಬಹುದಾಗಿದೆ. ಮೇ 25ರಂದು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ. ಬಾಲಕರ ವಸತಿ ನಿಲಯವು ಜೂನ್ 1 ರಿಂದ ಪ್ರಾರಂಭವಾಗಲಿದೆ. ಹೆಚ್ಚಿನ ಮಾಹಿತಿಗಾಗಿ ಜಂಟಿ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಬೆಳಗಾವಿ ಇವರ ಕಾರ್ಯಾಲಯಕ್ಕೆ ಬೇಟಿ ನೀಡಬಹುದು ಅಥವಾ ನಿಲಯದ ಅಧೀಕ್ಷಕ ಸುರೇಶ ಮಗದುಮ್ಮ ಸಂಪರ್ಕಿಸಬಹುದು ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಟ್ಕಾ; ಮೂವರು ಬಂಧನ

ಬೆಳಗಾವಿ: ನಗರದ ಖಂಜರ್ ಗಲ್ಲಿ ಹಾಗೂ ಕಿಲ್ಲಾ ಮುಖ್ಯ ರಸ್ತೆಯಲ್ಲಿ ಮಟ್ಕಾ ಆಡುತ್ತಿದ್ದ ಮೂವರು ಆರೋಪಿಗಳನ್ನು ಮಾರ್ಕೆಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬಂಧಿತರನ್ನು ದರ್ಬಾರ್ ಗಲ್ಲಿ ನಿವಾಸಿ ಶಾಕೀಬ ಅಲಿ ಅಡ್ಡೇವಾಲೆ(30), ಖಂಜರ್ ಗಲ್ಲಿಯ ನಯೀಮ್ ಖೊತವಾಲ (49) ಹಾಗೂ ವೀರಭದ್ರ ನಗರದ ಜಹೀನಸಾಬ್ ಶೇಖ್ (38) ಎಂದು ಗುರುತಿಸಲಾಗಿದೆ. ಆರೋಪಿಗಳಿಂದ ನಗದು ಹಣ ಹಾಗೂ ಮಟ್ಕಾ ಚಟುವಟಿಕೆಗೆ ಬಳಸಲಾಗುತ್ತಿದ್ದ ಇತರೆ ಸಾಮಗ್ರಿಗಳನ್ನು ವಶಕ್ಕೆ ಪಡೆದು, ಕಾನೂನು ಕ್ರಮ ಜರುಗಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇದೇ ವೇಳೆ ಬೆಳಗಾವಿಯ ಕೇಂದ್ರ ಬಸ್ ನಿಲ್ದಾಣದ ಸಮೀಪ ಮಾರಕಾಸ್ತ್ರ ಇಟ್ಟುಕೊಂಡು ಓಡಾಡುತ್ತಿದ್ದ ಆರೋಪಿಯನ್ನು ಕೂಡ ಮಾರ್ಕೆಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.ಬಂಧಿತನನ್ನು ಜಯಪ್ಪ ಲಮಾಣಿ ಎಂದು ಗುರುತಿಸಲಾಗಿದೆ. ಆರೋಪಿತನಿಂದ ಕುಡುಗೋಲು ಜಪ್ತಿ ಮಾಡಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ.



ಗೋಕಾಕ: ಲಿಂಗತ್ವ ಅಲ್ಪಸಂಖ್ಯಾತರು ಶಕ್ತಿ ಯೋಜನೆಯಲ್ಲಿ ನಡೆಯುತ್ತೀರುವ ತಾರತಮ್ಯ ಖಂಡಿಸಿ ನಗರದ ಬಸವೇಶ್ವರ ವೃತ್ತದಲ್ಲಿ ಪ್ರತಿಭಟನೆ ನಡೆಸಿ ಮೆರವಣಿಗೆ ಮೂಲಕ ಮಿನಿ ವಿಧಾನಸೌಧದ ವರೆಗೆ ತೆರಳಿ ತಹಶೀಲದಾರ್ ಮೂಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ವಿಭಾಗ ಮಟ್ಟದ ತರಬೇತಿ ಕಾರ್ಯಾಗಾರ

ಬೆಳಗಾವಿ: ಸುವರ್ಣ ವಿಧಾನಸೌಧದ ಸೆಂಟ್ರಲ್ ಹಾಲ್‌ದಲ್ಲಿ ನಡೆದ ಮತದಾರರ ಪಟ್ಟಿ ತೀವ್ರ ಸಮಗ್ರ ಪರಿಷ್ಕರಣೆ (ಎಸ್‌ಆರ್‌ಐ) ಕುರಿತಂತೆ ಜಿಲ್ಲಾಧಿಕಾರಿಗಳು, ಬೆಳಗಾವಿ ವಿಭಾಗದ ಎಲ್ಲ ಅಪರ ಜಿಲ್ಲಾಧಿಕಾರಿ, ಮತದಾರರ ನೋಂದಣಾಧಿಕಾರಿ, ಸಹಾಯಕ ಮತದಾರರ ನೋಂದಣಾಧಿಕಾರಿ, ಚುನಾವಣಾ ತಹಶೀಲ್ದಾರ್ ಹಾಗೂ ಟೆಕ್ನಿಕಲ್ ಪ್ರೋಗ್ರಾಮರ್‌ಗಳ ವಿಭಾಗ ಮಟ್ಟದ ಸಭೆ ಕಾರ್ಯಾಗಾರವನ್ನು ಉದ್ಘಾಟಿಸಿದರು. ನಂತರ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಮಾತನಾಡಿ, ಚುನಾವಣೆ ಹಾಗೂ ಮತದಾರರ ಪಟ್ಟಿ ತೀವ್ರ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತಂತೆ ಭಾರತ ಚುನಾವಣಾ ಆಯೋಗ ನೀಡುವ ನಿರ್ದೇಶನಗಳನ್ನು ಪಾಲಿಸಿ ನಿಯಮಾನುಸಾರ ಸದರಿ ಪ್ರಕ್ರಿಯೆಯನ್ನು ಜರುಗಿಸಲು ಸೂಚಿಸಿ, ಬೆಳಗಾವಿ ಜಿಲ್ಲೆಯ ಬೆಳಗಾವಿ ಉತ್ತರ ಮತ್ತು ದಕ್ಷಿಣ ವಿಧಾನಸಭಾ ಮತಕ್ಷೇತ್ರಗಳಲ್ಲಿ ಈಗಾಗಲೇ ಬಹು ನೋಂದಣಿಗಳನ್ನು ಮ್ಯಾಪಿಂಗ್ ಮಾಡಲಾಗಿದೆ ಎಂದರು. ಜಂಟಿ ಮುಖ್ಯ ಚುನಾವಣಾಧಿಕಾರಿ ವಿ.ರಾಘವೇಂದ್ರ ಮಾತನಾಡಿ, ಅರ್ಹ ಮತದಾರರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಹಾಗೂ ಅನರ್ಹ ಮತದಾರರನ್ನು ಮತದಾರರ ಪಟ್ಟಿಯಿಂದ ಕೈಬಿಡುವ ಕುರಿತು ಕ್ರಮ ವಹಿಸುವಂತೆ ಗೈರು, ವಲಸೆ ಮತದಾರರ ಕುರಿತು ಪರಿಶೀಲಿಸಿ ಕ್ರಮ ವಹಿಸಿ ಎಂದರು. ಬೆಳಗಾವಿ ವಿಭಾಗದ ಎಲ್ಲ ಅಪರ ಜಿಲ್ಲಾಧಿಕಾರಿ,ಮತದಾರರ ನೋಂದಣಾಧಿಕಾರಿ, ಸಹಾಯಕ ಮತದಾರರ ನೋಂದಣಾಧಿಕಾರಿ, ಚುನಾವಣಾ ತಹಶೀಲದಾರ ಹಾಗೂ ಟೆಕ್ನಿಕಲ್ ಪ್ರೋಗ್ರಾಮರ್ ಗಳು ಹಾಜರ ಇದ್ದರು ಬೆಳಗಾವಿ ಅಪರ ಜಿಲ್ಲಾಧಿಕಾರಿ, ವಿಜಯಕುಮಾರ ಹೊನಕೇರಿ ಇದ್ದರು.



ರಾಯಬಾಗ: ತಾಲೂಕಿನ ಬಾವನಸೌಂದತ್ತಿಗ್ರಾಮದ ಎಸ್ಸಿ ಕಾಲೋನಿಯಲ್ಲಿ ಸಿಸಿ ರಸ್ತೆ ಕಾಮಗಾರಿಗೆ ಬುಧವಾರ ಶಾಸಕ ಡಿ.ಎಮ್. ಐಹೊಳೆ ಚಾಲನೆ ನೀಡಿದರು. ಮುಖಂಡರಾದ ಸದಾಶಿವ ಘೋರ್ಪಡೆ, ರಾಮಚಂದ್ರ ಕಾಟೆ, ಅಜಿತ್ ಖೆಮಲಾಪೂರೆ, ಅನೀಲ ಹಂಜಿ, ಸತ್ಯಪ್ಪ ಬಿಷ್ಠೆ, ಚಿದಾನಂದ ಮಂಗಸೂಳೆ, ಶಾಂತಿನಾಥ ಪಾಟೀಲ, ರಮಜಾನ ಮಕಾಂದಾರ, ರಾಜು ಖಾಂಡೇಕರ, ದಶರಥ ಕಾಟೆ, ಅರುಣ ಹವಳೆ, ಅರುಣ ಶಿಂಧೆ, ಕುಮಾರ ಕಾಮತೆಟ್ಟಿ, ಅಜಿತ ಕುಂಬಾರ, ಅಪ್ಪಾಸಾಹೇಬ ಕೂಗೆ, ಸುರೇಶ ಖೆಮಲಾಪೂರೆ, ಸಂತೋಷ ಕಾಂಬಳೆ ಇದ್ದರು.

ಪಾಲಿಕೆ ಕಂದಾಯ ಅಧಿಕಾರಿಗಳಿಗೆ ಕನ್ನಡಪರ ಸಂಘಟನೆಗಳು ಮನವಿ

ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಿ

ಬೆಳಗಾವಿ: ಇಲ್ಲಿನ ಮಹಾನಗರ ಪಾಲಿಕೆಯಲ್ಲಿ ಹಗರಣಗಳು ದಿನದಿಂದ ಹೆಚ್ಚಾಗುತ್ತಿದ್ದು ಪಾಲಿಕೆ ವಾರ್ಡ ಸಂಖ್ಯೆ: 09 ಹಾಗೂ 10 ರಲ್ಲಿ ಸುಮಾರು 41 ಪಿಐಡಿ ಹಾಗೂ ಇ-ಆಸ್ತಿಗಳನ್ನು ನಿಯಮ ಬಾಹಿರವಾಗಿ ಪಾಲಿಕೆಯ ದಕ್ಷಿಣ ಕಂದಾಯ ವಿಭಾಗದ ಸಿಬ್ಬಂದಿಗಳು ನೀಡಿದ್ದಾರೆ ಎಂದು ಆರೋಪಿಸಿ ಕನ್ನಡಪರ ಸಂಘಟನೆಯ ಕಾರ್ಯಕರ್ತರು ಆಕ್ರೋಶವನ್ನು ಹೋರ ಹಾಕಿ ಪ್ರತಿಭಟನೆ ನಡೆಸಿದರು.



ಮಹಾನಗರ ಪಾಲಿಕೆಯಲ್ಲಿ ಕಳೆದ ಸ್ಥಾಯಿ, ಸಾಮಾನ್ಯ, ಹಾಗೂ ಆಡಳಿತಾತ್ಮಕ ಸಭೆಗಳಲ್ಲಿ, ದಕ್ಷಿಣ ಭಾಗದಲ್ಲಿ ಕಂದಾಯ ವಿಭಾಗದಲ್ಲಿ ಕಾನೂನು ಬಾಹಿರವಾಗಿ ಸಿಬ್ಬಂದಿಗಳು ಕೆಲ ಮಾಡಿದ್ದಾರೆಂದು ಚರ್ಚೆ ಆಗಿ ಸಿಬ್ಬಂದಿಗಳು ಮಾಡಿರುವ ತಪ್ಪನ್ನು ಒಪ್ಪಿಕೊಂಡಿದ್ದಾರೆಂದು ಕಂದಾಯ ಉಪ ಆಯುಕ್ತರ ಹೇಳಿದ್ದಾರೆ.

ಸಾಮಾನ್ಯ ಜನರಿಗೆ ಪಾಲಿಕೆಯ ಆಡಳಿತದ ಮೇಲೆ ನಂಬಿಕೆ ಬರಬೇಕಾದರೆ ಹಾಗೂ ಸಾಮಾನ್ಯ ಜನರು ಕಟ್ಟುವ ತೆರಿಗೆ ಹಣದ ಮೇಲೆ ಆಡಳಿತ ನಡೆಸುವ ಪಾಲಿಕೆಯು ತಪ್ಪು ಮಾಡಿದ ಭ್ರಷ್ಟ ಸಿಬ್ಬಂದಿಗಳಿಗೆ ಶಿಕ್ಷೆ ನೀಡಬೇಕೆಂದು ಸಾರ್ವಜನಿಕರು ಒತ್ತಾಯಿಸುತ್ತಿದ್ದಾರೆ.

ಪಾಲಿಕೆಯಲ್ಲಿನ ಭ್ರಷ್ಟ ಆಡಳಿತವನ್ನು ಕೂಡಲೇ ಕಿತ್ತು ಹಾಕಬೇಕು ಹಾಗೂ ತಪ್ಪಿಸ್ಥರ ವಿರುದ್ಧ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಮಹಾನಗರ ಪಾಲಿಕೆಯ ಕಂದಾಯ ಅಧಿಕಾರಿಗಳಿಗೆ ಕನ್ನಡಪರ ಸಂಘಟನೆಗಳು ಪ್ರತಿಭಟನೆಯ ಬಳಿಕ ಮನವಿ ಮಾಡಿಕೊಂಡರು.

ಇದಲ್ಲದೆ ಮತ್ತೊಂದೆಡೆ, ಪಾಲಿಕೆಯ ಆರೋಗ್ಯ ವಿಭಾಗದಲ್ಲಿ ಸುಮಾರು 17 ವರ್ಷಗಳಿಂದ ವಿಭಾಗದ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ಅಭಿಷೇಕ ಕಂಗ್ರಾಳಕರ ಅವರು ಕೆಸಿಎಸ್‌ಆರ್ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ಒಂದೆ ಕುರ್ಚಿಯಲ್ಲಿ ಇರುವುದು ಇಲಾಖಾ ನಿಯಮಾವಳಿಯಗಳವಿರುದ್ಧವಾಗಿದ್ದು, ಪಾಲಿಕೆಯ ಪಾರದರ್ಶಕ ಆಡಳಿತಕ್ಕಾಗಿ ಆದಷ್ಟು ಬೇಗ ಅವರನ್ನು ಆಂತರಿಕ ವರ್ಗಾವಣೆ ಮಾಡಬೇಕೆಂದು ಆಗ್ರಹಿಸಿದರು ಇಲ್ಲವಾದಲ್ಲಿ ಪಾಲಿಕೆಯ ವಿರುದ್ಧ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಸಿದರು.

ಈ ವೇಳೆ ಗಡಿ ಕನ್ನಡಗರ ಸೇನೆ ರಾಜ್ಯಾಧ್ಯಕ್ಷರು ಬಲರಾಮ ಮಾಸನಟ್ಟಿ, ಕಾರ್ಯದರ್ಶಿ, ಪದಾಧಿಕಾರಿಗಳು, ಕಾರ್ಯಕರ್ತರು ಇದ್ದರು.

ಅರ್ಜಿ ಆಹ್ವಾನ

ಬೆಳಗಾವಿ: ಕೇಂದ್ರ, ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ದೀನದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ ಅಡಿಯಲ್ಲಿ ಜಿಲ್ಲೆಯ ಗ್ರಾಮೀಣ ಯುವಕ, ಯುವತಿಯರಿಗೆ ಉಚಿತ 3 ತಿಂಗಳ ವೃತ್ತಿಪರ ಕೌಶಲ್ಯ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. 18 ರಿಂದ 40 ವರ್ಷದೊಳಗಿನ ಕನಿಷ್ಟ 10ನೇ ತರಗತಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳು ತರಬೇತಿಗೆ ಅರ್ಜಿ ಸಲ್ಲಿಸಬಹುದು. ತರಬೇತಿ ಅವಧಿಯಲ್ಲಿ ಸಂಪೂರ್ಣ ಉಚಿತ ಊಟ, ವಸತಿ ಸೌಲಭ್ಯ ಒದಗಿಸಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಆದರ್ಶ ಪ್ರೈವೇಟ್ ಐಟಿಐ ಪ್ಲಾಟ್ ನಂ.508 ಆಟೋನಗರ ಬೆಳಗಾವಿ ಇಲ್ಲಿಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆದರ್ಶ ಗುಣ ಅಳವಡಿಸಿಕೊಳ್ಳಿ: ಲೋಕಾಪುರ

ಅಥಣಿ: ಪ್ರತಿಯೊಬ್ಬರಲ್ಲಿ ಪ್ರತಿಭೆ ಇದ್ದೇ ಇರುತ್ತದೆ. ವಿದ್ಯಾರ್ಥಿಗಳಲ್ಲಿರುವ ಸೂಕ್ತ ಪ್ರತಿಭೆ ಗುರುತಿಸಿ ಸೂಕ್ತ ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸಿದಾಗ ಅವರು ಸಾಧಕರಾಗಿ ಬೆಳೆಯಲು ಸಾಧ್ಯ ಎಂದು ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಡಾ.ಬಾಳಾಸಾಹೇಬ ಲೋಕಾಪುರ ಹೇಳಿದರು.

ಇಲ್ಲಿನ ಕೆಎಲ್‌ಇ ಸಂಸ್ಥೆ ಎಸ್‌ಎಸ್ ಎಂಎಸ್ ಮಹಾವಿದ್ಯಾಲಯದ ಖೋತ ಸಭಾಂಗಣದಲ್ಲಿ ಲಯನ್ಸ್ ಕ್ಲಬ್ ಆಫ್ ಅಥಣಿ ಆಯೋಜಿಸಿದ ಸಾಧಕ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಲಯನ್ಸ್ ಕ್ಲಬ್‌ನ ಅಧ್ಯಕ್ಷ ರಮೇಶ ಬುಲಬುಲೆ ಮಾತನಾಡಿ, ಈ ಬಾರಿ ಎಸ್ಸೆಸ್ಸೆಲ್ಸಿ, ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿಗಳು ರಾಜ್ಯಕ್ಕೆ ಟಾಪರ್ ಆಗಿ ಅಥಣಿ ತಾಲೂಕಿನ ಕೀರ್ತಿ ಹೆಚ್ಚಿಸಿದ್ದು ನಮ್ಮೆಲ್ಲರಿಗೆ ಹೆಮ್ಮೆ ಎಂದು ಸಾಧಕ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಕಟಗೇರಿ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಪ್ರಾರ್ಥನಾ ಬಿರಾದಾರ, ಐಗಳಿ ಆದರ್ಶ ಪ್ರೌಢಶಾಲೆಯ ವಿದ್ಯಾರ್ಥಿ ದಶರಥ ಶಿವಾಜಿ ಬೋಸಲೆ ಪಾಲಕರನ್ನು ಸೇರಿದಂತೆ ನೂರಾರು ಸಾಧಕ ವಿದ್ಯಾರ್ಥಿಗಳಿಗೆ ಲಯನ್ಸ್ ಕ್ಲಬ್ ವತಿಯಿಂದ ಸನ್ಮಾನಿಸಲಾಯಿತು.

ಈ ವೇಳೆ ಲಯನ್ಸ್ ಕ್ಲಬ್ ಉಪಾಧ್ಯಕ್ಷ ಆನಂದ ಟೋಣಪಿ, ಕಾರ್ಯದರ್ಶಿ ವಿನೋದ್ ಕನಮಡಿ, ಖಜಾಂಚಿ ಅಶೋಕ ಹೊಸೂರ, ಕಿರಣ ಸಿರಗುಪ್ಪಿ, ಬಸವರಾಜ ಬಾವಣ್ಣವರ, ಬಾಹುಸಾಹೇಬ ನಾಯಿಕ, ವೈಭವ ಪೋತದಾರ, ಡಾ.ರವಿ ಗಾವಡೆ, ಭಾರತಿ ಕೋರೆ, ಐರಾವತಿ ಕವಲಾಪುರೆ, ಭಾರತಿ ಸಂಕ್ರಟ್ಟಿ, ಮೋಹನ ಕಾಂಬಳೆ, ಮಂಜುನಾಥ ಬಡಿಗೇರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ವಿನೋದ ಕನಮಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಿರಣ ಶಿರಗುಪ್ಪಿ, ಭಾರತಿ ಕೋರೆ ಕಾರ್ಯಕ್ರಮ ನಿರೂಪಿಸಿದರು. ಅಮಿತ ಮಹಾಜನ ವಂದಿಸಿದರು.



ರಸ್ತೆ-ಚರಂಡಿ ಕಾಮಗಾರಿಗಳಿಗೆ ಚಾಲನೆ

ಬೆಳಗಾವಿ: ಗ್ರಾಮೀಣ ಕ್ಷೇತ್ರದ ಪಂತ ಬಾಳೇಕುಂದ್ರಿ ಗ್ರಾಮದ ಪಂತನಗರದಲ್ಲಿ ಸುಮಾರು 3.50 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ನೂತನ ಡಾಂಬರ್, ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ಕಾಮಗಾರಿಗಳಿಗೆ ಬುಧವಾರ ಭೂಮಿ ಪೂಜೆ ನೆರವೇರಿಸಿ ಚಾಲನೆ ನೀಡಲಾಯಿತು.

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ವಿಶೇಷ ಪ್ರಯತ್ನದಿಂದ ಈ ಮಹತ್ವದ ಕಾಮಗಾರಿಗಳಿಗೆ ಅನುದಾನ ಮಂಜೂರಾಗಿದ್ದು, ಸ್ಥಳೀಯರಲ್ಲಿ ಸಂತಸ ಮೂಡಿಸಿದೆ.

ಈ ವೇಳೆ ನಾಗೇಶ ದೇಸಾಯಿ, ಅಪ್ಸರ್ ಜಮಾದಾರ್, ಬಸವರಾಜ ಮ್ಯಾಗೋಟಿ, ಸಣ್ಣಯಲ್ಲಪ್ಪ ತಳವಾರ, ಸದಾಶಿವ ಹಿಟ್ಟಣಗಿ, ಮಹಾದೇವ್ ಕರಗಣ್ಣವರ, ಎಂ.ಆಯ್. ಪಾಟೀಲ, ಈರಣ್ಣ ಕೋಟಿ, ಮಲಗೌಡ ಕೊಡ್ಲಿ, ಕಲ್ಲಪ್ಪ ದೇಯಣ್ಣವರ್, ಬಿ.ಆಯ್. ತೆಂಗಿ, ಸುರೇಶ ಬರಗಾಳಿ, ಸಾಯಿರಾಮ್ ಜಂಬಗಿ, ಪ್ರೇಮ್ ಕೋಲಕಾರ ಸೇರಿದಂತೆ ಪ್ರಮುಖ ಪಕ್ಷದ ಮುಖಂಡರು, ಕಾರ್ಯಕರ್ತರು, ಊರಿನ ಪ್ರಮುಖರು ಹಾಗೂ ಮಹಿಳೆಯರು ಸೇರಿದಂತೆ ಇತರರು ಉಪಸ್ಥಿತರಿದ್ದರು.



ಅರ್ಜಿ ಆಹ್ವಾನ

ಬೆಳಗಾವಿ: ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ, 2ಬಿ, 3ಎ, 3ಬಿ ಮತ್ತು ಪ.ಜಾ, ಪ.ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿಗಳು https://shp.karnataka.gov.in/bcwd ವೆಬ್‌ಸೈಟ್‌ನ ಮೂಲಕ ಜೂನ್ 6 ರೊಳಗಾಗಿ ಆನ್‌ಲೈನಲ್ಲಿ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ, ತಾಲ್ಲೂಕು ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಕಲ್ಯಾಣ ಇಲಾಖೆ ಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದೆ.

ಬೇಡಿಕೆಗೆ ಆಗ್ರಹಿಸಿ ಔಷಧ ವ್ಯಾಪಾರಿಗಳ ಪ್ರತಿಭಟನೆ

ಬೆಳಗಾವಿ: ಆನ್‌ಲೈನ್ ಔಷಧಗಳ ಮಾರಾಟ ಜಾಲವನ್ನು ಬಂದ್ ಮಾಡಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಜಿಲ್ಲಾ ಔಷಧ ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘ, ರಿಟೇಲ್ ಫಾರ್ಮಸಿ ಅಸೋಸಿಯೇಷನ್ ಹಾಗೂ ವಿವಿಧ ಸಂಘಟನೆಗಳ ಮುಖಂಡರು ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.



ನಗರದ ರಾಣಿ ಚನ್ನಮ್ಮ ವೃತ್ತದಲ್ಲಿ ಸೇರಿದ ಪ್ರತಿಭಟನಕಾರರು ಕೆಲಕಾಲ ಮಾನವ ಸರಪಳಿ ನಿರ್ಮಿಸಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು. ತೋಳಿಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಸಂಜೆಯವರೆಗೆ ಧರಣಿ ನಡೆಸಿ, ಆನ್‌ಲೈನ್ ಫಾರ್ಮಸಿಗಳ ವಿರುದ್ಧ ಘೋಷಣೆ ಕೂಗಿದರು.

ಆನ್‌ಲೈನ್‌ನಲ್ಲಿ ಯಾವುದೇ ನಿಯಂತ್ರಣವಿಲ್ಲದೆ ಔಷಧಗಳ ಮಾರಾಟ ನಡೆಯುತ್ತಿದೆ. ಆಷಯಂಟಿಬಯೋಟಿಕ್ ಹಾಗೂ ವ್ಯಸನಕಾರಿ ಔಷಧಗಳ ದುರುಪಯೋಗ ಹೆಚ್ಚುತ್ತಿದೆ. ನಕಲಿ ಔಷಧ ಚೀಟಿಗಳ ಬಳಕೆ ಹೆಚ್ಚಳವಾಗಿದ್ದು, ಯುವಕರು ಡ್ರಗ್ಸ್‌ಗೆ ದಾಸರಾಗುತ್ತಿದ್ದಾರೆ ಎಂದು ಪ್ರತಿಭಟನಕಾರರು ಆರೋಪಿಸಿದರು.

ಜೀವರಕ್ಷಕ ಔಷಧಿಗಳ ಮೇಲೂ ಅತಿಯಾದ ರಿಯಾಯಿತಿ ನೀಡಲಾಗುತ್ತಿದೆ. ಇದರಿಂದ ಸಣ್ಣಪುಟ್ಟ ಔಷಧ ಅಂಗಡಿಗಳು ಮುಚ್ಚುವ ಹಂತಕ್ಕೆ ತಲುಪಿವೆ. ನೂರಾರು ಕುಟುಂಬಗಳು ಸಂಕಷ್ಟಕ್ಕೆ ಸಿಲುಕುತ್ತಿವೆ. ಆದ್ದರಿಂದ ಆನ್‌ಲೈನ್ ಔಷಧ ವ್ಯಾಪಾರವನ್ನು ಬಂದ್ ಮಾಡಬೇಕು. ವೈದ್ಯರ ಸಲಹೆ ಇಲ್ಲದೆ ಯಾವುದೇ ಔಷಧ ಸರಬರಾಜು ಆಗದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ಈ ವೇಳೆ ಸಂಘದ ಅಧ್ಯಕ್ಷ ಬಂಡು ಸದಲಗೆ, ಕಾರ್ಯದರ್ಶಿ ಸುಧೀರ ನಂಜಣ್ಣವರ ಹಾಗೂ ಖಜಾಂಚಿ ನಿತಿನ್ ಝುನ್ವರ್ ನೇತೃತ್ವ ವಹಿಸಿದ್ದರು.

ರಕ್ತದಾನ ಜೀವ ಉಳಿಸುವ ಮಹಾದಾನ

ಹಲ್ಯಾಳ: ಗ್ರಾಮದಲ್ಲಿ ಮೂರನೇ ಬಾರಿಗೆ ರಕ್ತ ದಾನ ಶಿಬಿರವನ್ನು ಆಯೋಜನೆ ಮಾಡಿದ್ದಾರೆ. ರಕ್ತದಾನ ಎಂಬುವುದು ಒಬ್ಬರ ಜೀವ ಉಳಿಸುವ ಮಹಾದಾನವಾಗಿದೆ. ನಿಮ್ಮ ಒಂದು ಯುನಿಟ್ ರಕ್ತವು ಮೂರು ಜನರಿಗೆ ಮರುಜೀವ ನೀಡುತ್ತದೆ. ಇದು ಅಪಘಾತ, ಹೆರಿಗೆ ಸಮಯದಲ್ಲಿ ಅಧಿಕ ರಕ್ತಸ್ರಾವವನ್ನು ತಡೆಯಲು ರಕ್ತದಾನವು ಸಹಕಾರಿಯಾಗಿದೆ. ಶಸ್ತ್ರಚಿಕಿತ್ಸೆ ಸಂದರ್ಭಗಳಲ್ಲಿ ಅತ್ಯಗತ್ಯವಾದದ್ದು. ಯಾರು ರಕ್ತದಾನ ಮಾಡುತ್ತಾರೋ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡು ಬರುತ್ತದೆ. ಉದಾಹರಣೆ ಹೃದಯದ ಆರೋಗ್ಯ ಸುಧಾರಿಸುವುದು, ಕ್ಯಾಲೊರಿಗಳು ಕರಗುವುದು ಮತ್ತು ಹೊಸ ರಕ್ತಕಣಗಳು ಉತ್ಪತ್ತಿಯಾಗುತ್ತದೆ ಹೀಗೆ ಮುಂತಾದ ಪ್ರಯೋಜನಗಳಿವೆ ಎಂದು ಆರೋಗ್ಯ ಆರೋಗ್ಯ ನಿರೀಕ್ಷಣಾಧಿಕಾರಿ ಶಿವಬಸು ನಾಯಿಕ ಮಾತನಾಡಿದರು.

ಕಳೆದ ಎರಡು ಮೂರು ವರ್ಷಗಳಿಂದಲೂ ಹಲ್ಯಾಳ ಗ್ರಾಮದ ಪ್ರಥಮಿಕ ಆರೋಗ್ಯ ಕೇಂದ್ರ ಮತ್ತು ರಾಷ್ಟ್ರೋತ್ಥಾನ ಶಿಕ್ಷಣ ಸಂಸ್ಥೆಯ ಸಹಯೋಗದಲ್ಲಿ ರಕ್ತ ದಾನ ಶಿಬಿರವನ್ನು ಆಯೋಜನೆ ಮಾಡುತ್ತಿದ್ದೇವೆ ಪ್ರತಿ ಸಲ ಗ್ರಾಮಸ್ಥರು ನಮಗೆ ಸಹಕಾರ ಮಾಡುತ್ತಾರೆ ಎಂದು ಡಾ. ಪ್ರವೀಣ ದಬಾಡಿ ಮಾತನಾಡಿದರು.

ಇದು ಕೇವಲ ರಕ್ತ ದಾನ ಅಲ್ಲ ಇದು ಪ್ರಾಣ ದಾನ್ ಎಂದರೆ ತಪ್ಪಾಗದು ಅಪಘಾತ



ದಲ್ಲಿ ಸಿಕ್ಕೂ ರಕ್ತ ಶ್ರವಿಸಿರುವ ಯಾವದೇ ವ್ಯಕ್ತಿಯ ಜೀವ ಉಳಿಸಲು ರಕ್ತ ಬೇಕು ಇಂತಹ ಜೀವ ಗಳನ್ನು ಉಳಿಸಲು ರಕ್ತದಾನ ಮಾಡಬೇಕು ಎಂದು ಪಿಎಚ್‌ಸಿಆರ್‌ಓ ಆದ ಎಂ.ಬಿ.ಪಾಟೀಲ ಮಾತನಾಡಿದರು.

ಈ ವೇಳೆ ಸುರೇಶ ಜಾಧವ (ಎನ್ /ಓ ಗಿರೀಶ್ ಜಮಖಂಡಿ, ಸಂಕೇತ ಮಾಳಸಿದ್ದ (ಸಿಎಚ್‌ಓ)ಜ್ಯೋತಿ ಚೌಗಲಾ, (ಪಿಎಚ್‌ಪಿಓ) ವಿ.ಜಿ.ನ್ಯಾಮಗೌಡರ, ಡಾ.ಅದಿತಿ ಕೇಕೂಡ, (ಬಿಮ್ಸ್ ವೈದ್ಯಧಿಕಾರಿಗಳು) ಆಶಾ ಕಾರ್ಯಕರ್ತರು ಮತ್ತು ಸಿಬ್ಬಂದಿ ವರ್ಗದವರಿದ್ದರು.


ಉತ್ತಮ ಓದಿನಿಂದ ಸಾಧಕರಾಗಿ: ಪ್ರಕಾಶ

ಯಮಕನಮರಡಿ: ವಿದ್ಯಾರ್ಥಿಗಳು ಸತತ ಅಧ್ಯಯನಶೀಲರಾಗಿ ಓದಿ ಸಾಧಕರಾಗಿಬೇಕು. ಕಾಲೇಜಿಗೆ ತಮ್ಮ ಕುಟುಂಬಕ್ಕೆ ಕೀರ್ತಿ ತರಬೇಕು. ತಮ್ಮ ಮೇಲೆ ಭರವಸೆ ಇಟ್ಟ ತಂದೆ ತಾಯಿಗೆ ನ್ಯಾಯ ಒದಗಿಸಿದರೆ ಅದುವೆ ನೀವು ಮಾಡುವ ಪರೋಪಕಾರ ಎಂದು ಕಸಾಪ ಅಧ್ಯಕ್ಷ ಪ್ರಕಾಶ ಅವಲಕ್ಕಿ ಹೇಳಿದರು.

ಸಂಕೇಶ್ವರದ ಎಸ್‌ಡಿವಿ ಸಂಘದ ಬಿಬಿಎ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭದಲ್ಲಿ ಪಾರಿತೋಷಕ ವಿತರಿಸಿ ಮಾತನಾಡಿದರು.

ಸಂಘ ಕಾರ್ಯದರ್ಶಿ ಐ.ಸಿ.ಕೋಟಗಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂದಿನ ವಿದ್ಯಾರ್ಥಿಗಳು ಪಾಶ್ಚಾತ್ಯ ಸಂಸ್ಕೃತಿಗೆ ಅಂಟಿಕೊಳ್ಳದೆ, ರಾಮಾಯಣ, ಮಹಾಭಾರತ ಆದರ್ಶ ಪಾತ್ರಗಳ ಪ್ರೇರಣೆ ನಿಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಬದುಕನ್ನು ಸಾರ್ಥಕ ಮಾಡಿಕೊಳ್ಳಿ ಎಂದರು.

ಸಂಘದ ಆಡಳಿತಗಾರ ಬಿ.ಎ.ಪೂಜಾರ, ಪ್ರಾಚಾರ್ಯ ಸಂತೋಷ ತೆರಣಿಮಠ ಕಾಲೇಜಿನ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು. ಹುಕ್ಕೇರಿ ಕಸಾಪದ ಪರವಾಗಿ ಸಾಧಕ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ಹಾಗೂ ಗ್ರಂಥ ನೀಡಿ ಗೌರವಿಸಿದರು.



ಸೌಕರ್ಯ ಒದಗಿಸುವುದೇ ನಮ್ಮ ಆದ್ಯತೆ: ಜಾರಕಿಹೊಳಿ

ಯಮಕನಮರಡಿ: ಗ್ರಾಮೀಣ ಭಾಗದ ಜನರಿಗೆ ಉತ್ತಮ ರಸ್ತೆ ಹಾಗೂ ಮೂಲಸೌಕರ್ಯ ಒದಗಿಸುವುದು ನಮ್ಮ ಆದ್ಯತೆಯಾಗಿದೆ. ಈ ನೂತನ ಸೇತುವೆ ನಿರ್ಮಾಣದಿಂದಾಗಿ ಹೊಸ ವಂಟಮೂರಿ ಹಾಗೂ ಮಳ್ಳೊಳ್ಳಿ ಭಾಗದ ಜನರಿಗೆ ಬಹುದಿನಗಳ ಸಂಚಾರ ಸಮಸ್ಯೆ ನಿವಾರಣೆಯಾಗಲಿದೆ ಎಂದು ಲೋಕೋಪಯೋಗಿ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಯಮಕನಮರಡಿ ಮತಕ್ಷೇತ್ರದ ಹೊಸ ವಂಟಮೂರಿ ಗ್ರಾಮದಲ್ಲಿ ಕೆಆರ್‌ಡಿಎಲ್ ಯೋಜನೆಯಡಿ ಒಟ್ಟು 1 ಕೋಟಿ ರೂ. ವೆಚ್ಚದಲ್ಲಿ ಹೊಸ ವಂಟಮೂರಿ-ಮಳ್ಳೊಳ್ಳಿ ಸಂಪರ್ಕ ಕಲ್ಪಿಸುವ ನೂತನ ಸೇತುವೆ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿ, ಹೊಸ ವಂಟಮೂರಿ ಗ್ರಾಮದ ಜನರು ಪ್ರತಿ ಬಾರಿಯೂ ನಮ್ಮನ್ನು ಆಶೀರ್ವದಿಸಿದ್ದಾರೆ. ಆದ್ದರಿಂದ ಈ ಭಾಗಕ್ಕೆ ಅವಶ್ಯವಿರುವ 90% ಕೆಲಸ ಮಾಡಿ ಕೊಟ್ಟಿದ್ದೇವೆ ಎಂದರು.

ಹೊಸ ವಂಟಮೂರಿ ಗ್ರಾಮದಿಂದ ಹಾಲಬಾಂವಿ ಐಟಿಬಿಪಿ ವರೆಗೆ ಅಂದಾಜು 10 ಲಕ್ಷ ರೂ. ವೆಚ್ಚದ ಬೀದಿ ದೀಪ ಅಳವಡಿಕೆ ಕಾಮಗಾರಿಗೂ ಸಚಿವರು ಚಾಲನೆ ನೀಡಿದರು.




ಈ ವೇಳೆ ಬೆಳಗಾವಿ ಇಂಡೋ-ಟಿಬೆಟಿಯನ್ ಬಾರ್ಡರ್ ಪೊಲೀಸ್ 44ನೇ ಬೆಟಾಲಿಯನ್ ಮುಖ್ಯಸ್ಥ ಎಸ್.ಜುನಜಾ, ಬೆಳಗಾವಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಪೊಲೀಸ್ ಆಯುಕ್ತ ಭೂಷಣ್ ಗುಲಾಬರಾವ್ ಬೊರಸೆ, ಜಿಪಂ ಸಿಇಓ ರಾಹುಲ್ ಶಿಂಧೆ, ಹುಕ್ಕೇರಿ ತಾಪಂ ಇಓ ಪಿ.ಆರ್.ಮಲ್ಲಾಡದ, ನೀರಾವರಿ, ಲೋಕೋಪಯೋಗಿ ಇಲಾಖೆ ಅಧಿಕಾರಿಗಳು, ಮುಖಂಡರಾದ ದಯಾನಂದ ಪಾಟೀಲ, ರಾಜು ದರಗಶೆಟ್ಟಿ, ಕಿರಣ ರಜಪೂತ, ಮಲಗೌಡ ಪಾಟೀಲ, ಸ್ಥಳೀಯ ಜನಪ್ರತಿನಿಧಿಗಳು, ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಶಕ್ತಿ ಯೋಜನೆಯಲ್ಲಿ ತಾರತಮ್ಯ ಖಂಡಿಸಿ ಪ್ರತಿಭಟನೆ

ಗೋಕಾಕ: ಲಿಂಗತ್ವ ಅಲ್ಪಸಂಖ್ಯಾತರು ಶಕ್ತಿ ಯೋಜನೆಯಲ್ಲಿ ನಡೆಯುತ್ತೀರುವ ತಾರತಮ್ಯ ಖಂಡಿಸಿ ನಗರದ ಬಸವೇಶ್ವರ ವೃತ್ತದಲ್ಲಿ ಪ್ರತಿಭಟನೆ ನಡೆಸಿ ಮೆರವಣಿಗೆ ಮೂಲಕ ಮಿನಿ ವಿಧಾನಸೌಧದ ವರೆಗೆ ತೆರಳಿ ತಹಶೀಲದಾರ್ ಮೂಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ರಾಜ್ಯದ ಹಲವು ಭಾಗಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಗಳಿಗೆ ಬಸ್ ಟಿಕೇಟ ನೀಡಲು ಕೆಲ ನಿರ್ವಾಹಕರು ನಿರಾಕರಿಸುವದು, ಗುರುತಿನ ಬಗ್ಗೆ ಪ್ರಶ್ನಿಸಿ ಅವಮಾನ ಮಾಡುವದು, ಸಾರ್ವಜನಿಕವಾಗಿ ಕಿರುಕುಳ ನೀಡುತ್ತಿರುವ ಘಟನೆಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನವಿಯಲ್ಲಿ ತಿಳಿಸಿದ್ದಾರೆ.

ಐನಾ ಶೇಕ, ಮೋಹನಗೌಡ ಪಾಟೀಲ, ಮೀಶಾ ತಳವಾರ, ಮುಸಖಾನ್, ಜಾಸಮೀನ್, ಭೀಮಪ್ಪ ಸೇರಿದಂತೆ ಅನೇಕರು ಇದ್ದರು.



ಕಾಮಗಾರಿಗಳಿಗೆ ಚಾಲನೆ



ನೇಸರಗಿ: ಸಮೀಪದ ಜಕನಾಯ್ಕನಕೊಪ್ಪ ಗ್ರಾಮದಲ್ಲಿ ಸಿಸಿ ರಸ್ತೆ, ವಾಲ್ಮೀಕಿ ಭವನ ನಿರ್ಮಾಣಕ್ಕೆ ಅಂದಾಜು 43 ಲಕ್ಷ ರೂ. ಅನುದಾನದ ಕಾಮಗಾರಿಗಳಿಗೆ ಮತ್ತು ಲಕ್ಕುಂಡಿ ಗ್ರಾಮದಲ್ಲಿ ಹೊಲದ ರಸ್ತೆ ಕಡಿಕರಣ, ಶ್ರೀವೀರಭದ್ರೇಶ್ವರ ದೇವಸ್ಥಾನದಿಂದ ಕಡಿಕರಣ ಮತ್ತು ಸುನದೊಳಿ ಅವರ ಮನೆಯವರೆಗೆ ಸಿಸಿ ರಸ್ತೆ ಮತ್ತು ಸಿಸಿ ಚರಂಡಿ ಅಂದಾಜು 45 ಲಕ್ಷ ರೂ. ನಿರ್ಮಾಣ ಕಾಮಗಾರಿಗಳಿಗೆ ಭೂಮಿಪೂಜೆ ಕಿತ್ತೂರು ಶಾಸಕ ಬಾಬಾಸಾಹೇಬ ಪಾಟೀಲ ನೆರವೇರಿಸಿದರು.

ಈ ಸಂದರ್ಭದಲ್ಲಿ ಜಕನಾಯ್ಕನಕೊಪ್ಪ ಮತ್ತು ಲಕ್ಕುಂಡಿ ಗ್ರಾಮಗಳ, ಗುರುಮಾತೆ, ಸಮಸ್ತ ಗುರು ಹಿರಿಯರು, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಕಿರುಸುದ್ದಿ

ಆನ್‌ಲೈನ್ ಔಷಧ ಮಾರಾಟಕ್ಕೆ ವಿರೊಧ

ಯರಗಟ್ಟಿ: ತಾಲೂಕಿನಾದ್ಯಂತ ಮೆಡಿಕಲ್ ಶಾಪ್‌ಗಳು ಬಂದ್ ಮಾಡಿ ತಹಶೀಲ್ದಾರ್ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಿದರು. ಆನ್‌ಲೈನ್ ಇ-ಫಾರ್ಮಸಿಗಳು ಮತ್ತು ಕ್ವಿಕ್ ಕಾಮರ್ಸ್ ಆ್ಯಪ್‌ಗಳ ಮೂಲಕ ಕಾನೂನು ಬಾಹಿರವಾಗಿ ಔಷಧ ಮಾರಾಟ ಮಾಡುವುದನ್ನು ವಿರೋಧಿಸಿ ಆಲ್ ಇಂಡಿಯಾ ಆರ್ಗನೈಸೇಶನ್ ಆಫ್ ಕೆಮಿಸ್ಟ್ ಅಂಡ್ ಡ್ರಗ್ಗಿಸ್ಟ್ (ಎಐಒಸಿ) ದೇಶಾದ್ಯಂತ ಪ್ರತಿಭಟನೆಗೆ ಕರೆ ನೀಡಿದರಿಂದ ಬುಧವಾರ ಯರಗಟ್ಟಿ ಔಷಧ ಮಾರಾಟ ವ್ಯಾಪಾರಿಗಳ ಸಂಘ ಬಂದ್‌ಗೆ ಬೆಂಬಲ ನೀಡಿ, ಮೆಡಿಕಲ್‌ಗಳು ಬಂದ್ ಮಾಡಿ ಮೌನ ಪ್ರತಿಭಟನೆ ಮಾಡಿದರು. ಈ ವೇಳೆ ಹೇಮಂತ ಮಳಗಲಿ, ಶಶಿಕಾಂತ ತೋಡಕರ, ರವಿ ಮದ್ದಾನಿ, ವೀರಭದ್ರಪ್ಪ ಮಲ್ಲಾಡ, ಸಾಗರ ಹೊಸಕೊಟ್ಟಿ, ಆರೀಫ್ ಮುಲ್ಲಾ, ಅಭಿಷೇಕ ಕೊಪ್ಪದ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಗುರುವಂದನೆ, ಸತ್ಕಾರ ಸಮಾರಂಭ ಮೇ 24ರಂದು

ಬೆಳಗಾವಿ: ಚಿಕ್ಕೋಡಿ ಆರ್.ಡಿ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದ ಉಪನ್ಯಾಸಕ ಎನ್.ವಿ.ಶಿರಗಾಂವಕರ ನಿವೃತ್ತಿ ನಿಮಿತ್ತ ಗುರುವಂದನೆ ಹಾಗೂ ಸತ್ಕಾರ ಸಮಾರಂಭ ಆರ್.ಡಿ.ಪ್ರೌಢಶಾಲೆ, ಆರ್.ಡಿ ಕಾಲೇಜು ಹಾಗೂ ಜಿಎಸ್‌ಇಎಸ್ ಪ್ರೌಢ ಶಾಲೆಯ ವಿದ್ಯಾರ್ಥಿಗಳ ವತಿಯಿಂದ ಮೇ 24ರಂದು ಬೆಳಗ್ಗೆ 10ಕ್ಕೆ ಚಿಕ್ಕೋಡಿ ಶ್ರೀಪದ್ಮಾ ಮಂಗಲ ಕಾರ್ಯಾಲಯದಲ್ಲಿ ಆಯೋಜಿಸಲಾಗಿದೆ. ಚಿಕೋಡಿ ಸಂಪಾದನಾ ಚರಮೂರ್ತಿ ಮಠದ ಸಂಪಾದನಾ ಶ್ರೀಗಳು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಕೇಂದ್ರದ ಮುಖ್ಯಸ್ಥರು ಎಂ.ಎಸ್.ದಿವಾಕರ ಹಾಗೂ ಜಿಪಂ ಸಿಇಒ ರಾಹುಲ ಶಿಂಧೆ, ಕೋಲಾರ ಜಿಪಂ ಸಿಇಒ ಡಾ.ಪ್ರವೀಣ ಬಾಗೇವಾಡಿ ಇವರುಗಳು ಮುಖ್ಯ ಅಥಿಗಳಾಗಿ ಆಗಮಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಕ್ಕಳ ಆಧಾರ್ ನವೀಕರಣಕ್ಕೆ ಉಚಿತ ಅವಕಾಶ

ಬೆಳಗಾವಿ: ಜಿಲ್ಲೆಯ ಎಲ್ಲ ಆಧಾರ ಕೇಂದ್ರಗಳಲ್ಲಿ 5ರಿಂದ 17 ವಯೋಮಿತಿಯ ಮಕ್ಕಳ ಆಧಾರ್ ಸಂಖ್ಯೆಗೆ ಕಡ್ಡಾಯ ಬಯೋಮೆಟ್ರಿಕ್ ಅಪ್ಡೇಟ್‌ಗಳಿಗೆ ಸೆಪ್ಟೆಂಬರ್ 30ರವರೆಗೆ ಉಚಿತವಾಗಿ ಅವಕಾಶ ಕಲ್ಪಿಸಲಾಗಿರುತ್ತದೆ. ಪೋಷಕರು ತಮ್ಮ ಮಕ್ಕಳ ಆಧಾರ್ ಕಾರ್ಡ್ ಹಾಗೂ ಸಂಬಂಧಿಸಿದ ದಾಖಲೆಗಳೊಂದಿಗೆ ತಮ್ಮ ಹತ್ತಿರದ ಆಧಾರ್ ಕೇಂದ್ರಗಳಿಗೆ ಭೇಟಿ ನೀಡಿ ನವೀಕರಣಿಸಿಕೊಳ್ಳಬಹುದಾಗಿದೆ. ಇದರಿಂದ ಮಕ್ಕಳ ಶಾಲೆಯ ದಾಖಲಾತಿ, ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳು, ಸರ್ಕಾರದ ವಿವಿಧ ಯೋಜನೆಗಳು, ವಿದ್ಯಾರ್ಥಿವೇತನ, ತರಬೇತಿಗಳು ಸೇರಿದಂತೆ ಇತರೆ ಯೋಜನೆಗಳ ಲಾಭ ಪಡೆಯಲು ಅನುಕೂಲವಾಗಲಿದೆ. ಜಿಲ್ಲೆಯ ಎಲ್ಲಾ ಪೋಷಕರು ಈ ಪ್ರಯೋಜನ ಜವಾಬ್ದಾರಿಯಿಂದ ಬಳಸಿಕೊಂಡು ತಮ್ಮ ಮಕ್ಕಳಿಗೆ ಸರ್ಕಾರದ ಯೋಜನೆಗಳನ್ನು ತಲುಪಿಸುವಲ್ಲಿ ಪ್ರಮುಖ ಪಾತ್ರವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ವಿದ್ಯುತ್ ವ್ಯತ್ಯಯ ಮೇ 23ರಂದು

ಬೆಳಗಾವಿ: ಕವಿಪ್ರನಿನಿ ವತಿಯಿಂದ ಮೊದಲನೇಯ ತ್ರೈಮಾಸಿಕ ಹಾಗೂ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ ಮೇ 23ರಂದು ಬೆಳಗ್ಗೆ 9ರಿಂದ ಸಂಜೆ 6ರವರೆಗೆ 110 ಕೆವಿ ಹಿರೇಬಾಗೇವಾಡಿ ಉಪಕೇಂದ್ರದಿಂದ ಸರಬರಾಜು ಆಗುವ ಬೆಳಗಾವಿ ತಾಲೂಕಿನ ಮುತ್ನಾಳ, ವಿರಕನಕೊಪ್ಪ, ಆರಳಿಕಟ್ಟಿ, ಬಸಾಪೂರ, ಹಿರೇಬಾಗೇವಾಡಿ, ಭೆಂಡಿಗೇರಿ, ಗಜಪತಿ, ಅಂಕಲಗಿ, ಹುಲಿಕವಿ, ಕೆ.ಕೆ.ಕೊಪ್ಪ, ಕಲಾರಕೊಪ್ಪ, ಸಿದ್ದನಹಳ್ಳಿ, ಬಡೇಕೊಳ್ಳಮಠ, ಹಲಗಿಮರ್ಡಿ, ನಾಗೇನಟ್ಟಿ, ನಾಗೇರಹಾಳ, ಬಡಸ, ನಂದಿಹಳ್ಳಿ ಹಾಗೂ ಕುಕಡೊಳ್ಳಿ ಗ್ರಾಮಗಳಿಗೆ ಹಾಗೂ ಖಾನಾಪೂರ ತಾಲೂಕಿನ ಹಿರೇಹಟ್ಟಿಹೊಳಿ, ಗಾಡಿಕೊಪ್ಪ, ಹಾಗೂ ವಾರಿಶ್ವಾಡ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪಸೆಟ್ಟಗಳ ಏರಿಯಾಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂಬ ಕಾರ್ಯನಿರ್ವಾಹಕ ಇಂಜಿನೀಯರರು, ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಳಗಾವಿ: ಡಾ.ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ನೈಜ ಚರ್ಮ ಕುಶಲಕರ್ಮಿಗಳಿಗೆ ಕರಕುಶಲತೆಯ ಕೌಶಲ್ಯ ಹಾಗೂ ಪಾದರಕ್ಷೆಗಳ ತಯಾರಿಕಾ ಸ್ಪರ್ಧೆ ಆಯೋಜಿಸಲಾಗಿದೆ. ಆಸಕ್ತರು ಅರ್ಜಿ https://lidkar.comವೆಬ್ ಸೈಟ್‌ನಲ್ಲಿ ಅರ್ಜಿ ನಮೂನೆಯನ್ನು ಡೌನ್ಲೋಡ್ ಮಾಡಿಕೊಂಡು ಮೇ 30 ರೊಳಗಾಗಿ ಭರ್ತಿ ಮಾಡಿ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ, ಕೇಂದ್ರ ಕಛೇರಿ ಡಾ.ಬಾಬು ಜಗಜೀವನ ರಾಂ ಲಿಡಕರ್ ಭವನ ಮಿಲ್ಲರ್ಸ್ ಟ್ಯಾಂಕ್ ಬಂಡ ಏರಿಯಾ ವಸಂತ ನಗರ ಬೆಂಗಳೂರು-560052 ಇಲ್ಲಿಗೆ ಅಂಚೆ ಮೂಲಕ ಸಲ್ಲಿಸಬಹುದು ಎಂದು ನಿಗಮ ಜಿಲ್ಲಾ ಸಂಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಯರಗಟ್ಟಿ: ತಾಲೂಕಿನಾದ್ಯಂತ ಮೆಡಿಕಲ್ ಶಾಪ್‌ಗಳು ಬಂದ್ ಮಾಡಿ ತಹಶೀಲ್ದಾರ್ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಿದರು. ವೇಳೆ ಹೇಮಂತ ಮಳಗಲಿ, ಶಶಿಕಾಂತ ತೋಡಕರ, ರವಿ ಮದ್ದಾನಿ, ವೀರಭದ್ರಪ್ಪ ಮಲ್ಲಾಡ, ಸಾಗರ ಹೊಸಕೊಟ್ಟಿ, ಆರೀಫ್ ಮುಲ್ಲಾ, ಅಭಿಷೇಕ ಕೊಪ್ಪದ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಪಾಲಿಕೆಯಿಂದ ಸ್ವಚ್ಛ ಸರ್ವೇಕ್ಷಣ ಅಭಿಯಾನ

ಬೆಳಗಾವಿ : ಭಾರತ ಸರ್ಕಾರದ ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛ ಸರ್ವೇಕ್ಷಣ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಪಾಲಿಕೆ ಪರಿಸರ ವಿಭಾಗದ ಕಾರ್ಯಪಾಲಕ ಅಭಿಯಂತರ ಹಣಮಂತ ಕಲಾದಗಿ ತಿಳಿಸಿದರು.



ಬುಧವಾರ ಈ ಕುರಿತು ಪಾಲಿಕೆ ಕಚೇರಿಯಲ್ಲಿ ಮಾಹಿತಿ ನೀಡಿದ ಅವರು, ಭಾರತ ಸರ್ಕಾರವು 2016 ರಿಂದ ಸ್ವಚ್ಛ ಭಾರತ್ ಮಿಷನ್ ಆರಂಭಿಸಿದ್ದು, ಅಭಿಯಾನದಲ್ಲಿ ಮಹಾನಗರ ಪಾಲಿಕೆ ಪಾಲ್ಗೊಂಡಿದ್ದು, ಪಾಲಿಕೆ ಆಯುಕ್ತ ಕಾರ್ತಿಕ್ ಎಂ. ನಿರ್ದೇಶನದಂತೆ ಸ್ವಚ್ಛ ಸರ್ವೇಕ್ಷಣ ಅಭಿಯಾನ ಆರಂಭಿಸಲಾಗಿದೆ. ಈಗಾಗಲೇ ಅಭಿಯಾನದಲ್ಲಿ ಪಾಲ್ಗೊಂಡು ನಗರದ ಸುಮಾರು 16 ಸಾವಿರ ಜನ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ.

ಪಾಲಿಕೆಯಿಂದ ಅಭಿಯಾನದ ಪ್ರತಿನಿಧಿಗಳು ಸಹ ವಿವಿಧ ಸಂಸ್ಥೆಗಳಿಗೆ ಹಾಗೂ ಸಾರ್ವಜನಿಕ ಸ್ಥಳಗಳಿಗೆ ಭೇಟಿ ನೀಡುತ್ತಿದ್ದಾರೆ. ಅವರೊಂದಿಗೆ ಸಹಕರಿಸಿ ಇಲ್ಲವೇ ಸ್ವತಹ ತಾವೇ ಆ್ಯಪ್ ಮೂಲಕ ಅಭಿಪ್ರಾಯವನ್ನು ತಿಳಿಸಿ ಅಭಿಯಾನ ಯಶಸ್ವಿಗೊಳಿಸಬೇಕೆಂದು ಹಣಮಂತ ಕಲಾದಗಿ ಸಾರ್ವಜನಿಕರಲ್ಲಿ ಕೋರಿದ್ದಾರೆ.



ಗೋಕಾಕ: ಇಲ್ಲಿಯ ಶಿಕ್ಷಣ ಇಲಾಖೆ ಸಮೂಹ ಸಂಪನ್ಮೂಲ ವ್ಯಕ್ತಿ ಮಧುಮತಿ ಪಾಟೀಲ ಇವರಿಗೆ ಸಾಧಕ ರತ್ನ ರಾಜ್ಯ ಪ್ರಶಸ್ತಿ ದೊರೆತ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲೂಕ ಘಟಕದ ಸಹಕಾರ್ಯದರ್ಶಿಯಾಗಿ ಆಯ್ಕೆಯಾದ ನಿಮಿತ್ತ ಶಿಕ್ಷಕರ ಸಂಘ ಹಾಗೂ ಹಿತೈಷಿಗಳು ನಗರದಲ್ಲಿ ಇತ್ತೀಚೆಗೆ ಸತ್ಕರಿಸಿದರು. ಬಿಸಿಯೂಟ ಯೋಜನಾಧಿಕಾರಿ ಎ.ಬಿ.ಮಲಬನ್ನವರ, ಸಂಘದ ಜಿಲ್ಲಾಧ್ಯಕ್ಷ ಎಸ್.ಎಂ ಲೋಕನ್ನವರ, ತಾಲೂಕ ಪದಾಧಿಕಾರಿಗಳಾದ ಎಸ್.ಬಿ.ಕಲ್ಲಟ್ಟಿ, ಕೆ.ಕೆ.ಹೊಳಕರ, ಎಸ್.ಎಸ್.ನಾಯಿಕ, ಕಬ್ಬೂರ, ಕಮ್ಮಾರ ಸೇರಿದಂತೆ ಅನೇಕರು ಇದ್ದರು.

ಕಾಮಗಾರಿ ಸ್ಥಗಿತ | ಗ್ರಾಮಸ್ಥರಲ್ಲಿ ಹೆಚ್ಚಿದ ಪ್ರವಾಹ ಭೀತಿ

ಕಾಮಗಾರಿ ಶೀಘ್ರ ಪೂರ್ಣಗೊಳಿಸಿ

ಎಸ್.ಆರ್.ಗುರುಬಸಣ್ಣವರ

ದಿಗಂತ ವಿಶೇಷ

ಸುರೇಬಾನ: ಸಮೀಪದ ಹಂಪಿಹೊಳಿ ಗ್ರಾಮದಲ್ಲಿ ಮಲಪ್ರಭಾ ನದಿಗೆ ನಿರ್ಮಾಣವಾಗುತ್ತಿರುವ ತಡೆಗೋಡೆ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿರುವ ಹಿನ್ನೆಲೆ, ಮಳೆಗಾಲ ಆರಂಭದ ಹಂತದಲ್ಲೇ ಗ್ರಾಮಸ್ಥರಲ್ಲಿ ಮತ್ತೆ ಪ್ರವಾಹ ಭೀತಿ ಮನೆಮಾಡಿದೆ.

2019ರಲ್ಲಿ ಸಂಭವಿಸಿದ್ದ ಭೀಕರ ಪ್ರವಾಹದಿಂದ ಮಲಪ್ರಭಾ ನದಿ ಪಾತ್ರದ ಹಲವು ಗ್ರಾಮಗಳು ಜಲಾವೃತಗೊಂಡಿದ್ದವು. ಹಂಪಿಹೊಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಿಗೆ ಅಪಾರ ಪ್ರಮಾಣದ ನೀರು ನುಗ್ಗಿ ಸಾವಿರಾರು ಮನೆಗಳು ಹಾನಿಯಾಗಿದ್ದವು. ರೈತರ ಬೆಳೆಗಳು ಸಂಪೂರ್ಣ ನಾಶವಾಗಿ ಜನಜೀವನ ಅಸ್ತವ್ಯಸ್ತಗೊಂಡಿತ್ತು. ಈ ಹಿನ್ನೆಲೆ ಅಂದಿನ ಶಾಸಕ ಮಹಾದೇವಪ್ಪ ಎಸ್.ಯಾದವಾಡ ಪ್ರಯತ್ನದಿಂದ ಹಂಪಿಹೊಳಿ ಗ್ರಾಮಕ್ಕೆ ಪ್ರವಾಹ ನೀರು ನುಗ್ಗದಂತೆ ಮಲಪ್ರಭಾ ನದಿಗೆ ತಡೆಗೋಡೆ ನಿರ್ಮಾಣ ಮಾಡಲು ಸರ್ಕಾರದಿಂದ ಸುಮಾರು 126 ಕೋಟಿ ರೂ. ಅನುದಾನ ಮಂಜೂರು ಮಾಡಲಾಗಿತ್ತು.

2023ರಲ್ಲಿ ಕಾಮಗಾರಿ ಆರಂಭಗೊಂಡಿದ್ದರೂ, ನಾಲ್ಕು ವರ್ಷಗಳು ಕಳೆದರೂ ಕಾಮಗಾರಿ ಪೂರ್ಣಗೊಂಡಿಲ್ಲ ಎಂಬುದು ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಗಿದೆ. ಪ್ರಸ್ತುತ ಕೆಲ ದಿನಗಳಿಂದ ಕಾಮಗಾರಿ ಸಂಪೂರ್ಣ ಸ್ಥಗಿತಗೊಂಡಿದ್ದು, ಮಳೆಗಾಲ ಸಮೀಪಿಸುತ್ತಿರುವುದರಿಂದ ಗ್ರಾಮಸ್ಥರು ಆತಂಕದಲ್ಲಿದ್ದಾರೆ.

ಮತ್ತೊಮ್ಮೆ ಮಲಪ್ರಭಾ ನದಿಯಲ್ಲಿ ಪ್ರವಾಹ ಉಂಟಾದರೆ ಹಂಪಿಹೊಳಿ ಗ್ರಾಮ ಭಾರೀ ಸಂಕಷ್ಟಕ್ಕೆ ಸಿಲುಕಲಿದೆ. ಅಧಿಕಾರಿಗಳು ಹಾಗೂ ಸರ್ಕಾರ ತಕ್ಷಣ ಗಮನಹರಿಸಿ ಕಾಮಗಾರಿ ಶೀಘ್ರ ಪೂರ್ಣಗೊಳಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ. ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ವೇಗಗೊಳಿಸಿ ಗ್ರಾಮಸ್ಥರ ಆತಂಕ ನಿವಾರಿಸಬೇಕೆಂಬುದು ಸಾರ್ವಜನಿಕರ ಒತ್ತಾಯವಾಗಿದೆ.



> ರೈತರ 58 ಎಕರೆ ಜಮೀನನ್ನು ವಶಪಡಿಸಿಕೊಂಡು ಅವರಿಗೆ ಪರಿಹಾರ ಕಲ್ಪಿಸಬೇಕಾಗಿದೆ. ಈ ಕಾಮಗಾರಿಗೆ ರೈತರಿಂದ ಪರಿಹಾರಕ್ಕಾಗಿ ಬೇಡಿಕೆ ಇರುವುದರಿಂದ ಕಾಮಗಾರಿ ನಿಂತಿದೆ. ಸರ್ಕಾರದಿಂದ 10 ರಿಂದ 15 ಕೋಟಿ ರೂ.ಗಳ ಬೇಡಿಕೆಗಾಗಿ ನಮ್ಮ ಇಲಾಖೆ ಎಂಡಿ ಬೆಂಗಳೂರಿನಲ್ಲಿ ಸರ್ಕಾರಕ್ಕೆ ಹಾಗೂ ರಾಮದುರ್ಗ ಶಾಸಕ ಅಶೋಕ ಪಟ್ಟಣ ರವರಿಗೆ ಅನುದಾನಕ್ಕಾಗಿ ಹಲವಾರು ಬಾರಿ ಪ್ರಸ್ತಾವನೆ ಕಳುಹಿಸಲಾಗಿದೆ. ಸರ್ಕಾರದಿಂದ ಹಣ ಮಂಜೂರಾತಿಗಾಗಿ ಕಾಯುತ್ತಿದ್ದೇವೆ.
>
> ■ ಪಿ.ಇ.ನಾಗರಾಜ, ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್ ನೀರಾವರಿ ಇಲಾಖೆ ಸುರೇಬಾನ.

> ನಮ್ಮ ಭೂಮಿ ವಶಪಡಿಸಿಕೊಂಡು ನಾಲ್ಕು ವರ್ಷ ಗತಿಸುತ್ತಾ ಬಂದಿದೆ. ನಮಗೆ ನಮ್ಮ ಭೂಮಿ ಎಷ್ಟು ವಶಪಡಿಸಿಕೊಂಡಿದ್ದಾರೆಂಬ ಮಾಹಿತಿ ಕೊಡಬೇಕು.ಅಲ್ಲದೆ ನಮ್ಮ ಭೂಮಿಯಲ್ಲಿ ಬೇಳೆದಿರುವ ತೆಂಗು ಹಾಗೂ ಇನ್ನಿತರ ಬೆಳೆಗಳಿಗೂ ಪರಿಹಾರದ ಅನುದಾನ ನೀಡಬೇಕು.
>
> ■ ನರ್ಸಪ್ಪಯ್ಯ ಎಸ್.ಇನಾಂದಾರ, ಹಂಪಿಹೊಳಿ ಗ್ರಾಮದ ರೈತರು.

ಜಾತ್ರಾ ಮಹೋತ್ಸವಕ್ಕೆ ದಿಂಗಾಲೇಶ್ವರ ಶ್ರೀಗಳು ಚಾಲನೆ

ಯರಗಟ್ಟಿ: ಸಮೀಪದ ಹರ್ಲಾಪೂರ ಧವಳೇಶ್ವರ ಹಿರೇಮಠದ ಜಗದ್ಗುರು ರೇಣುಕಾಚಾರ್ಯ ಮಹಾದ್ವಾರ, ಶ್ರೀಮಠದ ಜಾತ್ರಾ ಮಹೋತ್ಸವದ ವಿವಿಧ ಕಾರ್ಯಕ್ರಮಗಳಿಗೆ ಶಿರಹಟ್ಟಿ ಜಗದ್ಗುರು ಫಕ್ಕೀರ ದಿಂಗಾಲೇಶ್ವರ ಸ್ವಾಮೀಜಿ ಚಾಲನೆ ನೀಡಿದರು.

ನಂತರ ಮಾತನಾಡಿ, ಶ್ರೀಗಳು ಗ್ರಾಮೀಣ ಭಾಗದಲ್ಲಿ ಮಠಮಾನ್ಯಗಳು ಬೆಳೆಯುತ್ತಿರುವುದು. ಸಂತೋಷದ ವಿಷಯ. ಹರ್ಲಾಪೂರದ ಶ್ರೀಗಳು ರೇಣುಕಶಿವಯೋಗಿ ಶಿವಾಚಾರ್ಯ ಸ್ವಾಮೀಜಿ ಶ್ರೀಮಠವನ್ನು ಜೀರ್ಣೋದ್ದಾರ ಗೈಯುತ್ತಾ ಈಗ ನೂತನ ಮಹಾದ್ವಾರ ನಿರ್ಮಿಸಿದ್ದಾರೆ.

ಗುರು ಪರಂಪರೆಗೆ ಸೇರಿದ ಶ್ರೀಮಠವು ಸಾವಿರು ವರ್ಷಗಳ ಇತಿಹಾಸ ಹೊಂದಿರುವ ಧವಳೇಶ್ವರ ಹಿರೇಮಠದ ಭಕ್ತರ ಭಕ್ತಿಯೇ ಶ್ರೀಮಠದ ಶಕ್ತಿಯ ದ್ಯೋತಕವಾಗಿ ಈ ಮಹಾದ್ವಾರ ತಲೆ ಎತ್ತಿದೆ ಎಂದು ಹೇಳಿದರು.

ಭಕ್ತರ ಸಹಕಾರ ಮತ್ತು ನಂಬಿಕೆ ಭಾರತೀಯ ಸಂಸ್ಕೃತಿಯಲ್ಲಿ ಮಠಮಾನ್ಯಗಳ ಅಭಿವೃದ್ಧಿ, ದಾಸೋಹಮತ್ತುಸಮಾಜಮುಖಿಕಾರ್ಯಗಳಿಗೆ ಬೆನ್ನೆಲುಬಾಗಿದೆ. ಇವು ಕೇವಲ ಪೂಜಾ ಸ್ಥಳಗಳಾಗಿರದೆ, ಶಿಕ್ಷಣ, ಆರೋಗ್ಯ ಮತ್ತುಖ ಆಧ್ಯಾತ್ಮಿಕ ಮೌಲ್ಯಗಳನ್ನು ಬಿತ್ತುವ ಪ್ರಮುಖ ಕೇಂದ್ರಗಳಾಗಿವೆ ಎಂದರು. ಹಾನಗಲ ಗುರು ಕುಮಾರೇಶ್ವರ ದಾಸೋಹ ಪರಂಪರೆ ಭಕ್ತರು ನೀಡುವ ಕಾಣಿಕೆ ಮತ್ತು ದವಸ-ಧಾನ್ಯಗಳಿಂದ ಪ್ರತಿನಿತ್ಯ ನೂರಾರು ಜನರಿಗೆ ಅನ್ನದಾಸೋಹ ನಡೆಸಲಾಗುತ್ತದೆ ಎಂದು ಹೇಳಿದರು.

ಈ ವೇಳೆ ಭಾಗೋಜಿಕೊಪ್ಪ ಡಾ.ಶಿವಲಿಂಗ ಮುರುಘರಾಜೇಂದ್ರಶಿವಾಚಾರ್ಯಸ್ವಾಮೀಜಿ, ಕಿಲ್ಲಾತೋರಗಲ್ಲ ಚನ್ನಮಲ್ಲ ಶಿವಾಚಾರ್ಯ ಸ್ವಾಮೀಜಿ, ಕಟಕೋಳ-ಎಂ.ಚಂದರಗಿ ವೀರಭದ್ರ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ, ಕಟಕೋಳ ವಿರಕ್ತಮಠದ ಸಚ್ಚಿದಾನಂದ ಮಹಾಸ್ವಾಮೀಜಿ, ಕೆ.ಶಿವಾಪೂರ ಜಡೆತಲೆ ಮರುಳಸಿದ್ಧ ಶಿವಾಚಾರ್ಯ ಸ್ವಾಮೀಜಿ, ಸತ್ತಿಗೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಮಾಜಿ ಶಾಸಕ ಮಹಾದೇವಪ್ಪ ಯಾದವಾಡ, ಜಮಖಂಡಿ ಶಾಸಕ ಜಗದೀಶ ಗುಂಡಗುಟ್ಟಿ, ಬಿಜೆಪಿ ಮುಖಂಡ ಮಲ್ಲಣ್ಣಾ ಯಾದವಾಡ, ಬಸವರಾಜ ತುಪ್ಪದ, ಮಾಜಿ ಜಿಪಂ ಸದಸ್ಯ ಮಾರುತಿ ತುಪ್ಪದ, ರೈತ ಮುಖಂಡರಾದ ಬಾಳಪ್ಪ ರಡರಟ್ಟಿ, ಬಾಳಪ್ಪ ಹಂಜಿ, ಪ್ರಕಾಶಗೌಡ ಪಾಟೀಲ, ಶಾಸನಗೌಡ ಪಾಟೀಲ, ಟಿ.ಪಿ.ಮುನವಳ್ಳಿ ಸೇರಿದಂತೆ ಗಣ್ಯಮಾನ್ಯ ಹಾಗೂ ಶ್ರೀಮಠದ ಸದ್ಭಕ್ತರು ಉಪಸ್ಥಿತರಿದ್ದರು.



ಸರ್ಕಾರಿ ಶಾಲೆ ವಿಲೀನ ಖಂಡಿಸಿ ಪ್ರತಿಭಟನೆ

ಬೆಳಗಾವಿ: ಕೆಪಿಎಸ್ ಮ್ಯಾಗ್ನೆಟ್ ಯೋಜನೆಯಡಿ ಬೆಳಗಾವಿ ತಾಲೂಕಿನ ಹಳ್ಳೂರ ಶಾಲೆ ಮುಚ್ಚಿ ಸುಳೆಬಾವಿ ಶಾಲೆಗೆ ವಿಲೀನಗೊಳಿಸುವ ಸರ್ಕಾರದ ನಿರ್ಧಾರ ಖಂಡಿಸಿ ಬುಧವಾರ ಗ್ರಾಮಸ್ಥರು, ವಿದ್ಯಾರ್ಥಿಗಳು ಸರ್ಕಾರಿ ಶಾಲೆ ಎದರು ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು.

ನಮ್ಮೂರ ಸರ್ಕಾರಿ ಶಾಲೆ ಯಾವುದೇ ಕಾರಣಕ್ಕೂ ಮುಚ್ಚಿಸುವುದಕ್ಕೆ ಬಿಡುವುದಿಲ್ಲ ಎಂದು ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಸರ್ಕಾರಕ್ಕೆ ಪ್ರತಿಭಟನೆ ಮೂಲಕ ಎಚ್ಚರಿಕೆ ನೀಡಿದರು.

ಈ ವೇಳೆ ಪ್ರತಿಭಟನೆ ಉದ್ದೇಶಿಸಿ ಶಿಕ್ಷಣ ಉಳಿಸಿ ಸಮಿತಿ ಭರಮಪ್ಪ ಸನದಿ ಮಾತನಾಡಿ, ನಮ್ಮೂರಿಗೆ ಬಸ್ ಇಲ್ಲ, ನಾವೆಲ್ಲ ಕೂಲಿ ಮಾಡುವ ಬಡಜನರು. ಸರ್ಕಾರ ಶಾಲೆ ಮುಚ್ಚಿ ನಮ್ಮಂತ ಬಡವರ ಮಕ್ಕಳ ಭವಿಷ್ಯದೊಂದಿಗೆ ಚೆಲ್ಲಾಟ ಆಡುತ್ತಿರುವುದು ಎಷ್ಟರ ಮಟ್ಟಿಗೆ ಸರಿ ಎಂದು ಸರ್ಕಾರಕ್ಕೆ ಪ್ರಶ್ನೆ ಮಾಡಿದರು.

ನಾವುಗಳು ಬೆಳಗ್ಗೆ 6 ಗಂಟೆಗೆ ದುಡಿಯಲು ಹೋಗುತ್ತೇವೆ. ನಮ್ಮ ಮಕ್ಕಳು ಎದ್ದು ಊರಲ್ಲೇ ಇರುವ ಶಾಲೆಗೆ ಬರುವುದು ಕಷ್ಟ, ಇನ್ನು ಸುಳೆಬಾವಿಗೆ ಹೋಗಿ ನಮ್ಮ ಮಕ್ಕಳು ಕಲಿಯಲು ಸಾಧ್ಯವಿಲ್ಲ, ಸರ್ಕಾರ ನಮ್ಮೂರ ಶಾಲೆ ಮುಚ್ಚಬಾರದು ಎಂದು ಪ್ರತಿಭಟನೆಯಲ್ಲಿ ಆಗ್ರಹಿಸಿದರು.

ಇದೇ ವೇಳೆ ಎಐಡಿಎಸ್‌ಓ ಜಿಲ್ಲಾ ಸಂಚಾಲಕ ಮಹಾಂತೇಶ ಬಿಳೂರ ಮಾತನಾಡಿ, ಹಳ್ಳೂರಿನ ಬಹುತೇಕ ಜನರ ಗರಿಷ್ಠ ಶಿಕ್ಷಣ ಮಟ್ಟ ಪ್ರಾಥಮಿಕ ಶಿಕ್ಷಣ ಊರಲ್ಲಿ ಸರ್ಕಾರಿ ಶಾಲೆ ಇರುವುದರಿಂದ ಈ ಪ್ರಾಥಮಿಕ ಶಿಕ್ಷಣ ದೊರೆಯುತ್ತಿದೆ. ಇಂತಹ ಊರಿನಲ್ಲಿ ಶಾಲೆ ಇಲ್ಲದಿದ್ದರೆ ಗುಡ್ಡದ ಮೇಲೆ ಈ ಊರಿನ ಮಕ್ಕಳು ಶಾಶ್ವತವಾಗಿ ಶಿಕ್ಷಣದಿಂದ ವಂಚಿತರಾಗುತ್ತಾರೆ. ರಾಜ್ಯ ಸರ್ಕಾರ ಸರ್ಕಾರಿ ಶಾಲೆ ಮುಚ್ಚುವ ನಿರ್ಧಾರ ಕೈಬಿಡಬೇಕು. ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಸಂಪೂರ್ಣವಾಗಿ ರದ್ದುಗೊಳಿಸಬೇಕು ಎಂದು ಸರ್ಕಾರಕ್ಕೆ ಆಗ್ರಹಿಸಿದರು.

ಈ ವೇಳೆ ಭರಮಪ್ಪ ಕಾಲೇರಿ, ಭರಮಪ್ಪ ಕಣಬರಗಿ, ಸಂಜು ಹೊನಕೇರಿ ಪೋಷಕರು ಗ್ರಾಮಸ್ಥರು, ವಿದ್ಯಾರ್ಥಿಗಳು ಸೇರಿದಂತೆ ಇತರರು ಇದ್ದರು.



ಆರೋಗ್ಯಕರ ಪರಿಸರ ನಿರ್ಮಾಣಕ್ಕೆ ಸಹಕರಿಸಿ: ಬಸವರಾಜ ಹೆಗ್ಗನಾಯಕ

ಬೆಳಗಾವಿ: ಬಯಲು ಶೌಚ ಮುಕ್ತ ಗ್ರಾಮ ನಿರ್ಮಾಣ ಮಾಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ಸಾರ್ವಜನಿಕರು ಶೌಚಗೃಹ ಬಳಸುವ ಮೂಲಕ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದು ಜಿಪಂ ಕಾರ್ಯದರ್ಶಿ (ಆಡಳಿತ) ಬಸವರಾಜ ಹೆಗ್ಗನಾಯಕ ಹೇಳಿದರು.

ಬೈಲಹೊಂಗಲ ತಾಲೂಕಿನ ಚಿಕ್ಕಬಾಗೇವಾಡಿ, ಸಂಪಗಾವ, ಕೆಂಗನೂರು ಹಾಗೂ ವನ್ನೂರು ಗ್ರಾಪಂ ವ್ಯಾಪ್ತಿಯಲ್ಲಿ ವಿವಿಧ ಸರ್ಕಾರಿ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಿದ ಬಳಿಕ ಮಾತನಾಡಿ, ಬಯಲು ಶೌಚ ಮುಕ್ತ ಗ್ರಾಮಗಳನ್ನಾಗಿಸಲು ಸರ್ಕಾರ ಪ್ರತಿಯೊಂದು ಮನೆಗೆ ಶೌಚಗೃಹ ಕಡ್ಡಾಯಗೊಳಿಸಿ, ಆರ್ಥಿಕ ಸಹಾಯಧನ ಸೌಲಭ್ಯವನ್ನೂ ಕಲ್ಪಿಸಿದೆ. ಸಾರ್ವಜನಿಕರು ಇಂತಹ ಯೋಜನೆಗಳ ಸದುಪಯೋಗ ಪಡಿಸಿಕೊಂಡು ಆರೋಗ್ಯಕರ ಪರಿಸರ ನಿರ್ಮಾಣಕ್ಕೆ ಸಹಕರಿಸಲು ತಿಳಿಸಿದರು.

ಗ್ರಾಮೀಣ ಭಾಗದ ಪರಿಸರ ಸಂರಕ್ಷಣೆಗೆ ಸಾರ್ವಜನಿಕರ ಸಹಕಾರ ಅತ್ಯಗತ್ಯ ಎಂದ ಅವರು, ಪ್ರತಿಯೊಬ್ಬರೂ ತಮ್ಮ ಮನೆಗಳಲ್ಲಿ ಹಸಿ ಕಸ ಮತ್ತು ಒಣ ಕಸವನ್ನು ಕಡ್ಡಾಯವಾಗಿ ಪ್ರತ್ಯೇಕವಾಗಿ ವಿಂಗಡಿಸಬೇಕು. ಆ ತ್ಯಾಜ್ಯ ಗ್ರಾಪಂ ಕಸ ಸಂಗ್ರಹಣೆ ವಾಹನಕ್ಕೆ ನೀಡುವ ಮೂಲಕ ಸ್ವಚ್ಛತೆಗೆ ಕೈಜೋಡಿಸಬೇಕು ಎಂದರು.



ವಿದ್ಯಾರ್ಥಿಗಳು ಹಾಗೂ ಯುವಜನತೆ ಸಾರ್ವಜನಿಕ ಗ್ರಂಥಾಲಯಗಳ ಪ್ರಯೋಜನ ಪಡೆದು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಸರ್ಕಾರದ ಸೌಲಭ್ಯಗಳನ್ನು ಜನರು ಪರಿಣಾಮಕಾರಿಯಾಗಿ ಬಳಸಿಕೊಂಡಾಗ ಮಾತ್ರ ಗ್ರಾಮೀಣ ಭಾಗದ ಸಮಗ್ರ ಅಭಿವೃದ್ಧಿ ಸಾಧ್ಯ ಎಂದು ಹೇಳಿದರು.

ಈ ವೇಳೆ ಬೈಲಹೊಂಗಲ ತಾಪಂ ಇಒ ಸಂಜು ಜುನ್ನೂರ, ವಿಜಯಲಕ್ಷ್ಮೀ ಅನಿಗೋಳ, ಎಚ್.ವಿಶ್ವನಾಥ, ಎಸ್. ಕಲ್ಲೂರ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.

ಅಂತಾರಾಷ್ಟ್ರೀಯ ಮಟ್ಟದ ಕುಸ್ತಿ ಪಂದ್ಯಾವಳಿ ಮೇ 24ರಂದು

ಖಾನಾಪುರ: ಪಟ್ಟಣದ ಮಲಪ್ರಭಾ ಕ್ರೀಡಾಂಗಣದಲ್ಲಿ ಮೇ 24ರ ಸಂಜೆ 4ರಿಂದ ಖಾನಾಪುರ ತಾಲೂಕು ಕುಸ್ತಿ ಸಂಘಟನೆ ವತಿಯಿಂದ ಅಂತಾರಾಷ್ಟ್ರೀಯ ಮಟ್ಟದ ಜಂಗೀ ನಿಕಾಲಿ ಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಕುಸ್ತಿ ಸಂಘಟನೆಯ ಅಧ್ಯಕ್ಷ ಹಣಮಂತ ಗುರವ ಮಾಹಿತಿ ನೀಡಿದರು.

ಪಟ್ಟಣದಲ್ಲಿ ಬುಧವಾರ ಸಂಘಟನೆಯ ಪದಾಧಿಕಾರಿಗಳ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಪಂದ್ಯಾವಳಿಯಲ್ಲಿ ಅಂತಾರಾಷ್ಟ್ರೀಯ ಮಟ್ಟದ ಆರು ಪೈಲ್ವಾನರು, ರಾಷ್ಟ್ರಮಟ್ಟದ 20 ಪೈಲ್ವಾನರು ಸೇರಿದಂತೆ 57 ಪೈಲ್ವಾನರು ತಮ್ಮ ಎದುರಾಳಿಗಳ ವಿರುದ್ಧ ಸೆಣಸಾಡಲಿದ್ದಾರೆ. ಜೊತೆಗೆ ಮಹಿಳೆಯರ ಕುಸ್ತಿ ಮತ್ತು ಮೇಕೆಗಾಗಿ ಕುಸ್ತಿಯೂ ಇರಲಿದೆ. ಪಂದ್ಯಾವಳಿಯನ್ನು ಶಾಸಕ ವಿಠ್ಠಲ ಹಲಗೇಕರ ಉದ್ಘಾಟಿಸಲಿದ್ದಾರೆ. ತಾಲೂಕಿನ ವಿವಿಧ ರಾಜಕೀಯ, ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರದ ಗಣ್ಯರು ಪಂದ್ಯಾವಳಿಯಲ್ಲಿ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

ಸಂಘಟನೆ ಕಾರ್ಯದರ್ಶಿ ಸದಾನಂದ ಹೊಸೂರಕರ ಮಾತನಾಡಿ, ಶಕ್ತಿ ಮತ್ತು ಯುಕ್ತಿ ಪ್ರದರ್ಶನದ ಪ್ರತೀಕವಾಗಿರುವ ಕುಸ್ತಿ ಪಂದ್ಯಾವಳಿಗೆ ಶತಮಾನಗಳ ಇತಿಹಾಸವಿದೆ. ಖಾನಾಪುರ ತಾಲೂಕು ಅಸಂಖ್ಯಾತ ಕುಸ್ತಿಪಟುಗಳನ್ನು ಜಗತ್ತಿಗೆ ಪರಿಚಯಿಸಿದೆ. ಕುಸ್ತಿ ಪಂದ್ಯಗಳಲ್ಲಿ ಭಾಗವಹಿಸಲು ಪ್ರೇರೇಪಿಸುವ ನಿಟ್ಟಿನಲ್ಲಿ ಪಾಲಕರು ತಮ್ಮ ಮಕ್ಕಳನ್ನು ಕುಸ್ತಿಪಟುಗಳನ್ನಾಗಿ ಮಾಡಬೇಕು. ಮಕ್ಕಳಲ್ಲಿ ಸಾಹಸ ಪ್ರಜ್ಞೆ ಬೆಳೆಸುವ ದೇಸೀ ಕ್ರೀಡೆಗಳಿಗೆ ಪ್ರೋತ್ಸಾಹ ನೀಡುವುದು ಇಂದಿನ ಅವಶ್ಯಕತೆಯಾಗಿದೆ. ಈ ಪಂದ್ಯವನ್ನು ಆಯೋಜಿಸುವಲ್ಲಿ ಕುಸ್ತಿ ಸಂಘಟನೆಯ ಪರಿಶ್ರಮ ಸಾಕಷ್ಟಿದೆ. ಎಲ್ಲರೂ ಸೇರಿ ಈ ಪಂದ್ಯಾವಳಿಗೆ ಪ್ರೋತ್ಸಾಹ ನೀಡಬೇಕು ಎಂದು ಕೋರಿದರು. ಈ ವೇಳೆ ಪ್ರಕಾಶ ಮಜಗಾವಿ, ಲಕ್ಷ್ಮಣ ಬಾಮಣೆ, ರಾಜಾರಾಮ ಗುರವ, ಪಾಂಡುರಂಗ ಪಾಟೀಲ, ಅಮೋಲ ಬೆಳಗಾಂವಕರ, ಶಂಕರ ಪಾಟೀಲ ಮತ್ತಿತರರು ಇದ್ದರು.



ಕೋಹಳ್ಳಿ ಗ್ರಾಮಕ್ಕೆ ವಿಜ್ಞಾನಿಗಳ ಭೇಟಿ



ಕಕಮರಿ: ಸಮೀಪದ ಕೋಹಳ್ಳಿ ಗ್ರಾಮದಲ್ಲಿ ಇತ್ತೀಚೆಗೆ ಗಾಳಿ ಸಹಿತ ಆನೆಕಲ್ಲು ಮಳೆಗೆ ಹಾನಿಗೊಳಗಾದ ದ್ರಾಕ್ಷಿ ಬೆಳೆಗಾರರ ಜಮೀನುಗಳಿಗೆ ಬಾಗಲಕೋಟೆ ತೋಟಗಾರಿಕಾ ವಿಶ್ವವಿದ್ಯಾಲಯ ತಿಡಗುಂದಿ ವಿಜ್ಞಾನಿ ಸಸ್ಯ ಶರೀರ ಕ್ರೀಯಾಶಾಸ್ತ್ರ ಮುಖ್ಯಸ್ಥ ಡಾ.ಮಲ್ಲಿಕಾರ್ಜುನ ಅವಟಿ, ಹಣ್ಣುವಿಜ್ಞಾನಿ ಡಾ.ಸಿದ್ದಣ್ಣ ಟೋಕೆ, ರೋಗ ಶಾಸ್ತ್ರಜ್ಞ ಡಾ.ರಮೇಶ ಭೇಟಿ ನೀಡಿ ಪರೀಶೀಲಿಸಿದರು.

ನಂತರ ಮಾತನಾಡಿದ ಡಾ.ಮಲ್ಲಿಕಾರ್ಜುನ ಅವಟಿ ಅವರು, ಗಾಳಿ ಸಹಿತ ಆನೆಕಲ್ಲು ಮಳೆಗೆ ಹಾನಿಗೊಳಗಾದ ದ್ರಾಕ್ಷಿ ಬೆಳೆಗಾರರ ಸಮಗ್ರವಾದ ಮಾಹಿತಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ರಾಜ್ಯ ಸರ್ಕಾರಕ್ಕೆ ಗಮನಕ್ಕೆ ತಂದು ಬೆಳೆನಷ್ಟ ಪರಿಹಾರ ಒದಗಿಸಬೇಕೆಂದು ಪ್ರಾಮಾಣಿಕ ಪ್ರಯತ್ನ ತಮ್ಮೆಲ್ಲರ ಪರವಾಗಿ ಸರ್ಕಾರಕ್ಕೆ ಒತ್ತಾಯಿಸುತ್ತೇನೆ. ಎಂದರು.ದು ಹೇಳಿದರು.

ತೋಟಗಾರಿಕೆ ಅಧಿಕಾರಿ ಮಹಾವೀರ ಕಾಗವಾಡ, ರೇಖಾ ಹಳ್ಳೂರ, ತಾಪಂ ಮಾಜಿ ಸದಸ್ಯ ಸದಾಶಿವ ಹರಪಾಳೆ, ಸಹದೇವ ಸೂರ್ಯವಂಶಿ, ನಿಂಗರಾಜ ಮುದೋಳ, ಬಂಡು ಹರಪಾಳೆ, ಸಚೀನ ಹರಪಾಳೆ, ತುಕಾರಾಂ ಪಡತಾರೆ, ಇತರರಿದ್ದರು.

ಅಭಿವೃದ್ಧಿ ಕಾಮಗಾರಿಗೆ ಮೃಣಾಲ್ ಹೆಬ್ಬಾಳ್ಕರ್ ಚಾಲನೆ

ಬೆಳಗಾವಿ: ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ವಿಶೇಷ ಪ್ರಯತ್ನದಿಂದ ಮಂಜೂರಾಗಿರುವ ಅನುದಾನದಡಿ ಬೆಳಗಾವಿ ಗ್ರಾಮೀಣ ಕ್ಷೇತ್ರದ ಗೋಜಗಾ-ಬೆಕ್ಕಿನಕೇರಿ, ಎಳೆಬೈಲ್, ಬೆಳಗುಂದಿ ಹಾಗೂ ಬಿಜಗರಣಿ ಗ್ರಾಮಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಯುವ ಕಾಂಗ್ರೆಸ್ ಮುಖಂಡ ಮೃಣಾಲ್ ಹೆಬ್ಬಾಳ್ಕರ್ ಭೂಮಿ ಪೂಜೆ ನೆರವೇರಿಸಿ ಚಾಲನೆ ನೀಡಿದರು.

ಗೋಜಗಾ-ಬೆಕ್ಕಿನಕೇರಿ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಸುಮಾರು 2 ಕೋಟಿ ರೂ. ವೆಚ್ಚದ ರಸ್ತೆ ನಿರ್ಮಾಣ ಕಾಮಗಾರಿಗೆ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಯುವ ಕಾಂಗ್ರೆಸ್ ಮುಖಂಡ ಮೃಣಾಲ್ ಹೆಬ್ಬಾಳ್ಕರ್ ಭೂಮಿ ಪೂಜೆ ನೆರವೇರಿಸಿದರು. ಸಾರ್ವಜನಿಕ ಸಂಚಾರಕ್ಕೆ ಅನುಕೂಲವಾಗುವಂತೆ ಗುಣಮಟ್ಟದ ರಸ್ತೆ ನಿರ್ಮಾಣ ಕೈಗೊಳ್ಳುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಲಾಯಿತು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಾಳು ದೇಸೂರಕರ್, ಶಿವಾಜಿ ಬೋಕಡೆ, ಅಶೋಕ ಗಾವಡಾ, ಶಿವಾಜಿ ಬೆಟಗೇರಿಕರ, ರೆಹಮಾನ್ ತಹಶೀಲ್ದಾರ್, ಮೊನಪ್ಪ ಪಾಟೀಲ, ಸಂಪತ ಕಡೋಲ್ಕರ, ಶಿವಾಜಿ ಮಂಡೋಳ್ಕರ್, ಮಹಾದೇವ ಪಾಟೀಲ, ಲಕ್ಷ್ಮಣ ಮುತಗಾರ್, ಮನೋಹರ್ ಬೆಳಗಾಂವ್ಕರ್, ಅಪ್ಪಾ ಜಾಧವ, ಪುಂಡಲೀಕ ಜಾಧವ, ಪರಶುರಾಮ ಭಾಸ್ಕಳ, ಯಲ್ಲಪ್ಪ ಬೆಳಗಾಂವ್ಕರ್ ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು, ಗ್ರಾಮದ ಹಿರಿಯರು, ಮುಖಂಡರು, ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.



ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ



ಖಾನಾಪುರ: ಪಟ್ಟಣದ ಮರಾಠಾ ಮಂಡಳ ಕಲಾ ಮತ್ತು ವಾಣಿಜ್ಯ ಪದವಿ ಕಾಲೇಜಿನಲ್ಲಿ ವಾರ್ಷಿಕೋತ್ಸವ ಮತ್ತು ಸಾಧಕ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣಾ ಸಮಾರಂಭ ಜರುಗಿತು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಡಿ.ಎಂ.ಜವಳಕರ ಉದ್ಘಾಟಿಸಿ ಮಾತನಾಡಿ, ಪದವಿ ಓದುತ್ತಿರುವ ವಿದ್ಯಾರ್ಥಿಗಳು ಈ ಸಮಯದಲ್ಲಿ ತಮ್ಮ ಲಕ್ಷ್ಯವನ್ನು ಓದಿನಿಂದ ಬೇರೆಡೆ ಹರಿಸದೇ ತಮ್ಮ ಜೀವನದ ಗುರಿ ಸಾಧನೆಯತ್ತ ಗಮನಹರಿಸಬೇಕು ಎಂದರು. ಕಳೆದ ಶೈಕ್ಷಣಿಕ ವರ್ಷದಲ್ಲಿ ಕಾಲೇಜಿನ ಶೈಕ್ಷಣಿಕ, ಕ್ರೀಡಾ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಮರಾಠಾ ಮಂಡಳದ ನಿರ್ದೇಶಕ ಪರಶುರಾಮ ಗುರವ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯೆ ಜೆ.ಬಿ ಅಂಚಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪನ್ಯಾಸಕರಾದ ಡಾ.ಐ.ಎಂಗುರವ ಮತ್ತು ಡಾ.ಆರ್.ಎಸ್.ತಿರವೀರ ನಿರೂಪಿಸಿದರು. ಕೆ.ಎ.ಗುರವ, ಸ್ನೇಹಲ ಕೋಳಿ, ಓಂಕಾರ ಪವಾರ, ಪೂರ್ಣಿಮಾ ಇಂಗಳೆ, ವೈಭವ ಗುರವ, ಪ್ರಾಜಕ್ತಾ ಕಾಜುನೇಕರ ಸೇರಿದಂತೆ ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿ, ಪಾಲಕರು, ವಿದ್ಯಾರ್ಥಿಗಳು ಇದ್ದರು.

ಆನ್‌ಲೈನ್ ಔಷಧ ವ್ಯಾಪಾರ ನಿಯಂತ್ರಣಕ್ಕೆ ಒತ್ತಾಯ

ಹುಕ್ಕೇರಿ: ಆನ್‌ಲೈನ್ ಔಷಧ ವ್ಯಾಪಾರಕ್ಕೆ ನಿಯಂತ್ರಣ ಹೇರುವಂತೆ ಒತ್ತಾಯಿಸಿ ಅಖಿಲ ಭಾರತ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್ ಸಂಘಟನೆ ಕರೆ ನೀಡಿದ್ದ ಆಲ್ ಇಂಡಿಯಾ ಕೆಮಿಸ್ಟ್ ಸ್ಟೈಕ್‌ಗೆ ಬೆಂಬಲ ಸೂಚಿಸಿ, ಪಟ್ಟಣದ ಔಷಧ ವ್ಯಾಪಾರಸ್ಥರು ತಹಶೀಲ್ದಾರ್ ಅವರ ಮೂಲಕ ಪ್ರಧಾನಿ ಅವರಿಗೆ ಮನವಿ ರವಾನಿಸಿದರು.

ಹುಕ್ಕೇರಿ ಔಷಧ ವ್ಯಾಪಾರಿಗಳ ಅಭಿವೃದ್ಧಿ ಸಂಘದ ಸದಸ್ಯರು, ಆನ್‌ಲೈನ್ ಔಷಧ ಮಾರಾಟ ಮತ್ತು ಅತೀಯಾದ ರಿಯಾಯಿತಿ ನೀತಿಯಿಂದ ಸಣ್ಣ ಹಾಗೂ ಮಧ್ಯಮ ಮಟ್ಟದ ಮೆಡಿಕಲ್ ಅಂಗಡಿಗಳು ಸಂಕಷ್ಟಕ್ಕೆ ಸಿಲುಕುತ್ತಿವೆ ಎಂದು ಸಂಘದವರು ಆತಂಕ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಹುಕ್ಕೇರಿ ಔಷಧ ವ್ಯಾಪಾರ ಸಂಘದ ಅಧ್ಯಕ್ಷ ಬಸವರಾಜ ಕಲ್ಯಾಣಿ, ಸದಸ್ಯರಾದ ಬಸವರಾಜ ಕುಂಬಾರ, ಚಂದ್ರಶೇಖರ ಮುಚ್ಚಂಡಿ, ಸುನೀಲ ನಾಯಿಕ, ರಾಜು ಕೋರತಿ, ನಾಗರಾಜ ಡಂಗ, ಪ್ರವೀಣ ಹೊಸಮನಿ, ಶಂಕರನಾಥ ದೇಸಾಯಿ, ಸೋಹನ ವಾಗೋಜಿ ಅನೇಕರು ಉಪಸ್ಥಿತರಿದ್ದರು.



ಕಿರುಸುದ್ದಿ

ನಾಳೆ ಸಭೆ

ಬೀಳಗಿ: ಬೀಳಗಿ ವಿಧಾನಸಭಾ ಮತಕ್ಷೇತ್ರದ ಪ್ರಯಾಣಿಕರ ಸಮಸ್ಯೆಗಳ ಕುರಿತು ಶಾಸಕರು, ಹಟ್ಟಿ ಚಿನ್ನದ ಗಣಿ ನಿಗಮದ ಅಧ್ಯಕ್ಷ ಜೆ.ಟಿ.ಪಾಟೀಲ ಅವರು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಅಧಿಕಾರಿಗಳ ಸಭೆಯನ್ನು ಮೇ 22ರಂದು ಬೆಳಗ್ಗೆ 11 ಗಂಟೆಗೆ ಬಾಗಲಕೋಟೆ ನವನಗರ ಬಸ್ ನಿಲ್ದಾಣದ ಹತ್ತಿರವಿರುವ ಎನ್‌ಡಬ್ಲ್ಯೂಕೆಆರ್‌ಟಿಸಿ (ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ) ವಿಭಾಗೀಯ ಕಚೇರಿಯಲ್ಲಿ ಕರೆದಿದ್ದಾರೆ. ಆದ್ದರಿಂದ ಬಸ್ ಸಂಚಾರದ ಸಮಸ್ಯೆಗಳಿರುವ ಬೀಳಗಿ ವಿಧಾನಸಭಾ ಮತಕ್ಷೇತ್ರದ ವ್ಯಾಪ್ತಿಯ ಗ್ರಾಮಗಳ ಸಾರ್ವಜನಿಕರು, ವಿದ್ಯಾರ್ಥಿಗಳು ತಪ್ಪದೇ ಈ ಸಭೆಗೆ ಆಗಮಿಸಬೇಕೆಂದು ಶಾಸಕರ ಆಪ್ತಕಾರ್ಯದರ್ಶಿ ವೆಂಕಟೇಶ ಜಂಬಗಿ ವಿನಂತಿಸಿದ್ದಾರೆ.

ನಾಳೆಯಿಂದ ವಾರ ಆಚರಣೆ ಪ್ರಾರಂಭ

ರಬಕವಿ-ಬನಹಟ್ಟಿ: ಮೇ 22ರಿಂದ ರಬಕವಿ ನಗರದಲ್ಲಿ ವಾರ ಹಿಡಿಯುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮೇ 22, 29, ಜೂನ್ 5, 12 ಮತ್ತು 19ರಂದು ವಾರದ ಆಚರಣೆ ನಡೆಯಲಿದೆ. ಮೇ 25ರಂದು ಸೋಮವಾರ ಹೊಂಡದ ಪೂಜೆ ಮತ್ತು ನೀರೋಕಳಿ ನಡೆಯುವುದು. ಜೂನ್ ತಿಂಗಳ 26 ಮತ್ತು 27ರಂದು ಹಾಲೋಕಳಿ ನಡೆಯಲಿದೆಯೆಂದು ರಬಕವಿ ನಗರದ ಶಂಕರಲಿಂಗ ದೇವಸ್ಥಾನ ಟ್ರಸ್ಟ್ ಸಮಿತಿಯ ಅಧ್ಯಕ್ಷ ಬಾಲಚಂದ್ರ ಉಮದಿಯವರು ತಿಳಿಸಿದರು.

ಆರೋಗ್ಯ ಶಿಬಿರ ಯಶಸ್ವಿ

ಬಾದಾಮಿ: ತಾಲೂಕಿನ ನಂದಿಕೇಶ್ವರ ಗ್ರಾಮದ ಕುಮಾರೇಶ್ವರ ಭವನದಲ್ಲಿ ಸೋಮವಾರ ಈರಾ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಯಶಸ್ವಿಯಾಗಿ ನಡೆಯಿತು. ಶಿಬಿರಕ್ಕೆ ಈರಾ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಡಾ.ಈರಪ್ಪ ಎಸ್. ಲಮಾಣಿ ಜನರಲ್ ಲ್ಯಾಪ್ರೋಸ್ಕೋಪಿಕ್ ಸರ್ಜನ್ ಚಾಲನೆ ನೀಡಿ ಮಾತನಾಡಿ, ಗ್ರಾಮೀಣ ಪ್ರದೇಶದ ಜನರಿಗೆ ಉತ್ತಮ ಆರೋಗ್ಯ ಸೇವೆಯನ್ನು ತಲುಪಿಸುವುದು ಆಸ್ಪತ್ರೆಯ ಮುಖ್ಯ ಉದ್ದೇಶವಾಗಿದ್ದು, ಆರೋಗ್ಯದ ಬಗ್ಗೆ ಜನರು ಹೆಚ್ಚಿನ ಜಾಗೃತಿ ವಹಿಸಬೇಕು ಎಂದು ತಿಳಿಸಿದರು. ಪ್ರಮುಖರಾದ ಎಂ.ಬಿ.ಹಂಗರಗಿ, ಗಂಗಯ್ಯ ಮುಚಖಂಡಿ, ಪಿ.ಬಿ.ಚವ್ಹಾಣ, ಮೋತಿಲಾಲ್ ರಾಠೋಡ ಹಾಗೂ ಸಿಬ್ಬಂದಿ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

ಸಿಡಿಲು ಬಡಿದು ಎಮ್ಮೆ, ಕರು ಸಾವು

ಕಲಾದಗಿ: ಸೋಮವಾರ ರಾತ್ರಿ ಸುರಿದ ಗಾಳಿ ಮಳೆಗೆ ತುಳಸಿಗೇರಿಯಲ್ಲಿ ತೋಟದ ಮನೆಯ ಹಿಂದೆ ಕಟ್ಟಿದ್ದ ಒಂದು ಎಮ್ಮೆ ಹಾಗೂ ಒಂದು ಎಮ್ಮೆ ಕರುವಿಗೆ ಸಿಡಿಲು ಬಡಿದು ಸಾವನ್ನಪ್ಪಿದ ದುರ್ಘಟನೆ ನಡೆದಿದೆ. ಪಾರ್ವತ್ಯವ್ವ ನಿಂಗಪ್ಪ ವಾಲಿಕಾರ ಎಂಬುವವರಿಗೆ ಸೇರಿದ ಎಮ್ಮೆ, ಎಮ್ಮೆ ಕರು ಸಾವನ್ನಪ್ಪಿದ್ದು, ಇವರ ತೋಟದ ಮನೆಯ ಹಿಂದೆ ಗಿಡಕ್ಕೆ ಕಟ್ಟಿದ್ದ ವೇಳೆ ಸಿಡಿಲು ಗುಡುಗು ಸಹಿತ ಭಾರಿ ಮಳೆಯಾಗಿದೆ ಆದೇ ವೇಳೆ ಸಿಡಿಲು ಬಡಿದು ಎಮ್ಮೆ, ಎಮ್ಮೆ ಕರು ಸಾವನ್ನಪ್ಪಿವೆ, ಘಟನಾ ಸ್ಥಳಕ್ಕೆ ಗ್ರಾಮ ಆಡಳಿತಾಧಿಕಾರಿ ವಿಜಯಲಕ್ಷ್ಮೀ ನಾಯ್ಕರ್, ಪಶುವೈದ್ಯಾದಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿ ಮಾಹಿತಿ ಪಡೆದುಕೊಂಡರು.

ವ್ಯಕ್ತಿ ಕಾಣೆ

ರಬಕವಿ-ಬನಹಟ್ಟಿ: ರಬಕವಿಯ ಉಮೇಶ ನಿಂಗಪ್ಪ ಅಡಿಹುಡಿ ವಯಾ 55 ಇವರು ಬನಹಟ್ಟಿಯ ವರದಿದಾರಾದ ಪತ್ನಿ ಕಾಶಿಬಾಯಿ ಮನೆಯಿಂದ ಹೊರಗೆ ಹೋಗಿ ಮನೆಗೆ ಮರಳಿ ಬಾರದೆ ಎಲ್ಲಿಯೋ ಕಾಣೆಯಾಗಿದ್ದಾರೆಂದು ಆತನ ಪತ್ನಿ ಕಾಶಿಬಾಯಿ ಬನಹಟ್ಟಿ ಪೊಲೀಸ್ ಠಾಣೆಯಲ್ಲಿ ಈಚೆಗೆ ಪ್ರಕರಣ



ದಾಖಲಿಸಿದ್ದಾರೆ. ಕಾಣೆಯಾದ ಉಮೇಶ ಅಡಿಹುಡಿ ಚಹರೆಯು ಗೋಧಿ ಬಣ್ಣ, ಕಪ್ಪು ಮತ್ತು ಬಿಳಿ ಕೂದಲು, ಉದ್ದನೆಯ ಮುಖ, ಬಡಕಲು ಶರೀರ, ಎತ್ತ 5.6 ಅಡಿ, ಹೊಂದಿದವನಾಗಿದ್ದು, ಮನೆಯಿಂದ ಹೋಗುವಾಗ ನೀಲಿ ಬಣ್ಣದ ಶರ್ಟ್, ಬಿಳಿ ಪ್ಯಾಂಟ್ ಧರಿಸಿರುತ್ತಾನೆ ಫಿರ್ಯಾಧಿಯಲ್ಲಿ ತಿಳಿಸಿದ್ದಾರೆ. ಈತನ ಮಾಹಿತಿ ದೊರೆತಲ್ಲಿ ಬನಹಟ್ಟಿ ಪೊಲೀಸ್ ಠಾಣೆ ಅಥವಾ 08353-230292 ನಂಬರನ್ನು ಸಂಪರ್ಕಿಸಲು ಪೊಲೀಸರು ಕೋರಿದ್ದಾರೆ.

ನಿಧನ ಸುದ್ದಿ

ಗಂಗವ್ವ ಹಡಪದ



ಕಲಾದಗಿ: ಹಿರೇಶೆಲ್ಲಿಕೇರಿ ಗ್ರಾಮದ ನಿವಾಸಿ ಗಂಗವ್ವ ಹನಮಂತ ಹಡಪದ(85) ನಿಧನರಾದರು, ಮೃತರು ಇಬ್ಬರು ಪುತ್ರರು, ಪುತ್ರಿಯರು ಹಾಗೂ ಅಪಾರ ಬಂಧು ಬಳಗ ಇದ್ದಾರೆ.



ರಬಕವಿ-ಬನಹಟ್ಟಿ: ಬುಧವಾರ ಸಮೀಪದ ಜಗದಾಳ ಸರ್ಕಾರಿ ಪ್ರೌಢ ಶಾಲೆಯಲ್ಲಿ ನಡೆದ ಬಾಗಲಕೋಟೆ ತೋಟಗಾರಿಕೆ ವಿವಿಯ ಕೃಷಿ, ತೋಟಗಾರಿಕೆ ಮತ್ತು ಪಶು ಸಂಗೋಪನೆ ಇಲಾಖೆ ಹಾಗೂ ಜಗದಾಳ ಗ್ರಾಮದ ಸ್ವರ್ಣ ಭೂಮಿ ಸಾವಯವ ರೈತ ಉತ್ಪಾದಕ ಸಂಘದ ಆಶ್ರಯದಲ್ಲಿ ನಡೆದ ಉದ್ಯಾನೋತ್ಸವ ಕಾರ್ಯಕ್ರಮ ನಡೆಯಿತು. ಶಾಸಕ ಸಿದ್ದು ಸವದಿ, ಬಾಗಲಕೋಟೆ ಜಂಟಿ ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ರವೀಂದ್ರ ಹಕಾಟೆ, ಜಿಲ್ಲಾ ಪಶು ಸಂಗೋಪನೆ ಉಪ ನಿರ್ದೇಶಕ ಡಾ.ಶಿವಾನಂದ ಕರಡಿ ಗುಡ್ಡ, ಮರೆಗುದ್ದಿಅಡವಿ ಸಿದ್ಧೇಶ್ವರ ಮಠದ ಗುರುಪಾದ ಸ್ವಾಮೀಜಿ ಉಪಸ್ಥಿತರಿದ್ದರು.

ಅಧಿಕ ಮಾಸ ಶ್ರೇಷ್ಠ ಮಾಸ: ಶ್ರೀ

ಗುಳೇದಗುಡ್ಡ: ಅಧಿಕ ಮಾಸ ಬಹಳ ಶ್ರೇಷ್ಠ ಮಾಸವಾಗಿದ್ದು, ಇದು ದೇವರಿಗಾಗಿ ಮೀಸಲಿರುವ ಮಾಸವಾಗಿದೆ. ಈ ಮಾಸದಲ್ಲಿ ಪ್ರತಿಯೊಬ್ಬರು ದೇವರು, ಪೂಜೆ ಕಾರ್ಯಗಳಲ್ಲಿ ಪಾಲ್ಗೊಳ್ಳಬೇಕು ಎಂದು ಅಮರೇಶ್ವರ ಮಠದ ಡಾ.ನೀಲಕಂಠ ಶಿವಾಚಾರ್ಯ ಶ್ರೀಗಳು ಹೇಳಿದರು.

ಅವರು ಪಟ್ಟಣದ ಗುರು ಒಪ್ಪತ್ತೇಶ್ವರ ಮಠದ ಗೋಶಾಲೆ ಟ್ರಸ್ಟ್ ವತಿಯಿಂದ ಅಧಿಕ ಮಾಸದ ನಿಮಿತ್ತ ನಡೆದ ಮೌನಾನುಷ್ಠಾನ ಹಾಗೂ ಪುರಾಣ ಪ್ರವಚನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ, ಮಠದ ಪೀಠಾಧ್ಯಕ್ಷ ಒಪ್ಪತ್ತೇಶ್ವರ ಶ್ರೀಗಳು ಮಾತನಾಡಿದರು.

ಕೋಟೆಕಲ್ ಗ್ರಾಮದ ರಾಜು ದೇಸಾಯಿ ಪ್ರವಚನವನ್ನು ಉದ್ಘಾಟಿಸಿದರು. ಶ್ಯಾಮಣ್ಣ ಪತ್ತಾರ, ಬಸವರಾಜ ಅಬ್ಬಿಗೇರಿ ಇವರಿಂದ ಸಂಗೀತ ಸೇವೆ ನಡೆಯಿತು. ಈರಣ್ಣ ಬೂದಿಹಾಳಮಠ ಅವರಿಂದ ಪ್ರಸಾದ ಸೇವೆ ನಡೆಯಿತು.

ಈ ವೇಳೆ ಸಂಗಪ್ಪ ಹಡಪದ, ಸಂಗಪ್ಪ ಜವಳಿ, ರಂಗಪ್ಪ ಅರಮನ್ನವರ, ನೀಲಪ್ಪ ಅಬಕಾರಿ, ಸಂಗಪ್ಪ ಆಲೂರ, ಮುತ್ತಪ್ಪ ಅಬಕಾರಿ, ಮಹಾಂತೇಶ ಹಿರೇಮಠ, ಹನಮಂತ ವಾರಿ, ಬಸವರಾಜ ಚಿಕ್ಕನರಗುಂದ, ಶಿವಾನಂದ ಮಳ್ಳಿಮಠ, ಯಲಗೂರೇಶ ಅರಮನಿ, ಹುಚ್ಚೇಶ ಕಮತರ, ಅಶೋಕ ರೋಜಿ, ಹುಚ್ಚಪ್ಪ ಅಬಕಾರಿ, ಪರಸಪ್ಪ ಆಲೂರ, ಈರಯ್ಯ ಬೂದಿಹಾಳಮಠ, ಕಾಜಗಾರ, ಈರಣ್ಣ ಕವಡಿಮಟ್ಟಿ ಇದ್ದರು.



ಗುಳೇದಗುಡ್ಡ: ಪಟ್ಟಣದ ಗುರು ಒಪ್ಪತ್ತೇಶ್ವರ ಮಠದ ಗೋಶಾಲೆ ಟ್ರಸ್ಟ್ ವತಿಯಿಂದ ಅಕ ಮಾಸದ ನಿಮಿತ್ತ ನಡೆದ ಮೌನಾನುಷ್ಠಾನ ಹಾಗೂ ಪುರಾಣ ಪ್ರವಚನ ಕಾರ್ಯಕ್ರಮ ನಡೆಯಿತು.

ಔಷಧಗಳ ಆನ್‌ಲೈನ್ ಮಾರಾಟ ನಿಲ್ಲಿಸಿ

ಬಾಗಲಕೋಟೆ: ಔಷಧಗಳ ಆನ್‌ಲೈನ್ ಮಾರಾಟ ನಿಲ್ಲಿಸುವುದು, ಕಾರ್ಪೋರೇಟ್‌ಗಳ ಭಾರೀ ಡಿಸ್ಕೌಂಟ್ ನಿಲ್ಲಿಸುವುದು, ನಕಲಿ ಔಷಧಗಳನ್ನು ದೂರುವಿಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿ ಜಿಲ್ಲಾ ಔಷಧ ವ್ಯಾಪಾರಸ್ಥರು ಪ್ರತಿಭಟನೆ ನಡೆಸಿದರು.

ಜಿಲ್ಲೆಯ ವಿವಿಧ ಭಾಗದಿಂದ ಆಗಮಿಸಿದ್ದ ಔಷಧ ವ್ಯಾಪಾರಸ್ಥರು ತಮ್ಮ ಅಂಗಡಿ ಮುಗ್ಗಟ್ಟುಗಳನ್ನು ಬಂದ್ ಮಾಡಿಕೊಂಡು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.ಜಿಲ್ಲಾಡಳಿತ ಭವನದ ಎದುರು ಪ್ರತಿಭಟನೆ ನಡೆಸಿದ ಔಷಧ ವ್ಯಾಪಾರಸ್ಥರು ನಕಲಿ ಔಷಧ ಪೂರೈಕೆ ತಡೆಗಟ್ಟಬೇಕು ಎಂದು ಘೋಷಣೆಗಳನ್ನು ಕೂಗಿದರು.

ಈ ವೇಳೆ ಮಾತನಾಡಿದ ಜಿಲ್ಲಾ ಔಷಧ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಅಶೋಕ ಬಿಜ್ಜಳ, ತಾತ್ಕಾಲಿಕ ಕೋವಿಡ್ ಅವಧಿಯ ಅಧಿಸೂಚನೆ ಜಿಎಸ್‌ಆರ್.220(ಇ)ನ್ನು ತಕ್ಷಣ ಹಿಂಪಡೆಯಬೇಕು. ನಿಯಂತ್ರಣವೆಂಬ ಅಂಕುಶವಿಲ್ಲದೇ ಮನೆಮನೆಗೆ ಔಷಧ ತಲುಪಿಸುವ



ಈ ನಿಯಮದ ದುರುಪಯೋಗದಿಂದ ನಕಲಿ ಔಷಧಗಳು ಜನರನ್ನು ತಲುಪತೊಡಗಿರುವುದು ಶೋಚನೀಯ ವಿಷಯವಾಗಿದೆ ಎಂದರು.

ದೊಡ್ಡ ಕಂಪನಿಗಳು ಡಿಸ್ಕೌಂಟ್ ನೀಡುವುದರಲ್ಲಿ ತಾರತಮ್ಯ ನೀತಿಯನ್ನು ಅನುಸರಿಸುತ್ತವೆ. ಇದರಿಂದಾಗಿ ಸಣ್ಣ ವ್ಯಾಪಾರಿಗಳಿಗೆ ವ್ಯವಹಾರದಲ್ಲಿ ತುಂಬಾ ತೊಂದರೆಯಾಗತೊಡಗಿದೆ ಎಂದರು.

ಸರಕಾರವು ಹಿಂದುಮುಂದು ಆಲೋಚಿಸದೇ ನಿಯಮಾವಳಿಯನ್ನು ರೂಪಿಸಿದ ಪರಿಣಾಮವಾಗಿ ಇಂದು ಇ-ಪ್ಲಾಟ್‌ಫಾರ್ಮ್ ಗಳು ಯಾವುದೇ ನೈತಿಕತೆ ಇಲ್ಲದೇ ಜನರನ್ನು ಲೂಟಿ ಮಾಡತೊಡಗಿವೆ. ಯುವಕರು ಮಾದಕ ಔಷಧಗಳ ವ್ಯಸನಿಗಳಾಗುತ್ತಿದ್ದಾರೆ. ತಕ್ಷಣ ಈ ಆದೇಶವನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ಬಂಡು ಕಟ್ಟಿ, ಸಂಗನಗೌಡ ಪಾಟೀಲ, ಶರಣು ಮಠ, ಬಸವರಾಜ ಈಸರಡ್ಡಿ, ಅಶೋಕ ಪಟ್ಟಣದ, ಪ್ರವೀಣ ಕಲಬುರ್ಗಿ, ವಿಕ್ರಂ ಕಲ್ಯಾಣಶೆಟ್ಟಿ, ಸುನೀಲ ತಿರಕಣ್ಣವರ, ಸಂಜೀವ ಗುಡಿ, ಹಣಮಂತ ಬಿರಾದಾರ ಜಿಲ್ಲೆಯ ವಿವಿಧ ಭಾಗದಿಂದ ಆಗಮಿಸಿದ್ದ ಔಷಧ ವ್ಯಾಪಾರಸ್ಥರು ಭಾಗವಹಿಸಿದ್ದರು.

ಮೇ 24ರಂದು ರಾಜ್ಯ ಬೃಹತ್ ಸಮಾವೇಶ

ಬೀಳಗಿ: ಕರ್ನಾಟಕ ರಾಜ್ಯ ಗಂಗಾಮತ ನೌಕರರ ಸಂಘಕ್ಕೆ 25 ವಸಂತ ಮುಗಿಸಿ ಬೆಳ್ಳಿ ಸಂಭ್ರಮ ಆಚರಿಸಿಕೊಳ್ಳುತ್ತಿದೆ. ಇದರ ಪ್ರಯುಕ್ತ ರಾಜ್ಯದಲ್ಲಿ ಗಂಗಾಮತ ಸಮಾಜ ಬಲಿಷ್ಠಗೊಳಿಸುವ ಉದ್ದೇಶದಿಂದ ರಾಜ್ಯ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಗಂಗಾಮತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಜಿಲ್ಲಾಧ್ಯಕ್ಷ ಉದಯಕುಮಾರ ಅಂಬಿಗೇರ ಹೇಳಿದರು.

ಪಟ್ಟಣದ ಜೆವಿಎಲ್‌ಬಿಸಿ ಪ್ರವಾಸಿ ಮಂದಿರದಲ್ಲಿ ಕರಪತ್ರಗಳನ್ನು ಬಿಡುಗಡೆಗೊಳಿಸಿ ಮಾತನಾಡಿ, ಸಮಾರಂಭದ ಸಾನ್ನಿಧ್ಯ ಚೌಡದಾನಪೂರ ನಿಜಶರಣ ಅಂಬಿಗರ ಚೌಡಯ್ಯನವರ ಗುರುಪೀಠದ ಪೀಠಾಧ್ಯಕ್ಷ ಜಗದ್ಗುರು ಶಾಂತಭೀಷ್ಮ ಚೌಡಯ್ಯ ಸ್ವಾಮಿಜಿ, ಬಾಗಲಕೋಟೆ ರಾಮಾರೂಢ ಮಠದ ಪರಮರಾಮಾರೂಢ ಸ್ವಾಮಿಜಿ ವಹಿಸುವರು. ಸಚಿವರಾದ ಆರ್.ಬಿ.ತಿಮ್ಮಾಪುರ, ಮಂಕಾಳ ಎಸ್. ವೈದ್ಯ ಉದ್ಘಾಟಿಸುವರು. ಪ್ರತಿಭಾ ಪುರಸ್ಕಾರ ಮಾಜಿ ಸಚಿವ ಹಾಗೂ ನಿ.ಅಂ. ಚೌಡಯ್ಯನವರ ಗುರುಪೀಠದ ಕಾರ್ಯಾಧ್ಯಕ್ಷ ಪ್ರಮೋದ ಮಧ್ವರಾಜ್ ಮಾಡುವರು.

ನೌಕರ ಭವನ ಉದ್ಘಾಟನೆ ರಾಜ್ಯ ಗಂ.ನೌ.ಕ್ಷೇ.ಸಂಘದ ರಾಜ್ಯಾಧ್ಯಕ್ಷ ಎಂ. ಶ್ರೀನಿವಾಸ ಹಾಗೂ ಜಿಲ್ಲಾ ಗಂಗಾಮತ ಸಂಘದ ಜಿಲ್ಲಾಧ್ಯಕ್ಷ ಮಹೇಶ ಕೋಳಿ ನೆರವೇರಿಸುವರು. ಗಂಗಾ ಪರಮೇಶ್ವರಿ ಹಾಗೂನಿಜಶರಣಅಂಬಿಗರಚೌಡಯ್ಯನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಲೋಕಸಭಾ ಸದಸ್ಯ ಪಿ.ಸಿ.ಗದ್ದಿಗೌಡರ ಹಾಗೂ ಶಾಸಕ ಉಮೇಶ ಮೇಟಿ ಮಾಡುವರು. ರಾಜ್ಯ ಗಂಗಾಮತ ನೌಕರರ ಕ್ಷೇಮಾಭಿವೃದ್ಧಿ ಸಂಘ ಪ್ರಧಾನ ಕಾರ್ಯದರ್ಶಿ ಹಾಗೂ ಜಿಲ್ಲಾಧ್ಯಕ್ಷ ಉದಯ ಕುಮಾರ ಅಂಬಿಗೇರ ಮಾತನಾಡಿ, ಕರ್ನಾಟಕ ರಾಜ್ಯ ಗಂಗಾಮತ ನೌಕರರ ಕ್ಷೇಮಾಭಿವೃದ್ಧಿ ಸಂಘ ಬೆಂಗಳೂರ, ಜಿಲ್ಲಾ ಗಂಗಾಮತ (ಅಂಬಿಗೇರ) ಸಮಾಜ ಹಾಗೂ ಜಿಲ್ಲಾ ಗಂ.ನೌ. ಸಂಘದ ಸಹಯೋಗದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಮಾಜಿ ಸೈನಿಕರಿಗೆ, ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಗೈದ ಸಾಧಕರಿಗೆ ಸನ್ಮಾನ ಸಮಾರಂಭ ಮೇ 24ರಂದು ಬಾಗಲಕೋಟೆಯ ಕಲಾಭವನದಲ್ಲಿ ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಗಂಗಾಮತ ಸಮಾಜದ ಜಿಲ್ಲಾಧ್ಯಕ್ಷ ಮಹೇಶ ಕೋಳಿ ಮಾತನಾಡಿದರು. ಬೀಳಗಿ ತಾಲೂಕು ಗಂಗಾಮತ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷ ರಾಮಣ್ಣ ವಾಲಿಕಾರ, ಪ್ರಧಾನ ಕಾರ್ಯದರ್ಶಿ ಪ್ರಕಾಶ ಸುಣಗಾರ, ಮುಧೋಳ ಅಧ್ಯಕ್ಷ ಪುಂಡಲೀಕ ಕರೇಣಿ, ಜಮಖಂಡಿ ಅಧ್ಯಕ್ಷ ರವಿಕುಮಾರ ಬೆಳಗಲ್, ರೈತಸಂಘದರಾಜ್ಯ ಉಪಾಧ್ಯಕ್ಷಪರಶುರಾಮ ಮಂಟೂರ, ಸಿ.ಆರ್.ಕೋಲಕಾರ, ಮಂಜು ಸುಣಗಾರ ಇದ್ದರು.



ಸೃಷ್ಟಿ ಪಾಟೀಲ ರಾಜ್ಯಕ್ಕೆ 10ನೇ ರ‍್ಯಾಂಕ್

ಗುಳೇದಗುಡ್ಡ: ಸ್ಥಳೀಯ ರಾಠಿ ಮತ್ತು ಕಾವಡೆ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ ಸೃಷ್ಟಿ ಪಾಟೀಲ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶದ ಮರು ಮೌಲ್ಯಮಾಪನದಲ್ಲಿ 625ಕ್ಕೆ616 ಅಂಕಪಡೆದು ರಾಜ್ಯಕ್ಕೆ 10ನೇ ರ‍್ಯಾಂಕ್ ಹಾಗೂ ಗುಳೇದಗುಡ್ಡ ತಾಲೂಕಿಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ ಎಂದು ಶಾಲೆಯ ಚೇರಮನ್ ಅಶೋಕ ಹೆಗಡೆ ತಿಳಿಸಿದ್ದಾರೆ. ರಾಜ್ಯಕ್ಕೆ 10ನೇ ರ‍್ಯಾಂಕ್ ಪಡೆದ ವಿದ್ಯಾರ್ಥಿನಿಯನ್ನು ಪಿಇಟಿ ಗೌರವಕಾರ್ಯದರ್ಶಿ ರವೀಂದ್ರ ಪಟ್ಟಣಶೆಟ್ಟಿ ಸನ್ಮಾನಿಸಿದರು. ಶಾಲೆಯ ಚೇರಮನ್ ವಿಠ್ಠಲಸಾ ಕಾವಡೆ, ಅಶೋಕ ಹೆಗಡಿ, ಸಂಸ್ಥೆಯ ನಿರ್ದೇಶಕರಾದ ಸಿದ್ದಲಿಂಗಪ್ಪ ಬರಗುಂಡಿ, ಶ್ಯಾಮಸುಂದರ ಮಾಲಪಾನಿ, ಸಿದ್ದರಾಮಯ್ಯ ಪುರಾಣಿಕಮಠ, ಮುಖ್ಯಶಿಕ್ಷಕರಾದ ರಾಜು ಜಿರ್ಲಿ, ವೀಣಾ ಹಳ್ಳೂರ, ಶಿಕ್ಷಕರಾದ ಬಿ.ಐ.ಯಳಮೇಲಿ, ವೈಶಾಲಿ ಅಂಬೇಕರ, ಎಮ್.ಎಮ್ ತುಂಬರಮಟ್ಟಿ, ಎ.ಜಿ.ಕವಡಿಮಟ್ಟಿ, ಎಸ್.ಬಿ.ಗಾಜಿ, ಸುರೇಶ ಸಾರಂಗಿ ಉಪಸ್ಥಿತರಿದ್ದರು.



ಶಶಿಧರ ಕುರೇರಗೆ ಅದ್ಧೂರಿ ಬೀಳ್ಕೊಡುಗೆ

ಬಾಗಲಕೋಟೆ: ಜಿಲ್ಲೆಯ ಅಭಿವೃದ್ಧಿ ಕಾರ್ಯ ಯಶಸ್ವಿಯಾಗಿ ಕೈಗೊಳ್ಳಲು ಸಹಕರಿಸಿದ ಜನಪ್ರತಿನಿಧಿಗಳು, ಅಧಿಕಾರಿ ಮತ್ತು ಸಿಬ್ಬಂದಿ, ಜಿಲ್ಲೆಯ ಜನರ ಪ್ರೀತಿ, ವಿಶ್ವಾಸ ಹಾಗೂ ಸಹೋದ್ಯೋಗಿಗಳ ಬೆಂಬಲ ಎಂದಿಗೂ ಮರೆಯಲಾಗದು ಎಂದು ನಿಕಟಪೂರ್ವ ಜಿಪಂ ಸಿಇ ಶಶಿಧರ ಕುರೇರ ಹೇಳಿದರು.

ಜಿಲ್ಲಾ ಪಂಚಾಯತಿ ನೂತನ ಸಭಾಭವನದಲ್ಲಿ ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಬಾಗಲಕೋಟೆ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರದ ಹುದ್ದೆ ವಹಿಸಿಕೊಂಡಾಗ ನನ್ನ ಮೇಲೆ ಗುರುತರವಾದ ಜವಾಬ್ದಾರಿ ಹಾಗೂ ಹೊಣೆಗಾರಿಕೆ ಇತ್ತು. ಪ್ರತಿಯೊಂದು ಯಶಸ್ಸಿನ ಹಿಂದೆ ಎಲ್ಲರ ಶ್ರಮ ಇರುತ್ತದೆ ಎಂದು ತಿಳಿಸಿದರು.

ಸರಕಾರಿ ಸೇವೆಗೆ ಸೇರಿದ ಬಳಿಕ ಸಮಾಜಕ್ಕೆ ಉತ್ತಮ ಸೇವೆ ನೀಡುವುದು ತಮ್ಮ ಜವಾಬ್ದಾರಿ. ಇದನ್ನು ಅರಿತು ನಾವು ಕೆಲಸ ಮಾಡಬೇಕಾಗುತ್ತದೆ. ಜಿಲ್ಲೆಯ ಅಭಿವೃದ್ಧಿ ಹಿನ್ನಲೆಯಲ್ಲಿ ಈ ಹಿಂದಿನ ಹಾಗೂ ಇಂದಿನ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಜೊತೆ ಜೊತೆಯಾಗಿ ಕೆಲಸ ಮಾಡಿದ್ದೇನೆ. ಎಲ್ಲರೂ ಸಹಕಾರ ಕೊಟ್ಟಿದ್ದರಿಂದ ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಯಿತು ಎಂದರು.

ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ ಜಿಲ್ಲೆಯ ವಿವಿಧ ಕ್ಷೇತ್ರಗಳಲ್ಲಿ ಅವರು ಮಾಡಿದ ಕಾರ್ಯಗಳು ಶ್ಲಾಘನೀಯವಾಗಿದ್ದು, ಜಿಲ್ಲಾಡಳಿತ ಜೊತೆಗೆ ಉತ್ತಮವಾಗಿ ಕೆಲಸ ಮಾಡಿ ಸಲಹೆ ನೀಡಿದ್ದಾರೆ. ಅಭಿವೃದ್ಧಿಗೆ ಅವರ ನೀಡಿದ ಮಾರ್ಗದರ್ಶನ ಹಾಗೂ ಆಡಳಿತದ ಶೈಲಿ ಸದಾ ಸ್ಮರಣೀಯವಾಗಿರಲಿ ಎಂದು ಅಭಿಪ್ರಾಯಪಟ್ಟರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಿಪಂ ಉಪ ಕಾರ್ಯದರ್ಶಿ ಎನ್.ವಾಯ್. ಬಸರಿಗಿಡದ, ಶಶಿಧರ ಕುರೇರ್ ಅವರು ಮೂರು ವರ್ಷಗಳ ಅವಧಿಯಲ್ಲಿ ಮಾಡಿದ ಅಭಿವೃದ್ಧಿ ಕಾರ್ಯಗಳನ್ನು ಸ್ಮರಿಸಿ, ಮೆಚ್ಚುಗೆ ವ್ಯಕ್ತಪಡಿಸಿದರು. ಜಿಪಂ ಮುಖ್ಯ ಯೋಜನಾಧಿಕಾರಿ ಅಲ್ಲಮಪ್ರಭು, ಮುಖ್ಯ ಲೆಕ್ಕಾಧಿಕಾರಿ ಸಿದ್ದರಾಮೇಶ್ವರ ಉಕ್ಕಲಿ, ಸೇರಿದಂತೆ ಜಿ.ಪಂ ವ್ಯಾಪ್ತಿಯ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.



ಜನಜಾಗೃತಿ ಯಾತ್ರೆ ನಿರಂತರವಾಗಿ ನಡೆಯಲಿ: ಪಾಟೀಲ

ಮುಧೋಳ: ಅನ್ನದಾಸೋಹ, ಜ್ಞಾನ ದಾಸೋಹದಂತಹ ಮಹತ್ವದ ಕಾರ್ಯ ಮಾಡುತ್ತಿರುವ ಮಠಗಳು ಈಗ ದುಶ್ಚಟಗಳ ಭಿಕ್ಷೆ ಹಾಗೂ ಸದ್ಗುಣಗಳ ದೀಕ್ಷೆ ಎಂಬ ಘೋಷ ವಾಕ್ಯದೊಂದಿಗೆ ಜಮಖಂಡಿಯ ಓಲೇಮಠದ ಆನಂದದೇವರ ನೇತೃತ್ವದಲ್ಲಿ ಕಳೆದ ಒಂದು ವರ್ಷದಿಂದ ನಡೆಸುತ್ತಿರುವ ಜನಜಾಗೃತಿ ಯಾತ್ರೆಯು ನಿರಂತರ ನಡೆಯಲಿ ಅದಕ್ಕೆ ತಾವೂ ಎಲ್ಲ ರಿತಿಯ ಸಹಕಾರ ನೀಡುವುದಾಗಿ ನ್ಯಾಯವಾದಿ ಹಾಗೂ ವೇಮನ ಅಕಾಡೆಮಿ ಟ್ರಸ್ಟ ಅಧ್ಯಕ್ಷ ದಯಾನಂದ ಪಾಟೀಲ ಹೇಳಿದರು.

ನಗರದ ಕಸಾಪ ಭವನದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಸಣ್ಣ ವಯಸ್ಸಿನಲ್ಲಿ ಆನಂದ ಗುರೂಜಿ ಅವರು ಮಾಡುತ್ತಿರುವ ಸಮಾಜಮುಖಿ ಪ್ರಾಮಾಣಿಕ ಸೇವೆ ಸ್ಮರಿಸಿದರು.ಹಿರಿಯರಾದ ಕಲ್ಲಪ್ಪಣ್ಣ ಸಬರದ ಮಾತನಾಡಿ, ಈಗಾಗಲೇ ಆನಂದ ದೇವರು 85 ಸಾವಿರ ಜನರಿಗೆ ರುದ್ರಾಕ್ಷಿ ಮಾಲೆ ತೊಡಸಿದ್ದು 2800 ಫಲಾನುಭಾವಿಗಳಿಗೆ ವ್ಯಸನಮುಕ್ತಿ ಮಾಡಿದ್ದಾರೆ. 23ಕ್ಕೂ ಹೆಚ್ಚು ಗ್ರಾಮಗಳಲ್ಲಿ ಉಚಿತ ಜನಜಾಗೃತಿ ಶಿಬಿರಗಳನ್ನು ಯಶಸ್ವಿಯಾಗಿ ನಡೆಸಿದ್ದಾರೆಂದು ಹೇಳಿದರು.ಆನಂದ ಗುರೂಜಿ ಮಾತನಾಡಿ, ಯುವಕರಲ್ಲಿ ಹೆಚ್ಚುತ್ತಿರುವ ವ್ಯಸನದ ಪರಿಣಾಮದಿಂದ ಆಗುತ್ತಿರುವ ದುಷ್ಪರಿಣಾಮ ತಪ್ಪಿಸಲು ಉಚಿತ ಸದ್ಭಾವನಾ



ಯಾತ್ರೆ ನಡೆಸಿದ್ದು, ಇದರಲ್ಲಿ ಬೇರೆ ಎನು ಇಲ್ಲ ವ್ಯಸನಮುಕ್ತಿ ಮಾಡಿ ಸದೃಢ ಹಾಗೂ ಆರೋಗ್ಯವಂತ ಸಮಾಜ ನಿರ್ಮಿಸುವ ಗುರಿ ಹೊಂದಲಾಗಿದೆ. ಎಲ್ಲರೂ ಸಹಕರಿಸಲು ಕೋರಿದರು. ನಿವೃತ್ತ ಡಿಡಿಪಿಐ ಎಂ.ಜಿ.ದಾಸರ, ಪತ್ರಕರ್ತ ಅಶೋಕ ಕುಲಕರ್ಣಿ, ರಮೇಶ ಅಣ್ಣಿಗೇರಿ, ಎಸ್.ಜಿ.ಹವಾಲದಾರ, ಆನಂದ ಪೂಜಾರಿ, ಡಾ.ಸಂಗಮೇಶ ಕಲ್ಯಾಣಿ, ರಮೇಶ ನಿಡೋಣಿ, ಸಂಗಮೇಶ ನೀಲಗುಂದ, ಯಮನಪ್ಪ ದುರದೂಂಡಿ, ಎಂ.ವಿ.ದಾಸರಡ್ಡಿ, ನಿಂಗರಾಜಗುಡಿ, ಶ್ಯಾಮಸುಂದರ, ಮಹಾದೇವಪ್ಪ ಮಡಿವಾಳ, ಬಿ.ಎಚ್.ಬೀಳಗಿ, ವೀರೇಶ ಮಡಿವಾಳ, ವಿಜಯ ಕೊಣ್ಣೂರ, ಸ್ನೇಹಾ ಹಿರೇಮಠ, ಶೈಲಾ ದೇವಪೂಜಿ, ಲಕ್ಷ್ಮಿ ಹಾರುಗೊಪ್ಪ , ಸವಿತಾ ಅಂಗಡಿ ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಮಾತನಾಡಿದರು.

ಜನರ ಸಮಸ್ಯೆ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ: ಮೇಟಿ

ಬಾಗಲಕೋಟೆ: ಮತಕ್ಷೇತ್ರದ ಗ್ರಾಮೀಣ ಭಾಗದ ಜನರ ಸಮಸ್ಯೆ ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಶಾಸಕ ಉಮೇಶ ಮೇಟಿ ಹೇಳಿದರು.

ಉಪಚುನಾವಣೆಯಲ್ಲಿ ಗೆಲವು ಸಾಧಿಸಿದ ಬಳಿಕ ಗ್ರಾಮೀಣ ಪ್ರದೇಶದ ಜನರಿಗೆ ಕೃತಜ್ಞತೆ ಸಲ್ಲಿಸಲು ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ನಮ್ಮ ತಂದೆಯವರೊಂದಿಗೆ ಗ್ರಾಮೀಣ ಭಾಗದ ಸಮಸ್ಯೆಗಳನ್ನು ಹೇಗೆ ಹಂಚಿಕೊಳ್ಳುತ್ತಿದ್ದಿರೋ ಅದೇ ರೀತಿ ನನ್ನ ಬಳಿಯೂ ಹಂಚಿಕೊಳ್ಳಿ ಅವುಗಳನ್ನು ಪರಿಹರಿಸುವ ಕೆಲಸ ಮಾಡುವೆ ಎಂದರು.

ನಮ್ಮ ತಂದೆಯವರಿಗೆ ಹೇಗೆ ಮತ ನೀಡಿ ಗೆಲ್ಲಿಸಿದ್ದರಿ. ನಿಮ್ಮ ಈ ಪ್ರೀತಿ, ವಿಶ್ವಾಸ ಹಾಗೂ ಆಶೀರ್ವಾದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ, ಎಂದು ಹೇಳಿದರು. ಸುತಗುಂಡಾರ, ಹಂಡರಗಲ್ಲ, ಹಿರೇಮ್ಯಾಗೇರಿ, ಚಿಕ್ಕ ಮ್ಯಾಗೇರಿ, ಬೊಮ್ಮನಗಿ, ಡೋಮನಾಳ, ಮಂಕಣಿ, ನಾಗಸಂಪಿಗಿ ಸೇರಿದಂತೆ ಹಲವು ಗ್ರಾಮಗಳಲ್ಲಿ ಶಾಸಕ ಉಮೇಶ್ ಮೇಟಿ ಅವರಿಗೆ ಗ್ರಾಮಸ್ಥರು ಸ್ವಾಗತ ಕೋರಿದರು. ಕೆಲ ಗ್ರಾಮಗಳಲ್ಲಿ ಎತ್ತಿನ ಬಂಡಿ ಮೆರವಣಿಗೆ ನಡೆಯಿತು. ಇನ್ನೂ ಕೆಲ ಕಡೆ ಮಹಿಳೆಯರು ಆರತಿ ಬೆಳಗಿ, ಹೂವು ಚೆಲ್ಲಿ ಸಂಭ್ರಮಿಸಿದರು. ಗ್ರಾಮಸ್ಥರು ಘೋಷಣೆಗಳನ್ನು ಕೂಗಿ



ಶಾಸಕ ಉಮೇಶ್ ಮೇಟಿ ಅವರಿಗೆ ಅಭಿನಂದನೆ ಸಲ್ಲಿಸಿದರು. ಬಸವಂತಪ್ಪ ಮೇಟಿ, ಬಲರಾಮ ಪವಾರ, ಮುದಕಪ್ಪ ಕೊಣ್ಣೂರ, ಮಲ್ಲಿಕಾರ್ಜುನ ಮೇಟಿ, ಶಶಿಕಾಂತ ಪೂಜಾರ, ಮುತಪ್ಪ ಹುಗ್ಗಿ, ಜಟ್ಟೆಪ್ಪ ಮಾದಾಪುರ, ಮಲ್ಲು ದ್ಯಾವನವರ, ಶಿವಪ್ಪ ನುಗ್ಲಿ, ತಿಪ್ಪಣ್ಣ ತಿಮಸಾಗರ, ಹಣಮಂತ ಪೂಜಾರ, ಎಚ್.ಎನ್.ವಾಲಿಕಾರ, ಶಿವಾನಂದ ಅಫ್ಜಲಪುರ, ಚಂದಗೌಡ ಗೌಡರ, ನಿಂಗಗೌಡ ಕಲಬುರಗಿ, ಮಲಪ್ಪ ಬೆನಕಟ್ಟಿ, ಬಸವರಾಜ ಬುದ್ಯಾಳ ಹಾಗೂ ನಿಂಗನಗೌಡ ಗೌಡರ ಉಪಸ್ಥಿತರಿದ್ದರು.

ಬೀದಿ ಬದಿ ವ್ಯಾಪಾರಸ್ಥರಿಂದ ಪ್ರತಿಭಟನೆ



ಜಮಖಂಡಿ: ಸ್ಥಳೀಯ ಅಂಚೆ ಕಚೇರಿಯ ಹತ್ತಿರ ಸಿಂಧೂರ ಲಕ್ಷ್ಮಣ ಮಾರುಕಟ್ಟೆಗೆ ಬೀದಿ ಬದಿ ವ್ಯಾಪಾರಸ್ಥರು ಬೀಗ ಜಡಿದು ಕೆಲಕಾಲ ಪ್ರತಿಭಟನೆ ನಡೆಸಿದರು.

ಬೀದಿ ಬದಿ ವ್ಯಾಪಾರಸ್ಥರಿಗೆ ನಗರ ಸಭೆಯಿಂದ ಈ ಮಾರುಕಟ್ಟೆ ಆವರಣದಲ್ಲಿ ವ್ಯಾಪಾರ ಮಡಲು ಅವಕಾಶ ಕಲ್ಪಿಸಿದ್ದರು. ಆದರೆ ಕೆಲ ವ್ಯಾಪಾರಿಗಹಳು ವಾಹನ ನಿಲುಗಡೆಯ ಹತ್ತಿರವೇ ವ್ಯಾಪಾರ ಮಾಡುತ್ತಿದಗ್ದರಿಮದ ಮಾರುಕಟ್ಟೆಯ ವಳಾಂಗಣದಲ್ಲಿದ್ದ ವ್ಯಾಪಾರಸ್ಥರಿಗೆ ತೊಂದರೆಯಾಗುತ್ತಿದ್ದು ತಿಳಿದು ಬಂದಿದೆ. ಇದಕ್ಕನಗುಣವಾಗಿ ನಗರ ಸಭೆಯ ಸಿಬ್ಬಂದಿಗಳು ಅಲಿದ್ದ ವ್ಯಾಪಾರಸ್ಥರನ್ನು ತೆರವುಗೊಳಿಸದ್ದಕ್ಕಾಗಿ ತಳ್ಳು ಗಾಡಿಯ ವ್ಯಾಪಾರಿಗಳು ಪ್ರತಿಭನಟೆ ನಡೆಸಸಿದ್ದಾರೆ.

ಘಟನಾ ಸ್ಥಳಕ್ಕೆ ಜಮಖಂಡಿ ಪೊಲೀಸರು ಹಾಗೂ ನಗರಸಭೆ ಸಿಬ್ಬಂದಿಗಳು ಆಗಮಿಸಿ ಪರಿಸ್ಥಿತಿಯನ್ನು ನಿಯಂತ್ರಿಸಿದರು. ಬಳಿಕ ಗೇಟ್‌ಗೆ ಹಾಕಿದ್ದ ಬೀಗವನ್ನು ತೆರವುಗೊಳಿಸಿ ಪ್ರತಿಭಟನಾಕಾರರೊಂದಿಗೆ ಮಾತುಕತೆ ನಡೆಸಿದರು. ನಗರಸಭೆ ಅಧಿಕಾರಿಗಳು, ನಗರಸಭೆ ವತಿಯಿಂದ ವ್ಯಾಪಾರಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿದೆ. ಅದೇ ನಿಯಮದಂತೆ ವ್ಯಾಪಾರ ನಡೆಸಬೇಕು ಎಂದು ಸೂಚಿಸಿದರು.

ತಾಲೂಕಾಡಳಿತ ಭವನಕ್ಕೆ ಶಾಸಕ ಭೇಟಿ

ಬಾದಾಮಿ: ಪಟ್ಟಣದ ರಾಮದುರ್ಗ ರಸ್ತೆಯಲ್ಲಿ ನೂತನವಾಗಿ ನಿರ್ಮಾಣವಾಗಿರುವ ತಾಲೂಕಾಡಳಿತ ಭವನಕ್ಕೆ ಸೋಮವಾರ ಶಾಸಕ ಭೀಮಸೇನ ಚಿಮ್ಮನಕಟ್ಟಿ ಭೇಟಿ ನೀಡಿ ಕಟ್ಟಡ ವೀಕ್ಷಣೆ ಮಾಡಿದರು.

ಬಾಕಿ ಉಳಿದಿರುವ ಕೆಲಸ ಕೂಡಲೇ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಮತ್ತು ಉದ್ಘಾಟನೆಗೆ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಶಾಸಕರು ತಹಶೀಲದಾರ ಎಸ್.ಬಿ.ಬೊಮ್ಮನ್ನವರ ಅವರಿಗೆ ಸೂಚಿಸಿದರು.

ಅಧಿಕಾರಿಗಳೊಂದಿಗೆ ಸುದೀರ್ಘವಾಗಿ ಚರ್ಚಿಸಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ವಾಹನ ಪಾರ್ಕಿಂಗ್, ಕುಡಿಯುವ ನೀರು ಸೇರಿದಂತೆ ಕಚೇರಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು ಎಂದು ಸೂಚಿಸಿದರು.

ಪುರಸಭೆ ಮಾಜಿ ಅಧ್ಯಕ್ಷರಾದ ಪಾಂಡು ಕಟ್ಟಿಮನಿ, ಮಂಜುನಾಥ ಹೊಸಮನಿ, ತಹಶೀಲದಾರ ಎಸ್.ಬಿ.ಬೊಮ್ಮನ್ನವರ, ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ ತೋಪಲಕಟ್ಟಿ, ಯಲ್ಲಪ್ಪ ಆಡಿನ, ಕ್ಷೇತ್ರ ಶಿಕ್ಷಣಾಧಿಕಾರಿ ಕೇಶವ ಪೆಟ್ಲೂರ, ಕಂದಾಯ ಇಲಾಖೆಯ ಅಧಿಕಾರಿಗಳು ಸೇರಿದಂತೆ ತಾಲೂಕಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



ಶಾಲಾ ದಾಖಲಾತಿ ಆಂದೋಲನ



ಕೆರೂರ: ಶಾಲಾ ದಾಖಲಾತಿ ಆಂದೋಲನದ ನಿಮಿತ್ತ ನಗರದ ಸರ್ಕಾರಿ ಹೆಣ್ಣು ಮಕ್ಕಳ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕ್ಷೇತ್ರ ಸಮನ್ವಯ ಅಧಿಕಾರಿ ಎಂ.ಬಿ.ದೊಡ್ಡಪ್ಪನವರ ಅವರು ಶಾಲಾ ಪ್ರಾರಂಭೋತ್ಸವ ಮತ್ತು ದಾಖಲಾತಿ ಆಂದೋಲನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ವಿದ್ಯಾರ್ಥಿಗಳ ಮನೆಗೆ ಭೇಟಿ ನೀಡಿ ವಿದ್ಯಾರ್ಥಿಗಳನ್ನು ಸರ್ಕಾರಿ ಶಾಲೆಗೆ ದಾಖಲಿಸುವಂತೆ ಪ್ರೇರೇಪಣೆಯನ್ನು ನೀಡಿದರು.

ಸಮೂಹ ಸಂಪನ್ಮೂಲ ವ್ಯಕ್ತಿ ವಿಜಯಕುಮಾರ ಹಿರೇಮಠ, ಕೆಜಿಎಸ್ ಶಾಲೆಯ ಮುಖ್ಯಶಿಕ್ಷಕಿ ಕುಸುಮಾ ಕರ್ಜಗಿ, ಸಹ ಶಿಕ್ಷಕಿಯರಾದ ಬ್ಯಾಲ್ಯಾಳ, ಕೆ.ಎನ್ ಪಡಿ ಹಾಗೂ ಎಸ್‌ಡಿಎಂಸಿ ಅಧ್ಯಕ್ಷ ಶಂಕರಕೆಂದೂಳಿ ಹಾಜರಿದ್ದರು. ಕ್ಷೇತ್ರ ಸಮನ್ವಯ ಅಧಿಕಾರಿಗಳು ಕೆರೂರ ಪಟ್ಟಣದ 5 ನೇ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ ಎಲ್‌ಕೆಜಿಗೆ ಬರುವಂತಹ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲಿಸುವಂತೆ ಮನವಿ ಮಾಡಿದರು.

ಎಲೆ ಬಳ್ಳಿ ಹಾನಿ ಸ್ಥಳಕ್ಕೆ ಹಟ್ಟಿ ಭೇಟಿ

ಬಾದಾಮಿ: ತಾಲೂಕಿನ ಮುಮಟಗೇರಿ ಹನುಮಸಾಗರ, ಕಲ್ಲಾಪುರ, ತಪ್ಪಸಕಟ್ಟಿ ಸೋಮನಕೊಪ್ಪ, ಚೊಳಚಗುಡ್ಡ ಗ್ರಾಮಗಳಲ್ಲಿ ಎಲೆ ಬಳ್ಳಿ ಸಂಪೂರ್ಣ ನಾಶವಾಗಿದ್ದು, ಈ ಭಾಗದ ರೈತರ ಆದಾಯವಾಗಿದ್ದು ಆ ಎಲೆಗಳನ್ನು ಮಾರಿ ಬಂದು ಜೀವನವನ್ನು ನಡೆಸುತ್ತಿದ್ದರು. ಅಂತಹ ಎಲೆ ಬಳ್ಳಿ ಇವತ್ತು ನಾಶವಾಗಿದೆ ಮತ್ತು ಕೆಲವಷ್ಟು ಕಡೆ ಬಾಳೆ ನಾಶವಾದ ಸ್ಥಳಕ್ಕೆ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಮಹಾಂತೇಶ್ ಲಕ್ಷ್ಮಣ ಹಟ್ಟಿ ಅವರು ಹನುಮಸಾಗರದ ಸಿದ್ದರ ತೋಟಕ್ಕೆ ಭೇಟಿ ನೀಡಿದರು ಎಲೆ ಬಳ್ಳಿ ನಾಶವಾಗಿರುವುದು ನಾಶವಾಗಿರುವುದನ್ನು ಸಂಪೂರ್ಣವಾಗಿ ವೀಕ್ಷಿಸಿದರು. ಈಚೆಗೆ ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳಿಗೆ ಮತ್ತು ತೋಟಗಾರಿಕೆ ಸಚಿವರಿಗೆ ಕೃಷಿ ಸಚಿವರಿಗೆ ಕೂಡಲೇ ಈ ಭಾಗದ ಎಲೆ ಬಳ್ಳಿ ಕನಿಷ್ಠ 60 ರಿಂದ 70 ಹೆಕ್ಟರ್ ಬೇರೆ ಬೇರೆ ರೈತರ ಹಾನಿಯಾಗಿದ್ದು ಆ ರೈತರ ತೋಟಗಳಿಗೆ ಭೇಟಿ ನೀಡಿ ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರ ಮೂಲಕ ಹಾನಿ ಪರಿಶೀಲನೆ ಮಾಡಿ ಕೂಡಲೇ ಸರ್ಕಾರಕ್ಕೆ ವರದಿ ಕಳಿಸುವಂತೆ ಮನವಿ ಮಾಡಿದರು. ತೋಟಗಾರಿಕೆ ಸಹಾಯಕ ನಿರ್ದೇಶಕ ಬಿ.ಪಿ.ಪಾಟೀಲ, ಅಧಿಕಾರಿ ತುಳಸಿಗೇರಿ ಮತ್ತು ಇಲಾಖೆ ಸಿಬ್ಬಂದಿ ಹಾಜರಿದ್ದರು.



ಕಿರುಸುದ್ದಿ

ಗ್ರಾಮದೇವತೆಗೆ ಉಡಿ ತುಂಬುವ ಕಾರ್ಯಕ್ರಮ



•**ಬಸವನಬಾಗೇವಾಡಿ:** ಪಟ್ಟಣದ ಗ್ರಾಮದೇವತೆಗೆ ಐದನೇ ಮಂಗಳವಾರ ಕೊನೆಯ ವಾರ ಆಗಿದ್ದರಿಂದ ಪಟ್ಟಣದ ಮಹಿಳೆಯರು ದೇವಿಗೆ ಉಡಿ ತುಂಬಿ ಭಕ್ತಿ ಭಾವದಿಂದ ಮೆರೆದರು. ಪ್ರತಿ ವರ್ಷವೂ ಮಳೆಗಾಲಕ್ಕೂ ಮುನ್ನ ಮಂಗಳವಾರದ ಐದು ವಾರಗಳನ್ನು ಗ್ರಾಮ ದೇವತೆಯ ಹೆಸರಿನಲ್ಲಿ ಕಟ್ಟುನಿಟ್ಟಿನಿಂದ ಆಚರಣೆ ಕೈಗೊಂಡು ಬರಲಿರುವ ದಿನಗಳಲ್ಲಿ ಮಳೆ, ಬೆಳೆ ಚೆನ್ನಾಗಿ ಬಂದು ನಾಡು ಸುಭಿಕ್ಷವಾಗಿರಲೆಂದು ಆಶಿಸಿ ಪಟ್ಟಣದ ಗ್ರಾಮದೇವತೆ ದೇವಸ್ಥಾನದ ಹೊಸ್ತಿಲಿಗೆ ನೀರು ಹಾಕಿ ಜನರು ತಮ್ಮ ಹರಕೆ ತೀರಿಸಿದರು. ದ್ಯಾಮವ್ವದೇವಿ, ಲಕ್ಷ್ಮವ್ವದೇವಿ, ಮರಗಮ್ಮದೇವಿ ದೇವಿಸ್ಥಾನದ ಅಷ್ಟ ದೇವಸ್ಥಾನಗಳಿಗೆ ತೆರಳಿ ಗ್ರಾಮ ದೇವತೆಗೆ ನೀರು ಹಾಕಿ ಶಾಂತವಾಗಿರುವಂತೆ ಪ್ರಾರ್ಥಿಸಿದರು. ಮಂಜು ಬಡಿಗೇರ, ಸುರೇಶ ಚಿಂಚೋಳಿ, ಬಸವರಾಜ ಅವಟಿ, ವಿಶ್ವನಾಥ ನಿಡಗುಂದಿ, ರಾಘವೇಂದ್ರ ಮಸಬಿನಾಳ, ಗುರಲಿಂಗ ಬಸರಕೋಡ, ದಯಾನಂದ ಸಾರವಾಡ, ಮುದಕಣ್ಣ ಪಡಶೆಟ್ಟಿ ಪಾಟೀಲ, ಸಾಬಣ್ಣ ಅವಟಿ, ಶಿವು ಪರಮಗೊಂಡ ಇದ್ದರು.

ಪುಣ್ಯಸ್ಮರಣೆ ಇಂದು

•**ವಿಜಯಪುರ:** ಶಿಕ್ಷಣ, ಸಹಕಾರ, ರಾಜಕಾರಣ, ಕೊಡುಗೈ ದಾನಿ ಹೀಗೆ ಅನೇಕ ಕ್ಷೇತ್ರಗಳಿಗೆ ಅಪಾರ ಕೊಡುಗೆ ನೀಡಿದ ಮಾಜಿ ಶಾಸಕ ದಿ.ಆರ್.ಆರ್.ಕಲ್ಲೂರ ದಂಪತಿ ಆದರ್ಶಕ್ಕೆ ಪ್ರತಿರೂಪರಾಗಿದ್ದರು. ಅವರ ಐದನೇಯ ವರ್ಷದ ಪುಣ್ಯಸ್ಮರಣೆ ಅರ್ಥಪೂರ್ಣವಾಗಿ ಆಚರಿಸುವ ನಿರ್ಧಾರ ಕೈಗೊಳ್ಳಲಾಗಿದ್ದು, ಮೇ 21ರಂದು ಬೆಳಗ್ಗೆ 10.30 ಕ್ಕೆ ಇಲ್ಲಿನ ರಾಣಿ ಚನ್ನಮ್ಮ ಮಂಗಲ ಕಾರ್ಯಾಲಯದಲ್ಲಿ ಈ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಮುಖಂಡ ಮಲ್ಲಿಕಾರ್ಜುನ ಲೋಣಿ ಹೇಳಿದರು. ನಗರದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆದರ್ಶ ರಾಜಕಾರಣಿ, ಆದರ್ಶ ಸತಿ- ಪತಿಗೆ ಉದಾಹರಣೆ ಕಲ್ಲೂರ ದಂಪತಿ. ಶಾಸಕರಾಗಿ, ಕರ್ನಾಟಕ ಭೂಸೇನಾ ನಿಗಮದ ಅಧ್ಯಕ್ಷರಾಗಿ ಮಹತ್ವರ ಕೊಡುಗೆಯನ್ನು ದಿ.ಆರ್.ಆರ್. ಕಲ್ಲೂರ ನೀಡಿದ್ದಾರೆ. ಅವರ ಧರ್ಮಪತ್ನಿ ದಿ.ಮೀನಾಕ್ಷಿ ಕಲ್ಲೂರ ಅವರು ವಿಜಯಪುರದಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಬ್ಯಾಂಕ್ ಆರಂಭಿಸಿ ಮಹಿಳಾ ಸಬಲೀಕರಣಕ್ಕೆ ಮುನ್ನುಡಿ ಬರೆದವರು, ಕೊಡುಗೈ ದಾನಿಯಾಗಿದ್ದ ಅವರ ಆದರ್ಶಗಳು ಎಲ್ಲರಿಗೂ ಮಾದರಿ ಹೀಗಾಗಿ ಅವರ ಸ್ಮರಣೆಗಾಗಿ ಈ ಕಾರ್ಯಕ್ರಮ ನಡೆಯಲಿದೆ ಎಂದರು.

ಸುತ್ತೂರು ಮಠದ ಡಾ.ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ನಡೆಯಲಿರುವ ಸಮಾರಂಭವನ್ನು ಮಾಜಿ ಮುಖ್ಯಮಂತ್ರಿ ಡಾ.ವೀರಪ್ಪ ಮೊಯ್ಲಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಅತಿಥಿಗಳಾಗಿ ಪ್ರಭಾವತಿ ಧರ್ಮಸಿಂಗ್, ಸಚಿವರಾದ ಎಂ.ಬಿ. ಪಾಟೀಲ, ಶಿವಾನಂದ ಪಾಟೀಲ, ಎಚ್.ಕೆ. ಪಾಟೀಲ, ದಿನೇಶ ಗುಂಡೂರಾವ್ ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ. ಶಾಸಕ ಯಶವಂತರಾಯಗೌಡ ಪಾಟೀಲ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು. ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಮಾತನಾಡಿ, ದಿ.ಆರ್. ಆರ್. ಕಲ್ಲೂರ ಒಬ್ಬ ಅಂತಕರುಣೆಯುಳ್ಳ ರಾಜಕಾರಣಿ, ಎಲ್ಲರೊಂದಿಗೂ ಅನ್ಯೋನ್ಯತೆಯಿಂದ ಇದ್ದ ಅವರ ಎಲ್ಲರನ್ನೂ ಪ್ರೀತಿಯಿಂದ ಕಾಣುತ್ತಿದ್ದರು ಎಂದರು.

ಪ್ರಧಾನಿ ಬಗ್ಗೆ ಹೇಳಿಕೆ ಖಂಡನೀಯ: ಅಣ್ಣಿಗೇರಿ

•**ವಿಜಯಪುರ:** ಪ್ರಧಾನಿ ನರೇಂದ್ರ ಮೋದಿ, ಗೃಹಸಚಿವ ಅಮಿತ್ ಶಾ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವಹೇಳನಕಾರಿ ಹೇಳಿಕೆ ನೀಡಿರುವುದು ಖಂಡನೀಯ ಎಂದು ಬಿಜೆಪಿ ನಗರ ಮಾಜಿ ಯುವ ಮೋರ್ಚಾ ಅಧ್ಯಕ್ಷ ರಾಘವ್ ಅಣ್ಣಿಗೇರಿ ಹೇಳಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಮೆಲೋನಿಗೆ – ಮೆಲೋಡಿ ಚಾಕಲೇಟ್ ಕೊಡಲು ಪ್ರಧಾನಿ ನರೇಂದ್ರ ಮೋದಿ ಇಟಲಿಗೆ ಹೋಗಿಲ್ಲ, ಮೋದಿಯವರು ಐದು ರಾಷ್ಟ್ರಗಳ ವಿದೇಶ ಪ್ರವಾಸಕ್ಕೆ ಹೋಗಿದ್ದು, ಮೋಜು ಮಸ್ತಿಗಾಗಿ ಅಲ್ಲ, ಭಾರತದ ಭವಿಷ್ಯಕ್ಕಾಗಿ, ಭಾರತ–ಇಟಲಿ ನಡುವೆ ವಿಶೇಷ ಕಾರ್ಯತಂತ್ರಾತ್ಮಕ ಪಾಲುದಾರಿಕೆ ಘೋಷಣೆ ಮಾಡಲಿಕ್ಕೆ ಎಂಬುದು ಕಾಂಗ್ರೆಸ್‌ನವರಿಗೆ ಅರಿವಿರಲಿ. ಐಎಂಇಸಿ ಯೋಜನೆಗೂ ಉಭಯ ನಾಯಕರು ಬದ್ಧತೆ ಪುನರುಚ್ಚರಿಸಿದ್ದು, ಇದು ದ್ವಿಪಕ್ಷೀಯ ಸಂಬಂಧಕ್ಕೆ ಹೊಸ ಆಯಾಮ ನೀಡಿದೆ. ಮೋದಿ ಭೇಟಿಯನ್ನು ಮೆಲೋನಿ ಐತಿಹಾಸಿಕ ಎಂದು ಬಣ್ಣಿಸಿದ್ದಾರೆ. ಈ ಎಲ್ಲ ವಿಷಯಗಳನ್ನು ಕಾಂಗ್ರೆಸ್ ಮರೆಮಾಚಿ, ಇಲ್ಲಸಲ್ಲದ ಸುಳ್ಳು ಆರೋಪಗಳನ್ನು ಪ್ರಧಾನಿ ನರೇಂದ್ರ ಮೋದಿಯವರ ಮೇಲೆ ಮಾಡುತ್ತಿರುವುದು ಹಾಸ್ಯಾಸ್ಪದ, ಇಂತಹ ಹೇಳಿಕೆಗಳಿಂದಲೇ ಕಾಂಗ್ರೆಸ್ ಈಗಾಗಲೇ ನೆಲೆ ಕಚ್ಚಿ ಹೋಗಿದೆ ಎಂದು ಅವರು ದೂರಿದರು.



ಝಳಕಿ: ಸಮೀಪದ ಅಂಜುಟಗಿ ಗ್ರಾಮದಲ್ಲಿ ನಡೆದ ವೀರಭದ್ರೇಶ್ವರ ಜಾತ್ರಾ ಮಹೋತ್ಸವ ಪ್ರಯುಕ್ತ ದೇವರಿಗೆ ಪುಷ್ಪ ಅಂಲಕಾರ ಅಭೀಷೇಕ ಜರಗಿತು. ವೀರಭದ್ರೇಶ್ವರ ಪಲ್ಲಕ್ಕಿ, ನಂದಿಕೋಲ ವಾದ್ಯ ವೈಭವಗಳೊಂದಿಗೆ ಗ್ರಾಮದ ಪ್ರಮುಖ ರಸ್ತೆಯಲ್ಲಿ ಸಂಚರಿಸಿ, ಅಗ್ನಿ ಕುಂಡಲಕ್ಕೆ ತಲುಪಿತು. ಪುರವಂತರು ಸೇವೆಯಲ್ಲಿ 20 ಪುಟದ ಕಬ್ಬಿಣದ ಸಳಾಯಿ ಶಸ್ತ್ರ ಚುಚ್ಚಿಕೊಂಡು ಸೇವೆ ಸಲ್ಲಿಸಿ, ಅಗ್ನಿ ಪ್ರವೇಶ ಜರಗಿತು. ಜಾತ್ರಾ ಕಮಿಟಿ ಅಧ್ಯಕ್ಷರು, ಸದಸ್ಯರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಅನಿಯಂತ್ರಿತ ವ್ಯವಹಾರ ವಿರೋಧಿಸಿ ಧರಣಿ

•**ಬಸವನಬಾಗೇವಾಡಿ:** ಆನ್‌ಲೈನ್ ಔಷಧ ಮಾರಾಟ ವೇದಿಕೆಗಳು ಮತ್ತು ಇ-ಕಾಮರ್ಸ್ ಸಂಸ್ಥೆಗಳ ಅನಿಯಂತ್ರಿತ ವ್ಯವಹಾರ ವಿರೋಧಿಸಿ ಔಷಧ ವ್ಯಾಪಾರಿಗಳು ಸ್ಥಳೀಯ ಔಷಧ ಅಂಗಡಿಗಳನ್ನು ಬಂದ್ ಮಾಡಿ ಬಸವೇಶ್ವರ ವೃತ್ತದಲ್ಲಿ ಸಾಂಕೇತಿಕವಾಗಿ ಧರಣಿ ನಡೆಸಿ ತಹಶೀಲ್ದಾರ್ ಕಚೇರಿಯ ಸಿಬ್ಬಂದಿ ರಾಜು ಹಾದಿಮನಿಗೆ ಮನವಿ ಸಲ್ಲಿಸಿದರು. ಔಷಧ ವ್ಯಾಪಾರಸ್ಥರ ಸಂಘದ ತಾಲ್ಲೂಕು ಅಧ್ಯಕ್ಷ ಪ್ರಭು ಪಟ್ಟಣಶೆಟ್ಟಿ, ಕಾರ್ಯದರ್ಶಿ ಶ್ರೀಕಾಂತ ಕೋರಿ, ಸದಸ್ಯರಾದ ಶ್ರೀಕಾಂತ ಕೊಟ್ರಶೆಟ್ಟಿ ಮಾತನಾಡಿ, ಪ್ರಿಸ್ಕ್ರಿಪ್ಷನ್ ಇಲ್ಲದೇ ಔಷಧಿ ಮಾರಾಟ, ನಕಲಿ ಔಷಧಿಗಳ ಭೀತಿ, ಆಂಟಿಬಯಟಿಕ್ ದುರುಪಯೋಗ ಹಾಗೂ ನಿಯಂತ್ರಣ ರಹಿತ ಇ-ಫಾರ್ಮಸಿ ವ್ಯವಸ್ಥೆಯಿಂದ ಸಾರ್ವಜನಿಕ ಆರೋಗ್ಯಕ್ಕೆ ತೀವ್ರ ಅಪಾಯ ಉಂಟಾಗುತ್ತಿದೆ. ಅಲ್ಲದೇ ಔಷಧ ವ್ಯಾಪಾರವನ್ನೇ ನಂಬಿಕೊಂಡು ಜೀವನ ನಡೆಸುತ್ತಿರುವರಿಗೆ ದೊಡ್ಡ ಹೊಡೆತ ಬಿದ್ದಿದೆ ಎಂದು ಅಳಲು ತೋಡಿಕೊಂಡರು. ತಾಲೂಕು ಔಷಧ ವ್ಯಾಪಾರಸ್ಥರಾದ ಮಹಾವೀರ ಹೊಸಮನಿ, ರುದ್ರಗೌಡ ಪಾಟೀಲ, ಅಶೋಕ ಮುಳವಾಡ, ವಿದ್ಯಾಧರ ಉಪಾಧ್ಯೆ ಸುರೇಶ ಗಬ್ಬೂರ, ರೇವಣಸಿದ್ಧ ಬೇವನೂರ, ರಾಘು ಸೋಮನಕಟ್ಟಿ, ಮಲ್ಲಿಕಾರ್ಜುನ ಮಠ, ಎಸ್.ಎ.ನದಾಫ್, ಶೇಖರ ಹೂಗಾರ, ಸಿದ್ದು ಬಿದರಿ, ಮಹ್ಮದ ಅಲಿ ಕೊರಬು, ಮಲ್ಲಿಕಾರ್ಜುನ ಕೋಳೂರ, ಮಲ್ಲನಗೌಡ ಬಿರಾದಾರ, ರಮೇಶ ವೈದ್ಯ, ಸಂಗನಗೌಡ ಹೊಸಗೌಡರ, ಆನಂದ ಶಿರಸಂಗಿ ಸೇರಿದಂತೆ 15ಕ್ಕೂ ಹೆಚ್ಚು ವ್ಯಾಪಾರಸ್ಥರು ಪಾಲ್ಗೊಂಡಿದ್ದರು.



ಬಸವನಬಾಗೇವಾಡಿ: ಆನ್‌ಲೈನ್ ಔಷಧ ಮಾರಾಟ ವೇದಿಕೆಗಳು ಮತ್ತು ಇ-ಕಾಮರ್ಸ್ ಸಂಸ್ಥೆಗಳ ಅನಿಯಂತ್ರಿತ ವ್ಯವಹಾರ ವಿರೋಧಿಸಿ ಔಷಧ ವ್ಯಾಪಾರಿಗಳು ಸ್ಥಳೀಯ ಔಷಧ ಅಂಗಡಿಗಳನ್ನು ಬಂದ್ ಮಾಡಿ ಬಸವೇಶ್ವರ ವೃತ್ತದಲ್ಲಿ ಸಾಂಕೇತಿಕವಾಗಿ ಧರಣಿ ನಡೆಸಿ ತಹಶೀಲ್ದಾರ್ ಕಚೇರಿಯ ಸಿಬ್ಬಂದಿ ರಾಜು ಹಾದಿಮನಿಗೆ ಮನವಿ ಸಲ್ಲಿಸಿದರು. ಔಷಧ ವ್ಯಾಪಾರಸ್ಥರಾದ ಮಹಾವೀರ ಹೊಸಮನಿ, ರುದ್ರಗೌಡ ಪಾಟೀಲ, ಅಶೋಕ ಮುಳವಾಡ, ವಿದ್ಯಾಧರ ಉಪಾಧ್ಯೆ ಸುರೇಶ ಗಬ್ಬೂರ, ರೇವಣಸಿದ್ಧ ಬೇವನೂರ, ರಾಘು ಸೋಮನಕಟ್ಟಿ, ಮಲ್ಲಿಕಾರ್ಜುನ ಮಠ ಇದ್ದರು.

ಔಷಧ ಮಾರಾಟಗಾರರಿಂದ ಪ್ರತಿಭಟನೆ

•**ವಿಜಯಪುರ:** ಆನ್‌ಲೈನ್ ಔಷಧ ವ್ಯಾಪಾರಕ್ಕೆ ನಿಯಂತ್ರಣ ನೀತಿ ರೂಪಿಸುವುದು ಹಾಗೂ ಸಾಂಪ್ರದಾಯಿಕ ಔಷಧ ಅಂಗಡಿಗಳಿಗೆ ಆಗುವ ತೊಂದರೆ ನಿವಾರಿಸುವುದು ಸೇರಿದಂತೆ ಅಖಿಲ ಭಾರತ ರಸಾಯನಶಾಸ್ತ್ರ ಹಾಗೂ ರೋಗ ನಿರೋಧಕಗಳ ಸಂಘ ರಾಷ್ಟ್ರವ್ಯಾಪಿ ಹಮ್ಮಿಕೊಂಡ ಮುಷ್ಕರಕ್ಕೆ ನಗರದಲ್ಲಿ ಬೆಂಬಲ ವ್ಯಕ್ತವಾಯಿತು.

ನಗರದಲ್ಲಿ ಬೆರಳಣಿಕೆಯಷ್ಟು ಔಷಧ ಅಂಗಡಿಗಳು ಸಂಪೂರ್ಣ ಬಂದ್ ಆಗಿದ್ದವು. ಸಾರ್ವಜನಿಕರ ಅನುಕೂಲಕ್ಕಾಗಿ ಔಷಧ ಅಂಗಡಿಗಳನ್ನು ಬಂದ್ ಮಾಡದೇ ಪ್ರತಿಭಟನೆಗೆ ಕೆಲವೊಂದು ಸಂಘಟನೆಗಳು ಕರೆ ನೀಡಿದ್ದರೆ, ಇನ್ನೂ ಕೆಲವು ಸಂಘಟನೆಗಳು ಸಂಪೂರ್ಣ ಔಷಧ ಅಂಗಡಿಗಳ ಬಂದ್‌ಗೆ ಕರೆ ನೀಡಿದ್ದವು.

ಆರೋಗ್ಯ ಸೇವೆ ಒದಗಿಸುವಲ್ಲಿ ಔಷಧ ಅಂಗಡಿಗಳ ಪಾತ್ರ ಅನನ್ಯ, ಆದರೆ ಆನ್‌ಲೈನ್ ಔಷಧಕ್ಕೆ ನಿಯಂತ್ರಣ ಇಲ್ಲದ ಕಾರಣದಿಂದ ಸಾಂಪ್ರದಾಯಿಕ ಔಷಧ ಮಾರಾಟಕ್ಕೆ ದೊಡ್ಡ ಕೊಡಲಿ ಪೆಟ್ಟು ನೀಡಿದೆ. ಈ ಆನ್‌ಲೈನ್ ಔಷಧ ಮಾರಾಟಕ್ಕೆ ಕೋವಿಡ್ ನಂತರವೂ ಸಡಿಲಿಕೆ ನೀಡಿರುವುದು ಅನೇಕ ತೊಂದರೆಗೆ ಕಾರಣವಾಗಿದೆ. ಕರ್ತವ್ಯ ನಿಭಾಯಿಸುತ್ತಲೇ ಕಪ್ಪು ಪಟ್ಟಿ ಧರಿಸಿಕೊಂಡು ಮುಷ್ಕರಕ್ಕೆ ಬೆಂಬಲ ನೀಡಿದ್ದೇವೆ ಎಂದು ಔಷಧ ವ್ಯಾಪಾರಸ್ಥರು ಹೇಳಿದರು.

ಔಷಧ ಅಂಗಡಿಗಳು ಸಂಪೂರ್ಣ ಬಂದ್ ಆದರೆ ಜನರಿಗೆ ತೊಂದರೆಯಾಗಲಿದೆ, ಈ ಕಾರಣಕ್ಕಾಗಿ ಈ ನಿರ್ಧಾರ ಕೈಗೊಂಡಿದ್ದೇವೆ ಎಂದು ವಿಜಯಪುರ ಡಿಸ್ಟ್ರಿಕ್ಟ್ ಫಾರ್ಮಾ ರಿಟೇಲರ್ಸ್ ಹಾಗೂ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್ ಅಧ್ಯಕ್ಷ ಬಸವರಾಜ ಅಳ್ಳಗಿ ಮಾಹಿತಿ ನೀಡಿದರು.



ಪಟ್ಟಣದ ಔಷಧ ಅಂಗಡಿಗಳು ಬಂದ್: ಪರದಾಟ

•**ಆಲಮೇಲ:** ರಾಜ್ಯಾದ್ಯಂತ ಖಾಸಗಿ ಔಷಧಿ ಅಂಗಡಿಗಳ ಸಂಘ ಕೆಸಿಡಿಎ ನೀಡಿದ ಬಂದ್ ಕರೆಗೆ ಆಲಮೇಲ ಪಟ್ಟಣದ ಎಲ್ಲ ಔಷಧ ವ್ಯಾಪಾರಸ್ಥರು ತಮ್ಮ ಅಂಗಡಿಗಳನ್ನು ಬಂದ್ ಮಾಡಿ ಮುಷ್ಕರಕ್ಕೆ ಬೆಂಬಲ ವ್ಯಕ್ತ ಪಡಿಸಿರುವ ಕಾರಣ ಪಟ್ಟಣದಲ್ಲಿ ರೋಗಿಗಳು ಔಷಧಿಗಳಿಗೆ ಪರದಾಡಿ ನಂತರ ಸರ್ಕಾರಿ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದಿರುವ ಘಟನೆ ಕಂಡು ಬಂದಿದೆ.

ಬೆಳಗಿನಿಂದ ಪಟ್ಟಣದ ಎಲ್ಲ ಔಷಧ ಮಾರಾಟ ಅಂಗಡಿಗಳ ಮಾಲೀಕರು ಗ್ರಾಹಕರಿಗೆ ಆನ್ ಲೈನ್ ಮೂಲಕ ಔಷಧಿಗಳನ್ನು ಮಾರಾಟ ಮಾಡುವದನ್ನು ತಡೆಯಬೇಕು ಎಂದು ರಾಜ್ಯ ಕೆಸಿಡಿಎ ಸಂಘ ರಾಜ್ಯಾದ್ಯಂತ ಔಷದ ಅಂಗಡಿಗಳನ್ನು ಬಂದ್ ಮಾಡಿ ಮುಷ್ಕರ್ ನಡೆಸಿರುವ ಕಾರಣ ಇಲ್ಲಿನ ಎಲ್ಲ ಔಷದಿ ಅಂಗಡಿಕಾರರು ಬೆಂಬಲ ವ್ಯಕ್ತ ಪಡಿಸಿದ್ದಾರೆ.

ನಂತರ ಮೋದಿನಸಾಬ ಕಣ್ಣಿ ಮಾತನಾಡಿ, ಬೆಳಗ್ಗೆ ಹೊಟ್ಟೆ ನೋವು ಆಗುತ್ತಿರುವುದರಿಂದ ಖಾಸಗಿ ಆಸ್ಪತ್ರೆ ಹೋಗಿ ವೈದ್ಯರಿಗೆ ತೋರಿಸಲಾಯಿತುಉ,ನಂತರ ವೈದ್ಯರು ಬರೆದಿರುವ ಔಷದಿಗಳು ತರಲು ಔಷದ ಅಂಗಡಿಗಳಿಗೆ ತೆರಳಿದರೇ ಪಟ್ಟಣದ ಯಾವುದೇ ಒಂದು ಔಷದ ಅಂಗಡಿ ತೆರದೆ ಇರುವುದರಿಂದ ಸ್ಥಳೀಯ ಸರ್ಕಾರಿ ಆಸ್ಪತ್ರೆ ತೆರಳಿ ಅಲ್ಲಿನ ವೈದ್ಯರಿಗೆ ತೋರಿಸಿ ಚಿಕಿತ್ಸೆ ಪಡೆಯಲಾಯಿತು, ಮನುಷ್ಯರಿಗೆ ರೋಗಗಳು ಹೇಳಿ ಕೇಳಿ ಬರುವದಿಲ್ಲಾ,ಇಂತಹ ಸಂದರ್ಭದಲ್ಲಿ ತುರ್ತು ಚಿಕಿತ್ಸೆ ಬೇಕಾದರೆ ರೋಗಿಗಳ ಗತಿ ಏನ್ನೂ ಇದೇ ತರಹ ಅವಶಕತೆ ಇರುವ ವಸ್ತುಗಳ ಅಂಗಡಿಗಳು ಬಂದ್ ಮಾಡಿದರೆ ಬಡವರ ಪರಸ್ಥಿತಿ ಏನ್ನೂ? ಅದಕ್ಕಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಕೂಡಲೇ ರೋಗಿಗಳಿಗೆ ಬೇಕಾಗುವ ಎಲ್ಲ ಸೌಲಭ್ಯಗಳನ್ನು ಸರ್ಕಾರ ಕಲ್ಪಿಸಬೇಕು ಎಂದು ಆಗ್ರಹಿಸಿದರು. ಸಮುದಾಯ ಆರೋಗ್ಯ ಕೇಂದ್ರದ ಡಾ.ಜಿ.ಎಸ್.ಪತ್ತಾರ ಮಾತನಾಡಿ, ಪಟ್ಟಣದ ಎಲ್ಲ ಔಷಧಿ ಅಂಗಡಿಗಳ ಮುಷ್ಕರದಿಂದ ನಮ್ಮ ಸಮುದಾಯ ಆರೋಗ್ಯ ಕೇಂದ್ರಕ್ಕೆ ಹೊರರೋಗಿಗಳ ಸಂಖ್ಯೆ ಹೆಚ್ಚಾಗಿತ್ತು,ಬಂದಂತಹ ರೋಗಿಗಳಿಗೆ ಸಲಾಯಿನ್ ಮತ್ತು ಇಂಜೇಕ್ಷನ್ ಹಾಗೂ ಮಾತ್ರೆಗಳ ಮೂಲಕ ಉಪಚಾರ ಮಾಡಲಾಗಿದೆ ಎಂದರು.

ಆನ್‌ಲೈನ್ ಔಷಧಿ ವ್ಯಾಪಾರ ನಿಲ್ಲಿಸಲು ಆಗ್ರಹ

•**ಮುದ್ದೇಬಿಹಾಳ:** ಆನ್‌ಲೈನ್ ಮೂಲಕ ಔಷಧಿ ವ್ಯಾಪಾರ ಮಾಡಲು ಅವಕಾಶ ಮಾಡಿಕೊಟ್ಟಿದ್ದನ್ನು ದುರುಪಯೋಗ ಮಾಡಿಕೊಂಡು ಮಾದಕ ವಸ್ತು ಮಾರಾಟ ಹಾಗೂ ನಿರ್ಬಂಧ ವಿಲ್ಲದ ಮಾರಾಟ ಮಾಡುತ್ತಿರುವ ಅಂತರ್ಜಾಲ ಔಷಧ ವ್ಯಾಪಾರವನ್ನು ಕೇಂದ್ರ ಸರ್ಕಾರ ನಿಲ್ಲಿಸಬೇಕು ಹಾಗೂ ಕಿರುಕುಳ ಔಷಧ ವ್ಯಾಪಾರಸ್ಥರ ಮೇಲೆ ಹಾಕಿರುವ ನಿರ್ಬಂಧಗಳನ್ನು ತೆಗೆದು ಹಾಕಬೇಕು ಎಂದು ಆಗ್ರಹಿಸಿ ಜಿಲ್ಲಾ ಮತ್ತು ತಾಲೂಕ ಔಷಧ ವ್ಯಾಪಾರಸ್ಥರ ಸಂಘದ ಸದಸ್ಯರು ಪ್ರತಿಭಟನೆ ಮಾಡಿ ಮಂಗಳವಾರ ಮನವಿ ಸಲ್ಲಿಸಿದರು.

ಜಿಲ್ಲಾ ಔಷಧ ವ್ಯಾಪಾರಸ್ಥರ ಸಂಘದ ಕೆ.ಆರ್.ಎತ್ತಿನಮನಿ ಮಾತನಾಡಿ, ಔಷಧ ವ್ಯಾಪಾರಸ್ಥರು ನಿರ್ಬಂಧಿತವಾಗಿ ಮತ್ತು ನ್ಯಾಯ ಬದ್ಧವಾಗಿ ಔಷಧ ವ್ಯಾಪಾರವನ್ನು ಮಾಡಿ ರೋಗಿಗಳ ಹಾಗೂ ಸಾರ್ವಜನಿಕರ ಹಿತಾಸಕ್ತಿಯನ್ನು ಕಾಯುತ್ತಾರೆ. ಆದರೆ ಕರೋನಾ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಜನರಿಗೆ ಅನುಕೂಲವಾಗಲಿ ಎಂದು ಅಂತಜಾ೯ಲ ವ್ಯಾಪಾರ ಮಾಡಿಕೊಟ್ಟಿದೆ ಇದನ್ನು ದುರುಪಯೋಗ ಮಾಡಿಕೊಂಡಿರುವ ಬಂಡವಾಳಶಾಹಿಗಳು ಮಾದಕ ದ್ರವ್ಯ ಸರಬರಾಜು ಮಾಡುತ್ತಾರೆ. ಯುವಕರು ಹಾಗೂರೋಗಿಗಳುಯಾವುದೇತಜ್ಞವೈದ್ಯರ ಸೂಚನೆ ಚೀಟಿ ಇಲ್ಲದೆ ಅಂತರ್ಜಾಲದಲ್ಲಿ ಔಷಧಗಳನ್ನು ತರಿಸಿಕೊಳ್ಳುತ್ತಾರೆ. ರೋಗ ನಿರೋಧಕ ಔಷಧಿಗಳು ಮತ್ತು ಶಕ್ತಿ ವರ್ಧಕ ಮಾತ್ರೆಗಳನ್ನು ಎಗ್ಗಿಲ್ಲದೆ ಮಾರುತ್ತಾರೆ ಎಂದು ಹೇಳಿದರು.

ತಾಲೂಕು ಘಟಕದ ಜಗದೀಶ ಹಿರೇಮಠ ಮಾತನಾಡಿ, ಹತ್ತಾರು ವರ್ಷಗಳಿಂದ ಕಿರುಕುಳ ಔಷದ ವ್ಯಾಪಾರ ಮಾಡುವ ಸಾವಿರಾರು ಉದ್ಯೋಗಿಗಳು ಉದ್ಯೋಗ ಕಳೆದುಕೊಳ್ಳುತ್ತಿದ್ದಾರೆ. ಔಷಧ ನಿಯಂತ್ರಣ ಕಾನೂನು ಗಾಳಿಗೆ ತೂರಿ ವ್ಯಾಪಾರ ಮಾಡಿದರೆ ಬರುವ ದಿನಗಳಲ್ಲಿ ನಿರಂತರ ಮುಷ್ಕರ ಪ್ರತಿಭಟನೆ ಮಾಡಲಾಗುವದು ಎಂದು ಎಚ್ಚರಿಕೆ ನೀಡಿದರು.

ತಾಲೂಕು ಘಟಕದ ಕಾರ್ಯದರ್ಶಿ ಇಲಿಯಾಸ್ ಮಾಗಿ, ಉಪಾಧ್ಯಕ್ಷ ರೂಪ ಪತ್ತಾರ, ಶಬ್ಬೀರ ದೇಗಿನಾಳ, ಶಿವು ಸಿದ್ದಾಪುರ, ದಿನೇಶ್ ಲೋಕರೆ, ಶರಣು ಸಾಲವಾಡಗಿ ಸೋಮನಗೌಡ ಪಾಟೀಲ ಪಾಂಡುರಂಗ ಥೋರತ, ಗೌರೀಶ್ ಹಿರೇಮಠ, ಲಿಂಗರಾಜ ಓತಗೇರಿ, ಕುಮಾರಸ್ವಾಮಿ ಶಿವಯೋಗಿಮಠ, ಹೀರಾ ಕಲಾಲಉಪಸ್ಥಿತರಿದ್ದರು.




ಆನ್‌ಲೈನ್ ಔಷಧಿ ಮಾರಾಟ ನಿಲ್ಲಲಿ

•**ದೇವರಹಿಪ್ಪರಗಿ:** ಡೆಲಿವರಿ ಆ್ಯಪ್‌ಗಳ ಮೂಲಕ ಆನ್‌ಲೈನ್‌ನಲ್ಲಿ ಔಷಧಿಗಳ ಮಾರಾಟ ಹೆಚ್ಚುತ್ತಿರುವುದನ್ನು ವಿರೋಧಿಸಿ ರಾಜ್ಯಾದ್ಯಂತ ಮೆಡಿಕಲ್ ಶಾಪ್‌ಗಳ ಮಾಲೀಕರು ಬೃಹತ್ ಬಂದ್‌ಗೆ ಕರೆ ನೀಡಿದ್ದಾರೆ. ಅದರಂತೆ ಪಟ್ಟಣದ ಸುಮಾರು 33ಕ್ಕೂ ಹೆಚ್ಚು ಮೆಡಿಕಲ್ ಶಾಪ್ ಸಂಪೂರ್ಣವಾಗಿ ಬಂದ್ ಮಾಡಿ ಬೆಂಬಲ ಸೂಚಿಸಿ ಆನ್‌ಲೈನ್ ಔಷಧಿ ಮಾರಾಟ ಬಂದ್ ಮಾಡಲು ತಾಲೂಕು ಔಷದ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಕಾಶಿನಾಥ ಸಾಲಕ್ಕಿ ಆಗ್ರಹಿಸಿದ್ದಾರೆ.

ಪಟ್ಟಣದಲ್ಲಿ ಬುಧವಾರ ಕರ್ನಾಟಕ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್ ಅಸೋಸಿಯೇಷನ್ ವತಿಯಿಂದ ಹಮ್ಮಿಕೊಂಡ ಬಂದ್ ಗೆ ಬೆಂಬಲ ಸೂಚಿಸಿ ಮಾತನಾಡಿದ ಅವರು, ಆನ್ ಲೈನ್ ಕಂಪನಿಗಳ ಅನಿಯಂತ್ರಿತ ವ್ಯವಹಾರದಿಂದ ಸ್ಥಳೀಯ ಮೆಡಿಕಲ್ ಶಾಪಗಳು ಸಂಕಷ್ಟದಲ್ಲಿವೆ,ಆನ್ ಲೈನ್ ಔಷಧಿ ಮಾರಾಟದಿಂದ ಸಣ್ಣ ಮತ್ತು ಮಧ್ಯಮ ಮಟ್ಟದ ಮೆಡಿಕಲ್ ಶಾಪುಗಳಿಗೆ ಬಾರಿ ಆರ್ಥಿಕ ಹೊಡೆತ ಬೀಳುತ್ತಿದೆ. ಎಲ್ಲ ಅಂಗಡಿಗಳ ಮೂಲಕವೇ ಔಷಧಿ ಮಾರಾಟ ನಡೆಯಬೇಕು, ಈ ಕುರಿತು ಸರ್ಕಾರ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಕೂಡಲೇ ನಿಯಮಗಳನ್ನು ಜಾರಿಗೆ ತಂದು, ನಮ್ಮ ನ್ಯಾಯಯುತ ಬೇಡಿಕೆಗಳಿಗೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು.

ಸಂದರ್ಭದಲ್ಲಿ ಹಲವಾರು ಮುಖಂಡರು ಮಾತನಾಡಿ, ವ್ಯಾಪಾರಸ್ಥರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಸರ್ಕಾರಕ್ಕೆ ಆಗ್ರಹಿಸಿದರು.

ಪಟ್ಟಣದ ಔಷದ ವ್ಯಾಪಾರಸ್ಥರುಗಳ ಕಾರ್ಯದರ್ಶಿಗಳು ನಿಂಗೂ ಹಡಗಲಿ, ಶಿವಾನಂದ ಕೋರಿ, ಸದಾನಂದ ಮಣ್ಣೂರ, ರಾಜು ವಾಲಿಕಾರ, ಜಗದೀಶ ಮಾಣ್ಣೂರ, ಬಸವರಾಜ ಚೌಕಿಮಠ, ಮಲ್ಲನಗೌಡ ಬಿರಾದಾರ, ಮುತ್ತು ಕಮತಗಿ, ಮಂಜುನಾಥ ಬಿಂಗೊಳ್ಳಿ, ಡಾ.ಮೈನುದ್ದಿನ್ ಮುಲ್ಲಾ, ಜುಬೇರ ಮನಿಯಾರ, ರಾಕೇಶ ಅಗಸರ, ಮಹಾಂತೇಶ ಯಾಳಗಿ, ಬಿಲಾಲ್ ಪಾನ್ವರೋಶ, ಬಸವರಾಜ ಬಿಸನಾಳ, ಯಶವಂತ ಚವ್ಹಾಣ, ಬಸವರಾಜ ದುತ್ತರಗಾಮಿ,ಅಪ್ಪು (ಚಿನ್ಮಯಿ) ಕೋರಿ,ಡಾ. ಅಮರ ಸಾಲಕ್ಕಿ ಸೇರಿದಂತೆ ಹಲವಾರು ಜನ ಮುಖಂಡರು ಉಪಸ್ಥಿತರಿದ್ದರು.



ಔಷಧಿ ವ್ಯಾಪಾರಿಗಳ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮನವಿ

•**ಕೊಲ್ಹಾರ:** ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕೆಲವು ಔಷಧ ಸಂಬಂಧಿತ ನೀತಿಗಳನ್ನು ವಿರೋಧಿಸಿ ಹಾಗೂ ವ್ಯಾಪಾರಿಗಳ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, ಕೊಲ್ಹಾರ ತಾಲೂಕು ಔಷಧ ವ್ಯಾಪಾರಸ್ಥರ ಸಂಘದ ವತಿಯಿಂದ ಬುಧವಾರ ತಹಶೀಲ್ದಾರ್ ಸಂತೋಷ ಮ್ಯಾಗೇರಿ ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಅಖಿಲ ಭಾರತ ಔಷಧ ವಿತರಕರ ಸಂಘ ಕರೆ ನೀಡಿದ ಹಿನ್ನೆಲೆಯಲ್ಲಿ ಮೇ 20ರಂದು ದೇಶವ್ಯಾಪಿ ಒಂದು ದಿನದ ಔಷಧ ವ್ಯಾಪಾರ ಬಂದ್‌ಗೆ ಬೆಂಬಲ ಸೂಚಿಸಿರುವುದಾಗಿ ಸಂಘದ ಪದಾಧಿಕಾರಿಗಳು ತಿಳಿಸಿದರು.

ಮನವಿಯಲ್ಲಿ ಆನ್‌ಲೈನ್ ಹಾಗೂ ಅನಧಿಕೃತ ಇ-ಫಾರ್ಮಸಿ ಚಟುವಟಿಕೆಗಳಿಗೆ ಕಡಿವಾಣ ಹಾಕುವುದು, ಔಷಧ ಮಾರಾಟದಲ್ಲಿ ಅನ್ಯಾಯಕರ ಬೆಲೆ ನೀತಿ ತಡೆದು ಸೂಕ್ತ ನಿಯಂತ್ರಣ ಕ್ರಮ ಕೈಗೊಳ್ಳುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಪ್ರಸ್ತಾಪಿಸಲಾಗಿದೆ. ಅಲ್ಲದೆ, ಔಷಧ ವ್ಯಾಪಾರಿಗಳ ಹಿತಾಸಕ್ತಿಯನ್ನು ಕಾಪಾಡಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕ್ರಮವಹಿಸಬೇಕೆಂದು ಆಗ್ರಹಿಸಲಾಯಿತು.



ಕೊಲ್ಹಾರ ತಾಲೂಕು ಔಷಧ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಅರುಣ ಔರಸಂಗ, ಉಪಾಧ್ಯಕ್ಷ ಇಜಾಜ್ ಜಮುನಾ, ಕಾರ್ಯದರ್ಶಿ ಪ್ರಶಾಂತ ಸಂಗಳದ, ಡಾ.ಬಸವರಾಜ ಮೇಲಗಿರಿ, ಈರಣ್ಣ ಗೋಕಾವಿ, ಸಿದ್ದಲಿಂಗ ಹೂಗಾರ, ಬಾಳಪ್ಪ ಗವರೋಜಿ, ಹನಮಂತ ಗವರೋಜಿ, ನಾಸೀರಸಾಬ ಜಮುನಾ, ಮಹೆಬೂಬ ಕಾಕಂಡಕಿ, ಆಕಾಶ್ ಲಿಂಬಿಕಾಯಿ, ಅನಿಲ ಅಂಬಲಿ, ಐತಿಸ್ಯಾಮ ಕಂಕರಪೀರ, ಅಕ್ಬರಬಾಶಾ ನಾಗರದಿನ್ನಿ, ಮಲ್ಲು ಮಠ, ಕಿರಣ ಮಠ, ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.

ಚಿತಾಗಾರ ನಿರ್ಮಾಣಕ್ಕೆ ಭೂಮಿಪೂಜೆ



•**ವಿಜಯಪುರ:** ನಗರದ ವಾರ್ಡ್ ನಂ.8ರಲ್ಲಿ ಬರುವ ಚಾಲುಕ್ಯ ನಗರ ಪೂರ್ವ ಭಾಗದ ದೇವಗಿರಕರ ಸ್ಮಶಾನದಲ್ಲಿ ನಗರ ಮೂಲಸೌಕರ್ಯ ಅಭಿವೃದ್ಧಿ ನಿಧಿ ಅಡಿಯಲ್ಲಿ ಮಂಜೂರಿಸಲಾದ 4 ಕೋಟಿ ರೂ. ಅನುದಾನದಲ್ಲಿ ವಿದ್ಯುತ್ ಚಿತಾಗಾರ ನಿರ್ಮಾಣ ಕಾಮಗಾರಿಗೆ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಮಂಗಳವಾರ ಭೂಮಿಪೂಜೆ ನೆರವೇರಿಸಿದರು. ಬಳಿಕ ಸಾರ್ವಜನಿಕರಿಂದ ಅಹವಾಲು ಆಲಿಸಿ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವುದಾಗಿ ಸಕರಾತ್ಮಕವಾಗಿ ಸ್ಪಂದಿಸಿದರು. ಮಹಾನಗರ ಪಾಲಿಕೆ ಮೇಯರ್ ಎಂ.ಎಸ್. ಕರಡಿ, ಸದಸ್ಯರಾದ ರಾಜಶೇಖರ ಮಗಿಮಠ, ಪ್ರೇಮಾನಂದ ಬಿರಾದಾರ, ಅಶೋಕ ನ್ಯಾಮಗೌಡ, ಮಳುಗೌಡ ಪಾಟೀಲ, ಮುಖಂಡರಾದ ರಾಜೇಶ ದೇವಗಿರಿ ಸೇರಿದಂತೆ ಕಾರ್ಯಕರ್ತರು, ಸ್ಥಳೀಯ ನಿವಾಸಿಗಳು ಇದ್ದರು.

ಗ್ರಾಮ ದೇವತೆ ಜಾತ್ರೆ ಅದ್ದೂರಿ: ಮೆರವಣಿಗೆ

•**ದೇವರ ಹಿಪ್ಪರಗಿ:** ತಾಲೂಕಿನ ಪಡಗಾನೂರ ಗ್ರಾಮದ ಗ್ರಾಮ ದೇವತೆ ದ್ಯಾಮವ್ವ ದೇವಿ ಜಾತ್ರೆ ಕಳೆದ ಐದು ದಿವಸಗಳಿಂದ ಶ್ರದ್ಧೆ ಭಕ್ತಿ ಭಾವದಿಂದ ನಡೆದು ಬಂದು ಬುಧವಾರ ದಿವಸ ದೇವಿಯ ಮೂರ್ತಿ ಹೊತ್ತ ಬಂಡಿ ಮೆರವಣಿಗೆ ಮರಳಿ ದ್ಯಾಮವ್ವ ದೇವಿ ದೇವಸ್ಥಾನಕ್ಕೆ ಸಕಲವಾದ್ಯ ವೈಭವ ಗಳೊಂದಿಗೆ ದ್ಯಾಮವ್ವ ದೇವಿ ಮೂರ್ತಿಗಳು ಮತ್ತೆ ಮೂಲ ದೇವಸ್ಥಾನದಲ್ಲಿ ಸ್ಥಾಪನೆಗೊಂಡು ಜಾತ್ರೆ ಮುಕ್ತಾಯಗೊಂಡಿತು.



ಗ್ರಾಮದ ಪ್ರಮುಖರಾದ ಬಾಲಶೇಖರ ಕಬ್ಬಿನ, ಶಂಕರಗೌಡ ಪಾಟೀಲ, ಸುಭಾಸ ಹೊಸಟ್ಟಿ, ಶೇಖರ ಗಬ್ಬೂರ, ಬಸಲಿಂಗಪ್ಪ ಬಾಗೇವಾಡಿ, ಶ್ರೀಶೈಲ ಪತ್ತಾರ, ಸಾಹೇಬಗೌಡ ಆಕಳವಾಡಿ, ಶ್ರೀಶೈಲ ಟಕ್ಕಳಕಿಮಠ, ಗುರುನಾಥ ಮುರಡಿ, ಶಂಕರ ಪತ್ತಾರ, ಬಸು ಹೊಸಟ್ಟಿ, ಸಿದ್ದು ಕಬ್ಬಿನ, ಮಹಾಂತೇಶ ವಡ್ಡೋಡಗಿ, ಆಕಾಶ ಕಬ್ಬಿನ, ಕೆಂಚಪ್ಪ ಬನಗೊಂಡ, ಸಾಯಿಬಣ್ಣ ಕೋಟಾರಗಸ್ತಿ, ಮಲಕಾಜಪ್ಪ ರೂಡಗಿ, ಶಿವಾನಂದ ಉತ್ನಾಳ, ರಾಜು ಪಾಟೀಲ, ಮಲ್ಲಿಕಾರ್ಜುನ ಚೋಗುರ, ಲಕ್ಷ್ಮಣ ಹಳ್ಳಿ, ಬಸು ದೇವೂರ, ಲಕ್ಷ್ಮಣ ಕೋಟ್ಯಾಳ, ಅಪ್ಪಾಸಾಹೇಬ ಬೆನಕನಹಳ್ಳಿ, ಮಲ್ಲು ಬನಗೊಂಡ, ಷಣ್ಮುಖ ಹಡಪದ ಸೇರಿದಂತೆ ಹಿರಿಯರು ಇದ್ದರು.

ಕಲ್ಯಾಣ ಮಂಟಪ ಲೋಕಾರ್ಪಣೆ ಯಾವಾಗ?

▸ ನಾಗೇಶ ಮ. ನಾಗೂರ

•**ಬಸವನಬಾಗೇವಾಡಿ:** ಪಟ್ಟಣದ ಬಸವ ನಗರ ಹಿಂದಗಡೆ ಕೋಡಿಬಾಯಿ ಹಳ್ಳದ ಹತ್ತಿರ ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ಹೊಸದಾಗಿ ನಿರ್ಮಾಣಗೊಂಡ ಕಲ್ಯಾಣ ಮಂಟಪ ಲೋಕಾರ್ಪಣೆಗೆ ಮೂಹರ್ತ ಇನ್ನೂ ಕೂಡಿಬಂದಿಲ್ಲ ಎಂಬುವುದು ಭಾಸವಾಗುತ್ತಿದೆ.

ಸುಮಾರು ವರ್ಷಗಳ ಹಿಂದೆ ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರದಲ್ಲಿ ಕಲ್ಯಾಣ ಮಂಟಪ ಕಟ್ಟಡಕ್ಕೆ ಚಾಲನೆ ದೊರಕಿದ್ದು ಇಂದು ಬೃಹತ್ ಕಟ್ಟಡವಾಗಿ ನಿರ್ಮಾಣಗೊಂಡರುಸಹಮೂಲಭೂತಸೌಕರ್ಯಗಳಿಂದ ವಂಚಿತವಾಗಿರುವುದಕ್ಕೆ ಇಲ್ಲಿನ ಜನರು ಅಸಮಾಧಾನ ಹೊರ ಹಾಕುತ್ತಿದ್ದಾರೆ. ಲೋಕಾರ್ಪಣೆಗೊಳ್ಳದೆ ಇರುವುದಕ್ಕೆ ಮೂಹರ್ತ ಯಾವಾಗ? ಎನ್ನುವುದು ಜನರ ಮನಸ್ಸಿನಲ್ಲಿ ಕಾಡುತ್ತಿದೆ, ಪಟ್ಟಣದ ವಿಜಯಪುರ ರಸ್ತೆಯಲ್ಲಿರುವ ಬಸವ ಭವನ ರಾಜ್ಯ ಹೆದ್ದಾರಿ ಪಕ್ಕದಲ್ಲಿ ಇರುವುದ್ದರಿಂದ ವಾಹನ ನಿಲುಗಡೆಗೆ ಸರಿಯಾದಂತ ಪಾರ್ಕಿಂಗ್ ವ್ಯವಸ್ಥೆಯಿಲ್ಲದಂತಾಗಿ ಕೆಲ ಮೂಲ ಸೌಕರ್ಯಗಳಿಂದ ವಂಚಿತವಾಗಿದೆ ಇದ್ದರಿಂದ ಜನಸಾಮಾನ್ಯರು ತೊಂದರೆ ಅನುಭವಿಸುತ್ತಿದ್ದಾರೆ. ಆದರೆ ಹೊಸದಾಗಿ ನಿರ್ಮಾಣಗೊಂಡ ಈ ಕಲ್ಯಾಣ ಮಂಟಪ ಪಟ್ಟಣದ ಹೊರವಲಯದಲ್ಲಿ ಪ್ರಶಾಂತ ವಾತಾವರಣದಲ್ಲಿ ಇರುವುದ್ದರಿಂದ ಹಾಗೂ ವಾಹನ ನಿಲುಗಡೆಗೆ ಪಾರ್ಕಿಂಗ್ ವ್ಯವಸ್ಥೆ ಇರುವುದ್ದರಿಂದ ಜನರಿಗೆ ಮದುವೆ, ಸಭೆ ಸಮಾರಂಭ ನಡೆಸಲು ಯೋಗ್ಯವಾದ ಸ್ಥಳವಾಗಿದ್ದರೂ ಸಹ ಉದ್ಘಾಟನೆ ಭಾಗ್ಯದಿಂದ ದೂರವಾಗಿರುವುದಕ್ಕೆ ಜನರು ಅಸಮಾದಾನ ವ್ಯಕ್ತಪಡಿಸುತ್ತಿದ್ದಾರೆ ಇದನ್ನೆಲ್ಲ ಅರಿತ ಸಂಬಂಧಪಟ್ಟ ಅಧಿಕಾರಿಗಳು ಶೀಘ್ರದಲ್ಲಿ ಉದ್ಘಾಟನೆಗೆ ಕ್ರಮಕೈಗೊಳ್ಳುವರೆ ಕಾಯ್ದು ನೋಡಬೇಕಾಗಿದೆ.



ಹೊಸದಾಗಿ ನಿರ್ಮಾಣಗೊಂಡ ಕಲ್ಯಾಣ ಮಂಟಪದಲ್ಲಿ ಸಣ್ಣ ಪುಟ್ಟ ಕೆಲಸಗಳು ಇವೆ, ಇದಕ್ಕೆ ಅನುದಾನ ಬೇಕಾಗಿದೆ, ಈ ಕುರಿತು ಸಚಿವ ಶಿವಾನಂದ ಪಾಟೀಲರ ಗಮನಕ್ಕೆ ತರಲಾಗಿದೆ, ಅಷ್ಟೇಲ್ಲದೆ ಆರ್‌ಎಂ ಸರ್ ಅವರು ಕಟ್ಟಡ ನೋಡಿಕೊಂಡು ಹೋಗಲಿದ್ದಾರೆ, ಶೀಘ್ರದಲ್ಲಿ ಕಲ್ಯಾಣ ಮಂಟಪ ಲೋಕಾರ್ಪಣೆಗೊಳ್ಳಲಿದೆ.

■ ಗುರುನಾಥ ಎನ್. ದಡ್ಡೆ, ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು

ಔಷಧ ವ್ಯಾಪಾರ ಬಂದ್: ಮನವಿ

•**ತಾಳಿಕೋಟೆ:** ಆನ್‌ಲೈನ್ ಔಷಧ ಮಾರಾಟ (ಇ-ಫಾರ್ಮಸಿ) ಜಾಲದ ಕಾನೂನುಬಾಹಿರ ಚಟುವಟಿಕೆಗಳು, ಕಾರ್ಪೊರೇಟ್ ಕಂಪನಿಗಳ ಮುಕ್ತ ಮಾರುಕಟ್ಟೆ ಹಾವಳಿ ಹಾಗೂ ಕೇಂದ್ರ ಸರ್ಕಾರದ ವಿವಾದಾತ್ಮಕ ಅಧಿಸೂಚನೆಗಳನ್ನು ಖಂಡಿಸಿ ಬುಧವಾರ ದೇಶಾದ್ಯಂತ ಒಂದು ದಿನದ ಮಟ್ಟಿಗೆ ಔಷಧ ವ್ಯಾಪಾರವನ್ನು ಸಂಪೂರ್ಣ ಬಂದ್ ಮಾಡಲು ಅಖಿಲ ಭಾರತ ಔಷಧ ವ್ಯಾಪಾರಿಗಳ ಸಂಘಟನೆ ಕರೆ ನೀಡಿದೆ.

ಇದಕ್ಕೆ ಬೆಂಬಲ ಸೂಚಿಸಿ ವಿಜಯಪುರ ಜಿಲ್ಲಾ ಮತ್ತು ತಾಳಿಕೋಟಿ ತಾಲೂಕಾ ಔಷಧ ವ್ಯಾಪಾರಸ್ಥರ ಸಂಘವು ಸ್ಥಳೀಯ ತಹಶೀಲ್ದಾರ್ ಅವರಿಗೆ ಅಧಿಕೃತ ಮನವಿ ಪತ್ರ ಸಲ್ಲಿಸಿದೆ.

ದೇಶಾದ್ಯಂತ 12.40 ಲಕ್ಷಕ್ಕೂ ಹೆಚ್ಚು ಔಷಧ ವ್ಯಾಪಾರಿಗಳಿದ್ದು, ಇವರನ್ನು ನಂಬಿರುವ 4 ರಿಂದ 5 ಕೋಟಿ ಜನರ ಜೀವನೋಪಾಯಕ್ಕೆ ಪ್ರಸ್ತುತ ಇ-ಫಾರ್ಮಸಿ ಬೆಳವಣಿಗೆಗಳು ತೀವ್ರ ಆತಂಕ ತಂದೊಡ್ಡಿವೆ. ಸರ್ಕಾರದ ಮಟ್ಟದಲ್ಲಿ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಶಾಶ್ವತ ಪರಿಹಾರ ಸಿಗದ ಕಾರಣ ಈ ಪ್ರತಿಭಟನೆ ಅನಿವಾರ್ಯವಾಗಿದೆ ಎಂದು ಸಂಘಟನೆ ತಿಳಿಸಿದೆ.

ತಾಳಿಕೋಟೆ ತಾಲೂಕಾಧ್ಯಕ್ಷ ಸುಭಾಷ್ ಸಾಳಂಕೆ, ವಾಸುದೇವ ಹೇಬಸೂರ, ಮೈನುದ್ದನು ಕೊರ್ತಿ, ಸಂತೋಷ ಪ್ರಥಮಶೆಟ್ಟಿ, ಅಬಾಲೆ ಮೆಡಿಕಲ್, ಕಾಂತು ಸಜ್ಜನ್, ರವಿ ಪಾಟೀಲ, ಶಾಂತಗೌಡ ಪಾಟೀಲ, ಕುಮಾರ ಸುರಪುರ, ಸಗರ ಮೆಡಿಕಲ್ ಹಾಗೂ ಪಟ್ಟಣದ ಎಲ್ಲ ಔಷದ ವ್ಯಾಪಾರಸ್ಥರು ಹಾಜರಿದ್ದರು.



ವೀರಭದ್ರದೇವರ ಜಾತ್ರೋತ್ಸವ ಸಂಪನ್ನ

•**ಇಂಡಿ:** ತಾಲೂಕಿನ ಲಚ್ಯಾಣ ಗ್ರಾಮದ ವೀರಭದ್ರದೇವರ ಜಾತ್ರೋತ್ಸವವು ಗ್ರಾಮದ ಸಂಪ್ರದಾಯದಂತೆನೇರವೇರಿತು. ನಸುಕಿನ ಜಾವ 5 ಗಂಟೆಗೆ ವೀರಭದ್ರ ದೇವರ ಶೀಲಾಮೂರ್ತಿಗೆ ಭಕ್ತರಿಂದ ರುದ್ರಾಭಿಷೇಕ ನೆರವೇರಿತು.



ಬಳಿಕ ದೇವಸ್ಥಾನದಿಂದ ಗ್ರಾಮದ ಪ್ರಮುಖ ಬೀದಿಗಳಲ್ಲಿ ವೀರಭದ್ರ ದೇವರ ಉತ್ಸವ ಮೂರ್ತಿಯ ಭವ್ಯ ಮೆರವಣಿಗೆ ಸಂಬಾಳ ವಾದ್ಯ ಮೇಳದೊಂದಿಗೆ ಜರುಗಿತು. ಬಳಿಕ ಈ ಮೆರವಣಿಗೆಯೂ ಊರ ಹೊರಗಿನ ಪಾದಗಟ್ಟಿ ತಲುಪಿದ ಬಳಿಕ ಪಾದಗಟ್ಟಿ ಪೂಜೆ ಮಹಾ ಮಂಗಳಾರತಿ ನೆರವೇರಿತು. ನಂತರ ಈ ಮೆರವಣಿಗೆಯು ಭಕ್ತರ ಜೈಕಾರದೊಂದಿಗೆ ಮರಳಿ ಮೂಲ ದೇವಸ್ಥಾನ ತಲುಪಿದ ಕೂಡಲೇ ಅಗ್ನಿ ಪ್ರವೇಶ ಕಾರ್ಯಕ್ರಮ ವಿಜೃಂಭಣೆಯಿಂದ ನೆರವೇರಿತು. ಬಳಿಕ ಉತ್ಸವದಲ್ಲಿ ಪಾಲ್ಗೊಂಡ ಭಕ್ತರಿಗೆ ಸೀರಾ ಅನ್ನ ಪ್ರಸಾದ ವಿತರಣೆ ನಡೆಯಿತು. ಗ್ರಾಮ ಪಂಚಾಯತಿ ಮಾಜಿ ಸದಸ್ಯ ವೀರಭದ್ರ ವಾಗ್ಮೋರೆ ಹಾಗೂ ಭೀಮರಾಯ ನಾಗರಳ್ಳಿ ಅನ್ನ ಪ್ರಸಾದ ಸೇವೆ ಸಲ್ಲಿಸಿದರು. ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಮಾದೇವ ವಾಲಿಕಾರ ಹಾಗೂ ಈರಣ್ಣ ಮುಜಗೊಂಡ ವಸ್ತ್ರ ಸೇವೆ ಸಲ್ಲಿಸಿದರು. ದೇವಸ್ಥಾನದ ಅರ್ಚಕರಾದ ಮುರಗಯ್ಯ ಹಿರೇಮಠ, ಸಿದ್ದು ಹಿರೇಮಠ, ಮಾಂತಯ್ಯ ಹಿರೇಮಠ, ಈರಯ್ಯ ಹಿರೇಮಠ, ಸೋಮನಾಥ ಹಿರೇಮಠ, ಭಕ್ತರಾದ ಗೌರಿಶಂಕರ ಬಾಬುಳಗಿ, ರಾಜಶೇಖರ ಕಾರಾಜಣಗಿ, ನಾಗನಾಥ ಬಿರಾದಾರ, ನಾಗನಾಥ ಮುಜಗೊಂಡ, ಬಸವರಾಜ ಲಾಳಸೇರಿ, ಭೀಮರಾಯ ಗೋಡಿಹಾಳ, ಬಿ.ಎಂ. ಲಾಳಸೇರಿ ವಿಠ್ಠಲ ಚೋರಗಿ, ದತ್ತು ಮುಜಗೊಂಡ, ಭಕ್ತರು ಭಾಗವಹಿಸಿದ್ದರು.

ಕಿರುಸುದ್ದಿ

ಮೃತ ನ್ಯಾಯವಾದಿ ಕುಟುಂಬಕ್ಕೆ ನೆರವು



ಕುಷ್ಟಗಿ: ಪಟ್ಟಣದ ನ್ಯಾಯಾಲಯದ ಕಲಾಪದಲ್ಲಿ ಈಚೆಗೆ ಹೃದಯಾಘಾತದಿಂದ ಮೃತರಾಗಿದ್ದ ನಿಂಗಪ್ಪ ಸುದ್ದಿ ವಕೀಲರ ಕುಟುಂಬದ ಮಕ್ಕಳಿಗೆ ತಾಲೂಕು ವಕೀಲರ ಸಂಘದಿಂದ ಆರ್ಥಿಕವಾಗಿ ಸಬಲರಾಗಲು ಮೂರು ಲಕ್ಷ ನಲವತ್ತು ಸಾವಿರ ರೂ. ಸಹಾಯಧನ ಬುಧವಾರ ವಿತರಿಸಲಾಯಿತು. ಹಿರಿಯ ಶ್ರೇಣಿ ನ್ಯಾಯಾಲಯದ ನ್ಯಾಯಾಧೀಶ ಮಂಜುನಾಥ್ ಆರ್., ಹೆಚ್ಚುವರಿ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶ ಮಹಾಂತೇಶ್ ಚೌಳಗಿ, ವಕೀಲರ ಸಂಘದ ಅಧ್ಯಕ್ಷ ಎಚ್.ಆರ್.ನಾಯಕ್, ಕಾರ್ಯದರ್ಶಿ ಶಶಿಧರ್ ಶೆಟ್ಟರ್, ಹಿರಿಯ ವಕೀಲರಾದ ಶರಣಪ್ಪ ಬುಕನಟ್ಟಿ, ಶೇಖರ್ ತಿಲಗಾರ್, ಎಂ.ಎಚ್. ಗೋಡೆ, ಬಸವರಾಜ ಇದ್ಲಾಪೂರ, ಕಳಕನಗೌಡ ತಾವರಗೇರಾ, ರಾಜು ಪಾಟೀಲ್ ಶಿವಕುಮಾರ್ ದೊಡ್ಮನಿ, ಯಮನೂರಪ್ಪ ಪೂಜಾರ್, ರಾಜೇಂದ್ರ ಮೂಲಿಮನಿ ಕೆ.ವಿ.ಆಶ್ರೀತ್, ಪಿ.ರಮೇಶ ಮರಿಯಪ್ಪ ಲಿಂಗದಹಳ್ಳಿ ಮಲ್ಲಿಕಾರ್ಜುನ ಕೊನಸಾಗರ ದೊಡ್ಡನಗೌಡ ಪಾಟೀಲ ಇನ್ನಿತರರಿದ್ದರು.

ಅಧ್ಯಕ್ಷ, ಉಪಾಧ್ಯಕ್ಷರಾಗಿ ನೇಮಕ

ಸಿಂಧನೂರು: ದಲಿತ ಸಾಹಿತ್ಯ ಪರಿಷತ್ತು ದಲಿತ ಸಮುದಾಯದ ಸಾಂಸ್ಕೃತಿಕ ಪರಂಪರೆಯನ್ನು ಎತ್ತಿಹಿಡಿಯಲು ಮತ್ತು ಶೋಷಿತರ ಧ್ವನಿಯನ್ನು ಬರವಣಿಗೆಯ ಮೂಲಕ ಅಭಿವ್ಯಕ್ತಗೊಳಿಸಲು ಶ್ರಮಿಸುತ್ತಿರುವ ಪ್ರಮುಖ ಸಾಹಿತ್ಯಿಕ ಸಂಸ್ಥೆಯಾಗಿದೆ. ಇದು ಕರ್ನಾಟಕ ಸೇರಿದಂತೆ ಭಾರತದಾದ್ಯಂತ ದಲಿತ ಸಾಹಿತಿಗಳು ಮತ್ತು ಚಿಂತಕರನ್ನು ಒಗ್ಗೂಡಿಸುವ ಕಾರ್ಯವನ್ನು ಮಾಡುತ್ತಿದೆ. ಇಂತಹ ದಸಾಪ ವು ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನಲ್ಲಿ ದಲಿತ ಸಾಹಿತ್ಯದ ರಸದೌತಣವನ್ನು ಸಾಹಿತ್ಯ ಆಸಕ್ತರಿಗೆ ನೀಡುವ ಮೂಲಕ ದಸಾಪ ವು ಯಶಸ್ವಿದಾಯಕವಾಗಿ ಕಾರ್ಯನಿರ್ವಹಿಸಲು ಡಾ.ಅರುಣಕುಮಾರ ಬೇರ್ಗಿ ಉಪನ್ಯಾಸಕರು, ತಿಮ್ಮಪ್ಪ ನಾಯಕ ಕಲ್ಮಂಗಿ ಉಪನ್ಯಾಸಕರು ಹಾಗೂ ಶೋಭಾ ತೋರಗಲ್ ಉಪನ್ಯಾಸಕರು ಇವರನ್ನು ಅಧ್ಯಕ್ಷರುಗಳಾಗಿ ನೇಮಕ ಮಾಡಲಾಗಿದೆ. ಇನ್ನೂ ದಲಿತ ಸಾಹಿತ್ಯ ಪರಿಷತ್ ಇವರುಗಳ ಕ್ರಿಯಾಶೀಲತೆಯನ್ನು ಗುರುತಿಸಿ ದಲಿತ ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕ ಗದಗದ ರಾಜ್ಯ ಅಧ್ಯಕ್ಷರಾದ ಡಾ.ಅರ್ಜುನ್ ಗೊಳಸಂಗಿ ಅವರ ಆದೇಶದ ಅನ್ವಯ ಕಲಬುರ್ಗಿ ವಿಭಾಗದ ಸಂಯೋಜಕರಾದ ಎಚ್.ಎಫ್.ಮಸ್ಕಿ ಅವರ ನಿರ್ದೇಶನದಂತೆ ಸಿಂಧನೂರು ದಲಿತ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷರಾಗಿ ಡಾ.ಅರುಣಕುಮಾರ ಬೇರ್ಗಿ ಉಪನ್ಯಾಸಕರು, ಸಿಂಧನೂರು ತಾಲೂಕ ಯುವ ಘಟಕದ ಅಧ್ಯಕ್ಷರಾಗಿ ತಿಮ್ಮಪ್ಪ ನಾಯಕ ಕಲ್ಮಂಗಿ ಉಪನ್ಯಾಸಕರು ಹಾಗೂ ಸಿಂಧನೂರು ತಾಲೂಕ ಮಹಿಳಾ ಘಟಕದ ಅಧ್ಯಕ್ಷೆಯಾಗಿ ಶೋಭಾ ತೋರಗಲ್ ಉಪನ್ಯಾಸಕರು ಸಿಂಧನೂರು ಇವರುಗಳನ್ನು ಅಧ್ಯಕ್ಷರೆಂದು ನೇಮಕ ಮಾಡಿ ಕಾರ್ಯನಿರ್ವಹಿಸಲು ಸೂಚಿಸಿದೆ. ಇದಲ್ಲದೆ ಬುದ್ಧ, ಬಸವ, ಅಂಬೇಡ್ಕರ್ ಅವರ ಆಶಯಗಳನ್ನು ಎತ್ತಿ ಹಿಡಿಯುವ ಮತ್ತು ತಾಲೂಕು ಹಾಗೂ ಜಿಲ್ಲಾ ಸಮ್ಮೇಳನಗಳನ್ನು ಆಯೋಜಿಸುವ ಯೋಜನೆಗಳನ್ನು ರೂಪಿಸಬೇಕೆಂದು ರಾಯಚೂರು ಜಿಲ್ಲಾ ದಲಿತ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷರಾದ ಡಾ.ಹುಸೇನಪ್ಪ ಅಮರಾಪುರ ಆದೇಶಿಸಿದ್ದಾರೆ.

ಅಬಕಾರಿ ಇಲಾಖೆಯಿಂದ ದಾಳಿ: ಪ್ರಕರಣ ದಾಖಲು

ರಾಯಚೂರು: ನಗರದ ಸಿಯತಲಾಬ್ ಏರಿಯಾದ ಫಕೀರಮ್ಮ ಎಂಬುವವರ ಮನೆ ಮೇಲೆ ಇತ್ತೀಚಿಗೆ ಅಬಕಾರಿ ಇಲಾಖೆಯಿಂದ ದಾಳಿ ಮಾಡಿದಾಗ ಈ ಆರೋಪಿತಳ ಮನೆಯಲ್ಲಿ 10 ಲೀ. ಕಲಬೆರಕೆ ಸೇಂದಿ ಮತ್ತು 3,500 ಕೆಜಿ ನಷ್ಟು ಸಿ.ಎಚ್ ಪೌಡರ್ ಸಂಗ್ರಹಿಸಿ ಮಾರಾಟ ಮಾಡುವ ಕಂಡುಬಂದಿದ್ದು, ಆರೋಪಿತಳ ವಿರುದ್ಧ ಅಬಕಾರಿ ವಲಯ ನಿರೀಕ್ಷಕರಿಂದ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿದೆ.

ದಾಳಿಯಲ್ಲಿ ಅಬಕಾರಿ ಉಪ ನಿರೀಕ್ಷಕ ಸಣ್ಣ ಮಾರುತಿ, ಅಬಕಾರಿ ಉಪ ನಿರೀಕ್ಷಕ-1 ಅಮೃತ ಬಿಂದು, ಅಬಕಾರಿ ಪೇದೆ ತಿರುಪತಿ, ಗೃಹ ರಕ್ಷಕರಾದ ಚಂದ್ರಶೇಖರ, ನರೇಂದ್ರ, ಮಲ್ಲಮ್ಮ ಭಾಗಿಯಾಗಿದ್ದರು ಎಂದು ಅಬಕಾರಿ ಇಲಾಖೆಯ ಪ್ರಕಟಣೆ ತಿಳಿಸಿದೆ.



ಕುಷ್ಟಗಿ: ಪಟ್ಟಣದ ಮಾರ್ಗವಾಗಿ ಸಿಂಧನೂರಗೆ ತೆರಳಿದ್ದ ವೇಳೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಮರೇಗೌಡ ಪಾಟೀಲ ಬಯ್ಯಾಪುರು ನೇತೃತ್ವದಲ್ಲಿ ಎಮ್ಮೆಲ್ಸಿ ಯತೀಂದ್ರ ಸಿದ್ಧರಾಮಯ್ಯನವರಿಗೆ ಬುಧವಾರ ಪಕ್ಷದ ವತಿಯಿಂದ ಸನ್ಮಾನಿಸಲಾಯಿತು. ಪಕ್ಷದ ಮುಖಂಡರಾದ ಡಿ.ಟಿ.ಶ್ರೀನಿವಾಸ್, ಉಮೇಶ ಮಂಗಳೂರ ಬಸವರಾಜ ಹೊರಪೇಟಿ ಮೈನುದ್ದೀನ್ ಮುಲ್ಲಾ, ಮಂಜುನಾಥ ಕಟ್ಟಿಮನಿ, ಶಿವರಾಜ್ ಕಟ್ಟಿಮನಿ, ಯಮನೂರು ಬಂಗ್ಲರ್ ಪಾಲ್ಗೊಂಡಿದ್ದರು.

ಆನ್‌ಲೈನ್ ಔಷಧಿ ಮಾರಾಟಕ್ಕೆ ವಿರೋಧ

ಮಾನ್ವಿ: ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಮಾನ್ವಿ ತಾಲೂಕು ಔಷದ ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆನ್ ಲೈನ್ ಔಷಾಧಿ ಮಾರಾಟ ವಿರೋಧಿಸಿ ತಹಶೀಲ್ದಾರ್ ಅವರಿಗೆ ಉಪತಹಶೀಲ್ದಾರ್ ಡಿ.ವಾನಿತ ರವರ ಮೂಲಕ ಮನವಿ ಸಲ್ಲಿಸಲಾಯಿತು.

ತಾಲೂಕು ಔಷದ ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘದ ತಾಲೂಕು ಅಧ್ಯಕ್ಷರಾದ ಜಿ.ರಾಮಾಂಜನೇಯ್ಯ ಶೆಟ್ಟಿ ಮಾತನಾಡಿ, ದೇಶದಲ್ಲಿ ಆನ್‌ಲೈನ್ ಔಷಾಧಿ ಮಾರಾಟದಿಂದಾಗಿ ಸ್ಥಳಿಯ ಔಷಾಧಿ ವ್ಯಾಪಾರಿಗಳಿಗೆ ಹೆಚ್ಚಿನ ತೊಂದರೆಯಾಗುತ್ತಿರುವುದರಿಂದ ರಾಷ್ಟ್ರ ಮತ್ತು ರಾಜ್ಯ ಔಷದ ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಎಲ್ಲ ಔಷಧಿ ಅಂಗಡಿಗಳನ್ನು ಮುಚ್ಚಿ ಪ್ರತಿಭಟನೆ ನಡೆಸಲಾಗುತ್ತಿದೆ ಆನ್‌ಲೈನ್ ಔಷಧಿ ಮಾರಾಟಗರಾರು ಹಾಗೂ ಇ.ಫಾರ್ಮಾಸಿ ವೇದಿಕೆಯ ಮೂಲಕ ಗ್ರಾಹಕರಿಗೆ ಔಷಾಧಿಗಳ ಮೇಲೆ ಹೆಚ್ಚಿನ ರಿಯಾಯಿತಿ ನೀಡುತ್ತಿರುವುದು. ಕೇಂದ್ರ ಆರೋಗ್ಯ ಸಚಿವರು ಹಾಗೂ ರಾಜ್ಯದ ಮುಖ್ಯಮಂತ್ರಿಗಳು ಹಾಗೂ ರಾಜ್ಯ ಆರೋಗ್ಯ ಸಚಿವರು ಆನ್‌ಲೈನ್ ಔಷಧಿ ಮಾರಾಟಗರಾರು ಹಾಗೂ ಇ.ಫಾರ್ಮಾಸಿ ವೇದಿಕೆಯ ಮೂಲಕ ಔಷಧಿಗಳ ಮಾರಾಟಕ್ಕೆ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು. ತಾಲೂಕು ಔಷಧ ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘದ ತಾ.ಕಾರ್ಯದರ್ಶಿ ಭಿಮಣ್ಣ ಮುದಗಲ್, ದೇವೇಣದ್ರ ದುರ್ಗದ, ಶ್ರೀನಿವಾಸ ಬೋನಸಿ, ಎಂ.ಕೇಶವಯ್ಯಶೆಟ್ಟಿ, ಶರಣಪ್ಪ, ಪ್ರಕಾಶಗೌಡ, ರಾಜು ಬಾಸುತ್ಕರ್,ದೇವಯ್ಯಶೆಟ್ಟಿ,ಪುರುಷೋತ್ತಮ,ನಾಗರಾಜ,ಯೂನೂಸ್,ಗುರುರಾಜ,ವಿಶ್ವನಾಥ, ಸೇರಿದಂತೆ ಇನ್ನಿತರರು ಇದ್ದರು.



ಮಾನ್ವಿ: ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಮಾನ್ವಿ ತಾಲೂಕು ಔಷದ ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆನ್ ಲೈನ್ ಔಷಾಧಿ ಮಾರಾಟ ವಿರೋಧಿಸಿ ತಹಶೀಲ್ದಾರ್ ಅವರಿಗೆ ಉಪತಹಶೀಲ್ದಾರ್ ಡಿ.ವಾನಿತ ರವರ ಮೂಲಕ ಮನವಿ ಸಲ್ಲಿಸಲಾಯಿತು.

ನಾಳೆಯಿಂದ ತಾಂತ್ರಿಕ, ಸಾಂಸ್ಕೃತಿಕ ಉತ್ಸವ ನಿರ್ಮಾಣ ಕಾರ್ಯಕ್ರಮ

ಪ್ರತಿಭೆ ಅನಾವರಣಕ್ಕೆ ವೇದಿಕೆ: ನಮೋಶಿ

ಕಲಬುರಗಿ: ನಗರದ ಪಿಡಿಎ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮೇ 22 ಮತ್ತು 23ರಂದು ವಿದ್ಯಾರ್ಥಿಗಳ ತಾಂತ್ರಿಕ ಹಾಗೂ ಸಾಂಸ್ಕೃತಿಕ ಉತ್ಸವ ನಿರ್ಮಾಣ-2026 ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷ, ಎಮ್ಮೆಲ್ಸಿ ಶಶೀಲ್ ಜಿ.ನಮೋಶಿ ತಿಳಿಸಿದರು.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 22ರಂದು ಬೆಳಿಗ್ಗೆ 10 ಗಂಟೆಗೆ ಮಹಾವಿದ್ಯಾಲಯದ ಪಿಡಿಎ ಆಡಿಟೋರಿಯಂನ ವಿದ್ಯಾರ್ಥಿ ಚಟುವಟಿಕೆ ಕೇಂದ್ರದಲ್ಲಿ ಉತ್ಸವಕ್ಕೆ ಕಲಬುರಗಿಯ ಕಾನೂನು ಮತ್ತು ಸುವ್ಯವಸ್ಥೆಯ ಉಪ ಪೊಲೀಸ್ ಆಯುಕ್ತೆ ಶಾಲೂ ಅವರು ಉತ್ಸವವನ್ನು ಉದ್ಘಾಟಿಸಲಿದ್ದು,ತಾವು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವುದಾಗಿ ತಿಳಿಸಿದರು.

ಬೆಂಗಳೂರು ಮೂಲದ ಇನ್ಫಿನಾನ್ ಟೆಕ್ನಾಲಜಿಯ ಹಿರಿಯ ಇಂಜಿನಿಯರ್ ಹಾಗೂ ಹಳೆಯ ವಿದ್ಯಾರ್ಥಿ ಡಾ.ಪ್ರಕಾಶ ಬಾಲಸುಬ್ರಮಣಿಯನ್ ಗೌರವ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಸಂಸ್ಥೆಯ ಉಪಾಧ್ಯಕ್ಷ ರಾಜಾ ಭಿಮಳ್ಳಿ, ಕಾರ್ಯದರ್ಶಿ ಉದಯಕುಮಾರ ಚಿಂಚೋಳಿ, ಜಂಟಿ ಕಾರ್ಯದರ್ಶಿ ಡಾ.ಕೈಲಾಶ ಪಾಟೀಲ, ಆಡಳಿತ ಮಂಡಳಿ ಸದಸ್ಯರಾದ ಅರುಣಕುಮಾರ ಎಂ. ಪಾಟೀಲ, ಡಾ.ಶರಣಬಸಪ್ಪ ಆರ್.ಹರವಾಳ, ಡಾ.ಅನೀಲಕುಮಾರ ಬಿ.ಪಟ್ಟಣ, ಡಾ.ರಜನೀಶ ವಾಲಿ ಸೇರಿದಂತೆ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿರುವರು ಎಂದರು.

ಎರಡು ದಿನಗಳ ಕಾಲ ನಡೆಯುವ ಈ ಉತ್ಸವದಲ್ಲಿ ಟೆಕ್ನಿವಿಷನ್ ಅಡಿಯಲ್ಲಿ ವಿವಿಧ ತಾಂತ್ರಿಕ ಸ್ಪರ್ಧೆಗಳು ನಡೆಯಲಿವೆ. 12 ಗಂಟೆಗಳ ಕೋಡ್ ಎಕ್ಸ್‌ಲೇಟ್, ಸ್ಪೀಕ್ ಟ್ಯಾಕೂಲರ್, ಸೈಡ್ ಎನ್ ಸರ್ವೈವ್, ಟೆಕ್ ಆಕ್ಷನ್ ವಾರ್ಸ್ ಸೇರಿದಂತೆ ಹಲವು ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, ಕಲ್ಯಾಣ ಕರ್ನಾಟಕ ಭಾಗದ ವಿವಿಧ ತಾಂತ್ರಿಕ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳುಭಾಗವಹಿಸಲಿದ್ದು,ವಿವಿಧಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಗುವುದು ಎಂದರು. ಅದೇ ದಿನ ಸಂಜೆ 7 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ನೃತ್ಯ, ಗಾಯನ ಸೇರಿದಂತೆ ವಿವಿಧ ಕಲಾ ಪ್ರದರ್ಶನಗಳು ಜರುಗಲಿವೆ. ಜೊತೆಗೆ ವಾಲಿಬಾಲ್, ಫುಟ್‌ಬಾಲ್, ಗಲ್ಲಿ ಕ್ರಿಕೆಟ್ ಮುಂತಾದ ಕ್ರೀಡಾ ಸ್ಪರ್ಧೆಗಳನ್ನೂ ಆಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

ಉತ್ಸವದನಿರ್ವಹಣೆಯನ್ನುಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಎಸ್.ಆರ್.ಪಾಟೀಲ, ಡಾ.ಎಸ್.ಆರ್.ಹೊಟ್ಟಿ ಮತ್ತು ಡಾ.ಭಾರತಿ ಹರಸೂರು ನಿರ್ವಹಿಸಲಿದ್ದಾರೆ. ಪ್ರೊ.ಜಯಪ್ರಕಾಶ ಎ.ಕೆ., ಪ್ರೊ.ಶಿವರಾಜ ಕೆ.ಇಂಗನಕಲ್, ಪ್ರೊ.ಮಲ್ಲಿಕಾರ್ಜುನ ಬಿಜಾಪೂರ, ಡಾ.ಸುಜಾತಾ ಡಿ.ಪಾಟೀಲ, ಡಾ.ಸೌಮ್ಯ ಪೆದ್ದಿ, ಪ್ರೊ.ಅಕ್ಷಯ ಆಸ್ಪಳ್ಳಿ ಹಾಗೂ ಪ್ರೊ.ಅಶ್ವಿನಿ ಹತ್ತಿ ಕಾರ್ಯನಿರ್ವಹಿಸಲಿದ್ದಾರೆ. ಡಾ.ಪವನ ರಂಗದಾಳ ಹಾಗೂ ಡಾ.ರಾಕೇಶ ಹುಡೆದ ಜವಾಬ್ದಾರಿ ವಹಿಸಲಿದ್ದಾರೆ ಎಂದರು.

ಸಂಸ್ಥೆಯ ಪದಾಧಿಕಾರಿಗಳು, ಆಡಳಿತ ಮಂಡಳಿ ಸದಸ್ಯರು ಇದ್ದರು.



> **ಮೇ 22ರಂದು ಬೆಳಿಗ್ಗೆ 6 ಗಂಟೆಗೆ ನಿರ್ಮಾಣ ಉತ್ಸವದ ಅಂಗವಾಗಿ ಮ್ಯಾರಾಥಾನ್ ಆಯೋಜಿಸಲಾಗಿದೆ. ಮಾಡು ಅಥವಾ ಮಡಿ ನಿಮ್ಮ ಭವಿಷ್ಯ ನಿಮ್ಮ ಆಯ್ಕೆ ಎಂಬ ಘೋಷವಾಕ್ಯದಡಿ ನಡೆಯುವ ಈ ಮ್ಯಾರಾಥಾನ್ ವಿಕಾಸ ಸೌಧದಿಂದ ಆರಂಭಗೊಂಡು ಸರದಾರ ವಲ್ಲಭಾಯಿ ವೃತ್ತದ ಮೂಲಕ ಪಿಡಿಎ ಕಾಲೇಜು ತಲುಪಲಿದೆ. ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಲಿದ್ದಾರೆ.**
>
> ■ **ಶಶೀಲ್ ಜಿ.ನಮೋಶಿ, ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷ**

ಗೊಲ್ಲರ ಭವನ ನಿರ್ಮಾಣಕ್ಕೆ ಆದ್ಯತೆ

ಕುಷ್ಟಗಿ: ತಾಲೂಕು ಕೇಂದ್ರದಲ್ಲಿ ಗೊಲ್ಲರ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ಬಿಡುಗಡೆಗೊಳಿಸುವ ಮೂಲಕ ಭವನ ನಿರ್ಮಾಣಕ್ಕೆ ಆದ್ಯತೆ ನೀಡಲಾಗವುದು ಎಂದು ವಿಪ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ ಹೇಳಿದರು.

ಇಲ್ಲಿನರೇಣುಕಾಚಾರ್ಯರಕಲ್ಯಾಣ ಮಂಗಲಭವನದಲ್ಲಿ ಹಮ್ಮಿಕೊಂಡಿದ್ದ ಶ್ರೀಕೃಷ್ಣ ಯಾದವ ಕ್ಷೇಮಾಭಿವೃದ್ಧಿ ವತಿಯಿಂದ ಹಮ್ಮಿಕೊಂಡಿದ್ದ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಹಾಗೂ ನಾನಾ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಸನ್ಮಾನ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಬುಧವಾರ ಮಾತನಾಡಿದರು.

ಸಮಾಜದ ಬಾಂಧವರು ಆರ್ಥಿಕವಾಗಿ ಸಬಲರಾಗುವ ಮೂಲಕ ಮಕ್ಕಳಿಗೆ ಶಿಕ್ಷಣ ಕೊಡಿಸುವ ಕಾರ್ಯವಾಗಬೇಕು. ಸರ್ಕಾರದ ಯೋಜನೆಗಳನ್ನು ಪಡೆಯುವ ಮೂಲಕ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು ಎಂದರು.

ಮಾಜಿ ಸಚಿವ ಅಮರೇಗೌಡ ಪಾಟೀಲ್ ಬಯ್ಯಾಪೂರು ಮಾತನಾಡಿ, ಯಾದವ ಸಮಜದವರು ಮುಖ್ಯವಾಹಿನಿಗೆ ಬರುವ ಮೂಲಕ ಸಂಘಟನೆಯಿಂದ ಕೆಲಸ ಮಾಡಬೇಕಿದೆ. ಮಕ್ಕಳನ್ನು ಶಿಕ್ಷಣವಂತರಾಗಿ ಮಾಡಬೇಕು ಎಂದರು.

ಯಾದವ ಸಂಸ್ಥಾನ ಯಾದವಾನಂದ ಮಹಾಸ್ವಾಮೀಜಿ, ಸಮಾಜದವರು ಮಕ್ಕಳನ್ನು ಸಂಸ್ಕಾರಯುವವಾಗಿ ಬೆಳೆಸಿ ಮಠ ಮಾನ್ಯಗಳ ಮೂಲಕ ಶಿಕ್ಷಣಕ್ಕೆ ಒತ್ತು ನೀಡಬೇಕು.ಒಬಿಸಿಯಲ್ಲಿ ಬರುವ ಜನಾಂಗದವರು ಆರ್ಥಿಕವಾಗಿ ಸದೃಢರಾಗಬೇಕಿದೆ ಎಂದು ಹೇಳಿದರು.

ಎಮ್ಮೆಲ್ಸಿ ಡಿ.ಟಿ.ಶ್ರೀನಿವಾಸ ಯಾದವ ಮಾತನಾಡಿದರು.

ತಾಲೂಕು ಯಾದವ ಸಮಾಜದ ಅಧ್ಯಕ್ಷ ಶಿವಪ್ಪ ಎಚ್.ಮಿರ್ಜಿ ಅಧ್ಯಕ್ಷತೆ ವಹಿಸಿದ್ದರು. ಕಾಡಾ ಅಧ್ಯಕ್ಷ ಹಸನಸಾಬ್ ದೋಟಿಹಾಳ್, ಯಾದವ ಸಂಘದ ಪ್ರಧಾನ ಕಾರ್ಯದರ್ಶಿ ಯಮನೂರಪ್ಪ ಎಸ್.ಬಂಗ್ಲರ್, ಬಿಜೆಪಿ ಯುವ ಮೋರ್ಚಾದ ಅಧ್ಯಕ್ಷ ಉಮೇಶ ಯಾದವ್, ಜಿಲ್ಲಾ ಮುಖಂಡರಾದ ಭೀಮಪ್ಪ ಗೊಲ್ಲರ, ದ್ಯಾಮಣ್ಣ ಉಪ್ಪಟ್ಟಿ, ವೆಂಕಟೇಶ ಬಿಂಗಿ, ದುರುಗಪ್ಪ, ರಾಮಣ್ಣ ಗುಳೇದ್, ಹನುಮಗೌಡ, ಬಾಲಪ್ಪ ಗೊಲ್ಲರ ಇತರರಿದ್ದರು.



ಮೇ 24ಕ್ಕೆ ಕೊಪ್ಪಳದಲ್ಲಿ ಚಿಂತನ ಮಂಥನ ಸಭೆ

ಯಲಬುರ್ಗಾ: ಮೇ 24ರಂದು ಕೊಪ್ಪಳದಲ್ಲಿ ನಡೆಯುವ ಚಿಂತನ ಮಂಥನ ಕಾರ್ಯಕ್ರಮ ಜಿಲ್ಲೆಯಲ್ಲಿ ನಡೆಯಲಿದ್ದು ಎಸ್‌ಸಿ/ಎಸ್ಟಿ/ಒಬಿಸಿ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ರಾಯಚೂರ ಜಿಲ್ಲಾ ಅಧ್ಯಕ್ಷ ವೆಂಕಟೇಶ ನಾಯಕ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಚಿಂತನ ಮಂಥನಕಾರ್ಯಕ್ರಮಕುರಿತುಪೂರ್ವಭಾವಿ ಸಭೆಯಲ್ಲಿ ಬುಧವಾರ ಪಾಲ್ಗೊಂಡು ಮಾತನಾಡಿದ ಅವರು ಮಾಜಿ ಲೋಕಸಭೆ ಸದಸ್ಯರಾದ ವಿ.ಎಸ್.ಉಗ್ರಪ್ಪನವರು ಕೊಪ್ಪಳ ಜಿಲ್ಲೆಗೆ ಆಗಮಿಸುತ್ತಿದ್ದಾರೆ ಕರ್ನಾಟಕ ರಾಜ್ಯ ವಾಲ್ಮೀಕಿ ನಾಯಕ ಸಮಾಜದ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪಂಗಡ ಮೀಸಲಾತಿ ವಿಚಾರವಾಗಿ ಚಿಂತನಾ ಮಂಥನ ಕಾರ್ಯಕ್ರಮವನ್ನು ಕೊಪ್ಪಳದಲ್ಲಿ ಆಯೋಜಿಸಲಾಗಿದೆ ಎಂದರು.

ಕೊಪ್ಪಳ ಜಿಲ್ಲೆಯ ವಾಲ್ಮೀಕಿ ನಾಯಕ ಸಮಾಜದ ಸಮಾನ ಮನಸ್ಕಾರ ವೇದಿಕೆ ವತಿಯಿಂದ ಎಸ್ಸಿ/ಎಸ್ಟಿ ಮತ್ತು ಒಬಿಸಿಗಳ 56% ಮೀಸಲಾತಿಯನ್ನು ನೈನ್ ಶೆಡ್ಯೂಲ್ ಗೆ ಸೇರಿಸುವುದಕ್ಕೂ ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಬೇಕು. ಕಾರ್ಯಕ್ರಮವು ಬೆಳಿಗ್ಗೆ 10.30 ಗಂಟೆಗೆ ಆರಂಭವಾಗಲಿದ್ದು, ಮಧ್ಯಾಹ್ನ 12 ಗಂಟೆಗೆ ಮಾನ್ಯ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಕೆ ನಡೆಯಲಿದೆ. ಬಳಿಕ ಮಧ್ಯಾಹ್ನ 12.30 ಗಂಟೆಗೆ ಬಹಿರಂಗ ಸಭೆ ಹಾಗೂ ಚಿಂತನಾ ಮಂಥನ ಕಾರ್ಯಕ್ರಮ ಜರುಗಲಿದೆ ಎಂದು ಹೇಳಿದರು.

ರಾಜ್ಯ ಸರ್ಕಾರ ಪ್ರಸಕ್ತ 56,437 ಹುದ್ದೆಗಳ ಭರ್ತಿಯಲ್ಲಿ ಕೇವಲ 3% ಮೀಸಲಾತಿ ನೀಡುತ್ತಿರುವುದನ್ನು ವಿರೋಧಿಸುವುದು 7.5% ಮೀಸಲಾತಿ ಯಲ್ಲಿ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಪರಿಶಿಷ್ಟ ಪಂಗಡದ ಹಕ್ಕುಗಳ ರಕ್ಷಣೆಗೆ ಈ ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಪರಿಶಿಷ್ಟ ಜಾತಿಗಳಿಗೆ 15% ರಿಂದ 17% ಹಾಗೂ ಪರಿಶಿಷ್ಟ ಪಂಗಡಗಳಿಗೆ 3% ರಿಂದ 7% ಮೀಸಲಾತಿ ಹೆಚ್ಚಿಸುವಂತೆ ಆಗ್ರಹಿಸಲಾಗುತ್ತದೆ ಎಂದರು.

ಈ ವೇಳೆಯಲ್ಲಿ ಮಾಜಿ ಪಟ್ಟಣ ಪಂಚಾಯತಿ ಮಾಜಿ ಸದಸ್ಯರಾದ ಕಳಕಪ್ಪ ತಳವಾರ, ಸಂಘದ ಉಪಾಧ್ಯಕ್ಷ ನಾಗೇಂದ್ರ ನಾಯಕ, ಮುದುಕಪ್ಪ ಆಡಿನ್ ಲಕ್ಷ್ಮಣ್ ಕುಲಕರ್ಣಿ, ರಾಮಣ್ಣ ತಳವಾರ, ಭೀಮಪ್ಪ ಹವಳಿ, ರಾಮಣ್ಣ ಮಾಲಿ, ಶರಣು ಆಡಿನ್, ದೇವಪ್ಪ ಮುದೇನೂರ್, ಮಾದೇವಪ್ಪ ಮುರಾರಿ ಕನಕಪ್ಪ ವಾಲ್ಮೀಕಿ ಹಾಗೂ ಸಮಾಜದ ಮುಖಂಡರು ಇದ್ದರು.



ಮಾರ್ಗಸೂಚಿ ಅನುಸರಿಸಿ ಇಂಧನ ವಿತರಿಸಲು ಕ್ರಮ: ಡಿಸಿ

ರಾಯಚೂರು: ಜಾಗತಿಕ ಸನ್ನಿವೇಶದ ಹಿನ್ನಲೆಯಲ್ಲಿ ಜಿಲ್ಲೆಯಲ್ಲಿ ಗ್ರಾಹಕರ ಹಿತದೃಷ್ಟಿಯಿಂದ ಇಂಧನದಲ್ಲಿ ಯಾವುದೇ ಕೊರತೆಯಾಗದಂತೆ ಮಾರ್ಗಸೂಚಿಗಳನ್ನು ಅನುಸರಿಸಿ ಇಂಧನವನ್ನು ವಿತರಿಸಲು ಕ್ರಮ ವಹಿಸಲಾಗಿದೆ ಎಂದು ಜಿಲ್ಲಾಧಿಕಾರಿ ಪೂವಿತಾ ಎಸ್. ತಿಳಿಸಿದ್ದಾರೆ.

ಪೆಟ್ರೋಲಿಯಂ ನಿಯಮ-2002ರ ನಮೂನೆ ಗಿಬ್ಬರ ಷರತ್ತು 16(4) ರನ್ವಯ ಪೆಸೋ ಮಾರ್ಗಸೂಚಿ ಪ್ರಕಾರ ರಿಟೇಲ್ ಔಟ್ಲೆಟ್‌ಗಳು ವಾಹನಗಳ ಟ್ಯಾಂಕ್‌ಗಳಿಗೆ ಅಥವಾ ಅಧಿಕೃತ ಕಂಟೇನರ್‌ಗಳಿಗೆ ಗರಿಷ್ಠ ಮಿತಿ 200 ಲೀಟರ್‌ಗಳಿಗೆ ಒಳಪಟ್ಟು ಮಾತ್ರ ಇಂಧನವನ್ನು ಪೂರೈಸುವುದು.

ರಿಟೇಲ್ ಔಟ್ಲೆಟ್‌ಗಳು ಬಲ್ಕ್ ಸಪ್ಲೈ ಒಪೆರಷನ್ಸ್‌ಗಳನ್ನು ನಡೆಸಲು ಅಧಿಕೃತ ಮಾರಾಟಗಾರರಾಗಿರುವುದಿಲ್ಲ, ಬಲ್ಕ್ ಸಪ್ಲೈ ಒಪೆರಷನ್ಸ್ ವ್ಯಾಪಾರವನ್ನು ನಡೆಸಲು ವಿಶೇಷವಾಗಿ ಜಾರಿಯಲ್ಲಿರುವ ನೇರ ಮಾರಾಟ ಕಾರ್ಯವಿಧಾನಗಳ ಮೂಲಕ ಮಾತ್ರ ನಡೆಸತಕ್ಕದ್ದು. ಬಲ್ಕ್ ಸಪ್ಲೈ ಒಪೆರಷನ್ಸ್‌ಗಳಲ್ಲಿ ಯಾವುದೇ ರೀತಿಯ ಅವ್ಯವಹಾರ ನಡೆದಲ್ಲಿ ನಿಯಮಗಳ ಉಲ್ಲಂಘನೆಯ ಜೊತೆಗೆ ಸುರಕ್ಷತೆ, ಲೈಸೆನ್ಸಿಂಗ್ ಮತ್ತು ಕಾರ್ಯಾಚರಣೆಯ ಬಗ್ಗೆ ಗಂಭೀರ ಪರಿಸ್ಥಿತಿ ನಿರ್ಮಾಣವಾಗುವ ಸಾಧ್ಯತೆ ಇರುತ್ತದೆ.

ಪೆಟ್ರೋಲ್ ಮತ್ತು ಡೀಸೆಲ್‌ನ್ನು ವಾಹನಗಳ ಟ್ಯಾಂಕ್‌ಗಳಿಗೆ ಮಾತ್ರ ಪೂರೈಸಬೇಕಾಗಿರುತ್ತದೆ. ಬಾಟಲ್‌ಗಳು, ಕ್ಯಾನ್‌ಗಳು ಮತ್ತು ಇನ್ನತರೇ ಯಾವುದೇ ಕಂಟೇನರ್‌ಗಳಿಗೆ ಪೂರೈಸುವುದನ್ನು ನಿಷೇಧಿಸಲಾಗಿದೆ.

ಬಲ್ಕ್ ಕನ್ಸೂಮರ್ಸ್‌ಗಳಿಗೆ ಡೀಸೆಲ್‌ನ್ನು ಕನ್ಸೂಮರ್ ಪಂಪ್ಸ್ ಅಧೀನದಲ್ಲಿ ಬರುವ ಡೈರೆಕ್ಟ್ ಸೇಲ್ಸ್ ಮೆಕ್ಯಾನಿಸಮ್/ಡೆಪೋಟ್ಸ್‌ಗಳ ಮೂಲಕ ಮಾತ್ರ ಮಾರಾಟ ಮಾಡುವುದು. ಮೇಲೆ ವಿವರಿಸಿರುವ ಅಂಶಗಳಲ್ಲಿ ಉಲ್ಲಂಘನೆ ಕಂಡುಬಂದಲ್ಲಿ ಸಂಬಂಧಪಟ್ಟವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು ಮತ್ತು ಇಂಧನದ ಅನಧೀಕೃತ ದಾಸ್ತಾನು ಇರಿಸುವುದು ಮತ್ತು ತಾತ್ಕಾಲಿಕ ಕೊರತೆ ಸೃಷ್ಟಿಸುವಂತಹ ಪ್ರಕರಣಗಳು ಕಂಡು ಬಂದಲ್ಲಿ ಅಗತ್ಯ ವಸ್ತುಗಳ ಕಾಯ್ದೆ, 1955 ಮತ್ತು ಸಂಬಂಧಪಟ್ಟ ನಿಯಮಗಳಡಿ ಕಟ್ಟುನಿಟ್ಟಿನ ಕ್ರಮವಹಿಸಲಾಗುವುದು. ಪೆಟ್ರೋಲ್ ಪಂಪ್‌ಗಳಲ್ಲಿ ಶಿಸ್ತು ಮತ್ತು ಸೌಹಾರ್ದಯುತ ನಡವಳಿಕೆಯನ್ನು ಕಾಪಾಡಿಕೊಳ್ಳಲು ಮತ್ತು ಪಂಪ್ ಸಿಬ್ಬಂದಿ ಹಾಗೂ ಸಹ ನಾಗರಿಕರೊಂದಿಗೆ ಮತ್ತು ಅಗತ್ಯ ಸೇವೆಗಳ ಸುಗಮ ಕಾರ್ಯನಿರ್ವಹಣೆಯಲ್ಲಿ ಎಲ್ಲಾ ಸಾರ್ವಜನಿಕರು ಸಹಕಾರ ನೀಡುವಂತೆ ಜಿಲ್ಲಾಧಿಕಾರಿಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡೆಂಘೀ ನಿಯಂತ್ರಣ ಮಾಡಲು ಸಾರ್ವಜನಿಕರ ಸಹಕಾರ ಅಗತ್ಯ

ಸಿಂಧನೂರು: ರಾಯಚೂರು ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್,ಆರೋಗ್ಯ ಇಲಾಖೆ ಹಾಗೂ ಬಸವ ಪ್ಯಾರಾ ಮೆಡಿಕಲ್ ಮತ್ತು ನರ್ಸಿಂಗ್ ಕಾಲೇಜ್ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ಡೆಂಘೀ ದಿನಾಚರಣೆ ಮತ್ತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಒಂದು ರಾಷ್ಟ್ರೀಯ ಡೆಂಘೀ ದಿನಾಚರಣೆ ಹಾಗೂ ಜಾಗೃತಿ ಕಾರ್ಯಕ್ರಮವನ್ನು ಸಸಿಗೆ ನೀರು ಉಣಿಸುವ ಮೂಲಕ ಉದ್ಘಾಟಿಸಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗೀತಾ ಹಿರೇಮಠ ಮಾತನಾಡಿ, ಡೆಂಘೀ ನಿಯಂತ್ರಣದಲ್ಲಿ ಸಾರ್ವಜನಿಕರ ಪಾತ್ರ ದೊಡ್ಡದಿದೆ.ಪ್ರತಿಯೊಬ್ಬರೂ ತಮ್ಮ ಮನೆ ಸುತ್ತಮುತ್ತ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಪರಿಶೀಲಿಸಿ, ಸ್ವಚ್ಛಗೊಳಿಸಿ ಹಾಗೂ ಮುಚ್ಚಿಡಿ' ಎಂಬ ಘೋಷ ವಾಕ್ಯವನ್ನು ಪಾಲಿಸುವ ಮೂಲಕ ಸೊಳ್ಳೆಗಳ ಉತ್ಪತ್ತಿಯನ್ನು ತಡೆಯಬೇಕು,ಸೊಳ್ಳೆ ಕಡಿತದಿಂದ ರಕ್ಷಣೆ ಪಡೆಯಲು ಸೊಳ್ಳೆ ಪರದೆ,ಓಡೋಮಾಸ್ ಹಾಗೂ ಬೇವಿನ ಸೊಪ್ಪಿನ ಹೊಗೆಯನ್ನು ಬಳಸಬೇಕು. ಸೊಳ್ಳೆಗಳ ನಿಯಂತ್ರಣಕ್ಕೆ ಗ್ಯಾಂಬೂಸಿಯ, ಗಪ್ಪಿ ಮೀನುಗಳು ಮತ್ತು ಟೆಮಿಫಾಸ್ ದ್ರಾವಣವನ್ನು ಬಳಸಬಹುದು ಎಂದರು.

ಜೊತೆಗೆ ಡೆಂಘೀ ಲಕ್ಷಣಗಳುಹಾಗೂಚಿಕಿತ್ಸೆಯ ಬಗ್ಗೆ ಮಾಹಿತಿ ನೀಡಲಾಯಿತು ಹಾಗೂ ಬಳಿಕ ವಿಶ್ವ ರಕ್ತದೊತ್ತಡ ದಿನಾಚರಣೆಯನ್ನು ಸಹ ಆಚರಿಸಲಾಯಿತು ಎಂದು ತಿಳಿಸಿದರು. ಮೇಘಾ, ಮಂಜುಳಾ, ಕವಿತಾ, ಶಂಶಾದ ಬಿ. ಹಾಗೂ ಕಾಲೇಜಿನ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.



ಆನ್‌ಲೈನ್ ಔಷಧ ಮಾರಾಟ ನಿಲ್ಲಲಿ: ರವೀಂದ್ರ ಜೋಶಿ

ಕಲಬುರಗಿ: ಸಾರ್ವಜನಿಕ ಆರೋಗ್ಯಕ್ಕೆ ಅಪಾಯ ಉಂಟುಮಾಡುತ್ತಿರುವ ಅಕ್ರಮ ಆನ್‌ಲೈನ್ ಔಷಧಿ ಮಾರಾಟದ ವಿರುದ್ಧ ತಕ್ಷಣದ ಕ್ರಮ ಹಾಗೂ ಸಣ್ಣ ಔಷಧ ವ್ಯಾಪಾರಿಗಳ ರಕ್ಷಣೆಗೆ ಮುಂದಾಗಬೇಕು ಎಂದು ಆಗ್ರಹಿಸಿ ರಾಜ್ಯಾದ್ಯಂತ ನೀಡಿದ ಔಷಧಿ ಮಳಿಗೆಗಳ ಬಂದ್ ಕರೆಗೆ ಕಲಬುರಗಿ ಜಿಲ್ಲಾ ಔಷಧ ವ್ಯಾಪಾರಿಗಳ ಸಂಘ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು. ಡಿಸಿ ಮೂಲಕ ದೇಶದ ಪ್ರಧಾನಿ ನರೇಂದ್ರ ಮೋದಿಯವರಿಗೆ ಮನವಿ ಸಲ್ಲಿಸಿದ ಬಳಿಕ ಮಾತನಾಡಿದ ಸಂಘದ ಕಾರ್ಯದರ್ಶಿ ರವೀಂದ್ರ ಜೋಶಿ,ಅಖಿಲ ಭಾರತೀಯ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್ ಸಂಘಟನೆ ಹಾಗೂ ಕರ್ನಾಟಕ ರಾಜ್ಯ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್ ಅಸೋಸಿಯೇಷನ್ ನೀಡಿದ ಕರೆಗೆ ಸ್ಪಂದಿಸಿ ಪ್ರತಿಭಟನೆ ನಡೆಸಲಾಗುತ್ತಿದ್ದು,ಡ್ರಗ್ಸ್ ಅಂಡ್ ಕಾಸ್ಮೆಟಿಕ್ಸ್ ಕಾಯ್ದೆ 1940 ಹಾಗೂ ನಿಯಮಗಳು 1945ರಲ್ಲಿ ಆನ್‌ಲೈನ್ ಮೂಲಕ ಔಷಧಿ ಮಾರಾಟಕ್ಕೆ ಸ್ಪಷ್ಟ ಅವಕಾಶವಿಲ್ಲ, ಆದರೂ ಹಲವು ಆನ್‌ಲೈನ್ ಕಂಪನಿಗಳು ನಿಯಂತ್ರಣವಿಲ್ಲದೆ ಔಷಧಿಗಳನ್ನು ಮಾರಾಟ ಮಾಡುತ್ತಿವೆ ಎಂದು ಹೇಳಿದರು. ಇದಲ್ಲದೆ, ನಕಲಿ ಇ-ಪ್ರಿಸ್ಕ್ರಿಪ್ಷನ್‌ಗಳ ಮೂಲಕ ಔಷಧಿ ವಿತರಣೆ, ವೈದ್ಯರ ಸರಿಯಾದ ಸಲಹೆಯಿಲ್ಲದೆ ಮನೆಮಾತಾಗಿ ಔಷಧಿ ಪೂರೈಕೆ ಹಾಗೂ ಆನ್‌ಲೈನ್ ಕಂಪನಿಗಳ ಅತಿಯಾದ ಡಿಸ್ಕೌಂಟ್ ನೀತಿಗಳು ಸಾರ್ವಜನಿಕ ಆರೋಗ್ಯಕ್ಕೆ ಅಪಾಯಕಾರಿಯಾಗಿದೆ. 2018ರಲ್ಲಿ ಹೊರಡಿಸಲಾದಜಿಎಸ್‌ಆರ್ 817(ಇ) ಅಧಿಸೂಚನೆ ಹಾಗೂ ಕೋವಿಡ್ ಅವಧಿಯಲ್ಲಿ ಜಾರಿಗೆ ತಂದಿದ್ದ ಜಿಎಸ್‌ಆರ್ 220(ಇ) ನಿಯಮಗಳನ್ನು ಈಗ ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ. ಕ್ವಿಕ್ ಕಾಮರ್ಸ್ ಹಾಗೂ ಆನ್‌ಲೈನ್ ವೇದಿಕೆಗಳು ನಿಯಂತ್ರಣವಿಲ್ಲದೆ ಮನೆಮಾತು ಔಷಧಿ ವಿತರಣೆ ನಡೆಸುತ್ತಿರುವುದರಿಂದ ಸಣ್ಣ ಔಷಧ ವ್ಯಾಪಾರಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ವಿಜಯಕುಮಾರ್, ಪ್ರಶಾಂತ್ ಪೂಜಾರಿ, ಮಹೇಶ್ ನಾಡಗೌಡ, ಅವಿನಾಶ್, ಶಿವಲಿಂಗಪ್ಪ ಕಂಠಿ, ವಿಶ್ವನಾಥ ಕೋರವಾರ, ನಾಗಭೂಷಣ ಸೇರಿದಂತೆ ಇತರರು ಇದ್ದರು.



- **ಅಕ್ರಮ ಆನ್‌ಲೈನ್ ಔಷಧಿ ಮಾರಾಟದ ವಿರುದ್ಧ ಕಠಿಣ ಕ್ರಮ.**
- **ಇ-ಪ್ರಿಸ್ಕ್ರಿಪ್ಷನ್ ಇಲ್ಲದೆ ಔಷಧಿ ಮಾರಾಟ ನಿಷೇಧ.**
- **ಜಿಎಸ್‌ಆರ್ 817(ಇ) ಹಾಗೂ ಜಿಎಸ್ ಆರ್ 220(ಇ) ಹಿಂಪಡೆಯಬೇಕು.**
- **ಆನ್‌ಲೈನ್ ಕಂಪನಿಗಳ ಡೀಪ್ ಡಿಸ್ಕೌಂಟ್ ನೀತಿಗೆ ಕಡಿವಾಣ.**

ಬ್ರಾಹ್ಮಣ ಒಕ್ಕೂಟದ ಆಶ್ರಯದಲ್ಲಿ ಬೇಸಿಗೆ ಶಿಬಿರಕ್ಕೆ ಚಾಲನೆ

ಶಿಕ್ಷಣದ ಜೊತೆಗೆ ಕ್ರೀಡೆಗಳಿಗೂ ಆದ್ಯತೆ ನೀಡಿ

ಬಳ್ಳಾರಿ: ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಜೊತೆಗೆ ಕ್ರೀಡೆಗಳಿಗೂ ಆದ್ಯತೆ ನೀಡಬೇಕು, ವರ್ಷಪೂರ್ತಿ ಶಾಲೆಗೆ ತೆರಳಿರುವ ಮಕ್ಕಳು ಬೇಸಿಗೆ ವೇಳೆ ಮನೋರಂಜನೆ, ಕ್ರೀಡೆಗಳ ಕಡೆ ಹೆಚ್ಚು ಗಮನಹರಿಸುತ್ತಾರೆ ಎಂದು ಕರಾಟೆ ಪಟು, ಜ್ಞಾನಶ್ರೀ ಪ್ರತಿಷ್ಠಾನದ ಅಧ್ಯಕ್ಷ ವಿಜಯ ವಿಠಲ ಅವರು ಹೇಳಿದರು.

ನಗರದ ಎಸ್.ಎನ್.ಪೇಟೆ, ಗಣೇಶ ಕಾಲೋನಿಯಲ್ಲಿ ಜ್ಞಾನಶ್ರೀ ಪ್ರತಿಷ್ಠಾನ, ಬ್ರಾಹ್ಮಣ ಒಕ್ಕೂಟದ ಆಶ್ರಯದಲ್ಲಿ ಕಳೆದ14 ವರ್ಷಗಳಿಂದ ಮಕ್ಕಳಿಗಾಗಿ ಆಯೋಜಿಸಲಾಗುತ್ತಿರುವ ಉಚಿತ ಬೇಸಿಗೆ ಶಿಬಿರದಲ್ಲಿ ಮಾತನಾಡಿದರು. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕಲ್ಪಿಸಬೇಕು, ಆದರೆ, ಅದರ ಜೊತೆಗೆ ಕ್ರೀಡೆ, ಯೋಗ, ಸಂಗೀತ ಸೇರಿದಂತೆ ಇತರೆ ಚಟುವಟಿಕೆಗಳ ಕಡೆಗೆ ಕೊಂಡೊಯ್ಯಬೇಕು, ಇದರಿಂದ ಮಕ್ಕಳ ಜ್ಞಾನ, ನೆನಪಿನ ಶಕ್ತಿ ಹೆಚ್ಚಾಗುವುದರ ಜೊತೆಗೆ ಆರೋಗ್ಯ ಸದೃಢವಾಗಿರಲಿದೆ. ಕರಾಟೆ ಪುರುಷರು, ಮಹಿಳೆಯರಿಗೆ ತಮ್ಮ ರಕ್ಷಣೆಗೆ ರಾಮಬಾಣವಿದ್ದಂತೆ, ಅದರಲ್ಲೂ ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಕರಾಟೆ ತರಬೇತಿ ಪಡೆಯಬೇಕು, ಕರಾಟೆ ಮಹಿಳೆಯರಿಗೆ ರಕ್ಷಾ ಕವಚವಿದ್ದಂತೆ ಎಂದರು.

1ನೇ ತರಗತಿಯಿಂದ ಡಿಗ್ರಿ ಓದುವ ಹೆಣ್ಣು ಮಕ್ಕಳಿಗೆ ಶಿಬಿರದಲ್ಲಿ ಉಚಿತ ಕರಾಟೆ ಕಲಿಸಲಾಗುವುದು. ಎಲ್ಲ ಸಹಕಾರದಿಂದ ಕಳೆದ 14 ವರ್ಷಗಳಿಂದ ಉಚಿತ ಬೇಸಿಗೆ ಶಿಬಿರವನ್ನು ನಡೆಸಿಕೊಂಡು ಬರಲಾಗುತ್ತಿದೆ. ಮಕ್ಕಳು ಇದರ ಸದುಪಯೋಗ ಪಡೆದು ಕೊಳ್ಳಬಹುದು, ಶಿಬಿರದಲ್ಲಿ ಭಾಗವಹಿಸಿದ ಎಲ್ಲ ಮಕ್ಕಳಿಗೂ ಪ್ರಮಾಣ ಪತ್ರಗಳನ್ನು ನೀಡಲಾಗುವುದು ಎಂದರು. ಸಂದರ್ಭದಲ್ಲಿ ಮಕ್ಕಳ ಪಾಲಕರು, ವಿವಿಧ ಗಣ್ಯರು ಉಪಸ್ಥಿತರಿದ್ದರು.



ಕಿರುಸುದ್ದಿ

ಆನ್‌ಲೈನ್ ಔಷಧಿ ಮಾರಾಟಕ್ಕೆ ಕಡಿವಾಣಕ್ಕೆ ಆಗ್ರಹ



•**ವಿಜಯನಗರ:** ಆನ್‌ಲೈನ್ ಫಾರ್ಮಸಿಗಳ ಮೂಲಕ ಔಷಧ ಮಾರಾಟಕ್ಕೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿ ಹೊಸಪೇಟೆಯಲ್ಲಿ ಜಿಲ್ಲೆಯ ಔಷಧ ವ್ಯಾಪಾರಿಗಳು ಬುಧವಾರ ಮೆಡಿಕಲ್ ಶಾಪ್ ಬಂದ್ ಮಾಡಿ ಬೀದಿಗಿಳಿದು ಪ್ರತಿಭಟನೆ ನಡೆಸಿದರು. ನಗರದ ಗಾಂಧಿ ಚೌಕ್ ನಿಂದ ಪ್ರಮುಖ ಬೀದಿಗಳ ಮರವಣಿಗೆ ನಡೆಸಿದ ಪ್ರತಿಭಟನಾಕಾರರು, ಜೈ ಭೀಮ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ದೇಶದ್ಯಾಂತ ಔಷಧ ಅಂಗಡಿಗಳನ್ನು ಬಂದ್ ಮಾಡಿ ಪ್ರತಿಭಟನೆಗೆ ಕರೆ ನೀಡಿದ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಔಷಧ ಅಂಗಡಿ ಮಾಲೀಕರು ಶೇ.90ರಷ್ಟು ಔಷಧ ಅಂಗಡಿಗಳು ಬಂದ್ ಮಾಡಿ ಪ್ರತಿಭಟನೆ ನಡೆಸಿ, ಸರ್ಕಾರದ ವಿರುದ್ಧ ಆಕ್ರೋಶ ಹೊರ ಹಾಕಿದರು. ಬಳಿಕ ಜಿಲ್ಲಾ ಆರೋಗ್ಯಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಅಂದ್ರಾಳ್ ಕೆ.ಪಕ್ಕಿರಪ್ಪ ಮಾನ ಆಯ್ಕೆ

•**ಬಳ್ಳಾರಿ:** ರೈತ ಸೇವಾ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಇಲ್ಲಿನ ಅಂದ್ರಾಳ್ಳ ಕೆ.ಪಕ್ಕಿರಪ್ಪ ಮಾನ ಅವರು ಆಯ್ಕೆಯಾಗಿದ್ದಾರೆ. ಬರುವ ದಿನಗಳಲ್ಲಿ ಇನ್ನೂ ಅನೇಕ ಹುದ್ದೆಗಳನ್ನು ಅಲಂಕರಿಸಿ, ರಾಜ್ಯ ಹಾಗೂ ದೇಶದಲ್ಲೇ ಮಾದರಿ ರಾಜಕಾರಣಿಯಾಗಲಿ ಎಂದು ಬಳ್ಳಾರಿ ಜಿಲ್ಲಾ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ, ಡ್ರೈವಿಂಗ್ ತರಗತಿ ಶಾಲೆಗಳು ಸಂಘದ ಅಧ್ಯಕ್ಷ, ಬಳ್ಳಾರಿ ಆರು ಚಕ್ರದ ಗಣಿ ಮಾಲೀಕರ ಸಂಘ ಅಧ್ಯಕ್ಷ ಹಾಗೂ ಲಾರಿ ಚಾಲಕರ ಕ್ಲೀನರ್ ಮತ್ತು ಹಿತ ರಕ್ಷಣಾ ಸಂಘದ ಅಧ್ಯಕ್ಷ ಕೆ.ಅಲ್ಲಿಪುರ ಮೋಹನ್ ತಿಳಿಸಿದ್ದಾರೆ.



ಮಾರ್ಚ್ ತಿಂಗಳ ಗೃಹಲಕ್ಷ್ಮೀ ಕಂತು ಬಿಡುಗಡೆ

•**ಬಳ್ಳಾರಿ:** ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯಾದ ಗೃಹಲಕ್ಷ್ಮೀ ಯೋಜನೆಯು ಜಿಲ್ಲೆಯ 2,94,857 ಅರ್ಹ ಫಲಾನುಭವಿಗಳಿಗೆ ರಾಜ್ಯ ಸರ್ಕಾರದಿಂದ ಮಾರ್ಚ್ ತಿಂಗಳ ಕಂತಿನ 58,97,14000 ರೂ.ಹಣವನ್ನು ಬಿಡುಗಡೆ ಮಾಡಲಾಗಿದೆ. ಖಜಾನೆ ಮೂಲಕ ನೇರವಾಗಿ ಗೃಹಲಕ್ಷ್ಮೀಯರ ಖಾತೆಗೆ ಹಣ ಬಿಡುಗಡೆ ಪ್ರಾರಂಭವಾಗಿದೆ ಎಂದು ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಅನುಷ್ಠಾನಗಳ ಜಿಲ್ಲಾಧ್ಯಕ್ಷ ಚಿದಾನಂದಪ್ಪ ತಿಳಿಸಿದ್ದಾರೆ.



ಪ್ರತಿದಿನ ಸುಮಾರು 30 ಸಾವಿರ ಜನರಿಗೆ ನೇರವಾಗಿ ಅವರ ಖಾತೆಗೆ ಹಣ ತಲುಪಲಿದ್ದು, 10 ದಿನಗಳ ಒಳಗಾಗಿ ಜಿಲ್ಲೆಯ ಎಲ್ಲ ಫಲಾನುಭವಿಗಳ ಖಾತೆಗೆ 2 ಸಾವಿರ ಹಣ ಜಮಾ ಆಗಲಿದೆ.

ಸಿಎಂ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆವ ಸರ್ಕಾರ ಎನ್ನುವ ಕೀರ್ತಿಗೆ ಭಾಜನವಾಗಿದೆ. ಈಗ ಬಿಡುಗಡೆ ಆಗಿರುವ 30ನೇ ಕಂತು ಫಲಾನುಭವಿಗಳ ಖಾತೆಗೆ ಜಮಾ ಆಗಲಿದೆ.

ಪ್ರತಿ ಫಲಾನುಭವಿ ಮಹಿಳೆಯರ ಖಾತೆಗೆ ನಮ್ಮ ಸರ್ಕಾರ 3 ವರ್ಷಗಳಲ್ಲಿ 30 ಕಂತುಗಳಲ್ಲಿ ಒಟ್ಟು 60 ಸಾವಿರಗಳನ್ನು ತಲುಪಿಸಿದ ಹೆಮ್ಮೆ ನಮ್ಮ ರಾಜ್ಯ ಸರ್ಕಾರದ್ದಾಗಲಿದೆ. ವಿರೋಧ ಪಕ್ಷಗಳ ಟೀಕೆ,ವಿರೋಧ ,ಅಸಹಕಾರದ ಮಧ್ಯೆಯೂ ರಾಜ್ಯದ ಅಭಿವೃದ್ಧಿ ಮತ್ತು ಗ್ಯಾರಂಟಿಗಳಿಗೆ ಹಣ ಒದಗಿಸಲಾಗಿದೆ ಎಂದಿದ್ದಾರೆ.

ಬೆಲೆ ಏರಿಕೆಯಿಂದ ತತ್ತರಿಸಿರುವ ಕುಟುಂಬಗಳ, ಅಗತ್ಯ ವಸ್ತುಗಳ ಖರೀದಿಗೆ, ಮಕ್ಕಳ ವಿದ್ಯಾಭ್ಯಾಸ,ಆರೋಗ್ಯ,ಸಣ್ಣ ವ್ಯಾಪಾರಕ್ಕೆ ಈ ಹಣವು ಸಹಾಯವಾಗಲಿದೆ ಎಂದು ಜಿಲ್ಲೆಯ ಎಲ್ಲ ಫಲಾನುಭವಿ ಮಹಿಳೆಯರು ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳಿಗೆ ಉಪಮುಖ್ಯಮಂತ್ರಿಗಳಿಗೆ ಸಚಿವರು ಮತ್ತು ಶಾಸಕರಿಗೆ ಧನ್ಯವಾದಗಳನ್ನ ತಿಳಿಸುತ್ತಿದ್ದಾರೆ. ಅವರೆಲ್ಲರ ಪರವಾಗಿ ನಾನು ಕೂಡ ಅವರಿಗೆ ರಾಜ್ಯ ಸರ್ಕಾರಕ್ಕೆ ಶಾಸಕರಿಗೆ ಧನ್ಯವಾದಗಳು ಸಲ್ಲಿಸುತ್ತೇನೆ ಎಂದಿದ್ದಾರೆ.



ಕುರುಗೋಡು: ಭೂ ಸ್ವಾಧೀನ ಮತ್ತು ಅಕ್ರಮ ಭೂ ವರ್ಗಾವಣೆ ಖಂಡಿಸಿ ಕುಡಿತಿನಿಯಲ್ಲಿ ನಡೆಯುತ್ತಿರುವ ಭೂ ಸಂತ್ರಸ್ತ ರೈತರ ಹೋರಾಟವು ಇಂದು 1251ನೇ ದಿನಕ್ಕೆ ಕಾಲಿಟ್ಟಿದ್ದು, ಉಪವಾಸ ಸತ್ಯಾಗ್ರಹವು 9ನೇ ದಿನಕ್ಕೆ ಮುಂದುವರಿದಿದೆ. ನಮ್ಮ ಕರ್ನಾಟಕ ರಕ್ಷಣಾ ವೇದಿಕೆ (ಯುವಸೇನೆ) ಕುಡಿತಿನಿ ಅಧ್ಯಕ್ಷ ಸಂಪತ್ ಕುಮಾರ್ ನೇತೃತ್ವದಲ್ಲಿ ಹೋರಾಟಕ್ಕೆ ಬೆಂಬಲ ಸೂಚಿಸಲಾಯಿತು.

ಭೂಸಂತ್ರಸ್ತ ರೈತರ ಹೋರಾಟ ತೀವ್ರ

•**ಕುರುಗೋಡು:** ಭೂ ಸ್ವಾಧೀನ ಮತ್ತು ಅಕ್ರಮ ಭೂ ವರ್ಗಾವಣೆ ಖಂಡಿಸಿ ಕುಡಿತಿನಿಯಲ್ಲಿ ನಡೆಯುತ್ತಿರುವ ಭೂ ಸಂತ್ರಸ್ತ ರೈತರ ಹೋರಾಟವು ಇಂದು 1251ನೇ ದಿನಕ್ಕೆ ಕಾಲಿಟ್ಟಿದ್ದು, ಉಪವಾಸ ಸತ್ಯಾಗ್ರಹವು 9ನೇ ದಿನಕ್ಕೆ ಮುಂದುವರಿದಿದೆ. ಈ ಸಂದರ್ಭದಲ್ಲಿ ನಮ್ಮ ಕರ್ನಾಟಕ ರಕ್ಷಣಾ ವೇದಿಕೆ (ಯುವಸೇನೆ) ಕುಡಿತಿನಿ ಅಧ್ಯಕ್ಷ ಸಂಪತ್ ಕುಮಾರ್ ನೇತೃತ್ವದಲ್ಲಿ ಹೋರಾಟಕ್ಕೆ ಬೆಂಬಲ ಸೂಚಿಸಲಾಯಿತು.

ಈ ವೇಳೆ ಮಾತನಾಡಿದ ಸಂಪತ್ ಕುಮಾರ್, ಭೂಸಂತ್ರಸ್ತ ರೈತರು ಹಲವು ದಿನಗಳಿಂದ ನಿರಂತರ ಹೋರಾಟ ಹಾಗೂ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದರೂ ಇದುವರೆಗೆ ನ್ಯಾಯ ದೊರೆತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ರೈತರಿಗೆ ನ್ಯಾಯ ಸಿಗದಿದ್ದರೆ ಮುಂದಿನ ದಿನಗಳಲ್ಲಿ ಜಮೀನು ಪ್ರವೇಶ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು. 2012ರಲ್ಲಿ ಆರ್ಸೆಲರ್ ಮಿತ್ತಲ್ ಕಂಪನಿಗಾಗಿ ಕೆಐಎಡಿಬಿ ಅತಿ ಕಡಿಮೆ ಬೆಲೆಗೆ ರೈತರ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡಿತ್ತು. ಆದರೆ, ಇಷ್ಟೊಂದು ವರ್ಷಗಳಾದರೂ ಕಂಪನಿಯು ಜಮೀನನ್ನು ಬಳಕೆ ಮಾಡಿಲ್ಲ ಎಂದರು. ಶ್ರೀನಿವಾಸ್, ಜಂಭಯ್ಯ, ಮುಗ್ಗು ಮಾರೇಶ್, ಟೈಗರ್ ಬಿ. ಜಮ್ಮಯ್ಯ, ರವಿ, ಭಾವಿ ಅಂಬರೀಶ್, ತಿಮ್ಮಪ್ಪ ಎಂ., ಗಂಗಾಧರ, ಭಾವಿ ಶಿವಕುಮಾರ್, ಕಾಸಿಂ, ರಾಮಣ್ಣ, ಜಂಗ್ಲಿ ಸಾಬ್, ದಿವಾಕರ್ ಬಾಬು, ವೀರಭದ್ರ ಬಿ., ವಿವೇಕಾನಂದ, ಹಾಲಪ್ಪ, ಗಿರೀಶ್ ಸೇರಿದಂತೆ ಕರ್ನಾಟಕ ರಕ್ಷಣಾ ಇತರರಿದ್ದರು.



ಸಿರುಗುಪ್ಪ: ತಾಲೂಕಿನ ತೆಕ್ಕಲಕೋಟೆ ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ನೂತನ ಕಟ್ಟಡವನ್ನು ಮಂಗಳವಾರ ಉದ್ಘಾಟಿಸಲಾಯಿತು. ಗುಂತಕಲ್ ಟಿಡಿಪಿ ಶಾಸಕ ಗುಮ್ಮನೂರು ಜಯರಾಮ್, ಹೊಸಪೇಟೆ ಬಿಡಿಸಿಸಿ ಬ್ಯಾಂಕ್ ಕೇಂದ್ರ ಕಚೇರಿಯ ಅಧ್ಯಕ್ಷ ಕೆ.ತಿಪ್ಪೇಸ್ವಾಮಿ, ಹರಪನಹಳ್ಳಿ ಶಾಸಕಿ ಲತಾ ಮಲ್ಲಿಕಾರ್ಜುನ, ಪಿಎಲ್ಡಿ ಬ್ಯಾಂಕ್ ಅಧ್ಯಕ್ಷ ಚೊಕ್ಕ ಬಸವನಗೌಡ, ಮಾಜಿ ಶಾಸಕ ಟಿ.ಎಮ್.ಚಂದ್ರಶೇಖರಯ್ಯ, ಹೊಸಪೇಟೆ ಬಿಡಿಸಿಸಿ ಬ್ಯಾಂಕ್ ಕೇಂದ್ರ ಕಚೇರಿಯ ಉಪಾಧ್ಯಕ್ಷ ಐ.ದಾರುಕೇಶ ಇತರರಿದ್ದರು.

ಬಳ್ಳಾರಿಯಲ್ಲಿ ಮಿಶ್ರ ಪ್ರತಿಕ್ರಿಯೆ | ಆನ್‌ಲೈನ್‌ನಲ್ಲಿ ಔಷಧಿ ಮಾರಾಟಕ್ಕೆ ಕಡಿವಾಣ ಹಾಕಿ

ಮೆಡಿಕಲ್ ಶಾಪ್ ಬಂದ್: ಪರದಾಟ

•**ಬಳ್ಳಾರಿ:** ಆನ್‌ಲೈನ್ ಮೂಲಕ ಮಾತ್ರ, ಔಷಧಿ ಮಾರಾಟಕ್ಕೆ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿ ಅಖಿಲ ಭಾರತ ವೈದ್ಯಕೀಯ ವ್ಯಾಪಾರಿಗಳ ಸಂಘ ಕರೆ ನೀಡಿದ ಬಂದ್‌ಗೆ ಬುಧವಾರ ನಗರದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು.

ಆನ್‌ಲೈನ್ ಮಾರಾಟ ಹಿನ್ನೆಲೆಯಲ್ಲಿ ಇದೇ ವೃತ್ತಿಯನ್ನೇ ನಂಬಿದ ಮೆಡಿಕಲ್ ಶಾಪ್ ಮಾಲೀಕರ ಸ್ಥಿತಿ ಅಯೋಮಯವಾಗಿದೆ. ಕೂಡಲೇ ಆನ್‌ಲೈನ್ ಮಾರಾಟಕ್ಕೆ ಕಡಿವಾಣ ಹಾಕಲು ಸರ್ಕಾರ ಮುಂದಾಗಬೇಕು ಎಂದು ಆಗ್ರಹಿಸಿ ಸಂಘದವರು ಸೇವೆ ಸ್ಥಗಿತಗೊಳಿಸಿ ಮುಷ್ಕರಕ್ಕೆ ಕರೆ ನೀಡಿದ್ದರು.

ನಗರ ಸೇರಿದಂತೆ ಜಿಲ್ಲಾದ್ಯಂತ ಬಹುತೇಕ ಮೆಡಿಕಲ್ ಶಾಪ್ ಮಾಲೀಕರು ಮಳಿಗೆಗಳನ್ನು ಬಂದ್ ಮಾಡಿ ಬೆಂಬಲಿಸಿದ್ರೆ, ಕೆಲ ಅಂಗಡಿ ಮಾಲೀಕರು ಇದಕ್ಕೂ ನಮಗೂ ಸಂಬಂಧವಿಲ್ಲ ಎನ್ನುವಂತೆ ಎಂದಿನಂತೆ ವ್ಯಾಪಾರ ವಹಿವಾಟು ನಡೆಸಿರುವುದು ಅಲ್ಲಲ್ಲಿ ಕಂಡು ಬಂತು.



ಬಳ್ಳಾರಿಯಲ್ಲಿ ಹಲವಾರು ಮೆಡಿಕಲ್ ಮಳಿಗೆಗಳು ಬಂದ್ ಆದ ಹಿನ್ನೆಲೆ ರೋಗಿಗಳು ಪರದಾಡಿದರು. ವೈದ್ಯರು ನೀಡಿದ ಚೀಟಿ ಹಿಡಿದು ಅಂಗಡಿ ಅಂಗಡಿ ಅಲೆದಾಡುವ ದೃಶ್ಯ ಅಲ್ಲಲ್ಲಿ ಕಂಡು ಬಂತು.

ರಾಜ್ಯದಲ್ಲಿ ಸುಮಾರು 26 ಸಾವಿರಕ್ಕೂ ಹೆಚ್ಚು ಮೆಡಿಕಲ್ ಶಾಪ್ ಗಳಿದ್ದು, ಬಹುತೇಕ ಅಂಗಡಿ ಮಾಲೀಕರು ಬಂದ್‌ಗೆ ಬೆಂಬಲ ಸೂಚಿಸಿವೆ. ಆನ್‌ಲೈನ್ ಮೂಲಕ ಮಾತ್ರ, ಔಷಧಿ ಸೇರಿದಂತೆ ಚಿಕಿತ್ಸಾ ವಲಯಕ್ಕೆ ಬೇಕಾದ ಅಗತ್ಯ ವಸ್ತುಗಳು, ಪರಿಕರಗಳನ್ನು ಆನ್‌ಲೈನ್ ಮೂಲಕ ಖರೀದಿಸುವುದರಿಂದ ಲಕ್ಷಾಂತರ ಬಂಡವಾಳ ಹಾಕಿರುವ ಅಂಗಡಿ ಮಾಲೀಕರ ಸ್ಥಿತಿ ಗಂಭೀರವಾಗಿದೆ. ಅಕ್ರಮ ಮಾರಾಟ, ಭಾರೀ ರಿಯಾಯಿತಿ ನೀಡುತ್ತಿರುವ ಹಿನ್ನೆಲೆ ಸಣ್ಣ ವ್ಯಾಪಾರಿಗಳಿಗೆ ದೊಡ್ಡ ಪ್ರಮಾಣದಲ್ಲಿ ನಷ್ಟ ಉಂಟಾಗಲಿದೆ, ಇದರ ವಿರುದ್ಧ ಹೋರಾಟ ನಮ್ಮದು ಎಂದು ವ್ಯಾಪಾರಿಗಳು ಆಕ್ರೋಶ ವ್ಯಕ್ತಪಡಿಸಿದರು.

ಸಾರ್ವಜನಿಕರಿಗೆ, ರೋಗಿಗಳಿಗೆ ತೊಂದರೆಯಾಗದಂತೆ ಸರ್ಕಾರಿ ಆಸ್ಪತ್ರೆಗಳ ಚಿಕಿತ್ಸಾ ಕೇಂದ್ರಗಳು, ಜನೌಷಧಿ ಕೇಂದ್ರಗಳು ಮತ್ತು ಅಪೋಲೋ ಮತ್ತು ಮೆಡ್‌ಪ್ಲಸ್ ಸೇರಿ ಕೆಲ ಕಾರ್ಪೋರೇಟ್ ಫಾರ್ಮಸಿಗಳು ಎಂದಿನಂತೆ ಕಾರ್ಯನಿರ್ವಹಿಸಿದವು.

ಆನ್‌ಲೈನ್ ಔಷಧಿ ವ್ಯಾಪಾರಕ್ಕೆ ಅವಕಾಶ ಬೇಡ

•**ಹಗರಿಬೊಮ್ಮನಹಳ್ಳಿ:** ಔಷಧಿಗಳನ್ನು ಆನ್‌ಲೈನ್‌ನಲ್ಲಿ ಮಾರಾಟ ಮಾಡುವ ಅವಕಾಶವನ್ನು ನಿಲ್ಲಿಸುವಂತೆ ಆಗ್ರಹಿಸಿ ಔಷಧಿ ಮಾರಾಟಗಾರರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಬುಧವಾರ ಆಲ್ ಇಂಡಿಯಾ ಆರ್ಗನೈಸೇಶನ್ ಆಫ್ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್ ರೀ ಕೇಂದ್ರ ಸಮಿತಿ ಎಐಒಸಿಡಿ ಮತ್ತು ಕರ್ನಾಟಕ ಸ್ಟೇಟ್ ಕೆಮಿಸ್ಟ್ ಮತ್ತು ಡ್ರಗೀಸ್ಟ್ ಅಸೋಸಿಯೇಷನ್ ಬೆಂಗಳೂರು ಕೆಸಿಡಿಎ ಹಾಗೂ ಜಿಲ್ಲಾ ಔಷಧಿಗಳ ವ್ಯಾಪಾರಿಗಳ ಸಂಘ ಹೊಸಪೇಟೆ ಇವರಗಳ ಔಷಧಿ ವ್ಯಾಪಾರ ಬಂದ್ ಕರೆಗೆ ಬೆಂಬಲ ಸೂಚಿಸಿ ಔಷಧಿ ವ್ಯಾಪಾರ ಸ್ಥಗಿತಗೊಳಿಸಿ ಆನ್‌ಲೈನ್ ಔಷಧಿ ವ್ಯಾಪಾರದ ವಿರುದ್ಧ ಹಗರಿಬೊಮ್ಮನಹಳ್ಳಿ ಔಷಧಿ ವರ್ತಕರ ಸಂಘದಿಂದ ಬಸವೇಶ್ವರ ಪುತ್ಥಳಿ ಬಳಿ ಪ್ರತಿಭಟನೆ ನಡೆಸಲಾಯಿತು.

ತಾಲೂಕು ಔಷಧಿ ಮಾರಾಟಗಾರರ ಸಂಘದ ಅಧ್ಯಕ್ಷ ಬಸವರಾಜ ರೆಡ್ಡಿ ಮಾತನಾಡಿ, ಆನ್‌ಲೈನ್‌ನಲ್ಲಿ ಔಷಧಿ ಚೀಟಿಗಳನ್ನು ಕಳುಹಿಸಿ ಔಷಧಿಗಳನ್ನು ತರಿಸಿಕೊಳ್ಳಲು ಅನುವು ಮಾಡಿಕೊಟ್ಟಿರುವ ಇ-ಫಾರ್ಮಸಿಯ ವಹಿವಾಟುಗಳನ್ನು ತಕ್ಷಣ ಹಿಂಪಡೆಯುವಂತೆ ದೇಶಾದ್ಯಂತ ಇರುವ ಲಕ್ಷಾಂತರ ಔಷಧಿ ವ್ಯಾಪಾರಿಗಳ ಹಿತವನ್ನು ಅವರ ಕುಟುಂಬದ ಹಿತವನ್ನು ರಕ್ಷಿಸಲು ಆನ್‌ಲೈನ್‌ನಲ್ಲಿ ಔಷಧಿ ವ್ಯಾಪಾರಕ್ಕೆ ಅವಕಾಶ ನೀಡಬಾರದೆಂದು ಸರ್ಕಾರಕ್ಕೆ ಆಗ್ರಹಿಸಿದರು. ತಾಲೂಕು ಬೇರೆ ತಾಲೂಕುಗಳ 50ಕ್ಕೂ ಹೆಚ್ಚು ಔಷಧಿ ಅಂಗಡಿಗಳ ವರ್ತಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಈ ವಿಷಯ ಕುರಿತಂತೆ ಉಪ ತಹಶೀಲ್ದಾರ್ ಶಿಲ್ಪಾ ಅವರಿಗೆ ಮನವಿ ಸಲ್ಲಿಸಲಾಯಿತು.

ವಿಜಯನಗರ ಜಿಲ್ಲೆಯ ಔಷಧಿ ಮಾರಾಟಗಾರರ ಸಂಘದ ಕಾರ್ಯದರ್ಶಿ ವಾಹಿದ್ ಸಾಹಿಬ್, ಔಷಧಿ ಮಾರಾಟಗಾರರ ಸಂಘದ ತಾಲೂಕು ಉಪಾಧ್ಯಕ್ಷರಾದ ಚಂದ್ರಶೇಖರ್ ರೆಡ್ಡಿ ವಿರುಪಾಕ್ಷಪ್ಪ ಅಳವುಂಡಿ, ಔಷಧಿ ಅಂಗಡಿಗಳ ಮಾಲೀಕರಾದ ಮಲ್ಲಿಗೆ ಮೆಡಿಕಲ್ ಶಾಪ್‌ನ ಆನಂದ್, ಮನು ಮೆಡಿಕಲ್‌ನ ದೇವರಾವ್ ಪಟೇಲ್, ಗಣೇಶ್, ರಾಕೇಶ್, ಪ್ರದೀಪಕುಮಾರ, ಮಂಜುನಾಥ, ಪ್ರಕಾಶ, ಪರಸಪ್ಪ, ಗಜಾಪುರದ ಸಿದ್ದರಾಮೇಶ ಸೇರಿದಂತೆ ಇನ್ನಿತರ ಔಷಧಿ ಜನ ಔಷಧಿ ವ್ಯಾಪಾರಸ್ಥರು ಪಾಲ್ಗೊಂಡಿದ್ದರು.



ಮೇ 31ರಂದು ಪ್ರತಿಭಾ ಪುರಸ್ಕಾರ

•**ಸುರಪುರ:** ಅಖಿಲ ಕರ್ನಾಟಕ ಹೆಳವ ಸಮಾಜ ಯಾದಗಿರಿ ಜಿಲ್ಲಾ ಘಟಕದ ವತಿಯಿಂದ ಪ್ರಸ್ತುತ 2025-26ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ಉತ್ತೀರ್ಣರಾದ ಹೆಳವ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾಪುರಸ್ಕಾರ ಹಾಗೂ ಸನ್ಮಾನ ಸಮಾರಂಭ ಕಾರ್ಯಕ್ರಮದ ಪೂರ್ವಭಾವಿ ಸಭೆಯನ್ನು ಕಕ್ಕೇರಾ ಪಟ್ಟಣದಲ್ಲಿ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಪೂರ್ವ ಸಿದ್ಧತೆಗೆ ಸಂಬಂಧಿಸಿದಂತೆ ಪೂರ್ವಭಾವಿ ಸಭೆಯಲ್ಲಿ ಹಲವು ನಿರ್ಣಯಗಳೊಂದಿಗೆ ಮೇ 31ರಂದು ಕಕ್ಕೇರಾ ಪಟ್ಟಣದಲ್ಲಿ ಕಾರ್ಯಕ್ರಮ ನಡೆಸಲು ತೀರ್ಮಾನಿಸಲಾಯಿತು. ಹಿರಿಯರಾದ ಎಚ್.ಎನ್. ಗೋಗಿ, ಬಸವರಾಜ ಹೆಳವರ ಯಾಳಗಿ, ಶಿವಶರಣಪ್ಪ ಕನ್ನೊಳ್ಳಿ, ಚಂದಪ್ಪ ಕಕ್ಕೇರಿ, ರಾಯಪ್ಪ ಹೊಸೂರ, ಡಾ.ಹಣಮಂತರಾಯ ಹಳಿಸಗರ, ರಾಘವೇಂದ್ರ ಮಾಸ್ತರ, ನೆಹರೂ ಹಳಿಸಗರ, ಭೀಮರಾಯ ಹೆಳವರ ಯಾಳಗಿ, ಶ್ರೀಕಾಂತ್ ಯಾಳಗಿ,



ಪರಮಣ್ಣ ಹೆಳವರ, ವಿರೇಶ್ ಮಾಸ್ತರ, ಸೋಮು ಹೆಳವರ, ಪರಶುರಾಮ್ ಮುದನೂರ, ರಾಜು ಮಾಸ್ತರ, ಮೌನೇಶ ಹೆಳವರ, ರಾಜು ಹೆಳವರ, ಶಿವರಾಜ ಹೆಳವರ, ಶಿವು ಹೆಳವರ, ಯಲ್ಲಪ್ಪ ಹೆಳವರ, ರಮೇಶ್ ಹೆಳವರ ಇತರರಿದ್ದರು.

ಆನ್‌ಲೈನ್‌ನಲ್ಲಿ ಔಷಧಿ ಮಾರಾಟಕ್ಕೆ ವಿರೋಧ

•**ಯಾದಗಿರಿ:** ಆನ್‌ಲೈನ್‌ನಲ್ಲಿ ಔಷಧಿ ಮಾರಾಟ ವಿರೋಧಿಸಿ ಔಷಧಿ ವ್ಯಾಪಾರಿಗಳ ಸಂಘವು ಬುಧವಾರದಂದು ಔಷಧಿ ಮಳಿಗೆಗಳು ಬಂದ್ ಮಾಡುವಂತೆ ಕರೆ ನೀಡಿದ್ದ ಹೋರಾಟಕ್ಕೆ ಗಿರಿಜಿಲ್ಲೆಯಲ್ಲಿನ ಔಷಧಿ ವ್ಯಾಪಾರಿಗಳು ಮಳಿಗೆಗಳು ಬಂದ್ ಮಾಡದೇ ವ್ಯಾಪಾರ ಸ್ಥಳದಲ್ಲಿಯೇ ಕಪ್ಪು ಬಟ್ಟೆ ಧರಿಸಿ ನೈತಿಕ ಬೆಂಬಲ ನೀಡುವ ಮೂಲಕ ಹೋರಾಟಕ್ಕೆ ಬೆಂಬಲಿಸಿದ್ದಾರೆ.

ಸಾರ್ವಜನಿಕರ ಹಿದೃಷ್ಟಿಯಿಂದ ಔಷಧಿ ಮಳಿಗೆಗಳು ಮುಚ್ಚಿಲ್ಲ, ಆದರೇ ಬೇಡಿಕೆಗಳು ಸಂಪೂರ್ಣವಾಗಿ ಈ ಡೆರಿಸುವ ನಿಟ್ಟಿನಲ್ಲಿ ಸಂಘದ ಕರೆ ಸ್ಪಂದಿಸಿ ಜಿಲ್ಲೆಯ ಆಯಾ ತಾಲೂಕುಗಳಲ್ಲಿ ತಹಸಿಲ್ದಾರರಿಗೆ ಮನವಿ ಸಲ್ಲಿಸಿಲಾಗಿದೆ ಎಂದು ಔಷಧಿ ವ್ಯಾಪಾರಿಗಳ ಸಂಘದ ಜಿಲ್ಲಾಧ್ಯಕ್ಷ ಮಲ್ಲಣ್ಣಗೌಡ ಹಳಮನಿ ಕೌಳೂರು ತಿಳಿಸಿದ್ದಾರೆ.

ಆನ್‌ಲೈನ್ ಔಷಧ ಮಾರಾಟ ಹಾಗೂ ಇ-ಫಾರ್ಮಸಿ ವೇದಿಕೆಗಳು ಒದಗಿಸುವ ಭಾರಿ ರಿಯಾಯಿತಿಗೆ ತಮ್ಮ ವಿರೋಧವಿದೆ ಎಂದಿರುವ ಕೌಳೂರು, ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಒತ್ತಾಯಿಸಿದ್ದಾರೆ.

ಜಿಲ್ಲೆಯುಲ್ಲಿರುವ ಒಟ್ಟು 793 ವ್ಯಾಪಾರ ಮಳಿಗೆಗಳು ಇದ್ದು ಎಲ್ಲರೂ ಇದೇ ಶರಹ ಹೋರಾಟಕ್ಕೆ ಬೆಂಬಲಿಸಿ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿದ್ದಾರೆಂದು ಅವರು ಹೇಳಿದ್ದಾರೆ. ಕರ್ನಾಟಕ ಫಾರ್ಮಾ ರಿಟೇಲರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ ಆರ್ಗನೈಸೇಷನ್ ಬಂದ್‌ಗೆ ನೈತಿಕ ಬೆಂಬಲ ವ್ಯಕ್ತಪಡಿಸಿದ್ದು, ಕಪ್ಪುಪಟ್ಟಿ ಧರಿಸಿ ಕಾರ್ಯನಿರ್ವಹಿಸುವಂತೆ ಔಷಧ ವ್ಯಾಪಾರಿಗಳಿಗೆ ಕರೆ ನೀಡಿದ್ದರ ಹಿನ್ನಲೆಯಲ್ಲಿ ಮತ್ತು ರೋಗಿಗಳಿಗೆ ಸಕಾಲಕ್ಕೆ ತೊಂದರೆಯು ರಾಗಬಾರದೆಂಬ ಉದ್ದೇಶದಿಂದ ಮಳಿಗೆಗಳು ಓಪನ್ ಇಟ್ಟುಕೊಂಡೆ ನೈತಿಕ ಬೆಂಬಲ ನೀಡಿದ್ದಾಗಿ ಅವರು ಹೇಳಿದ್ದಾರೆ.

ಆನ್‌ಲೈನ್‌ನಲ್ಲಿ ಔಷಧಿ ಖರೀದಿ ಸರಿಯಲ್ಲ

ಆನ್‌ಲೈನ್‌ನಲ್ಲಿ ಔಷಧ ಮಾರಾಟ ಮಾಡುವುದರಿಂದ ಇದನ್ನು ಪಡೆದುಕೊಳ್ಳುವವರಿಗೆ ತೊಂದರೆ ಜಾಸ್ತಿ ಇದೆ. ಜೀವ ಉಳಿಸುವ ವಸ್ತುಗಳ ಮಾರಾಟಕ್ಕೆ ಅಂತಲೇ ಪದವಿ ಶಿಕ್ಷಣ ಪಡೆದು, ಪರವಾನಿಗೆ ಪಡೆದು ಮಳಿಗೆ ತೆರೆದು ವ್ಯಾಪಾರ ಮಾಡುವವರೇ ಬಹಳ ಸೂಕ್ಷ್ಮವಾಗಿ ರೋಗಿಗಳಿಗೆ ಔಷಧಿಗಳನ್ನು ಕೊಡುತ್ತಾರೆ. ಇದು ಒಂದು ರೀತಿಯಲ್ಲಿ ವ್ಯಾಪಾರ ಅಲ್ಲ, ಸೇವಾ ಕಾರ್ಯ ಎಂದೇ ಭಾವಿಸಿ ನಾವುಗಳು ಇದನ್ನು ಮಾಡುತ್ತವೆ. ಅಂತಹದರಲ್ಲಿ ಆನ್ ಲೈನ್ ಮೂಲಕ ಇದಕ್ಕೆ ಅನುಮತಿ ನೀಡಿದರೇ ಒಳ್ಳೆಯ ದಕ್ಕಿಂತಲೂ ನಷ್ಟವೇ ಜಾಸ್ತಿ ಎಂಬ ಅಭಿಪ್ರಾಯ ಅಧ್ಯಕ್ಷ ಮಲ್ಲಣ್ಣಗೌಡ ಹಳಮನಿ ಕೌಳೂರು ವ್ಯಕ್ತಪಡಿಸಿದ್ದಾರೆ.



ತಂತ್ರಜ್ಞಾನ, ವ್ಯಾಪಾರ ಅಭಿವೃದ್ಧಿಯ ಎರಡು ಕಣ್ಣುಗಳು

•**ವಿಜಯನಗರ:** ತಂತ್ರಜ್ಞಾನ ಮತ್ತು ವ್ಯಾಪಾರ ಅಭಿವೃದ್ಧಿಯ ಎರಡು ಕಣ್ಣುಗಳು ಇದ್ದಂತೆ. ಎರಡೂ ಕ್ಷೇತ್ರಗಳಿಗೆ ಸಮಾನಾಂತರವಾಗಿ ಒತ್ತು ನೀಡಬೇಕು ಎಂದು ಬಳ್ಳಾರಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ.ಎಂ.ಮುನಿರಾಜು ಅಭಿಪ್ರಾಯಪಟ್ಟರು.

ಹೊಸಪೇಟೆಯ ಪ್ರೌಢದೇವರಾಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ (ಪಿಡಿಐಟಿ) ಹಮ್ಮಿಕೊಳ್ಳಲಾಗಿದ್ದ 'ಸಿಂಚನ- 2026' ವಾರ್ಷಿಕೋತ್ಸವದ ಅಂಗವಾಗಿ ಬುಧವಾರ ನಡೆದ ಪದವಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬೆಂಗಳೂರಿನಂತಹ ಮಹಾನಗರಗಳಂತೆ



ವೇಗವಾಗಿ ಬೆಳೆಯತ್ತಿದೆ. ಆದರೆ, ಕಲ್ಯಾಣ ಕರ್ನಾಟಕ ಪ್ರದೇಶ ತೀರಾ ಹಿಂದುಳಿದಿದೆ. ಕಲ್ಯಾಣ ಕರ್ನಾಟಕದ ಬೆಳವಣಿಗೆಗೆ ಇಲ್ಲಿನ ವಿದ್ಯಾರ್ಥಿಗಳು ಶ್ರಮಿಸಬೇಕು. ಈ ಭಾಗದಲ್ಲಿ ಸ್ಟಾರ್ಟ್ ಅಪ್‌ಗಳನ್ನು ಸ್ಥಾಪಿಸಿ, ನವೋದ್ಯಮಗಳಾಗಿ ಹೊರಹೊಮ್ಮಬೇಕು ಎಂದರು.

ಪಿಡಿಐಟಿ ಆಡಳಿತ ಮಂಡಳಿ ಅಧ್ಯಕ್ಷ ಕಲ್ಗುಡಿ ಮಂಜುನಾಥ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಪದವಿ ಎನ್ನುವುದು ಕಲಿಕೆಯ ಅಂತ್ಯವಲ್ಲ, ಅದು ಜೀವನದ ಹೊಸ ಆರಂಭ. ವಿದ್ಯಾರ್ಥಿಗಳು ಜೀವನದಲ್ಲಿ ಪ್ರಾಮಾಣಿಕತೆ, ಆತ್ಮವಿಶ್ವಾಸ ಮತ್ತು ಪೋಷಕರಿಗೆ ಗೌರವ ಕೊಡುವುದನ್ನು ರೂಢಿಸಿಕೊಳ್ಳಬೇಕು ಎಂದು ಹೇಳಿದರು.

ಇದೇ ವೇಳೆ 400ಕ್ಕೂ ಹೆಚ್ಚು ಬಿ.ಇ.ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಪಿಡಿಐಟಿ ಪ್ರಾಂಶುಪಾಲ ಡಾ.ರೋಹಿತ್ ಯು.ಎಂ. ಅವರು ನೂತನಪದವೀಧರರಿಗೆಪ್ರತಿಜ್ಞಾವಿಧಿಬೋಧಿಸಿದರು. ಪಿಡಿಐಟಿ ಆಡಳಿತ ಮಂಡಳಿಯ ಸದಸ್ಯರಾದ ಐ.ಎನ್. ಸಂಗನಬಸಪ್ಪ, ಅನಿಲ್ ಆರ್.ಜವಳಿ, ಬಿ.ಚಂದ್ರಮೌಳಿ, ಉಪಪ್ರಾಂಶುಪಾಲ ಡಾ.ಪಾರ್ವತಿ ಕಡ್ಲಿ, 'ಸಿಂಚನ-2026' ಕಾರ್ಯಕ್ರಮದ ಸಂಯೋಜಕರಾದ ಡಾ.ರವಿಕುಮಾರ್ ಎಸ್.ಪಿ., ಎಲ್ಲ ಉಪಸ್ಥಿತರಿದ್ದರು.

ಸೃಜನಶೀಲತೆಗೆ ಬೇಸಿಗೆ ಶಿಬಿರ ಸಹಕಾರಿ

•**ಹೂವಿನಹಡಗಲಿ:** ಬೇಸಿಗೆ ಶಿಬಿರಗಳು ಮಕ್ಕಳ ಕಲಿಕಾ ಸಾಮರ್ಥ್ಯವನ್ನು ವೃದ್ಧಿಸುವುದರ ಜೊತೆಗೆ ಅವರಲ್ಲಿರುವ ಸೃಜನಶೀಲತೆ, ಆತ್ಮವಿಶ್ವಾಸ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗುತ್ತವೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎ.ಕೊಟ್ರಗೌಡ ಹೇಳಿದರು.

ಅವರು ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ದಿ ಬೆಸ್ಟ್ ಕೋಚಿಂಗ್ ಸೆಂಟರ್ ವತಿಯಿಂದ ಆಯೋಜಿಸಿದ್ದಹನ್ನೊಂದನೇ ವರ್ಷದ ಬೇಸಿಗೆ ಶೈಕ್ಷಣಿಕ ತರಬೇತಿ ಶಿಬಿರದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಶಿಬಿರದಲ್ಲಿ ಪಾಠ, ಸಾಂಸ್ಕೃತಿಕ ಚಟುವಟಿಕೆಗಳು ಹಾಗೂ ವಿವಿಧ ಕೌಶಲ್ಯಾಧಾರಿತ ತರಬೇತಿಗಳ ಮೂಲಕ ಮಕ್ಕಳು ಹೊಸ ಅನುಭವಗಳನ್ನು ಪಡೆದು ತಮ್ಮ ಪ್ರತಿಭೆಯನ್ನು ಹೊರಹಾಕಲು ಅವಕಾಶ ದೊರೆಯುತ್ತದೆ. ಇಂತಹ ಶಿಬಿರಗಳು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗುತ್ತವೆ ಎಂದು ಹೇಳಿದರು.ಅಧ್ಯಕ್ಷತೆ ವಹಿಸಿ ಮಾತನಾಡಿದ ತಾಲೂಕು ಮುಸ್ಲಿಂ ನೌಕರರ ಸಂಘದ ಅಧ್ಯಕ್ಷ ಶೇಖ್ ಅಹ್ಮದ್, ಮಕ್ಕಳು ಮೊಬೈಲ್ ಗೀಳಿನಿಂದ ತಮ್ಮ ಓದುವ ಸಮಯವನ್ನು ವ್ಯರ್ಥ ಮಾಡಿಕೊಳ್ಳುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇದರಿಂದ ಮಕ್ಕಳಲ್ಲಿ ಕಲಿಕೆಯ ಆಸಕ್ತಿ ಕಡಿಮೆಯಾಗುತ್ತಿದೆ. ಪಾಲಕರು ಮಕ್ಕಳ ಶಿಕ್ಷಣದ ಕಡೆ ಹೆಚ್ಚಿನ



ಗಮನ ಹರಿಸಿ, ಓದು ಹಾಗೂ ಸೃಜನಾತ್ಮಕ ಚಟುವಟಿಕೆಗಳತ್ತ ಪ್ರೋತ್ಸಾಹಿಸಬೇಕು ಎಂದು ಸಲಹೆ ನೀಡಿದರು.ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಶಿವಲಿಂಗಪ್ಪ, ದೈಹಿಕ ಶಿಕ್ಷಣಾಧಿಕಾರಿ ಮಹ್ಮದ್ ರಫಿ ಖವಾಸ್, ಪತ್ರಕರ್ತ ದಯಾನಂದ ಎಂ.ಹಡಗಲಿ ಕ್ಲಸ್ಟರಿನ ಸಿಆರ್‌ಪಿ ವೀರೇಶ ಬಿ. ಅವರು ಮಾತನಾಡಿದರು. ದಿ ಬೆಸ್ಟ್ ಕೋಚಿಂಗ್ ಸೆಂಟರ್‌ನ ಸಂಸ್ಥಾಪಕರಾದ ಮುರ್ತಜ ಎಂ., ಪ್ರಸ್ತಾವಿಕವಾಗಿ ಮಾತನಾಡಿದರು.ಶಿಕ್ಷಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿವಿಧ ಕ್ಷೇತ್ರಗಳ ಗಣ್ಯರು, ಶಿಕ್ಷಕರು, ಪೋಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸಂಸ್ಥೆಯಲ್ಲಿ ದುಡಿದ ಎಲ್ಲ ಶಿಕ್ಷಕರಿಗೆ,ಸಹಾಯಕ ಸಿಬ್ಬಂದಿಗಳಿಗೆ. 10ನೇ ತರಗತಿಯಲ್ಲಿ ಶೇಕಡ 95ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸಂಸ್ಥೆಯ ವತಿಯಿಂದ ಗೌರವಿಸಲಾಯಿತು.

ಕನ್ನಡ ಶಾಲೆಗಳ ಉಳಿವಿಗೆ ಆಗ್ರಹಿಸಿ ಮನವಿ

•**ಬೀದರ:** ತೆಲಂಗಾಣ ರಾಜ್ಯದ ಸಂಗಾರೆಡ್ಡಿ ಜಿಲ್ಲೆಯ ನಾರಾಯಣಖೇಡ ತಾಲೂಕಿನ ಕಾರಾಮುಂಗಿ ಸೇರಿದಂತೆ ಹೊರನಾಡಿನ10ಕನ್ನಡಶಾಲೆಗಳಸ್ಥಿತಿಗತಿಯನ್ನುಪರಿಶೀಲಿಸಿ ಕರ್ನಾಟಕ ಸರ್ಕಾರಕ್ಕೆ ಸಮಗ್ರ ವರದಿ ಸಲ್ಲಿಸಬೇಕು ಎಂದು ಹೊರನಾಡು ಕನ್ನಡಿಗರ ಹೋರಾಟ ಸಮಿತಿ ಸದಸ್ಯ ಕಾಶಿನಾಥ ಗಡ್ಡೆ ಇಂದು ಜಿಲ್ಲಾಽಕಾರಿಯವರಿಗೆ ಮನವಿ ಸಲ್ಲಿಸುವ ಮೂಲಕ ಒತ್ತಾಯಿಸಿದ್ದಾರೆ.

ಅವರು ಇಂದು ಉಪಜಿಲ್ಲಾಽಕಾರಿಗಳಾದ ಶಿವಾನಂದ ಕರಾಳೆಯವರನ್ನು ಭೇಟಿಯಾಗಿ ವಿಷಯ ಪ್ರಸ್ತಾಪಿಸಿದರು ಅದಕ್ಕೆ ಅವರು ಸ್ಪಂದಿಸಿ ಶೀಘ್ರವೆ ಜಿಲ್ಲಾ ಮಟ್ಟದ ಅಽಕಾರಿಗಳಿಗೆ ಕಾರಾಮುಂಗಿ ಗ್ರಾಮಕ್ಕೆ ಕಳಿಸಿ ಪರಿಶೀಲನೆ ವರದಿಯನ್ನು ಶೀಘ್ರವೆ ಸಲ್ಲಿಸಲಾಗುವುದು ಎಂದು ಭರವಸೆ ನೀಡಿದರು.

ಕರ್ನಾಟಕ ಸರ್ಕಾರದ ಉಲ್ಲೇಖಿತ ಪತ್ರದ ಅನ್ವಯ ಸಲ್ಲಿಸಿರುವ ಮನವಿಯಲ್ಲಿ, ಕಾರಾಮುಂಗಿ ಗ್ರಾಮದಲ್ಲಿ 1954-55ರಿಂದ 1ರಿಂದ 10ನೇ ತರಗತಿವರೆಗೆ ಕನ್ನಡ ಮಾಧ್ಯಮ ಸರ್ಕಾರಿ ಶಾಲೆ ಕಾರ್ಯನಿರ್ವಹಿಸುತ್ತಿದ್ದು, ಈ ಶಾಲೆಗಳ ಅಭಿವೃದ್ಧಿಗೆ ಹೀರೆಮಠ ಸಂಸ್ಥಾನದ ಡಾ. ಚನ್ನಬಸವ ಪಟ್ಟದೇವರು ಮಹತ್ವದ ಕೊಡುಗೆ ನೀಡಿದ್ದಾರೆ ಎಂದು ವಿವರಿಸಲಾಗಿದೆ.1990-91ರಲ್ಲಿ 10ನೇ ತರಗತಿಗೆ ಕನ್ನಡ ಮಾಧ್ಯಮ ಅನುಮತಿ ದೊರೆತಿದ್ದು, ನಂತರ ಶಿಕ್ಷಕರ ನೇಮಕ, ಶಾಲಾ ಕೊಠಡಿಗಳು ಹಾಗೂ ಕನ್ನಡ



ಪಠ್ಯಪುಸ್ತಕಗಳನ್ನು ಒದಗಿಸಲಾಗಿತ್ತು ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ. ಕಾರಾಮುಂಗಿ ಸುತ್ತಮುತ್ತಲಿನ ಒಂಬತ್ತು ಗ್ರಾಮಗಳಲ್ಲಿಯೂ ಕನ್ನಡ ಮಾಧ್ಯಮ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದ್ದಾರೆ.

ಹೊರನಾಡು ಕನ್ನಡ ಶಾಲೆಗಳ ಅಭಿವೃದ್ಧಿಗೆ ಪ್ರತ್ಯೇಕ ನಿಽ ಹಾಗೂ ಪ್ರತ್ಯೇಕ ಪ್ರಾಽಕಾರ ರಚನೆ, ತೆಲಂಗಾಣದಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಸರ್ಕಾರಿ ಉದ್ಯೋಗದಲ್ಲಿ 25% ಮೀಸಲು ಹಾಗೂ 371(ಜೆ) ಪ್ರಮಾಣಪತ್ರ, ಸೌಲಭ್ಯ, ಗ್ರಂಥಾಲಯ ಕಟ್ಟಡ ನಿರ್ಮಾಣ ಹಾಗೂ ಕನ್ನಡ ಪುಸ್ತಕಗಳ ಪೂರೈಸುವಂತೆ ಆಗ್ರಹಿಸಲಾಗಿದೆ. ಹೊರನಾಡು ಕನ್ನಡ ಶಾಲೆಗಳ ಉಳಿವು ಹಾಗೂ ಕನ್ನಡ ಭಾಷೆಯ ಸಂರಕ್ಷಣೆಗೆ ಕರ್ನಾಟಕ ಸರ್ಕಾರ ವಿಶೇಷ ಕ್ರಮ ಕೈಗೊಳ್ಳಬೇಕು ಎಂದು ಕಾಶಿನಾಥ ಗಡ್ಡೆ ಆಗ್ರಹಿಸಿದ್ದಾರೆ.

ಕನಕದಾಸರ ಕೊಡುಗೆ ಅಪಾರ

•**ಕುರುಗೋಡು:** ಕನ್ನಡ ನಾಡಿಗೆ ಕನಕದಾಸ, ಸಂಗೊಳ್ಳಿ ರಾಯಣ್ಣ ಸೇರಿ ಅನೇಕರ ಕೊಡುಗೆ ಅಪಾರವಾಗಿದೆ ಎಂದು ಶಾಸಕ ಜೆ.ಎನ್.ಗಣೇಶ್ ಹೇಳಿದರು. ಸಮಿಪದ ಸಣಾಪುರದಲ್ಲಿ ಕನಕದಾಸ ಮೂರ್ತಿ ಅನಾವರಣ ಮಾಡಿ ಭಾನುವಾರ ಮಾತನಾಡಿ, ಗ್ರಾಮದಲ್ಲಿ ಕನಕ ವೃತ್ತ ರಚಿಸಿ, ಕನಕದಾಸರ ಮೂರ್ತಿ ಸ್ಥಾಪಿಸುವಂತೆ ಸಮಾಜದವರ ಬಹುವರ್ಷಗಳ ಮನವಿಯಾಗಿತ್ತು. ಈಗ ಸಾಕಾರಗೊಂಡಿದೆ. ಸಿಎಂ ಸಿದ್ದರಾಮಯ್ಯ ದೇಶ ಕಂಡ ಅಪ್ರತಿಮ ಮುಖ್ಯಮಂತ್ರಿಯಾಗಿದ್ದಾರೆ. ಪಾಲಕರು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂದರು. ಕನಕ ಯುವಕ ಸಂಘದ ಅಧ್ಯಕ್ಷ ಕಂಬಳಿ ಚನ್ನಪ್ಪ ಮಾತನಾಡಿ, ಗ್ರಾಮದಲ್ಲಿ ಹಾಲುಮತಸ್ಥರ ಅನುಕೂಲಕ್ಕಾಗಿ ಕನಕ ಸಮುದಾಯ ಭವನ ನಿರ್ಮಿಸಬೇಕು ಎಂದು ಮನವಿ ಮಾಡಿದರು. ಕಾರ್ಯಕ್ರಮಕ್ಕೂ ಮುನ್ನ ಗ್ರಾಮದಲ್ಲಿ ಕನಕದಾಸ ಭಾವಚಿತ್ರ ಮೆರವಣಿಗೆ ನಡೆಯಿತು. ಹಾಲುಮತ ಸಮಾಜದ ತಾಲೂಕು ಅಧ್ಯಕ್ಷ ಗೌಡ್ರು ಡಿಂಡಿ ಮಹರ್ಷಿ, ಪ್ರಮುಖರಾದ ಕೆ.ಶ್ರೀನಿವಾಸರಾವ್, ಪಿ.ಮೂಕಯ್ಯಸ್ವಾಮಿ, ಸಿ.ಯಂಕಪ್ಪ, ಕನಕ ಯುವಕ ಸಂಘದ ಪದಾಧಿಕಾರಿಗಳಾದ ಒಂಟೆ ವಿನೋದಕುಮಾರ್, ಪುಂಡೆ ಭೀಮಪ್ಪ, ಕಂಬಳಿ ಅಂಬಣ್ಣ, ವೀರೇಶ್, ಈರಣ್ಣ ಸುಂಕ್ರಮ್ಮವ್ವ ಸೇರಿದಂತೆ ಇತರರಿದ್ದರು.



ಉತ್ತಮ ರಸ್ತೆ ಅಗೆದು ಕಾಮಗಾರಿ: ಆಕ್ರೋಶ

•**ಬಳ್ಳಾರಿ:** ಸುಸ್ಥಿತಿಯಲ್ಲಿದ್ದ ರಸ್ತೆಯನ್ನು ಮರು ಅಗೆದು ಮತ್ತೆ ಕಾಮಗಾರಿ ಕೈಗೆತ್ತಿಕೊಂಡಿರುವುದಕ್ಕೆ ಮಹಾನಗರ ಪಾಲಿಕೆ ಸದಸ್ಯ ಎಂ.ಗೋವಿಂದರಾಜಲು ಅವರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಾರ್ವಜನಿಕರ ತೆರಿಗೆ ಹಣವನ್ನು ಅನಾವಶ್ಯಕ ಕಾಮಗಾರಿಗಳಿಗೆ ಬಳಸಲಾಗುತ್ತಿದೆ. ಎಲ್ಲಿ ಅವಶ್ಯವಿದೆಯೂ ಅಲ್ಲಿ ಕಾಮಗಾರಿ ಪ್ರಾರಂಭಿಸಿಲ್ಲ, ಅನುದಾನ ಕೊಟ್ಟಿಲ್ಲ, ಜನ ನೀರಿಲ್ಲದೇ ಪರದಾಡುತ್ತಿದ್ದಾರೆ, ಉದ್ಯಾನವನಗಳ ಅಭಿವೃದ್ಧಿಗೆ ಅನುದಾನ ನೀಡಿ ಅಂದ್ರೆ ಕೊಡ್ತಿಲ್ಲ, ವಾರ್ಡ್ ಜನರಿಗೆ ನಾವು ಉತ್ತರ ಹೇಳೋದು ಸಾಕಾಗಿದೆ. ಮುಖ್ಯವಾಗಿ ಜನರಿಗೆ ಕನಿಷ್ಠ ಸೌಲಭ್ಯ ಕಲ್ಪಿಸಬೇಕಾಗಿರುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಹೀಗಿರುವಾಗ ಉತ್ತಮ ಗುಣಮಟ್ಟದ ರಸ್ತೆಯನ್ನೇ ಮತ್ತೆ ಅಗೆದು ಕಾಮಗಾರಿ ಪ್ರಾರಂಭಿಸುವುದು ಯಾವ ನ್ಯಾಯ ಎಂದು ಸದಸ್ಯ ಎಂ.ಗೋವಿಂದ ರಾಜಲು ಆಕ್ರೋಶ ವ್ಯಕ್ತಪಡಿಸಿದರು

ನಗರದ ವಾರ್ಡ್‌ನಲ್ಲಿ ಇತ್ತೀಚೆಗೆ ನಿರ್ಮಾಣಗೊಂಡು ಉತ್ತಮ ಸ್ಥಿತಿಯಲ್ಲಿ ರಸ್ತೆಯನ್ನು ಮರು ಅಗೆದು ಕಾಮಗಾರಿ ನಡೆಸಾಲಾಗುತ್ತಿದೆ, ಇದಕ್ಕೆ ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಇಲಾಖೆಗಳ ನಡುವಿನ ಸಮನ್ವಯದ ಕೊರತೆಯಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದೆ ಹೇಳಿದರು.

ಒಂದೇ ರಸ್ತೆಯ ಮರು ಅಗೆದು ಕಾಮಗಾರಿ ನಡೆಸುವುದರಿಂದ ವಾಹನ ಸವಾರರು ಹಾಗೂ



ಪಾದಚಾರಿಗಳು ಸಂಕಷ್ಟ ಅನುಭವಿಸುತ್ತಿದ್ದಾರೆ. ಮಳೆ ಬಂದಾಗ ರಸ್ತೆಗಳು ಹದಗೆಟ್ಟು ಸಂಚಾರಕ್ಕೆ ಉಂಟಾಗುವ ಸಾಧ್ಯತೆಯಿದೆ. ಅಭಿವೃದ್ಧಿಯ ಹೆಸರಿನಲ್ಲಿ ಜನರ ಹಣವನ್ನು ವ್ಯರ್ಥ ಮಾಡಲಾಗುತ್ತಿದೆ. ಯಾವ ಇಲಾಖೆಯ ಅನುಮತಿಯಿಂದ ರಸ್ತೆ ಅಗೆದು ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದು ಸ್ಪಷ್ಟನೆ ನೀಡಬೇಕು, ಕೂಡಲೇ. ಸಂಬಂಧಪಟ್ಟ ಮೇಲಧಿಕಾರಿಗಳು ಗಮನಹರಿಸಿ, ನಿರ್ಲಕ್ಷ್ಯ ವಹಿಸಿದವರು ಯಾರೇ ಇರಲಿ ಮುಲಾಜಿಲ್ಲದೇ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಸ್ಥಳೀಯ ನಿವಾಸಿಗಳು ಕೂಡ ಕಾಮಗಾರಿಯ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದು, ಸುಸ್ಥಿತಿಯಲ್ಲಿದ್ದ ರಸ್ತೆಯನ್ನು ಅನಾವಶ್ಯಕವಾಗಿ ಅಗೆದು ಹಣ ಪೋಲು ಮಾಡುತ್ತಿದ್ದಾರೆ, ಇದರಿಂದ ಸಾರ್ವಜನಿಕರಿಗೆ ತೊಂದರೆ ಎದುರಾಗಲಿದೆ ಎಂದು ಸ್ಥಳೀಯರು ಅಧಿಕಾರಿಗಳನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡರು.